ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಮಂಗಳವಾರ, 17 ಫೆಬ್ರವರಿ 2026
ಸಂಪುಟ 15, ಸಂಚಿಕೆ 330, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN?
2011/64413
hosadigantha.com
epaper.hosadigantha.com
Hosadigantha Digital



ಕಾರ್ಖಾನೆಯಲ್ಲಿ ಬೆಂಕಿ; 7 ಜನ ಸಜೀವ ದಹನ | ೦೭
ಭಾರತ್ ವಿಸ್ತಾರ್, ಎಐ ರೈತ ಕ್ರಾಂತಿ | ೦೭
ರಣಜಿ: ಪಡಿಕ್ಕಲ್ ಚೊಚ್ಚಲ ದ್ವಿಶತಕ |೧೦

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಅಮಾವಾಸ್ಯೆ, ನಕ್ಷತ್ರ: ಧನಿಷ್ಠೆ

ದಿನದ ಮಾತು

ವಿವೇಕಿಯಾದವನು ಮೋಸಗಾರರನ್ನು ಮತ್ತು ಕಡುಪಾಪಿಗಳನ್ನು ಒಳ್ಳೆಯ ಮಾತನಾಡಿ ತಿದ್ದುತ್ತಾನೆ.

▲ ಧರ್ಮಾಮೃತ

ಇರಾನ್-ಅಮೇರಿಕಾ ಯುದ್ಧ ನಡೆಯಲಿದೆಯೇ?

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಫೆ.25, 26ರಂದು ಪ್ರಧಾನಿ ಮೋದಿ ಇಸ್ರೇಲ್ ಪ್ರವಾಸ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಫೆ.25 ಮತ್ತು 26ರಂದು ಇಸ್ರೇಲ್‌ಗೆ ಭೇಟಿ ನೀಡಲಿದ್ದಾರೆ. ಇದು ಅವರ ಮೂರು ಅವಧಿಗಳಲ್ಲಿನ ಎರಡನೇ ಇಸ್ರೇಲ್ ಪ್ರವಾಸವಾಗಲಿದೆ . ಈ ವಿಷಯವನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಅಮೆರಿಕದ ಪ್ರಮುಖ ಯಹೂದಿ ಸಂಘಟನೆಗಳ ಅಧ್ಯಕ್ಷರ ಸಮ್ಮೇಳನದಲ್ಲಿ ಪ್ರಕಟಿಸಿದ್ದಾರೆ. ಮುಂದಿನ ವಾರ ಇಲ್ಲಿ ಯಾರು ಬರುತ್ತಿದ್ದಾರೆ? ನರೇಂದ್ರ ಮೋದಿ ಎಂದು ಅವರು ಹೇಳಿ, ಭಾರತ-ಇಸ್ರೇಲ್ ಸಂಬಂಧಗಳನ್ನು ವಿಶಾಲ ಮೈತ್ರಿ ಎಂದು ಬಣ್ಣಿಸಿದ್ದಾರೆ.

ವಿದೇಶಿ ಮಹಿಳೆ ಅತ್ಯಾಚಾರ ಮೂವರಿಗೆ ಮರಣದಂಡನೆ

• **ಗಂಗಾವತಿ:** ತಾಲೂಕಿನ ಸಾಣಾಪುರದಲ್ಲಿ 11ತಿಂಗಳ ಹಿಂದೆ ವಿದೇಶಿ ಮಹಿಳೆ ಹಾಗೂ ಸ್ಥಳೀಯ ಹೋಂ ಸ್ಟೇ ಒಡತಿ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಒಡಿಶಾ ಪ್ರವಾಸಿಗನ ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸಷನ್ಸ್ ನ್ಯಾಯಾಲಯವು ಮೂವರು ಅಪರಾಧಿಗಳಿಗೆ ಮರಣದಂಡನೆ ಶಿಕ್ಷೆ ವಿಧಿಸಿ ಆದೇಶಿಸಿದೆ. ಗಂಗಾವತಿಯ ಸಾಯಿನಗರದ ಮಲ್ಲೇಶ್ (ಹಂದಿಮಲ್ಲ), ಸಾಯಿ (ಚೈತನ್ಯಸಾಯಿ) ಹಾಗೂ ಶರಣಪ್ಪ (ಶರಣು ಬಸವರಾಜ್) ಶಿಕ್ಷೆಗೆ ಒಳಗಾದ ಅಪರಾಧಿಗಳು.

• ಪುಟ ೫

ಕ್ರಿಮಿನಲ್ ಕಾನೂನು ಪೂರ್ಣ ಜಾರಿಯಾದರೆ ಶಿಕ್ಷೆ ಹೆಚ್ಚಳ


• ಪುಟ ೭

ಶಿವಮೊಗ್ಗ: ರಾತ್ರಿ ವಿಮಾನ ಸಂಚಾರ ಶೀಘ್ರ

• ಪುಟ ೫

8 ಸಾವಿರ ಬ್ಯಾಂಕ್ ಖಾತೆ ಸ್ಥಗಿತ

• ಪುಟ ೭



ಭಾರತದ ಪ್ರಪ್ರಥಮ ಗೋ ಸಂಗ್ರಹಾಲಯ

• ಪುಟ ೭

ಸುದ್ದಿ ಸಮಗ್ರ

ದೇಶದ ಮೊದಲ ಘಟಕ ವರ್ಚುವಲ್‌ನಲ್ಲಿ ಇಂದು ಉದ್ಘಾಟನೆ

ಹೆಲಿಕಾಪ್ಟರ್ ಜೋಡಣೆ ಕಾರ್ಖಾನೆಗೆ ಚಾಲನೆ

• **ಕೋಲಾರ:** ದೇಶದಲ್ಲಿಯೇ ಮೊಟ್ಟ ಮೊದಲ ಹೆಲಿಕಾಪ್ಟರ್ ಜೋಡಣೆಘಟಕ ಜಿಲ್ಲೆಯವೇಮಗಲ್‌ನಲ್ಲಿ ಸ್ಥಾಪನೆಯಾಗಿದ್ದು, ಮಂಗಳವಾರ ಸಂಜೆ ಪ್ರಧಾನಿ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ವರ್ಚುವಲ್ ಮೂಲಕ ಚಾಲನೆ ನೀಡಲಿದ್ದಾರೆ. ಈ ವೇಳೆ ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ವೇಮಗಲ್‌ನಲ್ಲಿ ಉಪಸ್ಥಿತರಿರಲಿದ್ದಾರೆ.

ಜಿಲ್ಲೆಯಲ್ಲಿ ಈಗಾಗಲೇ ಐಫೋನ್ ತಯಾರಿಕಾ ಘಟಕ ಹಾಗೂ ರಕ್ಷಣಾ ವ್ಯವಸ್ಥೆಯ ಉಪಕರಣಗಳ ಇನ್ನಿತರ ಘಟಕಗಳನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಕಂಪನಿ, ಇದೀಗ ವೇಮಗಲ್ ಕೈಗಾರಿಕಾ ಪ್ರದೇಶದ ವೇಮಗಲ್-ಕುರುಗಲ್ ಮಧ್ಯ ಭಾಗದಲ್ಲಿ ಹೆಲಿಕಾಪ್ಟರ್ ಜೋಡಣೆ ಕಾರ್ಖಾನೆಯನ್ನು ಸ್ಥಾಪಿಸುವ ಸಂಬಂಧ ಫ್ರಾನ್ಸ್‌ನ ಅತಿ ದೊಡ್ಡ ವೈಮಾನಿಕ ಸಂಸ್ಥೆ ಏರ್‌ಬಸ್ ನೊಂದಿಗೆ ಕಳೆದ ವರ್ಷ ಒಪ್ಪಂದ ಮಾಡಿಕೊಂಡಿತ್ತು.

ರಾಜನಾಥ್ ಸಿಂಗ್, ವಾಟ್ರಿನ್ ಉಪಸ್ಥಿತಿ

9 ತಿಂಗಳ ಹಿಂದೆ ಘೋಷಣೆ: ದೇಶದ ಮೊಟ್ಟಮೊದಲ ಖಾಸಗಿ ಹೆಲಿಕಾಪ್ಟರ್ ತಯಾರಿಕಾ ಘಟಕವನ್ನು ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಆರಂಭಿಸಲಾಗುವುದು ಎಂಬ ಘೋಷಣೆ ಕಳೆದ ವರ್ಷ ಮೇ ತಿಂಗಳಲ್ಲಿ ಹೊರಬಿದ್ದಿತ್ತು. ಈಗಾಗಲೇ ವೇಮಗಲ್ ಕುರುಗಲ್ ಮಧ್ಯೆ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ರಕ್ಷಣಾ ವಲಯದ ಘಟಕ ಹೊಂದಿದ್ದು, ಈ ಘಟಕದ ಬಳಿಯೇ ಸುಮಾರು 50 ಎಕರೆ ಪ್ರದೇಶದಲ್ಲಿ ಹೆಲಿಕಾಪ್ಟರ್ ಜೋಡಣಾ ಘಟಕ ಆರಂಭಗೊಳ್ಳಲಿದೆ.

ಘಟಕ ಆರಂಭಿಸುವ ಕುರಿತು ಘೋಷಣೆ ಹೊರಬೀಳುತ್ತಿದ್ದಂತೆಯೇ ಸುಮಾರು 9 ತಿಂಗಳ ಕಾಲ ನೂರಾರು ಕಾರ್ಮಿಕರು ಘಟಕವನ್ನು ಉದ್ಘಾಟನಾ ಹಂತಕ್ಕೆ ತಂದು ನಿಲ್ಲಿಸಿದ್ದಾರೆ. ಘಟಕದ ಮತ್ತಷ್ಟು ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸಾಂಕೇತಿಕವಾಗಿ ಫೆ.17 ರಂದು ಮಂಗಳವಾರ ಸಂಜೆ 4 ರಿಂದ 6 ಗಂಟೆ ವೇಳೆಗೆ ಘಟಕಕ್ಕೆ ಚಾಲನೆ ಸಿಗಲಿದೆ.



ಕೋಲಾರದ ವೇಮಗಲ್‌ನಲ್ಲಿ ಘಟಕ ಕಾರ್ಯಾರಂಭ

ಪ್ರಧಾನಿ ಮೋದಿ, ಮ್ಯಾಕ್ರನ್ ಭಾಗಿ

ದೇಶದ ಮೊಟ್ಟ ಮೊದಲ ಖಾಸಗಿ ಸಹಭಾಗಿತ್ವದ ಹೆಲಿಕಾಪ್ಟರ್ ಜೋಡಣಾ ಘಟಕವನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಫ್ರಾನ್ಸ್ ಪ್ರಧಾನಿ ಎಮ್ಯಾನುಯೆಲ್ ಮ್ಯಾಕ್ರನ್ ವರ್ಚುವಲ್ ಮೂಲಕ ಉದ್ಘಾಟಿಸಲಿದ್ದಾರೆ. ಆದರೆ, ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರೀನ್ ವಾಟ್ರಿನ್ ವೇಮಗಲ್ ಘಟಕದಲ್ಲಿಯೇ ಉದ್ಘಾಟನಾ ಕಾರ್ಯಕ್ರಮದಲ್ಲಿ ಖುದ್ದು ಹಾಜರಿರಲಿದ್ದಾರೆ.

ಸ್ಥಳ ಪರಿಶೀಲಿಸಿದ ಜಿಲ್ಲಾಧಿಕಾರಿ

ಈಗಾಗಲೇ ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ, ಎಸ್ಪಿ ಕನ್ನಿಕಾ ಸಕ್ರಿವಾಲ್ ಮತ್ತಿತರ ಅಧಿಕಾರಿಗಳ ತಂಡ ಖುದ್ದು ವೇಮಗಲ್‌ಗೆ ಭೇಟಿ ನೀಡಿ, ರಕ್ಷಣೆ, ಬಿಗಿ ಭದ್ರತೆ ಕುರಿತ ಪೂರ್ವಸಿದ್ಧತೆಗಳನ್ನು ಪರಿಶೀಲಿಸಿದರು. ತಾಲ್ಲೂಕಿನ ವೇಮಗಲ್-ಕುರಗಲ್ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 50 ಎಕರೆ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಈ ಘಟಕ ದೇಶದಲ್ಲೇ ಮೊದಲ ಮಿನಿ ನಾಗರಿಕ ಹೆಲಿಕಾಪ್ಟರ್ ಘಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಇದು ಅಂತಿಮ ಹೆಲಿಕಾಪ್ಟರ್ ಜೋಡಣಾ ಘಟಕ ಎಂಬ ಖ್ಯಾತಿ ಹೊಂದಿದ್ದು, ಮೊದಲ ವರ್ಷದಲ್ಲಿ ವರ್ಷಕ್ಕೆ ಎಚ್125 ಮಾದರಿಯ 10 ಹೆಲಿಕಾಪ್ಟರ್‌ಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ. ಈ ಹೆಲಿಕಾಪ್ಟರ್‌ಗಳು ತುರ್ತು ವೈದ್ಯಕೀಯ ಸೇವೆ, ಪ್ರವಾಸೋದ್ಯಮ, ರಕ್ಷಣಾ ಕಾರ್ಯಾಚರಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಳಕೆಯಾಗಲಿದ್ದು, ಮುಂದಿನ ಹಂತಗಳಲ್ಲಿ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಯೋಜನೆಯೂ ಇದೆ ಎನ್ನಲಾಗಿದೆ. ವೇಮಗಲ್ ಕೈಗಾರಿಕಾ ಪ್ರದೇಶವು ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಚೆನ್ನೈ ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಗೆ ಸಮೀಪದಲ್ಲಿದ್ದು, ಸಾಗಾಣಿಕೆ ಮತ್ತಿತರ ದೃಷ್ಟಿಯಿಂದ ಅನುಕೂಲಕರವಾಗಿದೆ. ಈ ಘಟಕದ ಆರಂಭದಿಂದಾಗಿ ಸ್ಥಳೀಯರಿಗೆ ಉದ್ಯೋಗಾವಕಾಶ ಹೆಚ್ಚಾಗಲಿದ್ದು, ಕೋಲಾರ ಜಿಲ್ಲೆಯ ಕೈಗಾರಿಕಾ ಅಭಿವೃದ್ಧಿಗೆ ಪೂರಕ ವಾತಾವರಣ ಮತ್ತು ಪ್ರೇರಣೆ ಸಿಗಲಿದೆ ಎಂದು ನಂಬಲಾಗಿದೆ.

ಹೈಕೋರ್ಟ್‌ನಿಂದ ಮಹತ್ವದ ಆದೇಶ

ಶಾಸಕ ಸುಬ್ಬಾರೆಡ್ಡಿ ಆಯ್ಕೆ ಅಸಿಂಧು

• **ಬೆಂಗಳೂರು:** ಕಳೆದ ವಿಧಾನಸಭೆ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ (ಭಾಗ್ಯನಗರ) ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಕಾಂಗ್ರೆಸ್ ಶಾಸಕ ಎಸ್. ಎನ್. ಸುಬ್ಬಾರೆಡ್ಡಿ ಆಯ್ಕೆಯನ್ನು ಹೈಕೋರ್ಟ್ ಅಸಿಂಧುಗೊಳಿಸಿ ಮಹತ್ವದ ಆದೇಶ ನೀಡಿದೆ.

ನಾಮಪತ್ರ ಸಲ್ಲಿಕೆವೇಳೆಸಂಪೂರ್ಣ ಆಸ್ತಿ ಘೋಷಣೆ ಮಾಡಿಲ್ಲ. ಅಪರಾಧ ಪ್ರಕರಣಗಳ ಮಾಹಿತಿಗಳನ್ನೂ ಮರೆಮಾಚಿದ್ದಾರೆ ಎಂದು ಪರಾಜಿತ ಬಿಜೆಪಿ ಅಭ್ಯರ್ಥಿ ಸಿ. ಮುನಿರಾಜು ಅವರು 2023ರ ಜೂ.24ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ವೇಳೆ ಆಸ್ತಿ ಮಾಹಿತಿ ಉಲ್ಲಂಘನೆ ಮಾಡಿದ್ದು ದೃಢಪಟ್ಟ ಹಿನ್ನೆಲೆಯಲ್ಲಿ ಸುಬ್ಬಾರೆಡ್ಡಿ ಅವರ ಶಾಸಕ ಸ್ಥಾನವನ್ನು ಹೈಕೋರ್ಟ್ ಅಸಿಂಧು ಗೊಳಿಸಿದೆ. ನ್ಯಾಯಮೂರ್ತಿ ಎಂಜಿಎಸ್ ಕಮಲ್ ಅವರಿದ್ದ ಪೀಠ ಈ ಆದೇಶ ನೀಡಿದೆ.



ಎಸ್.ಎಸ್. ಸುಬ್ಬಾರೆಡ್ಡಿಗೆ ಸಂಕಷ್ಟ

ಆದರೆ, ಪರಾಜಿತ ಅಭ್ಯರ್ಥಿ ಸಿ. ಮುನಿರಾಜು ಅವರನ್ನು ವಿಜಯಿ ಎಂದು ಘೋಷಿಸಲು ಏಕಸದಸ್ಯ ನ್ಯಾಯಪೀಠ ನಿರಾಕರಿಸಿದೆ. ಅಸಿಂಧುಗೊಳಿಸಿದ ಆದೇಶವನ್ನು ಚುನಾವಣಾ ಆಯೋಗಕ್ಕೆ ಮತ್ತು ವಿಧಾನಸಭೆ ಕಾರ್ಯದರ್ಶಿಗೆ ರವಾನಿಸಲು ಆದೇಶಿಸಲಾಗಿದೆ. ಆದೇಶ ಪ್ರಕಟವಾಗುತ್ತಿದ್ದಂತೆ ಸುಬ್ಬಾರೆಡ್ಡಿ ಪರ ವಕೀಲರು, ಅರ್ಜಿಯ ಸಂಬಂಧ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವವರೆಗೆ ತಡೆಯಾಜ್ಞೆ ನೀಡಲು ಮನವಿ ಮಾಡಿದ್ದರು. ಇದಕ್ಕೆ ಅರ್ಜಿದಾರರ ಪರ ವಕೀಲರು ಆಕ್ಷೇಪಿಸಿದರು. ಅಂತಿಮವಾಗಿ ಮನವಿಯನ್ನು ಪೀಠವು ತಿರಸ್ಕರಿಸಿತು.

ಮುನಿರಾಜು ವಾಗ್ದಾಳಿ: ಹೈಕೋರ್ಟ್ ತೀರ್ಪು ಬೆನ್ನಲ್ಲೇ, ಮಾಧ್ಯಮದವರೊಂದಿಗೆ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಸಿ. ಮುನಿರಾಜು ಮಾತನಾಡಿದರು. ಪುಟ ೪



ಮುಂದೇನು?

ಶಾಸಕ ಸ್ಥಾನ ಅಸಿಂಧುಗೊಳಿಸಿರುವ ಹೈಕೋರ್ಟ್ ಮಧ್ಯಂತರ ತಡೆಯನ್ನು ನೀಡಿದೆ. ಮ,ಉಂದೆ ಸುಬ್ಬಾರೆಡ್ಡಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕು. ಹೈಕೋರ್ಟ್‌ನ ಅಸಿಂಧು ತೀರ್ಪನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದರೆ ಮಾತ್ರ ಶಾಸಕ ಸ್ಥಾನ ಉಳಿಯಲಿದೆ. ಇಲ್ಲವಾದರೆ 6 ತಿಂಗಳ ಬಳಿಕ ಮರು ಚುನಾವಣೆ ನಡೆಯಲಿದೆ.

ಕಾಂಗ್ರೆಸ್ ವಿರುದ್ಧ ಆರ್.ಅಶೋಕ್ ಕಿಡಿ

ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಆಯ್ಕೆ ಅಸಿಂಧು ವಿಚಾರವಾಗಿ ಎಕ್ಸ್ ಖಾತೆ ಮೂಲಕ ಕಾಂಗ್ರೆಸ್ ವಿರುದ್ಧ ಆರ್. ಅಶೋಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವೋಟ್ ಚೋರಿ ಕಹಾ ಹೈ? ಕಾಂಗ್ರೆಸ್ ಪಾರ್ಟಿ ಮೇ ಹೈ! ರಾಹುಲ್ ಗಾಂಧಿ ಅವರು ಈಗ ಬಾಗೇಪಲ್ಲಿಗೆ ಬಂದು ವೋಟ್ ಚೋರಿ, ಎಲೆಕ್ಷನ್ ಚೋರಿ ವಿರುದ್ಧ ಪ್ರತಿಭಟನೆ ಮಾಡ್ತಾರಾ? ನಮ್ಮ ದೇಶದಲ್ಲಿ ಮತಗಳ್ಳತನ, ಚುನಾವಣಾ ಅಕ್ರಮಕ್ಕೆ ಯಾರಾದರೂ ಪಿತಾಮಹ ಇದ್ದರೆ ಅದು ಕಾಂಗ್ರೆಸ್ ಪಕ್ಷ ಮತ್ತು ರಾಹುಲ್ ಗಾಂಧಿ ಅವರ ಪೂರ್ವಜರು ಎಂದು ವಾಗ್ದಾಳಿ ಮಾಡಿದ್ದಾರೆ.

ಹೆಚ್ಚಿದ ಆತಂಕ | ಪೊಲೀಸ್ ತಪಾಸಣೆ ಬಳಿಕ ನಿರಾತಂಕ

8 ಕೋರ್ಟ್‌ಗೆ ಬಾಂಬ್ ಬೆದರಿಕೆ

• **ಬೆಂಗಳೂರು:** ಧಾರವಾಡ ಹೈಕೋರ್ಟ್ ಸೇರಿ ಎಂಟು ಜಿಲ್ಲಾ ಕೋರ್ಟ್‌ಗಳಿಗೆ ಸೋಮವಾರ ಬಾಂಬ್ ಬೆದರಿಕೆ ಇ-ಮೇಲ್ ಸಂದೇಶ ಬಂದಿದೆ. ಹೀಗಾಗಿ ಕೋರ್ಟ್‌ಗಳಲ್ಲಿ ನಡೆಯಬೇಕಿದ್ದ ಕಲಾಪಗಳು ಅರ್ಧಕ್ಕೆ ಮೊಟಕುಗೊಂಡಿದ್ದು, ಸುತ್ತಮುತ್ತಲಿನ ಪ್ರದೇಶದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿವೆ. ಪೊಲೀಸ್ ತಪಾಸಣೆ ನಂತರ ಇದು ಹುಸಿ ಬಾಂಬ್ ಬೆದರಿಕೆ ಎಂದು ತಿಳಿದಿದೆ.

ಧಾರವಾಡ, ದಾವಣಗೆರೆ, ಕೊಡಗು, ಹಾಸನ, ಮಂಡ್ಯ, ಉತ್ತರ ಕನ್ನಡ, ರಾಮನಗರ, ಹಾವೇರಿ ಕೋರ್ಟ್‌ಗಳಿಗೆ ಏಕಕಾಲಕ್ಕೆ ಇ-ಮೇಲ್ ಮೂಲಕ ಬೆದರಿಕೆ ಸಂದೇಶ ರವಾನೆಯಾಗಿವೆ. ಧಾರವಾಡದ ಹೈಕೋರ್ಟ್ ಪೀಠಕ್ಕೆ ಬಂದ ಇ-ಮೇಲ್ ಬಾಂಬ್ ಬೆದರಿಕೆ ಸಂದೇಶವು ನ್ಯಾಯಾಲಯದ ಆವರಣದಲ್ಲಿ ಭೀತಿ-ಆತಂಕದ ವಾತಾವರಣ ನಿರ್ಮಿಸಿತ್ತು. ತಮಿಳುನಾಡಿನಲ್ಲಿ ಇಡಬ್ಲ್ಯುಎಸ್ ಮೀಸಲು ಅನುಷ್ಠಾನ ನಿಲ್ಲಿಸಿ. ಇಲ್ಲವಾದರೆ, ಇಲ್ಲಿನ ಹೈಕೋರ್ಟ್‌ನಲ್ಲಿ ಆರ್‌ಡಿಎಕ್ಸ್ ಬಾಂಬ್ ಮಧ್ಯಾಹ್ನ 1.15ಕ್ಕೆ ಸ್ಫೋಟಿಸುವುದಾಗಿ ಬೆದರಿಸಲಾಗಿದೆ.



ಹೈಕೋರ್ಟ್ ಹೆಚ್ಚುವರಿ ರಿಜಿಸ್ಟ್ರಾರ್ ಶಾಂತವೀರ ಶಿವಪ್ಪ ಇ-ಮೇಲ್ ಪರಿಶೀಲಿಸಿದ ತಕ್ಷಣ ಎಸ್‌ಪಿ ಗುಂಜನ್ ಆರ್ಯಗೆ ಮಾಹಿತಿ ನೀಡಿದ್ದು, ಎಚ್ಚೆತ್ತ ಎಸಿ ತಮ್ಮ ತಂಡದ ಜತೆ ಹೈಕೋರ್ಟ್‌ಗೆ ಆಗಮಿಸಿ, ನ್ಯಾಯಾಧೀಶರು, ನ್ಯಾಯವಾದಿಗಳು ಹೊರಗಡೆ ಕಳುಹಿಸಿದರು. ಜತೆಗೆ ಸುರಕ್ಷತೆ, ಜೀವ ರಕ್ಷಣೆಯ ಮುಂಜಾಗ್ರತೆ ದೃಷ್ಟಿಯಿಂದ ಎಲ್ಲ ಕೋರ್ಟ್ ಕಲಾಪಗಳನ್ನು ಅರ್ಧದಲ್ಲೇ ಮೊಟಕುಗೊಳಿಸಲಾಗಿದೆ. ಪುಟ ೪

25-30 ಕಾಂಗ್ರೆಸ್ ಶಾಸಕರಿಂದ ಆಸ್ಟ್ರೇಲಿಯಾ ಪ್ರವಾಸ

ಇಂದು ವಿದೇಶಕ್ಕೆ ಶಾಸಕರ ತಂಡ

• **ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ರಾಜಕೀಯದ ಬಿಸಿ ಬಿಸಿ ಚರ್ಚೆಯ ನಡುವೆಯೇ ಸುಮಾರು 25ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರ ತಂಡ ವಿದೇಶಿ ಪ್ರವಾಸಕ್ಕೆ ಸಿದ್ಧವಾಗಿದೆ. ವಿದೇಶಕ್ಕೆ ಹೋಗಬೇಕೋ ಬೇಡವೋ ಎಂಬ ಬಗ್ಗೆ ಪರ-ವಿರೋಧ ಚರ್ಚೆಗಳ ನಡುವೆಯೇ ಈ ಪ್ರವಾಸ ನಿಗದಿಯಾಗಿದೆ. ಮಂಗಳವಾರ 25-30 ಕಾಂಗ್ರೆಸ್ ಶಾಸಕರು ವಿದೇಶ ಪ್ರವಾಸ ಬೆಳೆಸಲಿದ್ದಾರೆ. ಇದರಲ್ಲಿ ಪರಿಷತ್ ಸದಸ್ಯರೂ ಇದ್ದಾರೆ. ಮಂಗಳವಾರ ರಾತ್ರಿ 8 ಗಂಟೆಗೆ ಬೆಂಗಳೂರಿನಿಂದ ಆಸ್ಟ್ರೇಲಿಯಾಕ್ಕೆ ಪ್ರಯಾಣಿಸಲಿದ್ದು, ಈ ಪ್ರವಾಸ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.



ಮಾರ್ಚ್ 1ಕ್ಕೆ ವಾಪಸ್

ವಿದೇಶಕ್ಕೆ ತೆರಳಲು ಕೆಲವರ ಹಿಂದೇಟು: ವಿದೇಶಕ್ಕೆ ಹೊರಟು ನಿಂತ ಶಾಸಕರ ಪೈಕಿ ಕೆಲವು ಶಾಸಕರು ವೀಸಾ ಸಿಗದ ಕಾರಣ ಪ್ರವಾಸ ರದ್ದು ಮಾಡಿದ್ದಾರೆ. ಪುಟ ೪

ಸ್ವಂತ ಖರ್ಚಿನಲ್ಲಿ ಪ್ರವಾಸ

ಶಾಸಕರು ತಮ್ಮ ಸ್ವಂತ ಖರ್ಚಿನಲ್ಲಿ ವಿದೇಶಕ್ಕೆ ಪ್ರವಾಸ ಹೋಗುತ್ತಾರೆ. ಸಾಮಾಜಿಕ, ಧಾರ್ಮಿಕ ವಿಚಾರದ ಬಗ್ಗೆ ಅಧ್ಯಯನ ನಡೆಸಲು ಎಲ್ಲರೂ ಹೋಗುತ್ತಿದ್ದಾರೆ ಎಂದು ಸಮಾಜ ಕಲ್ಯಾಣ ಖಾತೆ ಸಚಿವ ಎಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ. ಮಾಧ್ಯಮದವರೊಂದಿಗೆ ಸೋಮವಾರ ಮಾತನಾಡಿದ ಅವರು, ಶಾಸಕರು ವಿದೇಶ ಪ್ರವಾಸ ಹೋಗುವುದು ಗಂಭೀರ ವಿಚಾರವೇನಲ್ಲ. ಪ್ರವಾಸಕ್ಕೆ ಹೋದರೆ, ಕೆಲವೊಂದು ವಿಚಾರಗಳು ಅಭಿವೃದ್ಧಿ ಆಗುತ್ತೆ ಎನ್ನುವ ಕಾರಣಕ್ಕೆ ಪ್ರವಾಸಕ್ಕೆ ಹೋಗುತ್ತಾರೆ. ನನ್ನನ್ನು ಪ್ರವಾಸಕ್ಕೆ ಕರೆಯಬೇಕು ಎಂದೇನಿಲ್ಲ. ನಾನೇನೂ ಆ ಸ್ಥಿತಿಯಲ್ಲಿ ಸದ್ಯಕ್ಕೆ ಇಲ್ಲ. ಎಲ್ಲರೂ ಕರೆಯುವುದಕ್ಕೆ ನಾನೇನು ಮಗುನಾ ಎಂದು ಪ್ರಶ್ನಿಸಿದರು.

ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ಕಿಡಿ




ಹತಾಶೆಯ, ಬಾಲಿಶತನದ, ಅವಿವೇಕದ ಹೇಳಿಕೆ: ಬಿವೈವಿ

• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ನೀಡಿರುವ ಹೇಳಿಕೆಗೆ ಬಿಜೆಪಿ ವ್ಯಾಪಕ ಆಕ್ರೋಶ ವ್ಯಕ್ತಪಡಿಸಿದೆ. ಈ ಬಗ್ಗೆ ಮಾತನಾಡಿರುವ ಬಿಜೆಪಿ ನಾಯಕರು ಕಾಂಗ್ರೆಸ್ ಹಾಗೂ ಪ್ರಿಯಾಂಕ್ ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದರು. ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಚಿವ ಪ್ರಿಯಾಂಕ್ ಅವರು ಆರೆಸ್ಸೆಸ್ ವಿರುದ್ಧ ದ್ವೇಷದಿಂದ, ಹತಾಶರಾಗಿ ಅಥವಾ ಬಾಲಿಶತನದಿಂದ ಈ ಹೇಳಿಕೆ ಕೊಟ್ಟಿದ್ದಾರೆಯೇ? ಇದನ್ನು ಅವಿವೇಕತನದ ಹೇಳಿಕೆ ಎಂದು ಕರೆಯಬಹುದು; ಜನರು ಗ್ರಾಮೀಣ ಭಾಷೆಯಲ್ಲಿ ತಲೆಹರಟೆ, ಉಡಾಫೆ ಎಂದು ಕರೆಯುತ್ತಾರೆ ಎಂದರು. ಪುಟ ೪

ನೀವು ಯಾವ ಸಮುದಾಯದಿಂದ ಬಂದಿದ್ದೀರೋ ಆ ಸಮುದಾಯದ ಜನರು ಸಂಕಷ್ಟದಲ್ಲಿದ್ದಾರೆ. ನಿಮ್ಮ ಸರಕಾರ ದಲಿತರ 39 ಸಾವಿರ ಕೋಟಿ ಹಣವನ್ನು ನುಂಗಿದೆ. ಈ ಕುರಿತು ನೀವು ಒಂದು ದಿನವೂ ಪ್ರಸ್ತಾಪ ಮಾಡಿಲ್ಲವೇಕೆ?

■ ಛಲವಾದಿನಾರಾಯಣಸ್ವಾಮಿ, ವಿಧಾನ ಪರಿಷತ್ ವಿಪಕ್ಷ ನಾಯಕ



ಶಬರಿಮಲೆಗೆ ಎಲ್ಲಾ ವಯಸ್ಸಿನ ಮಹಿಳೆಯರ ಪ್ರವೇಶ ಕುರಿತ ಪ್ರಕರಣ

9 ನ್ಯಾಯಮೂರ್ತಿಗಳ ಪೀಠ ರಚನೆ

• **ಹೊಸದಿಲ್ಲಿ:** ಶಬರಿಮಲೆಗೆ ಎಲ್ಲಾ ವಯೋಮಿತಿಯ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕೋರುವ ಮತ್ತು ಇದೇ ರೀತಿ ಇತರ ಆರಾಧನಾ ಕೇಂದ್ರಗಳಲ್ಲೂ ಮಹಿಳೆಯರಿಗೆ ಪ್ರವೇಶಾವಕಾಶ ಕಲ್ಪಿಸಲು ಆಗ್ರಹಿಸುವ ಪ್ರಕರಣಗಳ ಇತ್ಯರ್ಥಕ್ಕಾಗಿ 9 ನ್ಯಾಯಮೂರ್ತಿಗಳನ್ನೊಳಗೊಂಡ ವಿಸ್ತೃತ ನ್ಯಾಯಪೀಠವನ್ನು ಸರ್ವೋಚ್ಚ ನ್ಯಾಯಾಲಯ ಆಡಳಿತಾತ್ಮಕ ಆದೇಶ ಮೂಲಕ ರಚಿಸಲಿದೆ. ಈ ವಿಸ್ತೃತ ನ್ಯಾಯಪೀಠ ಏ.7ರಂದು ಬೆಳಗ್ಗೆ 10.30ರಿಂದ ವಿಚಾರಣೆ ಶುರು ಮಾಡಲಿದೆ. ಈ ಹಿನ್ನೆಲೆಯಲ್ಲಿ, ಕೇರಳ ಸರಕಾರ ಸಹಿತ ಕಕ್ಷಿಗಾರರು ಮತ್ತು ಪ್ರತಿವಾದಿಗಳು 2026ರ ಮಾ.14ರಂದು ಅಥವಾ ಈ ದಿನಾಂಕದೊಳಗೆ ತಮ್ಮ ಲಿಖಿತ ಉತ್ತರಗಳ ಸಲ್ಲಿಸಬೇಕು ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ.

ಶಬರಿಮಲೆ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವಹಿಸುವ ಸಮರ್ಥನೀಯತೆ ಪ್ರಶ್ನಿಸಿ ಹಿಂದೆಯೂ ಆಕ್ಷೇಪಗಳು ವ್ಯಕ್ತವಾಗಿದ್ದವು. ಆದರೆ ಪ್ರಕರಣದ ಪರಿಶೀಲನಾ ಹಂತದಲ್ಲೂ ಸುಪ್ರೀಂಕೋರ್ಟ್ ನಿರ್ದಿಷ್ಟ ಪ್ರಶ್ನೆಗಳನ್ನು ವಿಸ್ತೃತ ನ್ಯಾಯಪೀಠದ ಪರಾಮರ್ಶೆಗೆ ನೀಡಬಹುದೆಂದು 9 ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠ 2020ರ ಫೆಬ್ರವರಿಯಲ್ಲಿ ನಿರ್ಣಾಯಕ ತೀರ್ಪು ನೀಡಿತ್ತು. ಪುಟ ೪





2018ರ ತೀರ್ಪಿಗೆ ವ್ಯಕ್ತವಾಗಿತ್ತು ಆಕ್ರೋಶ

ಶಬರಿಮಲೆಗೆ 10ರಿಂದ 50ರೊಳಗಿನ ಮಹಿಳೆಯರ ಪ್ರವೇಶ ನಿಷೇಧಿಸುವುದು ಲಿಂಗ ತಾರತಮ್ಯಕ್ಕೆ ಎಡೆ ಮಾಡುತ್ತದೆ ಮತ್ತು ಸಾಂವಿಧಾನಿಕ ಸಿದ್ಧಾಂತಗಳ ಉಲ್ಲಂಘನೆಗೆ ಸಮ. ಹಾಗಾಗಿ ಎಲ್ಲಾ ವಯೋಮಿತಿಯ ಮಹಿಳೆಯರೂ ಶಬರಿಮಲೆಗೆ ತೆರಳಬಹುದು ಎಂದು 2018 ಸೆ.28ರಂದು ಸುಪ್ರೀಂಕೋರ್ಟ್‌ನ ಆಗಿನ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ಪಂಚ ಸದಸ್ಯ ಪೀಠ ತೀರ್ಪಿತ್ತಿತ್ತು. ಈ ತೀರ್ಪಿಗೆ ಕೇರಳಾದ್ಯಂತ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿತ್ತು. ಅಯ್ಯಪ್ಪ ಸ್ವಾಮಿಗೆ ಸಮರ್ಪಿತ ಶಬರಿಮಲೆಯ ಸಾಂಪ್ರದಾಯಿಕ ನಿಯಮಗಳನ್ನು ಸಂರಕ್ಷಿಸಬೇಕೆಂದು ಹಲವಾರು ರಾಜಕೀಯ ಪಕ್ಷಗಳು ಆಗ್ರಹ ಮುಂದಿಟ್ಟಿದ್ದವು. ಸುಪ್ರೀಂಕೋರ್ಟ್ ತೀರ್ಪನ್ನು ಆಕ್ಷೇಪಿಸಿ ನ್ಯಾಯಾಲಯಕ್ಕೆ ಹಲವು ಮೇಲ್ಮನವಿಗಳು ಸಲ್ಲಿಕೆಯಾಗಿದ್ದವು. ಪುಟ ೪

ನಾನು ಗಾಂಧಿವಾದಿ, ರಾಹುಲ್‌ವಾದಿಯಲ್ಲ

• **ಹೊಸದಿಲ್ಲಿ:** ಕೇರಳದ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರ್ಕಾರವನ್ನು ಹೊಗಳಿ ಕಾಂಗ್ರೆಸ್ ನಾಯಕರ ಕೆಂಗಣ್ಣಿಗೆ ಗುರಿಯಾಗಿರುವ ಮಾಜಿ ಕೇಂದ್ರ ಸಚಿವ ಹಾಗೂ ಹಿರಿಯ ಕಾಂಗ್ರೆಸ್ ನಾಯಕ ಮಣಿಶಂಕರ್ ಅಯ್ಯರ್, ಇದೀಗ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯನ್ನೂ ತೀವ್ರವಾಗಿ ತರಾಟೆಗೆತ್ತಿಕೊಂಡಿದ್ದಾರೆ. ನಾನು ಗಾಂಧಿವಾದಿಯೇ ವಿನಾ ರಾಹುಲ್‌ವಾದಿಯಲ್ಲ ಎಂದು ಹೇಳುವ ಮೂಲಕ ತಮ್ಮ ಮೇಲೆ ಮುಗಿಬಿದ್ದ ರಾಹುಲ್ ನಿಷ್ಠ ಕಾಂಗ್ರೆಸ್ ನಾಯಕರಿಗೆ ಕುಟುಕಿದ್ದಾರೆ. ಪಿಣರಾಯಿ ವಿಜಯನ್ ಮತ್ತೆ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಅವರ ಹೇಳಿಕೆಗೆ ಕಾಂಗ್ರೆಸ್ ನಾಯಕರು ಕಿಡಿಕಾರಿದ್ದು, ಆ ಬಳಿಕ ಕಾಂಗ್ರೆಸ್‌ನೊಳಗಣ ಆಂತರಿಕ ಬಿಕ್ಕಟ್ಟು ಹೊರಬರಲಾರಂಭಿಸಿದೆ. ಪುಟ ೪



ಕೈ ನಾಯಕತ್ವ ವಿರುದ್ಧ ತಿರುಗಿಬಿದ್ದ ಮಣಿಶಂಕರ್ ಅಯ್ಯರ್

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,68,000(2,75,000) ಅಪರಂಜಿ ಚಿನ್ನ: 1,55,440(1,57,750) ಆಭರಣ ಚಿನ್ನ: 1,43,400(1,44,400) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 83,277 (650↑) ಎನ್‌ಎಸ್‌ಇ 25,682 (211↑)

$1 = ₹90.76

ಕಿರುಸುದ್ದಿ

ಪ್ರಸಾದ ವಿತರಣೆ



• **ಹುಬ್ಬಳ್ಳಿ:** ಶಿವರಾತ್ರಿ ಅಂಗವಾಗಿ ನಗರದ ಸಿದ್ಧಾರೂಢ ಸ್ವಾಮಿ ಮಠದ ಆವರಣದಲ್ಲಿ ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ ವತಿಯಿಂದ ಭಾನುವಾರ ಪ್ರಸಾದ ವಿತರಿಸಲಾಯಿತು.

ಸಿದ್ಧಾರೂಢ ಸ್ವಾಮಿ ಮಠದ ಟ್ರಸ್ಟ್ ಕಮಿಟಿ ಚೇರಮನ್ ಚನ್ನವೀರ ಮುಂಗರವಾಡಿ ಚಾಲನೆ ನೀಡಿದರು. ವೀರಭದ್ರೇಶ್ವರ ಟ್ರಸ್ಟ್ ಕಮಿಟಿ ಅಧ್ಯಕ್ಷ ಚಂದ್ರಶೇಖರ ಮಟ್ಟಿ, ಉಪಾಧ್ಯಕ್ಷ ಎಸ್.ಎಂ. ರುದ್ರಯ್ಯ, ಬಸವರಾಜ್ ಕಲ್ಯಾಣ್ ಶೆಟ್ಟರ್, ವೀರಣ್ಣ ಬಲುಚಗಿ, ಬಸವರಾಜ ಚಿಕ್ಕಮಠ, ವೀರೇಶ್ ಮಟ್ಟಿ, ರವಿ ನಾಯಕ್, ಸಿ.ಎಸ್.ಪಾಟೀಲ್, ರಾಜು ಮಟ್ಟಿ ಇದ್ದರು.



ಅಳ್ನಾವರ: ಡೋರಿ ಗ್ರಾಮದ ವಿವಿಧೋದ್ದೇಶಗಳ ಕೃಷಿ ಪತ್ತಿನ ಸಹಕಾರ ಸಂಘದ ನೂತನ ನಿರ್ದೇಶಕರಾಗಿ ಆಯ್ಕೆಯಾದ ಕಂಬಾರಗಣವಿ ಗ್ರಾಮದ ಗಂಗಾಧರ ಬುಡರಕಟ್ಟಿ ಅವರನ್ನು ಶಿವಾಜಿ ಡೊಳ್ಳಿನ ಇತರರು ಸನ್ಮಾನಿಸಿದರು. ಪಾರೂಖ ಅಂಬಡಗಟ್ಟಿ,ಯಲ್ಲಪ್ಪ ಅಗ್ಲೋಜಿ, ಅಡವಯ್ಯ ಹಿರೇಮಠ, ಮಂಜುನಾಥ ಯಡಳ್ಳಿರಮೇಶ ಬುಡರಕಟ್ಟಿ ಇದ್ದರು.



ಹುಬ್ಬಳ್ಳಿ: ಬಸವ ಕೇಂದ್ರದ ವತಿಯಿಂದ ಶಿವರಾತ್ರಿ ಅಂಗವಾಗಿ ಶಿವಯೋಗ (ಸಾಮೂಹಿಕ ಇಷ್ಟಲಿಂಗ ಪೂಜೆ ಹಾಗೂ ಯೋಗ) ಕಾರ್ಯಕ್ರಮ ಬಸವ ಕೇಂದ್ರದ ಸಭಾಭವನದಲ್ಲಿ ಬಸವ ಕೇಂದ್ರದ ಅಧ್ಯಕ್ಷ ಪ್ರೊ. ಜಿ.ಬಿ.ಹಳ್ಯಾಳ ಅವರು ಶಿವಯೋಗ ಚಿಂತನ ಹಾಗೂ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

ಬಾವಿಯಲ್ಲಿ ಬಿದ್ದ ಬೆಕ್ಕಿನ ರಕ್ಷಣೆ



• **ಕುಂದಗೋಳ:** ತಾಲೂಕಿನ ಸಂಶಿ ಗ್ರಾಮದ ಹಳೆ ಬಾವಿಯಲ್ಲಿ ಬಿದ್ದ ಸಾಕು ಬೆಕ್ಕನ್ನು ಅಗ್ನಿಶಾಮಕ ದಳದವರು ರಕ್ಷಣೆ ಮಾಡಿದರು. ಗ್ರಾಮದ ದೇವೇಂದ್ರಪ್ಪ ಬಡಿಗೇರ ಅವರ ಬೆಕ್ಕು ಹಾಳುಬಾವಿಯಲ್ಲಿ ಬಿದ್ದನ್ನು ರಕ್ಷಣೆ ಮಾಡಿದರು. ಸಹಾಯಕ ಅಗ್ನಿಶಾಮಕ ಅಧಿಕಾರಿ ಆರ್.ಎಂ. ಬೇಪಾರಿ, ಸಿಬ್ಬಂದಿ ಮಾರುತಿ ಹೈಬತ್ತಿ, ಎಂ..ಎಚ್. ಕಿಲ್ಲೇದಾರ, ರಾಜಕುಮಾರ ಲಮಾಣಿ, ಚಂದ್ರು ಬಣಕಾರ್, ವಿಜಯ್ ಎಚ್. ಇದ್ದರು.



ಹುಬ್ಬಳ್ಳಿ: ಶಿವರಾತ್ರಿ ನಿಮಿತ್ತ ವಿದ್ಯಾರಣ್ಯ ಸೇವಾ ಸಂಘದ ಜೀವನ ಸಂಧ್ಯಾ ವೃದ್ಧಾಶ್ರಮ ಮಿಶ್ರೀಕೋಟಿಯ ಕಾಡನಕೊಪ್ಪದಲ್ಲಿ ಭಗವದ್ಗೀತಾ ಭಜನಾ ಮಂಡಳಿ ವತಿಯಿಂದ ಗಾಯನ ಹಾಗೂ ಭಜನಾ ಕಾರ್ಯಕ್ರಮ ನಡೆಯಿತು. ಡಾ. ಸಂದೀಪ ದೇಸಾಯಿ ಹಾಗೂ ಡಾ. ವೇದಾ ದೇಸಾಯಿ ಇದ್ದರು.

ಆಕಸ್ಮಿಕ ಬೆಂಕಿ: ಗೋವಿನ ಜೋಳ ರಾಶಿ ಭಸ್ಮ

• **ಕುಂದಗೋಳ:** ತಾಲೂಕಿನ ಗುಡಗೇರಿ ಪಶುಪತಿಹಾಳ ರಸ್ತೆಯಲ್ಲಿರುವ ಚಂದ್ರಶೇಖರ ಬಸವರಾಜ ಮಳಲಿ ಅವರ ಹೊಲದಲ್ಲಿ ಒಕ್ಕಲು ಮಾಡಲು ಸಂಗ್ರಹಿಸಿದ ಗೋವಿನ ಜೋಳಕ್ಕೆ ಆಕಸ್ಮಿಕ ಬೆಂಕಿ ತಗಲಿದ ಪರಿಣಾಮ ರಾಶಿ ಬೆಂಕಿಗೆ ಆಹುತಿಯಾದ ಘಟನೆ ಜರುಗಿದೆ. 5 ಎಕರೆಯಲ್ಲಿ ಬೆಳೆದ ಗೋವಿನ ಜೋಳ ಬೆಳೆಯನ್ನು ಒಕ್ಕಲು ಮಾಡಲು ಹೊಲದಲ್ಲಿ ಸಂಗ್ರಹಿಸಿದ್ದು, ಆಕಸ್ಮಿಕ ತಗುಲಿದ ಬೆಂಕಿಯನ್ನು ಅಗ್ನಿಶಾಮಕ ದಳದವರು ನಂದಿಸುವುದರೊಳಗೆ ರಾಶಿ ಬಹುತೇಕವಾಗಿ ಬೆಂಕಿಗೆ ಭಸ್ಮವಾಗಿದ್ದು ಸುಮಾರು ಮೂರು ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ರೈತ ಚಂದ್ರಶೇಖರ ಮಳಲಿ ಗುಡಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.



ಹುಬ್ಬಳ್ಳಿ: ಮಹಾಶಿವರಾತ್ರಿ ಅಂಗವಾಗಿ ಇಲ್ಲಿಯ ಸ್ಟೇಶನ್ ರಸ್ತೆ ಈಶ್ವರ ದೇವಸ್ಥಾನದಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಅವರು ಶಿವಲಿಂಗಕ್ಕೆ ಬೆಳಗ್ಗೆ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದರು.

ಉಮಚಗಿ ಗ್ರಾಮಕ್ಕೆ ದಿವ್ಯ ರಥಯಾತ್ರೆ ಇಂದು

• **ಹುಬ್ಬಳ್ಳಿ:** ಶ್ರೀಸತ್ಯ ಸಾಯಿ ಸೇವಾ ಸಂಸ್ಥೆ ವತಿಯಿಂದ ಶ್ರೀ ಸತ್ಯ ಸಾಯಿ ಬಾಬಾರ 100ನೇ ಜನ್ಮದಿನ ಅಂಗವಾಗಿ ಶ್ರೀ ಸತ್ಯ ಸಾಯಿ ಪ್ರೇಮ ಪ್ರವಾಹಿನಿ ದಿವ್ಯ ರಥಯಾತ್ರೆ ಫೆ.16ರಂದು ಧಾರವಾಡ ಪ್ರವೇಶಸಲಿದ್ದು, ಅದ್ದೂರಿಯಾಗಿ ಸ್ವಾಗತಿಸಲಾಗುವುದು ಎಂದು ಶ್ರೀಸತ್ಯ ಸಾಯಿ ಸೇವಾ ಸಂಸ್ಥೆ ನಾಗರಾಜ ಧಾರವಾಡಕರ ತಿಳಿಸಿದರು. ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿವ್ಯ ರಥಯಾತ್ರೆ ದೇಶದ್ಯಾಂತ 500 ಜಿಲ್ಲೆಗಳಲ್ಲಿ 500 ದಿನಗಳ ಕಾಲ ಸಂಚರಿಸುತ್ತಿದೆ. ಈಗಾಗಲೇ ಕರ್ನಾಟಕದ ದಕ್ಷಿಣ ಕರ್ನಾಟಕ ಭಾಗದಲ್ಲಿ ಸಂಚರಿಸಿ, ಕರ್ನಾಟಕ ಉತ್ತರ ಜಿಲ್ಲೆಗಳಾದ ರಾಯಚೂರ, ಕೊಪ್ಪಳ, ಗದಗ ಮಾರ್ಗವಾಗಿ ಧಾರವಾಡ ಜಿಲ್ಲೆಯಲ್ಲಿ ರಥಯಾತ್ರೆ ಸಂಚರಿಸಲಿದೆ ಎಂದರು. ಫೆ.17ರಂದು ಬೆಳಗ್ಗೆ 7 ಗಂಟೆಗೆ ಹುಬ್ಬಳ್ಳಿಯ ಉಮಚಗಿ ಗ್ರಾಮಕ್ಕೆ ಆಗಮಿಸಿ ಗ್ರಾಮದ ದ್ಯಾಮವ್ವನ ದೇವಸ್ಥಾನದಿಂದ ಆರಂಭವಾಗಿ ಮಧ್ಯಾಹ್ನ 1ಕ್ಕೆ ಮೈಲಾರಲಿಂಗೇಶ್ವರ ದೇವಸ್ಥಾನಕ್ಕೆ ಮುಗಿಯಲಿದೆ. ಸಂಜೆ 4 ಗಂಟೆಗೆ ಹಳಿಯಾಳ್ ಪ್ರವೇಶಸಲಿದೆ. 18 ರಂದು ಬೊಮ್ಮಸಮುದ್ರ, 18 ರಂದು ವರೂರ, ಛಬ್ಬಿ ಯಲ್ಲಿ ನಡೆಯಲಿದೆ. ಫೆ.19 ರಂದು ಬೆಳಗ್ಗಿ 7 ಗಂಟೆಗೆ ನಗರದ ಕಮರಿಪೇಟ ರಾಮಮಂದಿರದಿಂದ ಆರಂಭವಾಗಿ ಮಧ್ಯಾಹ್ನ 12ಕ್ಕೆ ರುದ್ರಾಕ್ಷಿ ಮಠಕ್ಕೆ ಮುಕ್ತಾಯವಾಗಲಿದೆ. ಈ ವೇಳೆ ಬೃಹತ್ ಸಮಾರಂಭ ಏರ್ಪಡಿಸಲಾಗಿದೆ. ಸಂಜೆ 4ಕ್ಕೆ ರುದ್ರಾಕ್ಷಿ ಮಠದಿಂದ ಆರಂಭವಾಗಿ 7 ಗಂಟೆಗೆ ಸತ್ಯ ಸಾಯಿ ಸೇವಾ ಕ್ಷೇತ್ರ (ಬನಶಂಕರಿ ಬಡವಾಣೆ) ಮುಕ್ತಾಯವಾಗಲಿದೆ. ಫೆ.20 ರಂದು ಹೊಸೂರ, ನವನಗರ, 21 ರಿಂದ 22 ರ ವರೆಗೆ ಧಾರವಾಡ ವಿವಿಧ ಪ್ರದೇಶದಲ್ಲಿ ರಥಯಾತ್ರೆ ನಡೆಯಲಿದೆ ಎಂದರು. ತುಳಸಿ ಬಸವ, ಗೋಪಾಲ ಕುಲಕರ್ಣಿ, ಮಹೇಶ ಬಿಳಗಿ, ವಸಂತ, ದೀಲಿಪ ಹಣಗಿ ಇದ್ದರು.



ಹುಬ್ಬಳ್ಳಿ: ನಗರದ ರೈಲ್ವೆ ಡೌನ್ ಚಾಳ ಕಾಲೋನಿಯಲ್ಲಿ ನೈಋತ್ಯ ರೈಲ್ವೆ ಬಂಜಾರ ನೌಕರರ ವತಿಯಿಂದ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಸಂತ ಸೇವಾಲಾಲ್ ಮಹಾರಾಜರ 287ನೇ ಜಯಂತ್ಯುತ್ಸವವು ಭಕ್ತಿ ಮತ್ತು ಸಡಗರದಿಂದ ನಡೆಯಿತು.

ಸಾರ್ವಜನಿಕರಿಂದ ಅಹವಾಲು ಸ್ವೀಕಾರ | ಜಿಲ್ಲಾಧಿಕಾರಿ ಸ್ನೇಹಲ್ ಹೇಳಿಕೆ

ಜನಸ್ನೇಹಿ ಆಡಳಿತ ವ್ಯವಸ್ಥೆಗೆ ಕ್ರಮ

• **ಹುಬ್ಬಳ್ಳಿ:** ಜಿಲ್ಲೆಯಲ್ಲಿ ಆಡಳಿತ ವ್ಯವಸ್ಥೆಯನ್ನು ಜನಸ್ನೇಹಿಯಾಗಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ತಾಲೂಕು ಹಾಗೂ ಗ್ರಾಮ ಮಟ್ಟದಲ್ಲಿ ದೂರು ಸ್ವೀಕಾರ ವ್ಯವಸ್ಥೆಯನ್ನು ಬಲಪಡಿಸಲಾಗುತ್ತಿದೆ. ಬರುವ ದೂರುಗಳನ್ನು ನಿಗದಿತ ಅವಧಿಯಲ್ಲಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದರು.

ತಾಲೂಕು ಆಡಳಿತಸೌಧದ ಹುಬ್ಬಳ್ಳಿ ತಹಶೀಲ್ದಾರ್ ಕಚೇರಿಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರಿಂದ ಬಂದ ಮಾಹಿತಿಯ ಆಧಾರದ ಮೇಲೆ ಸ್ಥಳ ಪರಿಶೀಲನೆ ನಡೆಸಿ ತಕ್ಷಣ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಬೇಸಿಗೆ ಕಾಲವನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಮುಂಚಿತವಾಗಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಗ್ರಾಮ ಪಂಚಾಯತ್, ನಗರಸಭೆ ಹಾಗೂ ನೀರು ಸರಬರಾಜು ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ನೀರಿನ ಮೂಲಗಳನ್ನು ಗುರುತಿಸಲಾಗುತ್ತಿದೆ ಎಂದು ಹೇಳಿದರು.

ಜನಸಾಮಾನ್ಯರು ಮಾತ್ರವಲ್ಲದೆ ಜಾನುವಾರುಗಳಿಗೆ ಸಹ ಕುಡಿಯುವ ನೀರಿನ ಸಮಸ್ಯೆಗಳು ಆಗದಂತೆ ಕ್ರಮಗಳನ್ನು ಕೈಗೊಳ್ಳಲಾಗುವುದು. ಶುದ್ಧ ಕುಡಿಯುವ ನೀರಿನ ಘಟಕಗಳ ಕಾರ್ಯಕ್ಷಮತೆ ಕುರಿತು ಜಿಲ್ಲಾ ಪಂಚಾಯತ್ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಕಾರ್ಯ ನಿರ್ವಹಿಸದ ಘಟಕಗಳನ್ನು ದುರಸ್ತಿ ಮಾಡಿ ಮರುಚಾಲನೆ ಮಾಡುವ ಕಾರ್ಯಕ್ಕೆ ಆದ್ಯತೆ ನೀಡಲಾಗುತ್ತದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ ಅವುಗಳನ್ನು ತ್ವರಿತವಾಗಿ ಪರಿಹರಿಸುವಂತೆ ತಹಶೀಲ್ದಾರರಿಗೆ ಸೂಚನೆ ನೀಡಿದರು.

ಹುಬ್ಬಳ್ಳಿ ಶಹರ ತಹಶೀಲ್ದಾರ್ ಮಹೇಶ ಭಗವಂತ ಗಸ್ತೆ, ಹುಬ್ಬಳ್ಳಿ ಗ್ರಾಮೀಣ ತಹಶೀಲ್ದಾರ ಜೆ.ಬಿ.ಮಜ್ಜಗಿ, ಗ್ರೇಡ್ 2 ತಹಶೀಲ್ದಾರ್ ಶಿವಾನಂದ ಹೆಬ್ಬಳ್ಳಿ, ಕಂದಾಯ ನಿರೀಕ್ಷಕ ರವಿ ಬೆಣ್ಣೂರ ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು, ಸಾರ್ವಜನಿಕರು ಇತರರಿದ್ದರು.



ಉತ್ತಮ ಫಲಿತಾಂಶದ ಗುರಿ

ಶೈಕ್ಷಣಿಕ ಕ್ಷೇತ್ರದಲ್ಲಿ ಜಿಲ್ಲೆಗೆ ವಿದ್ಯಾ ಕಾಶಿ ಎಂಬ ಹೆಗ್ಗಳಿಕೆ ಇರುವ ಹಿನ್ನೆಲೆಯಲ್ಲಿ ಈ ವರ್ಷ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ರ್‍ಯಾಂಕ್ ಗಳಿಸಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಶಾಲೆ, ಕಾಲೇಜುಗಳಲ್ಲಿ ಹೆಚ್ಚುವರಿ ತರಗತಿಗಳು, ಮಾರ್ಗದರ್ಶನ ಶಿಬಿರಗಳು, ಪ್ರಶ್ನೆಪತ್ರಿಕೆ ಅಭ್ಯಾಸ ಹಾಗೂ ವಿಷಯ ತಜ್ಞರಿಂದ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಕಳೆದ ಸಾಲಿನಲ್ಲಿ ಸಾಧಿಸಿದ ಸಾಧನೆಗಿಂತ ಹೆಚ್ಚಿನ ಸಾಧನೆಯನ್ನು ಮಾಡಲು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಲಾಗುತ್ತದೆ. ರಾಜ್ಯ ಮಟ್ಟದಲ್ಲಿ ಉನ್ನತ ಸ್ಥಾನವನ್ನು ಧಾರವಾಡ ಜಿಲ್ಲೆ ಪಡೆದುಕೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು ಎಂದು ಡಿಸಿ ಸ್ನೇಹಲ್ ತಿಳಿಸಿದರು.

- ಬೀದಿ ನಾಯಿಗಳ ಸಮಸ್ಯೆ ನಿಯಂತ್ರಣಕ್ಕೆ ಸಮಗ್ರ ಸಮೀಕ್ಷೆ
- ಹಲವೆಡೆ ಗುರುತು ಮಾಡುವ ಕಾರ್ಯ ಪೂರ್ಣ
- ಬೇಬಿ ನಾಯಿಗಳ ರಕ್ಷಣೆ, ಲಸಿಕೆ ಹಾಗೂ ಅವುಗಳನ್ನು ಸೂಕ್ತ ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸುವ ಯೋಜನೆ ರೂಪಿಸಲಾಗಿದೆ
- ಪ್ರತಿ ತಿಂಗಳು ಕನಿಷ್ಠ ಒಂದು ಬಾರಿ ಎಲ್ಲಾ ತಾಲೂಕುಗಳಿಗೆ ಭೇಟಿ ನೀಡಿ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಲಿರುವ ಜಿಲ್ಲಾಡಳಿತ
- ಸ್ಥಳೀಯ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರ ಜೊತೆ ನೇರ ಸಭೆ ನಡೆಸಿ ಸಮಸ್ಯೆಗೆ ಪರಿಹಾರ ಒದಗಿಸಲಾಗುವುದು ಎಂದು ಹೇಳಿದ ಡಿಸಿ ಸ್ನೇಹಲ್

ಸಮನ್ವಯ ಸಾಧಿಸಿ ಕೆಲಸ ಮಾಡಿ: ಕೂಸಂಬೆ

• **ಧಾರವಾಡ:** ಕಾನೂನು ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ಬಗ್ಗೆ ಹೆಚ್ಚು ನಿಗಾ ವಹಿಸಬೇಕು. ಕಾನೂನಿನ ಚೌಕಟ್ಟಿನಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗೆ ವಿವಿಧ ಇಲಾಖೆ ಅಧಿಕಾರಿಗಳು ಸಮನ್ವಯ ಸಾಧಿಸಿ ಕೆಲಸ ನಿರ್ವಹಿಸಲು ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೂಸಂಬೆ ಸೂಚಿಸಿದರು.

ನಗರದ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೆ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಪ್ರಗತಿ ಕುರಿತು ಪರಿಶೀಲನೆ ಸಭೆ ನಡೆಸಿದ ಅವರು, ಮಕ್ಕಳ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು. ಸಂಜೆ ಹಾಗೂ ವಿಚಾರಣೆ ಅವಧಿ ಬಳಿಕ ಮಕ್ಕಳನ್ನು ಪೊಲೀಸ್ ಠಾಣೆಗಳಲ್ಲಿ ಇರಿಸುವಂತಿಲ್ಲ, ಕಾಣೆಯಾದ ಮಕ್ಕಳು ಪತ್ತೆಯಾದ ಬಳಿಕ ಬಾಲ್ಯ ವಿವಾಹ ಮತ್ತು ಪೋಕ್ಸೋ ಅಂತಹ ಪ್ರಕರಣಗಳಾಗಿವೆಯೇ ಎಂದು ಕೂಲಂಕುಷವಾಗಿ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವಂತೆ ಆದೇಶಿಸಿದರು.

ಪ್ರತಿಯೊಂದು ಪೊಲೀಸ್ ಠಾಣೆ ವ್ಯಾಪ್ತಿಯ ಶಾಲಾ-ಕಾಲೇಜಿನಲ್ಲಿ ಪ್ರತಿ ಗುರುವಾರ ತೆರೆದ ಮನೆ ಕಾರ್ಯಕ್ರಮ ಕಡ್ಡಾಯ. ಮಕ್ಕಳ ರಕ್ಷಣಾ ಸಮಿತಿ-2016ರ ಪ್ರಕಾರ ಶಾಲಾ ವಾಹನಗಳ ಚಾಲಕರು ಪೊಲೀಸ್ ಪರಿಶೀಲನೆಗೆ ಒಳಪಟ್ಟಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳಲು ನಿರ್ದೇಶನ ನೀಡಿದರು.

ಮಕ್ಕಳ ರಕ್ಷಣಾ ನೀತಿ-2016ರ ಅನ್ವಯ ಶಾಲೆಯಲ್ಲಿ ಸಲಹಾ-ದೂರು ಪೆಟ್ಟಿಗೆಗಳು ಅಳವಡಿಸುವ ಜತೆ ಮಕ್ಕಳ ಸಹಾಯವಾಣಿ 1098 ಶಾಶ್ವತ ಗೋಡೆ ಫಲಕ ಹಾಕಲು ಹೇಳಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದೀಪಾ ಜಾವೂರ ಮಾತನಾಡಿ, ಪಾಲನೆ-ಪೋಷಣೆ ಅಗತ್ಯವಿರುವ ಹಾಗೂ ಕಾನೂನು ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ಪ್ರಕರಣ ಕುರಿತು ಜಿಲ್ಲೆಯಲ್ಲಿ ಕ್ರಿಯಾತ್ಮಕ ಕಾರ್ಯಕ್ರಮ ಪ್ರಗತಿಯಲ್ಲಿದ್ದು, ಮಕ್ಕಳ ಹಕ್ಕುಗಳ ರಕ್ಷಣೆಗೆ ಕ್ರಮ ವಹಿಸಿರುವುದಾಗಿ ಹೇಳಿದರು. ಪೊಲೀಸ್ ಅಧಿಕಾರಿಗಳಾದ ಶಿವಾನಂದ ಕಟಗಿ, ವಿಜಯಕುಮಾರ ವಿಟಿ, ವಿಜಯಲಕ್ಷ್ಮೀ ಪಾಟೀಲ, ಮಹ್ಮದ್ ಅಲಿ ತಹಶೀಲ್ದಾರ್ ಇತರರಿದ್ದರು.

> ಧಾರವಾಡ ಜಿಲ್ಲೆಯ ಯಾವುದೇ ಪೊಲೀಸ್ ಠಾಣೆಗಳಿಗೆ ಮಗುವಿನ ಪ್ರಕರಣಗಳ ಬಗ್ಗೆ ದೂರುಗಳು ಬಂದಾಗ ಮಕ್ಕಳ ಸ್ನೇಹಿ ಪೊಲೀಸ್ ವಾತಾವರಣ ಕಲ್ಪಿಸಬೇಕು. ಇಂತಹ ಪ್ರಕರಣಗಳನ್ನು ಆದ್ಯತೆ ಮೇರೆಗೆ ತ್ವರಿತವಾಗಿ ವಿಲೇವಾರಿ ಮಾಡಿ, ಮಕ್ಕಳ ಹಕ್ಕುಗಳು ರಕ್ಷಣೆ ಮಾಡಬೇಕು.
> ■ ಶಶಿಧರ ಕೂಸಂಬೆ, ಅಧ್ಯಕ್ಷ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗ



ಅಣ್ಣಿಗೇರಿಗೆ ಆಗಮಿಸಿದ ಪ್ರೇಮ ಪ್ರವಾಹಿನಿ ರಥಯಾತ್ರೆ


• **ಅಣ್ಣಿಗೇರಿ:** ಶ್ರೀಸತ್ಯಸಾಯಿಬಾಬಾ ಅವರ ಜನ್ಮದಿನದ ಶತಮಾನೋತ್ಸವದ ಸಂಭ್ರಮಾಚರಣೆ ಅಂಗವಾಗಿ ಧಾರ್ಮಿಕ ಜಾಗೃತಿ, ಭಕ್ತಿ ಹಾಗೂ ಲೋಕಕಲ್ಯಾಣಾರ್ಥವಾಗಿ ರಾಜ್ಯದ ವಿವಿಧೆಡೆ ಸಂಚರಿಸಲಿರುವ ಶ್ರೀಸತ್ಯಸಾಯಿ ಪ್ರೇಮ ಪ್ರವಾಹಿನಿ ರಥಯಾತ್ರೆಯು ಸೋಮವಾರ ಮುಂಜಾನೆ ಅಣ್ಣಿಗೇರಿ ನಗರ ಕುರುಬಗೇರಿ ಓಣಿಯ ಆವರಣಕ್ಕೆ ಆಗಮಿಸಿತು.

ಗದಗ ಜಿಲ್ಲೆಯ ಬೆಂತುರ್ ಗ್ರಾಮದ ಮೂಲಕ ಧಾರವಾಡ ಜಿಲ್ಲೆಯನ್ನು ಪ್ರವೇಶಿಸಿದ ರಥಯಾತ್ರೆಯನ್ನು ಅಣ್ಣಿಗೇರಿ ಶ್ರೀಸತ್ಯ ಸಾಯಿ ಸೇವಾ ಕ್ಷೇತ್ರದ ಜಿಲ್ಲಾಧ್ಯಕ್ಷ ಮತ್ತು ರಾಜ್ಯ ಸಂಯೋಜಕರು ರಥಯಾತ್ರೆ ವಿಭಾಗ ಕರ್ನಾಟಕ ದಿವ್ಯ ರಥದ ಭವ್ಯ ಸ್ವಾಗತ ಮತ್ತು ಉದ್ಘಾಟನೆಯನ್ನು ನಾಗರಾಜ ಧಾರವಾಡಕರ್ ಸೇರಿದಂತೆ ಪದಾಧಿಕಾರಿಗಳು, ಹಿರಿಯರು, ಮಹಿಳೆಯರು ರಥಕ್ಕೆ ಮಾಲಾರ್ಪಣೆಯೊಂದಿಗೆ ಆರತಿ ಮಾಡಿ ಶ್ರದ್ಧಾಭಕ್ತಿಯಿಂದ ಬರಮಾಡಿಕೊಂಡುಡು ಉದ್ಘಾಟಿಸಿದರು.

ನಗರ ಕುರುಬಗೇರಿ ಓಣಿಯ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಶ್ರೀಸತ್ಯ ಸಾಯಿ ಸೇವಾ ಸಮಿತಿ ರಥವು ಆಗಮಿಸುತ್ತಿದ್ದಂತೆ ಕ್ಷೇತ್ರದ ಸುತ್ತಮುತ್ತಲಿನ ಭಕ್ತಾದಿಗಳು ಬರಮಾಡಿಕೊಂಡರು. ಮಹಿಳೆಯರು ಆರತಿ ಮಾಡಿ ನಮಿಸಿದರು. ನಗರದ ರಾಜ ಬೀದಿಗಳಲ್ಲಿ ಸಂಚರಿಸಿಲು ರಥಯಾತ್ರೆಯು ಬರುವ ಮಾರ್ಗದುದ್ದಕ್ಕೂ ಮಹಿಳೆಯರು ರಂಗೋಲಿ ಹಾಕಿದ್ದರು. ಪೂರ್ಣ ಕುಂಭ ಮಂಗಳವಾದ್ಯಗಳೊಂದಿಗೆ ಸಮಿತಿಯ ಎಲ್ಲ ಸದಸ್ಯರು ವೇದಘೋಷ ಮತ್ತು ಭಜನೆ ಹಾಗೂ ಎತ್ತುಗಳ ಮೆರವಣಿಗೆ, ಮಕ್ಕಳಿಗೆ ಮಹಾಪುರುಷರ ವೇಷ ಹಾಕಿ ತಮ್ಮ ಭಕ್ತಿಯನ್ನು ಪ್ರದರ್ಶಿಸಿದರು ನಂತರ ದೇವಸ್ಥಾನದ ಆವರಣದಲ್ಲಿ ಮಂಗಳಾರತಿ ಜರುಗಿತು. ಸಿ.ಜಿ. ಪಾಟೀಲ, ಅಜ್ಜಪ್ಪ ಮೇಟಿ,ಅರುಣ ದಿಡ್ಡಿ, ನಾಗರಾಜ್ ಎಣ್ಣಿ, ಈರಪ್ಪ ವಜ್ರಬಂಡಿ, ನಾಗಲಿಂಗಪ್ಪ ದಳವಾಯಿ, ಅರ್ಜುನ್ ಕಲಾಲ್ ,ರಾಚಯ್ಯ ಹಿರೇಮಠ, ಶಿವಾನಂದ ಕರೆಟ್ಟಿನವರ್,ಲಿಂಗಪ್ಪ ಅಕ್ಕಿ,ಹನುಮಂತ ಕರೆಟ್ಟನವರ, ಶರಣಪ್ಪ ತಳಕಲ, ಬಸವರಾಜ ದೇಸಾಯಿಗೌಡರ, ವಸಂತ ಶಾವಿಪಲ್ಲೆದ, ಸಂಚಾಲಕರು, ಪದಾಧಿಕಾರಿಗಳು ಇತರರಿದ್ದರು.

> ಮನೆಯಲ್ಲಿ ಮಹಿಳೆಯರು ಮಕ್ಕಳಿಗೆ ಧಾರ್ಮಿಕ ಮನೋಭಾವ, ಆಧ್ಯಾತ್ಮಿಕ ಚಿಂತನೆಯ ಮೂಲಕ ಒಳ್ಳೆಯ ಸಂಸ್ಕಾರ, ಸಂಸ್ಕೃತಿಯನ್ನು ರೂಢಿಸಬೇಕು.
> ■ ಸಿ.ಜಿ. ಪಾಟೀಲ, ಸಮಿತಿ ಸದಸ್ಯ

> ಶ್ರೀಸತ್ಯಸಾಯಿಬಾಬಾ ಅವರ ಜನ್ಮದಿನದ ಶತಮಾನೋತ್ಸವದ ಅಂಗವಾಗಿ ಸರ್ವರಲ್ಲಿ ಸದ್ಭಾವನೆ, ಭಕ್ತಿ, ಧರ್ಮ ಜಾಗೃತಿ, ಆಧ್ಯಾತ್ಮಿಕ ಚಿಂತನೆ ಮೂಡಿಸುವ ಹಾಗೂ ಲೋಕಕಲ್ಯಾಣಾರ್ಥದ ಸದುದ್ದೇಶದಿಂದ ಈ ರಥಯಾತ್ರೆ ಹಮ್ಮಿಕೊಳ್ಳಲಾಗಿದೆ.
> ■ ಆನಂದ್ ಕಲಾಲ್ , ವ್ಯಾಪಾರಸ್ಥ



ಶಾಂತಿ, ಸಮಾಧಾನಗಳಿಂದ ಬದುಕು ನಡೆಸಲು ಕಲಿಸಿಕೊಟ್ಟ ಸಿದ್ಧಾರೂಢರು

• **ಹುಬ್ಬಳ್ಳಿ:** ತಾವೊಬ್ಬರೇ ಅಧ್ಯಾತ್ಮ ಕಲಿತು, ಆತ್ಮಜ್ಞಾನಿಗಳಾಗಿ ಸಿದ್ಧಾರೂಢರು ಬಾಳು ನಡೆಸಲಿಲ್ಲ, ಜನರ ನಡುವೆಯೇ ಇದ್ದು, ಅವರ ಕಷ್ಟ ಸುಖ ಅರಿತು ಪರಿಹಾರ ಸೂಚಿಸಿದರಲ್ಲದೇ, ತಮ್ಮ ಬಳಿಗೆ ಬಂದ ಸರ್ವರಿಗೂ ಆತ್ಮಜ್ಞಾನ ನೀಡಿದರು. ಶಾಂತಿ ಸಮಾಧಾನಗಳಿಂದ ಬದುಕು ನಡೆಸುವುದನ್ನು ಕಲಿಸಿಕೊಟ್ಟರು ಎಂದು ಶಾಂತಾಶ್ರಮದ ಅಭಿನವ ಸಿದ್ಧಾರೂಢ ಸ್ವಾಮೀಜಿ ಹೇಳಿದರು.

ಕೈಲಾಸ ಮಂಟಪದಲ್ಲಿ ಸಿದ್ಧಾರೂಢರ ರಥೋತ್ಸವ ದಿನ ಆಯೋಜಿಸಲಾದ ವೇದಾಂತ ಪ್ರವಚನದಲ್ಲಿ ಇಹದೊಳು ಮುಕ್ತನಾಗಿರು ತಿರ್ಪನು ಆರೂಢನೆನಿಸುವನವನು ಎಂಬ ವಿಷಯ ಕುರಿತು ಮಾತನಾಡಿದ ಅವರು, ಸಿದ್ಧಾರೂಢರು ಈ ಮಣ್ಣಿನಲ್ಲಿ ಅಡಗಿರುವ ತತ್ವಜ್ಞಾನವನ್ನು ಅರಿತವರು. ಯಾರನ್ನೂ ಸಾಮಾನ್ಯರೆಂದು ಭಾವಿಸದೇ, ಅವರೂ ಕೂಡ ಪರಮಾತ್ಮನ ಅಂಶವೇ ಎಂದು ತಿಳಿದು ಅವರೂ ಕೂಡ ತಮ್ಮ ಸ್ವರೂಪದ ಅರಿವನ್ನು ಪಡೆಯುವ ಶಿಕ್ಷಣವನ್ನು ನೀಡಿದರು ಎಂದರು.

ಈ ಜಗತ್ತಿನಲ್ಲಿ ಇಲ್ಲದವರನ್ನು ನಾವು ಆತ್ಮಜ್ಞಾನಿಗಳಾಗಿದ್ದರು ಎಂದು ನೆನಪಿಸಿಕೊಳ್ಳುತ್ತೇವೆ. ಆದರೆ ಎದುರಿಗೆ ಇರುವ ಹಲವು ಮಹಾತ್ಮರು ಕೂಡ ಆರೂಢರೇ ಆಗಿದ್ದಾರೆ ಎಂಬುದನ್ನು ಮರೆಯುತ್ತೇವೆ. ಇಂಚಲದ ಶಿವಾನಂದ ಭಾರತಿ ಮೊದಲಾಗಿ ಇರುವ ಅಂಥವರನ್ನು ಅವರು ಇದ್ದಾಗಲೇ ಅವರ ಮಹತ್ವವನ್ನು ಅರಿಯಬೇಕು ಎಂದರು. ಮನಸ್ಸಿಗೆ ಸಮಾಧಾನ ಬೇಕೆಂದರೆ ಯಾರಾದರೂ ಕೈಲಾಸ ಮಂಟಪಕ್ಕೆ ಬಂದು ಕುಳಿತರೆ ಸಾಕು ಸಿದ್ಧಾರೂಢರು ಅದನ್ನು ಅನುಗ್ರಹಿಸುವರು ಎಂದರು.

ಗೋಸಾಯಿ ಮಠದ ಮಂಜುನಾಥ ಭಾರತಿ ಸ್ವಾಮೀಜಿ, ಗೋಕಾಕದ ಆತ್ಮಾನಂದ ಸ್ವಾಮೀಜಿ, ಸದ್ಗುರು ದಯಾನಂದ ಸರಸ್ವತಿ ಸ್ವಾಮೀಜಿ, ಹೊಸದುರ್ಗದ ಪುರುಷೋತ್ತಮಾನಂದ ಸ್ವಾಮೀಜಿ ಮಾತನಾಡಿದರು. ಇಂಚಲ ಸಾಧು ಸಂಸ್ಥಾನದ ಶಿವಾನಂದ ಭಾರತಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಗಮನ ಸೆಳೆದ ಗೋಂಧಳಿ

ಶಿವರಾತ್ರಿ ಮತ್ತು ಜಾತ್ರಾ ಮಹೋತ್ಸವ ಅಂಗವಾಗಿ ಭಾನುವಾರ ರಾತ್ರಿ ಇಲ್ಲಿಯ ಸಿದ್ಧಾರೂಢಮಠದಲ್ಲಿ ಜರುಗಿದಲ್ಲಿ ಸಂಗೀತ ಕಾರ್ಯಕ್ರಮದಲ್ಲಿ ಧಾರವಾಡದ ಶಫೀಕ್ ಖಾನ್ ನುಡಿಸಿದ ಸಿತಾರ ವಾದನವು ತನ್ನ ತುಂಬು ಧ್ವನಿಯ ಝೇಂಕಾರದಿಂದ ಇಡೀ ಆವರಣವನ್ನು ತುಂಬಿ ಕಿಕ್ಕಿರಿದು ನೆರೆದ ಸಭಿಕರನ್ನು ಮುದಗೊಳಿಸಿತಲ್ಲದೇ ತಲೆದೂಗುವಂತೆ ಮಾಡಿತು.

ಗ್ರಾಮಸ್ಥರು ಆರೋಗ್ಯ ಸೇವೆಗಳ ಸದುಪಯೋಗ ಪಡೆಯಲಿ: ಎಂ.ಆರ್. ಪಾಟೀಲ

• **ಕುಂದಗೋಳ:** ತಾಲೂಕಿನ ಕುಬಿಹಾಳ ಗ್ರಾಮದಲ್ಲಿ ಆರೋಗ್ಯ ಹಾಗೂ ಕ್ಷೇಮ ಕೇಂದ್ರದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ಸುಮಾರು 61 ಲಕ್ಷ ರೂ. ಅನುದಾನದಲ್ಲಿ ಶಾಸಕ ಎಂ.ಆರ್. ಪಾಟೀಲ ಭೂಮಿಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಜನರಿಗೆ ಸಮರ್ಪಕ ಆರೋಗ್ಯ ಸೇವೆಗಳು ದೊರಕುವ ನಿಟ್ಟಿನಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಮೂಲಕ ಪ್ರಾಥಮಿಕ ಚಿಕಿತ್ಸೆಯಿಂದ ಹಿಡಿದು ತಾಯಿ-ಮಗು ಆರೈಕೆ, ಲಸಿಕಾ ಕಾರ್ಯಕ್ರಮ, ಸಾಮಾನ್ಯ ರೋಗಗಳ ತಪಾಸಣೆ ಸೇರಿದಂತೆ ಹಲವು ಸೇವೆಗಳು ಗ್ರಾಮ ಮಟ್ಟದಲ್ಲೇ ಲಭ್ಯವಾಗಲಿವೆ ಎಂದರಲ್ಲದೆ, ಈ ನೂತನ ಕಟ್ಟಡ ನಿರ್ಮಾಣದಿಂದ ಕುಬಿಹಾಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ. ಗ್ರಾಮಸ್ಥರು ಆರೋಗ್ಯ ಸೇವೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲೂಕಾಧ್ಯಕ್ಷ ನಾಗನಗೌಡ ಸಾತ್ಮಾರ, ಮುಖಂಡರಾದ ಉಮೇಶ ಹೆಬಸೂರ, ಬರಮಪ್ಪ ಮುಗಳಿ,ರವಿಗೌಡ ಪಾಟೀಲ,ಬಸವರಾಜ ದೇಶಪಾಂಡೆ, ವಿರೂಪಾಕ್ಷಪ್ಪ ಸಂಶಿ, ಚಂದ್ರಶೇಖರ ಪಾಲಕಾರ, ಫಕೀರಯ್ಯ ಎತ್ತಿನಮನಿ, ಶಂಕರ ಗೌಡ ಮುದಿಗೌಡ್ರ, ಶೇಖರಗೌಡ ಶಿರಕೋಳ, ಹೆಮ್ಮಣ್ಣ ರಡ್ಡೆರ,ಮಂಜುನಾಥ ಬಡಿಗೇರ, ಹಟೆಲ್ ಭಾಷಾ ಮುಲ್ಲಾ , ಬಾಬಣ್ಣ ರಡ್ಡೆರ ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿಗಳು, ಗ್ರಾಪಂ ಸದ್ಯಸರು, ಆಶಾ ಕಾರ್ಯಕರ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು.



ಮಹಾಶಿವರಾತ್ರಿ: ಪಲ್ಲಕ್ಕಿ ಉತ್ಸವ ಅದ್ದೂರಿ



• **ಉಪ್ಪಿನಬೆಟಗೇರಿ:** ಗ್ರಾಮದ ಪೇಟೆ ಓಣಿಯ ಪರ್ವತ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಅಂಗವಾಗಿ ಸೋಮವಾರ ವೇ.ಮೂ. ಮಲ್ಲಯ್ಯ ತಿಗಡಿಮಠ ಹಾಗೂ ಅರ್ಚಕ ರುದ್ರಯ್ಯ ಗೌರಿಮಠ ಅವರಿಂದ ಮಲ್ಲಿಕಾರ್ಜುನ ದೇವರಿಗೆ ರುದ್ರಾಭಿಷಕ ಬಿಲ್ವಾರ್ಚನೆಯೊಂದಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ನಂತರ ಭಜನಾ ತಂಡದವರು ಗ್ರಾಮದ ಪ್ರಮುಖ ಓಣಿಯ ಮುಕಾಂತರ ಸಂಚರಿಸಿದ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ಜರಗಿತು. ಉಪವಾಸದ ಜೊತಗೆ ಅಹೋರಾತ್ರಿ ಜಾಗರಣೆ ಮಾಡಿದ ಜನರು ಗೋಧಿ ಹುಗ್ಗಿ ಪ್ರಸಾದ ಸ್ವೀಕರಿಸಿ ಶಿವರಾತ್ರಿ ಹಬ್ಬವನ್ನು ಖುಷಿಯಿಂದ ಆಚರಿಸಿದರು. ಹನುಮನಕೊಪ್ಪ ಕಲ್ಲೇಶ್ವರ ಹಾಗೂ ಹನುಮನಹಾಳ ಗ್ರಾಮದ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಹೂವಿನ ಅಲಂಕಾರದೊಂದಿಗೆ ಪೂಜೆ ಸಲ್ಲಿಸಿದರು. ಮಡಿವಾಳಪ್ಪ ಮಸೂತಿ, ಆರೋಡ ಆಯಟ್ಟಿ, ನಾಗಪ್ಪ ಬರಬರಿ, ಶಿವಪ್ಪ ವಿಜಾಪುರ, ಮಹಾರುದ್ರಪ್ಪ ಅಂಬಣ್ಣವರ, ನಿಜಗುಣಿ ಹೂಲಿ, ರಮೇಶ ಮಸೂತಿ, ದರೇಪ್ಪ ಬೊಬ್ಬಿ, ಈರಪ್ಪ ಗುಡ್ಡದಮನಿ, ಮಹೇಶ ಅಂಗಡಿ,ಈರಪ್ಪಬೆಳವಂಕಿ, ಮಂಜುನಾಥ ಗುಡ್ಡದಮನಿ, ಯಲ್ಲಪ್ಪ ಕಳ್ಳಿ, ರುದ್ರಪ್ಪ ಮಸೂತಿ, ಸೋಮಶೇಖರ ಗೊಡಿಗಟ್ಟಿ,ಮಡಿವಾಳಪ್ಪ ಶಿವಳ್ಳಿ ಸೇರಿದಂತೆ ಹನುಮನಕೊಪ್ಪ ಹಾಗೂ ಉಪ್ಪಿನಬೆಟಗೇರಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಚಿಟಲಮ್ಮನ ಪ್ರಥಮ ಜಾತ್ರಾ ಮಹೋತ್ಸವ

• **ಧಾರವಾಡ:** ಸ್ಥಳೀಯ ಚರಂತಿಮಠ ಗಾರ್ಡನ್ ಹತ್ತಿರದ ಚಿಟಲಮ್ಮ ದೇವಿ ದೇವಸ್ಥಾನದ ಮೂರ್ತಿ ಪ್ರತಿಷ್ಠಾಪನೆ ಮತ್ತು ಪ್ರಥಮ ಜಾತ್ರಾ ಮಹೋತ್ಸವ ಫೆ.19 ಹಾಗೂ 20ರಂದು ಜರುಗಲಿದೆ ಎಂದು ದೇವಸ್ಥಾನದ ಟ್ರಸ್ಟಿ ಶಂಕರ ಪಟ್ಟಣಶೆಟ್ಟಿ ಮಾಹಿತಿ ನೀಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಿತ್ಯವೂ ಸಾವಿರಾರು ಭಕ್ತರು ಆಗಮಿಸುವ 300 ವರ್ಷಗಳಷ್ಟು ಹಳೆಯದಾದ ಈ ಚಿಟಲಮ್ಮ ದೇವಿ ದೇವಸ್ಥಾನ ಮರು ನಿರ್ಮಿಸಲಾಗಿದೆ. ಈ ದೇವಿಯ ಪ್ರಾಣ ಪ್ರತಿಷ್ಠಾಪನೆ ಧಾರ್ಮಿಕ ಕಾರ್ಯಕ್ರಮ ಫೆ.19ರ ಪ್ರಾತಃಕಾಲದಲ್ಲಿ ಜರುಗಲಿದೆ. ಬೆಳಗ್ಗೆ 10ಕ್ಕೆ ಕಸಬಾ ದ್ಯಾಮವ್ವ-ದುರ್ಗವ್ವ ದೇವಸ್ಥಾನದಿಂದ ಪ್ರಾರಂಭಗೊಳ್ಳಲಿರುವ ಮುತ್ತೈದೆಯರ ಪೂರ್ಣಕುಂಭ ಮೆರವಣಿಗೆ ಕಾಮನಕಟ್ಟಿ, ಗಾಂಧಿ ಚೌಕ್, ಹೆಬ್ಬಳ್ಳಿ ಅಗಸಿಯ ಮಾರ್ಗವಾಗಿ ಸಂಚರಿಸಿ, ಚಿಟಲಮ್ಮ ದೇವಸ್ಥಾನಕ್ಕೆ ಬಂದು ತಲುಪಲಿದೆ ಎಂದರು.

ಫೆ.20ಕ್ಕೆ ಚಿಟಲಮ್ಮ ದೇವಿ ಜಾತ್ರೆ ಅಂಗವಾಗಿ ದೇವಿಗೆ ಪೂಜೆ, ಹೋಮ-ಹವನದ ಜತೆಗೆ ಎರಡು ದಿನವೂ ಅನ್ನಸಂತರ್ಪಣೆ ನಡೆಯಲಿದೆ. ಮುರುಘಾಮಠದ ಡಾ.ಮಲ್ಲಿಕಾರ್ಜುನ ಶ್ರೀ, ಹೆಬ್ಬಳ್ಳಿಯ ದತ್ತಾವದತ್ತೂತ ಮಹಾರಾಜರು ಸಾನ್ನಿಧ್ಯ ವಹಿಸುವುದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ದೇವಸ್ಥಾನದ ಟ್ರಸ್ಟಿಗಳಾದ ರವೀಂದ್ರ ಲೋಲೆನವರ, ಮಹೇಶ ಢವಳೆ, ಸದಾನಂದಗೌಡ ಪಾಟೀಲ, ಅಜಿತ ಹಿಟ್ನಳ್ಳಿ, ಆನಂದ ಸಿಂಗನಾಥ, ರಮೇಶ ರೇವಣಕರ, ಸಂತೋಷ, ಮುತ್ತು ಮಡಿವಾಳರ ಇದ್ದರು.



ಉಪವಾಸ, ಜಾಗರಣೆ ಶಿವರಾತ್ರಿ ವಿಶೇಷ



• **ಧಾರವಾಡ:** ಉಪವಾಸ ವ್ರತ, ರುದ್ರಾಭಿಷೇಕ ಹಾಗೂ ಜಾಗರಣೆ ಶಿವರಾತ್ರಿ ಆಚರಣೆ ವಿಶೇಷ. ಇದು ಶಿವನನ್ನು ಒಲಿಸಿಕೊಳ್ಳುವಮಾರ್ಗವೂ ಹೌದು ಎಂದು ಜ್ಯೋತಿಷಿ ಚಿದಂಬರ ಭಟ್ಟ ಜೋಶಿ ಹೇಳಿದರು.

ಸತ್ತೂರಿನ ನಾರಾಯಣ ಪಾರಾಯಣ ಬಳಗದ ಆಶ್ರಯದಲ್ಲಿ ಇಲ್ಲಿನ ವನಸಿರಿ ನಗರದ ಗುರುನಾಥ ಸರದೇಷ್ಮುಖ ನಿವಾಸದಲ್ಲಿ ನಡೆದ ಶಿವರಾತ್ರಿ ಆಚರಣೆ ವಿಶಿಷ್ಟ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಿವನಿಗೆ ಅಭಿಷೇಕವನ್ನು ರುದ್ರ ಪಠಣದೊಂದಿಗೆ ಜಲ, ಎಳೆನೀರು, ಹಾಲು, ತುಪ್ಪ, ಮೊಸರು, ಜೇನುತುಪ್ಪ, ಕಬ್ಬಿನಹಾಲು, ರಜತ ಹಿರಣ್ಯಗಳಿಂದ ಮಾಡಬೇಕು. ಬಿಲ್ವ ಪತ್ರ ಸಮರ್ಪಣೆ ಬಹುಮುಖ್ಯ ಎಂದರು. ವಿಭೂತಿ ಧಾರಣ, ವೇದೋಕ್ತ, ಪುರಾಣೋಕ್ತ, ಜಪ-ತಪ, ದಾನ-ಧರ್ಮ, ಕನಿಷ್ಠ ಪಂಚಾಕ್ಷರ ಮಂತ್ರವಾದ ನಮಃ ಶಿವಾಯ ಪಠಣ ಮಾಡಿದರೆ, ಮನೆಯಲ್ಲಿ ಶಾಂತಿ ನೆಲೆಸಲಿದೆ ಎಂದರು.

ಇದಕ್ಕೂ ಮೊದಲು ಹರಿವಾಯು ಗುರುಗಳ ಪಾರಾಯಣ ಜರುಗಿತು. ರಘೋತ್ತಮ ಅವಧಾನಿ, ಹನುಮಂತ ಪುರಾಣಿಕ, ಗಿರೀಶ ಶಿರೋಳ, ಡಾ.ರವಿ ದುಮ್ಮಾಡ, ಅನಿಲ ಪುರೋಹಿತ ಇತರರಿದ್ದರು.

ನುಡಿದಂತೆ ನಡೆದ ಕಾಂಗ್ರೆಸ್: ಕೋನರಡ್ಡಿ

• **ಹುಬ್ಬಳ್ಳಿ:** ಡಾ: ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದಲ್ಲಿ ಸ್ಥಾಪಿತವಾದ ಕರ್ನಾಟಕ ಸರ್ಕಾರ ಸ್ಥಾಪನೆಗೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ನೇತೃತ್ವದ ಕರ್ನಾಟಕ ಸರ್ಕಾರ ಸಾವಿರ ದಿನ ಪೂರೈಸಿ ಪಂಚ ಗ್ಯಾರಂಟಿ ಜೊತೆಗೆ ಅಭಿವೃದ್ಧಿ ಮಾಡುತ್ತಿರುವ ವಿಶೇಷ ಸಾಧನೆ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 16 ಬಜೆಟ್ ಮಂಡಿಸಿ ಜನಪರ ಆಡಳಿತ ನೀಡಿದ ಅವರು ರಾಜ್ಯದಲ್ಲಿ ಚುನಾವಣಾ ಪೂರ್ವದಲ್ಲಿ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ಪಂಚ ಗ್ಯಾರಂಟಿ ಯೋಜನೆಗಳಾದ ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಯುವನಿಧಿ, ಗೃಹಲಕ್ಷ್ಮೀ ಯೋಜನೆಗಳನ್ನು ಜಾರಿಮಾಡುವ ಮೂಲಕ ನುಡಿದಂತೆ ನಡೆದ ಗ್ಯಾರಂಟಿ ಸರ್ಕಾರ ನಮ್ಮದು. ಅದರೊಂದಿಗೆ 6ನೇ ಗ್ಯಾರೆಂಟಿಯಾಗಿ ರಾಜ್ಯದಲ್ಲಿ ಸರ್ಕಾರಿ ಅಥವಾ ಖಾಸಗಿ ಜಾಗದಲ್ಲಿ ಮನೆ ಕಟ್ಟಿ ಕೊಂಡ ಫಲಾನುಭವಿಗಳಿಗೆ ಭೂಗ್ಯಾರಂಟಿ ಮೂಲಕ 2 ಲಕ್ಷಕ್ಕೂ ಹೆಚ್ಚು ಹಕ್ಕು ಪತ್ರಗಳನ್ನು ವಿತರಿಸುವುದು ಇತಿಹಾಸವಾದರೆ 7ನೇ ಗ್ಯಾರಂಟಿಯಾಗಿ ಉಪಮುಖ್ಯಮಂತ್ರಿಗಳು ಘೋಷಿಸಿದಂತೆ ರಾಜ್ಯಕ್ಕೆ ನೀರಿನ ಗ್ಯಾರಂಟಿ ಕೊಡುವುದು ನಿರ್ಧರಿಸಿರುವುದರಿಂದ ಕೃಷ್ಣ ಹಾಗೂ ಕಾವೇರಿ ಕಣಿವೆಯ ಮಹದಾಯಿ, ಕಳಸಾ-ಬಂಡೂರಿ, ಮೇಕೆದಾಟು ಯೋಜನೆ ಜಾರಿ ಮಾಡಲು ಕೇಂದ್ರ ಸರ್ಕಾರದ ಅನುಮತಿ ಪಡೆದು ರಾಜ್ಯಸರ್ಕಾರ ಮುಂದಾಗಿರುವದು ಸಂತಸದ ವಿಷಯ. ವಿಜಯನಗರ ಜಿಲ್ಲೆಯಲ್ಲಿ ಮೊದಲು ಹಕ್ಕುಪತ್ರನೀಡಿದ ಕಾರ್ಯಕ್ರಮ, ಹುಬ್ಬಳ್ಳಿ ಯಲ್ಲಿ 42 ಸಾವಿರ ಜನರಿಗೆ ಮನೆಗಳ ವಿತರಣೆ, ಧಾರವಾಡ ಜಿಲ್ಲೆಯ ನವಲಗುಂದ ವಿದಾನ ಸಭಾಕ್ಷೇತ್ರದ ಹುಬ್ಬಳ್ಳಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದಲ್ಲಿ ನಡೆದಬೆಣ್ಣೆಹಳ್ಳ ಪ್ರವಾಹ ತಡೆಯುವ ಕಾರ್ಯಕ್ರಮಗಳು ಅಭೂತ ಪೂರ್ವ ಜನಸೇರುವ ಮೂಲಕ ರಾಜ್ಯದ ಗಮನ ಸೆಳೆಯಲಾಗಿದೆ. ಇದರೊಂದಿಗೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದು ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರ ಸಾವಿರ ದಿನ ಪೂರೈಸಿ ವಿಶೇಷ ಸಾಧನೆ ಮಾಡಿದ ಸಂತೃಪ್ತಿ ನನಗಿದೆ ಎಂದರು.

ಸಾರ್ಥಕ ಸರ್ಕಾರ



ಜನಸೇವೆಯಲ್ಲಿ ಸಾರ್ಥಕ ಸಾವಿರ ದಿನ

ಸರ್ಕಾರದಿಂದ 7ನೇ ಗ್ಯಾರಂಟಿ ನಿಶ್ಚಿತ



ರಾಜ್ಯದಲ್ಲಿ ಸರ್ಕಾರದ ಸಾಧನೆ ಹೇಗಿದೆ?

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಐತಿಹಾಸಿಕ ಯೋಜನೆಗಳ ಮೂಲಕ ದಾಖಲೆ ನಿರ್ಮಿಸುತ್ತಿದೆ. ಕಳೆದ 1ಸಾವಿರ ದಿನಗಳ ಆಡಳಿತದಲ್ಲಿ ರಾಜ್ಯ ಸರ್ಕಾರ ಜನಪರ ಆಡಳಿತ ನೀಡಿದೆ. ಪಂಚ ಗ್ಯಾರಂಟಿಗಳ ಮೂಲಕ ಕೇವಲ ರಾಜ್ಯ ಮಾತ್ರವಲ್ಲದೇ ಇಡೀ ದೇಶಕ್ಕೆ ಮಾದರಿಯಾಗಿದೆ. ನಮ್ಮ ಯೋಜನೆಗಳನ್ನು ಜನ ಸ್ವೀಕರಿಸಿದಂತೆ ದೇಶದಲ್ಲಿ ಇತರ ರಾಜ್ಯಗಳು, ಮುಖ್ಯವಾಗಿ ಕೇಂದ್ರದ ಮೋದಿ ಸರ್ಕಾರವೇ ಗ್ಯಾರಂಟಿ ಯೋಜನೆಗಳನ್ನು ಅಳವಡಿಸಿಕೊಂಡಿದೆ. ರಾಜ್ಯದಲ್ಲಿಂದು ಕ್ರಾಂತಿ ಸ್ವರೂಪದಲ್ಲಿ ಬದಲಾವಣೆ ಕಾಣಬಹುದಾಗಿದೆ. 1.16ಲಕ್ಷ ಕೋಟಿ ರೂ.ಗೂ ಅಧಿಕ ಅನುದಾನದಲ್ಲಿ ಶಕ್ತಿ, ಗೃಹಲಕ್ಷ್ಮಿ ಗೃಹಜ್ಯೋತಿ,ಯುವನಿಧಿ. ಅನ್ನಭಾಗ್ಯ ಯೋಜನೆಗಳು ಜನರ ಮನ,ಮನೆ ಮುಟ್ಟಿವೆ. ಇದೇ ರೀತಿ ಕಂದಾಯ ಇಲಾಖೆಯಿಂದಲೂ ಕ್ರಾಂತಿಕಾರಕ ಯೋಜನೆಯನ್ನು ಪರಿಚಯಿಸುತ್ತಿದ್ದು, ಖಾತೆಗಳಿಗೆ ಅಲೆಯುತ್ತಿದ್ದಜನರ ಬವಣೆ ನೀಗಿಸಲೆಂದೇ 'ಭೂ ಗ್ಯಾರಂಟಿ' ಯೋಜನೆ ಪರಿಚಯಿಸಲಾಗಿದೆ. ಕಂದಾಯ ಇಲಾಖೆ ಜನರೊಂದಿಗೆ ನೇರ ಸಂಬಂಧ ಹೊಂದಿರುವ ಇಲಾಖೆ. ಹೀಗಾಗಿ ರೈತರು ಜನಸಾಮಾನ್ಯರು ನಿತ್ಯ ಕಂದಾಯ ಇಲಾಖೆಗೆ ಅಲೆಯುವ ಪರಿಸ್ಥಿತಿಯಿತ್ತು. ಈ ಪರಿಸ್ಥಿತಿಗೆ ಬದಲಾಗಿ ಡಿಜಿಟಲ್ ಸ್ಪರ್ಶ ನೀಡಿ ಜನರ ಒದ್ದಾಟಕ್ಕೆ ಮುಕ್ತಿ ನೀಡಲಾಗಿದೆ.ಜತೆಗೆ, ಪೋಡಿ ಖಾತೆಗಳಿಗೆ ಅಲೆಯುತ್ತಿದ್ದವರಿಗೆ ನನ್ನ ಆಸ್ತಿ ಯೋಜನೆ ನೆರವಾಗಿದೆ. ರಾಜ್ಯದಲ್ಲಿ 6ನೇ ಗ್ಯಾರಂಟಿ ಭೂ ಗ್ಯಾರಂಟಿಯಾದರೆ 7ನೇ ಗ್ಯಾರಂಟಿಯಾಗಿ ನೀರಿನ ಗ್ಯಾರಂಟಿ ನೀಡಲು ಸರ್ಕಾರ ಸಿದ್ಧತೆ ನಡೆಸಿದೆ. ರಾಜ್ಯದ ಪ್ರತಿಯೊಬ್ಬರಿಗೂ ಕುಡಿಯುವ ನೀರು, ಕೃಷಿಗೆ ಅಗತ್ಯ ನೀರಾವರಿ ವ್ಯವಸ್ಥೆ ಸೇರಿದಂತೆ ಎಲ್ಲರಿಗೂ ಅಗತ್ಯ ನೀರಿನ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ನೀರು ಗ್ಯಾರಂಟಿಯನ್ನು ನೀಡಲಿದೆ.

ಕೇಂದ್ರದಿಂದ ರಾಜ್ಯಕ್ಕೆ ತೆರಿಗೆ ನಷ್ಟ: ಡಿ.ಕೆ.ಶಿವಕುಮಾರ್

ದೇಶದಲ್ಲೆ ಅತಿ ಹೆಚ್ಚು ತೆರಿಗೆ ಕಟ್ಟುವ ನಮ್ಮ ರಾಜ್ಯಕ್ಕೆ ಪ್ರತಿ ಬಾರಿ ಅನ್ಯಾಯವಾಗುತ್ತಿದೆ.ಕೇಂದ್ರ ಹಣಕಾಸು ಸಚಿವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಅನುದಾನ ನೀಡುವುದಾಗಿ ಘೋಷಿಸಿದರು, ನಂತರ ರಾಜ್ಯ ಸರ್ಕಾರವೂ ಇದನ್ನು ರಾಷ್ಟ್ರೀಯ ಯೋಜನೆ ಘೋಷಿಸಲಾಗುವುದು ಎಂದೂ ತಿಳಿಸಿತು. ಆದರೆ ಅನುದಾನವಾಗಲಿ, ರಾಷ್ಟ್ರೀಯ ಹಣಕಾಸು ಆಯೋಗದಲ್ಲಿ ಶಿಫಾರಸು ಮಾಡಲಾಗಿದ್ದ 11,495 ಕೋಟಿ ರೂ.ಗಳು ರಾಜ್ಯಕ್ಕೆ ನೀಡಲಿಲ್ಲ ಎಂದು ಡಿ.ಕೆ.ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು. 14ನೇ ಆಯೋಗದಲ್ಲಿ 4.71 % ರಾಜ್ಯಕ್ಕೆ ಕೊಡಲಾಗಿತ್ತು. 15 ನೇಆಯೋಗದಲ್ಲಿ 3.64% ಕ್ಕೆ ಇಳಿಸಿದರು. ಇದರಿಂದ ಐದು ವರ್ಷಗಳಲ್ಲಿ ರಾಜ್ಯಕ್ಕೆ 1,25,000 ಕೋಟಿ ಕಡಿಮೆಯಾಯಿತು. ಈ ಅನುದಾನದ ಕಡಿತದ ಬಗ್ಗೆ ಪ್ರಶ್ನಿಸುವುದು ರಾಜ್ಯದ ಎಲ್ಲ ಜನಪ್ರತಿನಿಧಿಗಳ ಜವಾಬ್ದಾರಿ. 4.50 ಕೋಟಿ ತೆರಿಗೆ ಕೊಟ್ಟರೆ, ನಮಗೆ ಕೇವಲ 55 ರಿಂದ 60 ಸಾವಿರ ಕೋಟಿ ಮರಳಿ ಬರುತ್ತದೆ. ಎಂಟು ವರ್ಷದಿಂದ ಹೆಚ್ಚು ಜಿಎಸ್‌ಟಿ ಪಡೆದು, ಈಗ ಕೇಂದ್ರ ಸರ್ಕಾರ ಹಠಾತ್ತಾಗಿ ಜಿಎಸ್‌ಟಿಯಿಂದ 12-15 ಸಾವಿರ ಕೋಟಿ ನಷ್ಟವಾಗುತ್ತದೆ. ಇದು ಏಳು ಕೋಟಿ ಕನ್ನಡಿಗರಿಗೆ ಆದ ನಷ್ಟ.

ಇಡೀ ದೇಶದಲ್ಲೇ ರಾಜ್ಯ ನಂ.1

ಪಂಚಾಯತ್ ರಾಜ್ ವೀಕೇಂದ್ರಿಕರಣದಲ್ಲಿ ಕರ್ನಾಟಕವು ಇಡೀ ದೇಶದಲ್ಲೇ ನಂ.1 ಸ್ಥಾನದಲ್ಲಿದೆ. ಕೇಂದ್ರ ಸರ್ಕಾರವೇ ನಮ್ಮ ಸರ್ಕಾರದ ಸಾಧನೆಯನ್ನು ಅನುಮೋದಿಸಿದೆ. ಇದು ಸಂವಿಧಾನದ 73ನೇ ತಿದ್ದುಪಡಿಯನ್ನು ನಮ್ಮ ಸರ್ಕಾರ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುತ್ತಿರುವುದಕ್ಕೆ ನಿದರ್ಶನ. ಇನ್ನು ರಾಜ್ಯದಲ್ಲಿ 3888 ಕೂಸಿನ ಮನೆ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಜನರ ಸ್ವಾವಲಂಬಿ ಬದುಕಿಗೆ ಬೆಂಬಲ ನೀಡಿವೆ, ಪೌಷ್ಟಿಕ ಆಹಾರ ಒದಗಿಸುವ ಮೂಲಕ ಗ್ರಾಮೀಣ ಮಕ್ಕಳ ಆರೋಗ್ಯಯುತ ಬೆಳವಣಿಗೆಗೆ ಕಾರಣವಾಗಿದೆ. ವೈಜ್ಞಾನಿಕವಾಗಿ ಜವಾಬ್ದಾರಿ ನಕ್ಷೆ ರೂಪಿಸಿ ಪಂಚಾಯತಿಗಳ ಸಾಮರ್ಥ್ಯವನ್ನು ಹೆಚ್ಚಿಸಿ, ಇನ್ನಷ್ಟು ಬಲ ತುಂಬುವ ಕೆಲಸ ನಡೆದಿದೆ ಎಂದು ತಮ್ಮ ಇಲಾಖೆಯ ಸಾಧನೆಗಳ ಬಗ್ಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಮನ ಬಿಚ್ಚಿ ಮಾತನಾಡಿದ್ದಾರೆ..

ಪಿಡಿಒಗಳ ವರ್ಗಾವಣೆಯನ್ನೂ ಕೌನ್ಸಿಲಿಂಗ್ ಮೂಲಕ ನಡೆಸಿದ್ದೀರಿ ನಿಮ್ಮ ಅಭಿಪ್ರಾಯ ?

ಮೊದಲ ಬಾರಿಗೆ ಪಿಡಿಒ ವರ್ಗಾವಣೆಯನ್ನು ಕೌನ್ಸಲಿಂಗ್ ಮೂಲಕ ನಡೆಸಿ, ಪಾರದರ್ಶಕ, ಮತ್ತು ಪ್ರಾಮಾಣಿಕ ಮಾದರಿಯ ವರ್ಗಾವಣೆಗೆ ಕಾರಣವಾಗಿದೆ. ದಶಕಗಳ ಕಾಲ ಕಗ್ಗಂಟಾಗಿ ಉಳಿದಿದ್ದ ಪಿಡಿಒ ಮುಂಬಡ್ತಿ ವಿಷಯವನ್ನು ಬಗೆಹರಿಸುವಲ್ಲಿ ಪ್ರಯತ್ನಿಸಲಾಗಿದೆ

ರಾಜ್ಯದಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಹೇಗಿದೆ ?

5,200 ಕೋಟಿ ವೆಚ್ಚದಲ್ಲಿ ಪ್ರಗತಿ ಪಥ, 7,110 ಕಿ.ಮೀ. ಗ್ರಾಮೀಣ ರಸ್ತೆ ಅಭಿವೃದ್ಧಿ, 1000 ಕೋಟಿ ರೂ. ವೆಚ್ಚದಲ್ಲಿ ಕಲ್ಯಾಣ ಪಥ, 1,150 ಕಿ.ಮೀ ರಸ್ತೆ ಅಭಿವೃದ್ಧಿಪಡಿಸಲಾಗುವುದು. ಗ್ರಾಮೀಣ ಪ್ರದೇಶದ ಸಾಮಾಜಿಕ, ಆರ್ಥಿಕ ಪ್ರಗತಿಗೆ ಅನುಕೂಲ. ರೈತರ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸಲು ಕೃಷಿ ಪಥ ಯೋಜನೆ ರೂಪಿಸಲಾಗಿದೆ. ಹಸಿರು ಪಥ, 5000 ಕಿ.ಮೀ ರಸ್ತೆ ಬದಿ ಗಿಡಗಳನ್ನು ನೆಟ್ಟು ಪೋಷಿಸುವ ಗುರಿ, ಈಗಾಗಲೇ 2215 ಕಿ.ಮೀ ರಸ್ತೆ ಬದಿಯಲ್ಲಿ ಗಿಡಗಳನ್ನು ನಡೆಲಾಗಿದೆ.

ರಾಜ್ಯದಲ್ಲಿ ನರೇಗಾ ಸಾಧನೆ ಹೇಗಿದೆ ?



ನರೇಗಾ ಯೋಜನೆಯಲ್ಲಿ 2023/24ನೇ ಸಾಲಿನಲ್ಲಿ 13.85 ಕೋಟಿ ಮಾನವ ದಿನಗಳ ಸೃಜನೆ, 98.9% ಪ್ರಗತಿ ಸಾಧನೆ, 3839.22 ಕೋಟಿ ಕೂಲಿ ಹಣ ಜಮೆ. 2024/25ನೇ ಸಾಲಿನಲ್ಲಿ 13.14 ಕೋಟಿ ಮಾನವ ದಿನಗಳ ಸೃಜನೆ, 101.1% ಪ್ರಗತಿ ಸಾಧನೆ. 4214.5 ಕೋಟಿ ಕೂಲಿ ಹಣ ಜಮೆ ಮಾಡಿದ್ದೇವೆ.

ಅರಿವು ಕೇಂದ್ರದ ಮೂಲಕ ಎಷ್ಟು ಜನ ನೋಂದಾಯಿಸಿ ಕೊಂಡಿದ್ದಾರೆ?

ಅರಿವು ಕೇಂದ್ರ, ರಾಜ್ಯದ 5715 ಗ್ರಾಮೀಣ ಗ್ರಂಥಾಲಯಗಳನ್ನು ಅರಿವು ಕೇಂದ್ರಗಳಾಗಿ ಮೇಲ್ದರ್ಜೆಗೆ, ಕಂಪ್ಯೂಟರ್, ಇಂಟರ್ನೆಟ್ ವ್ಯವಸ್ಥೆ ಕಲ್ಪಿಸಿ ಡಿಜಿಟಲೀಕರಣ ಮಾಡಲಾಗಿದೆ. ಅರಿವು ಕೇಂದ್ರಗಳ ಕಾರ್ಯಾಚರಣೆಯ ಸಮಯವನ್ನು 8 ಗಂಟೆಗೆ ಏರಿಸಲಾಗಿದೆ. 49.14 ಲಕ್ಷ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. 132 ಕೋಟಿ ವೆಚ್ಚದಲ್ಲಿ ಅರಿವು ಕೇಂದ್ರಗಳಿಗೆ ಸ್ವಂತ ಕಟ್ಟಡ ಹೊಂದಲು ಕ್ರಮ ವಹಿಸಲಾಗುತ್ತಿದೆ.

ಪ್ರಮುಖ ನಿರ್ಧಾರಗಳು

- ಕಂದಾಯ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಶೇ. 80ಕ್ಕೂ ಹೆಚ್ಚು ಪ್ರಕರಣಗಳ ಇತ್ಯರ್ಥ.
- ಕಂದಾಯ ನ್ಯಾಯಾಲಯಗಳ ನಿರ್ವಹಣೆಯನ್ನು ಆನ್ಲೈನ್ ಮೂಲಕ ಪಾರದರ್ಶಕಗೊಳಿಸಲಾಗಿದೆ.
- ದಾಖಲೆರಹಿತ 4,050ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲಾಗಿದೆ.
- 2ಲಕ್ಷಕ್ಕೂ ಅಧಿಕ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಗಿದೆ.
- ಬಿ'ಖಾತೆಗಳನ್ನು 'ಎ' ಖಾತೆಗಳನ್ನಾಗಿ ಪರಿವರ್ತಿಸಲು ಅನುಮೋದನೆ
- ಕೃಷಿ ಯಾಂತ್ರಿಕೀಕರಣಕ್ಕೆ ಉತ್ತೇಜನ ನೀಡಲು ರೈತರಿಗೆ ರಿಯಾಯಿತಿ ದರದಲ್ಲಿ ಉಪಕರಣಗಳ ವಿತರಣೆ.
- 2025-26ರ ಬಜೆಟ್‌ನಲ್ಲಿ ಬಂಡವಾಳ ವೆಚ್ಚಕ್ಕಾಗಿ 83,200 ಕೋಟಿ ರೂ. ಮೀಸಲು.
- ಬೆಂಗಳೂರು ನಗರದ ಅಭಿವೃದ್ಧಿ ಯೋಜನೆಗಳಿಗಾಗಿ 1.5 ಲಕ್ಷ ಕೋಟಿ ರೂ.ಮೀಸಲು.

ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ತೆರಿಗೆ ಸಂಗ್ರಹಣೆ ಹೇಗಿದೆ?

ಗ್ರಾಮ ಪಂಚಾಯತಿಗಳ ತೆರಿಗೆ ಸಂಗ್ರಹಕ್ಕೆ ಒತ್ತು ನೀಡಿದ ಪರಿಣಾಮ ಸುಮಾರು 1270 ಕೋಟಿ ರೂ. ತೆರಿಗೆ ಸಂಗ್ರಹಿಸಲಾಗಿದೆ, ಇದು ದಾಖಲೆ ಮೊತ್ತವಾಗಿದೆ. ಈ ಹಣ ಗ್ರಾಮ ಪಂಚಾಯತಿಗಳ ಬಲವರ್ಧನೆಗೆ ಕಾರಣವಾಗಲಿದೆ. ಕೇಂದ್ರ ಸಚಿವರೇ ಟ್ವೀಟ್ ಮಾಡಿ ಈ ಬಗ್ಗೆ ಶ್ಲಾಘನೆ ಮಾಡಿದ್ದು ನಮ್ಮ ಸಾಧನೆಗೆ ಹಿಡಿದ ಕನ್ನಡಿ.

ಜೆಜೆಎಂ ಕಾಮಗಾರಿ ಪ್ರಗತಿ ಎಲ್ಲಿಗೆ ಬಂದಿದೆ ?

ಸಮೀಕರಿಸುವ ಮೂಲಕ ಪ್ರಗತಿಗೆ ವೇಗ ನೀಡುವ ನಿಟ್ಟಿನಲ್ಲಿ ಪಂಚಮಿತ್ರ ಪೋರ್ಟಲ್, ವಾಟ್ಸಾಪ್ ಚಾಟ್ ಬಾಟ್ ಮೂಲಕ ಜನರ ಅಹವಾಲುಗಳಿಗೆ ಸ್ಪಂದಿಸುವ ಕೆಲಸವಾಗಿದೆ. ಪರಿಣಾಮಕಾರಿ ಜೆಜೆಎಂ ಅನುಷ್ಠಾನ, 14.84 ಲಕ್ಷ. ಗ್ರಾಮೀಣ ಮನೆಗಳಿಗೆ ನೀರು ಸಂಪರ್ಕ ಒದಗಿಸಲಾಗಿದೆ.

ಗ್ರಾಮೀಣ ಭಾಗದಲ್ಲಿ ಘನತ್ಯಾಜ್ಯ ನಿರ್ವಹಣೆ, ವಿಂಗಡನೆ ಹೇಗಿದೆ?

ಗ್ರಾಮೀಣ ಘನ ತ್ಯಾಜ್ಯ ನಿರ್ವಹಣೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ, ಮಹಿಳಾ ಸ್ವಸಹಾಯ ಸಂಘಗಳಿಗೆ ತ್ಯಾಜ್ಯ ವಿಂಗಡಣೆ ಹಾಗೂ ವೈಜ್ಞಾನಿಕವಾಗಿ ಘನ ತ್ಯಾಜ್ಯ ವಿಲೇವಾರಿ ಮಾಡುವ ಹಂತದವರೆಗೆ ತರಬೇತಿಯನ್ನು ನೀಡಲಾಗಿದೆ. ಇದುವರೆಗೂ 18551 ಮಹಿಳೆಯರಿಗೆ ತರಬೇತಿ ನೀಡಲಾಗಿದ್ದು, 12237 ಮಹಿಳೆಯರು ಘನ ತ್ಯಾಜ್ಯ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದುವರೆಗೂ ಸ್ವ-ಸಹಾಯ ಸಂಘಗಳ 5209 ಮಹಿಳೆಯರಿಗೆ ವಾಹನ ಚಾಲನೆ ತರಬೇತಿ ನೀಡಲಾಗಿದ್ದು, 3514 ಮಹಿಳೆಯರು ಘನ ತ್ಯಾಜ್ಯ ವಿಲೇವಾರಿ ವಾಹನ ಚಾಲನೆ ಮಾಡುತ್ತಿದ್ದಾರೆ.

ಬದುಗಳ ನಿರ್ಮಾಣದ ಪ್ರಗತಿ ಹೇಗಿದೆ?

ಗ್ರಾಮೀಣ ಜನರ ಆಸ್ತಿಗಳಿಗೆ ರಕ್ಷಣೆ ಒದಗಿಸುವ ಇ-ಸ್ವತ್ತು ಯೋಜನೆ ಜಾರಿ, ತಾಂತ್ರಿಕ ಸುಧಾರಣಾ ಕ್ರಮಗಳೊಂದಿಗೆ ಇ ಸ್ವತ್ತು ವಿತರಣೆಗೆ ಕ್ರಮ ವಹಿಸಲಾಗುತ್ತಿದೆ. ಕೃಷಿ ಕವಚ ಯೋಜನೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಂತರ್ಜಲ ವೃದ್ಧಿಗಾಗಿ ಕ್ರಮ ವಹಿಸಲಾಗಿದೆ, 50,000 ಬದುಗಳ ನಿರ್ಮಾಣ ಗುರಿ, 17,930 ಬದುಗಳನ್ನು ನಿರ್ಮಿಸಲಾಗಿದೆ.

ಕಾಯಕ ಗ್ರಾಮದ ಉದ್ದೇಶ ಏನು?

ಗ್ರಾಮೀಣ ಆಸ್ತಿ ಮೌಲ್ಯೀಕರಣಕ್ಕೆ ಒತ್ತು ನೀಡಿದ ಪರಿಣಾಮವಾಗಿ, ಗ್ರಾಮ ಪಂಚಾಯತಿಗಳ ಸುಮಾರು 11 ಲಕ್ಷ ಆಸ್ತಿಗಳನ್ನು ಗುರುತಿಸಲಾಗಿದೆ. ಕಾಯಕ ಗ್ರಾಮ, ಪ್ರತಿ ಜಿಲ್ಲೆಯಲ್ಲಿನ ಹಿಂದುಳಿದ ಗ್ರಾಮಗಳನ್ನು ಆಯ್ಕೆ ಮಾಡಿ, ಅವುಗಳಲ್ಲಿ ಪರಿಣಾಮಕಾರಿ ಪ್ರಗತಿ ಕಂಡುಕೊಳ್ಳಲು ಕಾಯಕ ಗ್ರಾಮ ಯೋಜನೆಯಡಿಯಲ್ಲಿ ಅಧಿಕಾರಿಗಳಿಗೆ ಗ್ರಾಮಗಳನ್ನು ದತ್ತು ನೀಡುವ ಕಾರ್ಯಕ್ರಮ ರೂಪಿಸಲಾಗಿದೆ.

ಹೂಡಿಕೆ, ಉದ್ಯೋಗ ಸೃಷ್ಟಿಯಲ್ಲಿ ನಂ.1

ಕರ್ನಾಟಕದ ಕಾಂಗ್ರೆಸ್ ಸರ್ಕಾರವು ತನ್ನ ಆಡಳಿತದ ಯಶಸ್ವಿ 1000 ದಿನಗಳನ್ನು ಪೂರೈಸಿದ್ದು, ಈ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿ ಮತ್ತು ಜನಸಾಮಾನ್ಯರ ಆರ್ಥಿಕ ಭದ್ರತೆಗೆ ಹೊಸ ಭಾಷ್ಯ ಬರೆದಿದೆ. ನುಡಿದಂತೆ ನಡೆದ ಸರ್ಕಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕಾಂಗ್ರೆಸ್, ತಾನು ನೀಡಿದ್ದ 593 ಭರವಸೆಗಳ ಪೈಕಿ ಈಗಾಗಲೇ 242 ಭರವಸೆಗಳನ್ನು ಈಡೇರಿಸುವ ಮೂಲಕ ಶೇ. 40ರಷ್ಟು ಗುರಿ ಸಾಧಿಸಿದೆ. ಕರ್ನಾಟಕವು ಇಂದು ದೇಶದಲ್ಲೇ ಬೆಳವಣಿಗೆಯಲ್ಲಿ ಮೊದಲ ಸ್ಥಾನದಲ್ಲಿದ್ದು (ಶೇ.10.2), ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ)ಯಲ್ಲಿ ಎರಡನೇ ಸ್ಥಾನದಲ್ಲಿದೆ. ಇನ್ವೆಸ್ಟ್ ಕರ್ನಾಟಕ 2025 ಸಮಾವೇಶದಲ್ಲಿ 10.27 ಲಕ್ಷ ಕೋಟಿ ರೂ. ಹೂಡಿಕೆಯ ಗುರಿ ಸಾಧಿಸಲಾಗಿದ್ದು, ಇದರಿಂದ 6 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ದೇಶದ ಸರಾಸರಿ ಶೇ.18ಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ನಿರುದ್ಯೋಗ ದರ ಕೇವಲ ಶೇ.2.5 ರಷ್ಟಿದೆ. ದೊಡ್ಡಬಳ್ಳಾಪುರದಲ್ಲಿ ಕ್ವಿನ್ (ಕೆಡಬ್ಲ್ಯುಐಎನ್) ಸಿಟಿ, ಕಲಬುರಗಿಯಲ್ಲಿ ಮೆಗಾ ಜವಳಿ ಪಾರ್ಕ್ ಸ್ಥಾಪನೆಗೆ ಚಾಲನೆ ನೀಡಲಾಗಿದೆ.

ರೈತರು ಮತ್ತು ಶೋಷಿತರ ಪರ ಆಡಳಿತ

ಕೇಂದ್ರದ ನೆರವಿಲ್ಲದಿದ್ದರೂ ಸರ್ಕಾರ ತನ್ನ ಬೊಕ್ಕಸದಿಂದ 38 ಲಕ್ಷ ರೈತರಿಗೆ 4,047 ಕೋಟಿ ರೂ.ಗಳ ಪರಿಹಾರ ವಿತರಿಸಿದೆ. 20 ಸಾವಿರ ಪೌರಕಾರ್ಮಿಕರನ್ನು ಮಾಸಿಕ 39 ಸಾವಿರ ರೂ. ವೇತನದೊಂದಿಗೆ ಖಾಯಂಗೊಳಿಸಿ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗಿದೆ. ರಾಜ್ಯದಲ್ಲಿ 500 ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳ ಆರಂಭ ಹಾಗೂ ಸರ್ಕಾರಿ ಶಾಲೆಗಳ ಮೂಲಸೌಕರ್ಯಕ್ಕೆ 725 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಬ್ರಾಂಡ್ ಬೆಂಗಳೂರು ಮತ್ತು ಮೂಲಸೌಕರ್ಯ

ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಿಸಲು 40,000 ಕೋಟಿ ರೂ. ವೆಚ್ಚದ ಸುರಂಗ ರಸ್ತೆ ಯೋಜನೆ ಹಾಗೂ ಮೆಟ್ರೋ ಜಾಲವನ್ನು 2026ರ ವೇಳೆಗೆ 175 ಕಿ.ಮೀ.ಗೆ ವಿಸ್ತರಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಬಿಡದಿಯ 8,500 ಎಕರೆ ಪ್ರದೇಶದಲ್ಲಿ ಭಾರತದ ಮೊದಲ ಎಐ (ಕೃತಕ ಬುದ್ಧಿಮತ್ತೆ) ನಗರ (ಎಐ ಸಿಟಿ) ನಿರ್ಮಾಣವಾಗುತ್ತಿದೆ.

ಆರೋಗ್ಯ ಕ್ಷೇತ್ರದಲ್ಲಿ ನವಚೈತನ್ಯ

ಗೃಹ ಆರೋಗ್ಯ ಯೋಜನೆಯಡಿ ಮನೆ-ಮನೆಗೆ ತೆರಳಿ ಆರೋಗ್ಯ ತಪಾಸಣೆ ಮಾಡಲಾಗುತ್ತಿದ್ದು, ತಾಯಿ ಮರಣ ಪ್ರಮಾಣವನ್ನು ಶೇ. 24ರಷ್ಟು ಕಡಿಮೆ ಮಾಡುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಆಹಾರದಲ್ಲಿ ಕೃತಕ ಬಣ್ಣ ಬಳಕೆಯನ್ನು ನಿಷೇಧಿಸಿ ಜನರ ಆರೋಗ್ಯ ರಕ್ಷಣೆಗೆ ದಿಟ್ಟ ಹೆಜ್ಜೆ ಇಡಲಾಗಿದೆ. ಪ್ರತಿಪಕ್ಷಗಳ ಟೀಕೆಗಳ ನಡುವೆಯೂ ಕಾಂಗ್ರೆಸ್ ಸರ್ಕಾರವು ಕರ್ನಾಟಕವನ್ನು ದೇಶದ ಆರ್ಥಿಕ ಮತ್ತು ಶೈಕ್ಷಣಿಕ ನಕ್ಷೆಯಲ್ಲಿ ಅಗ್ರಸ್ಥಾನಕ್ಕೆ ತರುವಲ್ಲಿ ಯಶಸ್ವಿಯಾಗಿದೆ. 1000 ದಿನಗಳ ಈ ಸಂಭ್ರಮವು ಕನ್ನಡಿಗರ ಸರ್ವತೋಮುಖ ಅಭಿವೃದ್ಧಿಯ ಸಂಕೇತವಾಗಿದೆ.

ಗ್ಯಾರಂಟಿ ಸರ್ಕಾರ 1 ಸಾವಿರ ದಿನ ಪೂರೈಸಿದ ಹಿನ್ನೆಲೆಯಲ್ಲಿ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯ ಯಶೋಗಾಥೆಯ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ಹೊಸ ದಿಗಂತ ಜತೆಗೆ ಮಾತನಾಡಿದ್ದು, ಇಲಾಖೆಯಲ್ಲಿ ಕೈಗೊಂಡ ದಿಟ್ಟಕ್ರಮಗಳನ್ನು ವಿವರಿಸಿದ್ದಾರೆ.

ದಿಗಂತದತ್ತ ಶಕ್ತಿ ಯೋಜನೆ

ಶಕ್ತಿಯೋಜನೆಯಿಂದ ಸರ್ಕಾರಕ್ಕೆ ಹೊರೆಯಾಗಿದೆಯೇ?

ಚುನಾವಣೆ ವೇಳೆ ನೀಡಿದ ಭರವಸೆಯಂತೆ ಜನಪರ ಆಡಳಿತ ನೀಡಿದ್ದೇವೆ. ಪಂಚ ಗ್ಯಾರಂಟಿಗಳಿಗೆ ಕೋಟಿಗಟ್ಟಲೆ ಫಲಾನುಭವಿಗಳು ಇದ್ದಾರೆ. 579 ಕೋಟಿ ಫಲಾನುಭವಿಗಳಿದ್ದಾರೆ, ಪ್ರತಿ ತಿಂಗಳು 1 ಕೋಟಿ 65 ಲಕ್ಷ ಮನೆಗಳಿಗೆ ಗೃಹಜ್ಯೋತಿ, 1 ಕೋಟಿ 24 ಲಕ್ಷ ಜನರಿಗೆ ಗೃಹಲಕ್ಷ್ಮೀ, 72 ಕೋಟಿ ಫಲಾನುಭವಿಗಳಿಗೆ ಅನ್ನಭಾಗ್ಯ ಯೋಜನೆ ಸೇರಿದಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇವೆ. ವಿರೋಧ ಪಕ್ಷಗಳು ಏನೇ ಅಪಪ್ರಚಾರ ಮಾಡಿದರೂ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಸಾಲ ಮಾಡಿ ಹೋಗಿತ್ತು. ಹಣ ಇಲ್ಲದೇ 2 ಲಕ್ಷ 71 ಸಾವಿರ ಕೋಟಿ ರೂ. ಕಾಮಗಾರಿಗಳಿಗೆ ಅನುಮೋದನೆ ನೀಡಿದರು, 80 ಸಾವಿರ ಕೋಟಿ ರೂ. ಸಾಲ ಹೊರೆ ಮಾಡಿದರು, ಇದು ನಮ್ಮ ಸರ್ಕಾರಕ್ಕೆ ಆರ್ಥಿಕ ತೊಂದರೆಯಾಯಿತು. ಇದನ್ನೂ ಮೀರಿ ನಾವು ಅಭಿವೃದ್ಧಿ ಕಾರ್ಯಕ್ಕೈಗೊಂಡಿದ್ದೇವೆ.

ಸಾರಿಗೆ ಇಲಾಖೆ ಪುನಶ್ಚೇತನಕ್ಕೆ ನೀವು ಕೈಗೊಂಡ ಕ್ರಮಗಳೇನು?

ಶಕ್ತಿ ಯೋಜನೆ ಪ್ರಾರಂಭದಲ್ಲಿ ನಮಗೆ ಬಸ್‌ಗಳ ಕೊರತೆ ಆಗಿತ್ತು, ನಂತರ 5,800 ಬಸ್ ಖರೀದಿಸಲಾಯಿತು. ಈಗ ಮತ್ತೆ 2,000 ಬಸ್ ಖರೀದಿಸಿದ್ದೇವೆ. ಬಿಜೆಪಿ ಅಧಿಕಾರದಲ್ಲಿ ಬಸ್‌ಗಳ ಖರೀದಿ ಆಗಿದಿಲ್ಲ, ಹೊಸ ನೇಮಕಾತಿಯೂ ಆಗಿದ್ದಿಲ್ಲ. ಈ ನಾವು 10,000 ನೇಮಕಾತಿ ಮಾಡಿದ್ದೇವೆ. ಇನ್ನೂ 2,000 ಬಸ್ ಖರೀದಿ ನಂತರ ಪ್ರಯಾಣಿಕರಿಗೆ ಹೆಚ್ಚಿನ ಬಸ್ ಸೇವೆ ಒದಗಿಸಲಾಗುವುದು. 679 ಕೋಟಿ ಮಹಿಳೆಯರು ಪ್ರಯಾಣಿಸಿದ್ದು, ಸರ್ಕಾರ 17,000ಕ್ಕೂ ಅಧಿಕ ಕೋಟಿ ರೂ. ಖರ್ಚು ಮಾಡಿದೆ.

ಸಾರಿಗೆ ನೌಕರರ ಕಲ್ಯಾಣಕ್ಕೆ ಸರ್ಕಾರದ ಕೊಡುಗೆ ಏನು?

ಸಾರಿಗೆ ಸಿಬ್ಬಂದಿ ಅಪಘಾತದಲ್ಲಿ ಮೃತರಾದರೆ 1 ಕೋಟಿ ಪರಿಹಾರ ನೀಡಲಿದ್ದೇವೆ, ಸೇವೆಯಲ್ಲಿ ಇದ್ದಾಗ ಮೃತರಾದರೆ ಪಿಂಚಣಿ ಜತೆಗ 10 ಲಕ್ಷ ನೀಡಿಲಿದ್ದೇವೆ, ಸಿಬ್ಬಂದಿಯ ಮಕ್ಕಳಿಗೆ ಸ್ಕಾಲರ್‌ಶಿಪ್ ಸೇರಿದಂತೆ ಸಿಬ್ಬಂದಿಯ ಕಲ್ಯಾಣಕ್ಕೆ ಅನೇಕ ಯೋಜನೆಗಳನ್ನು ತಂದಿದ್ದೇವೆ. ಅಪಘಾತದಲ್ಲಿ ಪ್ರಯಾಣಿಕರು ಮೃತರಾದರೆ ನಾವೇ 10 ಲಕ್ಷ ರೂ.ಪರಿಹಾರ ನೀಡುತ್ತೇವೆ. ಆದ್ಯತೆ ಮೇರೆಗೆ ನಿಗಮವಾರು ವರ್ಗಾವಣೆ ಕಲ್ಪಿಸಿದ್ದೇವೆ. 6 ಸಾವಿರ ಕೋಟಿ ಸಾಲ ಮಾಡಿ ಹೋದರು, ನಾವು ಸಿಬ್ಬಂದಿಗೆ 1ರಿಂದ 7 ನೇ ತಾರೀಖಿನೊಳಗಗಿ ಸಂಬಂಳ ನೀಡುತ್ತಿದ್ದೇವೆ.

ನಿಗಮಗಳಿಗೆ ಹೊಸ ಬಸ್ ಸಿಗಲಿದೆಯೇ?

ಸರ್ಕಾರ ಸಾಲದ ರೂಪದಲ್ಲಿ ನಮಗೆ 2,000 ಕೋಟಿ ರೂ. ನೀಡಿದೆ. ಸರ್ಕಾರವೇ ತೀರಿಸುತ್ತಿದೆ. **7900** ಬಸ್‌ಗಳ ಖರೀದಿಗೆ ಸರ್ಕಾರ ನೆರವು ನೀಡಿದೆ. ನಾನು ಬಂದ ಮೇಲೆ ನಿಗಮಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಮಾಡಲಾಯಿತು.

ಮೊದಲು ನಿಗಮಗಳು ಕೆಎಸ್‌ಆರ್‌ಟಿಸಿ ಮೇಲೆ ಅವಲಂಬನೆಯಾಗಿತ್ತು. ಇಗ ಅವರ ಬಸ್‌ಗಳನ್ನು ಅವರೇ ಖರೀದಿ ಮಾಡಬೇಕಿರುವುದರಿಂದ ಎಲ್ಲಾ ನಿಗಮಗಳಿಗೂ ಹೊಸ ಬಸ್ ಸಿಗಲಿದೆ. ಕೆಎಸ್‌ಆರ್‌ಟಿಸಿ 70 ಬಸ್, ಕಲ್ಯಾಣ ಕರ್ನಾಟಕ **56** ಮತ್ತು ವಾಯುವ್ಯ **10** ಸೇರಿ ಒಟ್ಟು **156** ಹೊಸ ಬಸ್‌ಗಳು ಬರಲಿದ್ದು, ಅವು ದೂರ ಪ್ರಯಾಣಿಕ ಬಸ್ ಆಗಿವೆ.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಸಾರಿಗೆ ಸಾಮರ್ಥ್ಯ ಹೇಗಿದೆ?

ಪ್ರಯಾಸೋದ್ಯಮಕ್ಕೆ ಪ್ಯಾಕೇಜ್ ಮೂಲಕ್ ಬಸ್ ಸೇವೆ ಒದಗಿಸಿದ್ದೇವೆ. ದೇಶದಲ್ಲೇ ನಮ್ಮದು ನಂ.1 ಸಾರಿಗೆಯಾಗಿದೆ. ನಮ್ಮದೆ 26 ಸಾವಿರ ಬಸ್‌ಗಳು ಇವೆ. ನಮ್ಮಲ್ಲಿರುವ ತಂತ್ರಜ್ಞಾನ, ಐಷಾರಾಮಿ ಬಸ್‌ಗಳು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಬಸ್‌ಗಳು ಅತ್ಯುತ್ತಮವಾಗಿವೆ. ಹಲವಾರು ಪ್ರಶಸ್ತಿಗಳು ಬಂದಿವೆ. ಬಿಎಂಟಿಸಿಗೆ 4,500 ಇವಿ ಬಸ್‌ಗಳ ಬೇಡಿಕೆ ಇದೆ. ಬೇರೆ ನಿಗಮಗಳಿಗೆ 7,500 ಬಸ್‌ಗಳ ಬೇಡಿಕೆ ಇದೆ ಇವುಗಳ ಆದಷ್ಟು ಬೇಗ ಇಲಾಖೆಗೆ ಸೇರ್ಪಡೆಯಾಗಲಿವೆ.



- ಕ್ರಾಂತಿಕಾರಕ ಮಾದರಿಯ 300 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ.
- ಪ್ರೊ.ಸುಖದೇವ್ ಥೋರಟ್ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ.
- ಬೆಂಗಳೂರು, ಮೈಸೂರು ಸೇರಿದಂತೆ ಹತ್ತಕ್ಕೂ ಹೆಚ್ಚು ನಗರಗಳು 'ಹೆಲ್ತ್ ಹಬ್'ಗಳಾಗಿ ರೂಪುಗೊಳ್ಳುತ್ತಿವೆ.

ಬಡವರಿಗೆ ಗ್ಯಾರಂಟಿ ಸಹಕಾರಿ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳು ನಾಡಿನ ಬಡವರಿಗೆ ಹೆಚ್ಚೆಚ್ಚು ಅನುಕೂಲವಾಗಿದೆ. ಸ್ವಾವಲಂಬಿ ಬದುಕಿಗೆ ನಾಂದಿಯಾಗಿವೆ. ಗ್ಯಾರಂಟಿ ಅನ್ನುವುದು ಬಡಜನರ ಬದುಕು ಎಂಬಂತಾಗಿದೆ. ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆ ಟಿಪ್ಪಣೆಗಳು ಏನೇ ಇರಲಿ, ಇಂದು ಬೇರೆ ರಾಜ್ಯಗಳ ಬೇರೆ ಪಕ್ಷಗಳೇ ಈ ಯೋಜನೆಗಳನ್ನು ಅನುಷ್ಠಾನಗೊಳಿಸಿಕೊಂಡಿವೆ. ಈ ಗ್ಯಾರಂಟಿಗಳ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸಂದರ್ಶನವಿದು.

ನಿಮ್ಮ ಸರ್ಕಾರದ ಗ್ಯಾರಂಟಿಗಳಿಂದ ಜನರ ಬದುಕು ಹೇಗೆ ಹಸನಾಗಿದೆ?

ನಮ್ಮ ಸರ್ಕಾರದ ಗ್ಯಾರಂಟಿಗಳು ಕೇವಲ ಘೋಷಣೆಗಳಲ್ಲ, ಜನಜೀವನಕ್ಕೆ ನೇರವಾಗಿ ತಲುಪಿದ ಆರ್ಥಿಕ ಭದ್ರತೆ, ಶಕ್ತಿ, ಗೃಹಲಕ್ಷ್ಮಿ ಅನ್ನಭಾಗ್ಯ ಮುಂತಾದ ಉಳಿದಿದೆ, ಕುಟುಂಬದ ಖರ್ಚು ಕಡಿಮೆಯಾಗಿದೆ. ಗ್ರಾಮೀಣ ಮತ್ತು ನಗರ ಬಡ ಕುಟುಂಬಗಳಿಗೆ ಇದು ನಿಜವಾದ ನೆಮ್ಮದಿಯಾಗಿದೆ. ಜನರು ಸರ್ಕಾರ ನಮ್ಮ ಜೊತೆ ಇದೆ ಎಂಬ ಭರವಸೆ ಹೊಂದಿದ್ದಾರೆ. ಅದೇ ನಮ್ಮ ಯಶಸ್ಸು. ಗ್ಯಾರಂಟಿ ಯೋಜನೆ ಅನುಷ್ಠಾನವಾದಾಗಿನಿಂದ ರಾಜ್ಯದ ಕಟ್ಟಕಡೆಯವರಿಗೂ ಯೋಜನೆಯ ಲಾಭ ತಲುಪುತ್ತಿದೆ.

ಶಕ್ತಿ ಯೋಜನೆ ಆರಂಭವಾದಾಗ ಆಪಾದನೆಗಳು ಬಂದಿದ್ದವು?

ಯಾವುದೇ ದೊಡ್ಡ ಜನಪರ ಯೋಜನೆ ಆರಂಭವಾದಾಗ ಕೆಲವರು ಅನುಮಾನ ವ್ಯಕ್ತಪಡಿಸುವುದು ಸಹಜ. ಆದರೆ ಶಕ್ತಿ ಯೋಜನೆ ಇಂದು ಮಹಿಳೆಯರ ಸ್ವಾವಲಂಬನೆಯ ಸಂಕೇತವಾಗಿದೆ. ಲಕ್ಷಾಂತರ ಮಹಿಳೆಯರು ಉಚಿತ ಪ್ರಯಾಣದ ಸೌಲಭ್ಯದಿಂದ ಉದ್ಯೋಗ, ಶಿಕ್ಷಣ, ಆರೋಗ್ಯ ಸೇವೆಗಳತ್ತ ಸುಲಭವಾಗಿ ಹೋಗುತ್ತಿದ್ದಾರೆ.

ಗೃಹಲಕ್ಷ್ಮಿ ಯೋಜನೆಯಲ್ಲಿ ಬಹಳಷ್ಟು ಜನರಿಗೆ ಅನುಕೂಲವಾಗಿದೆ. ಆದಾಗ್ಯೂ ನಮಗೆ ಹಣ ಬಂದಿಲ್ಲ ಅಂತಿದ್ದಾರಲ್ಲ?

ಗೃಹಲಕ್ಷ್ಮಿ ಯೋಜನೆಯಡಿ ಕೋಟ್ಯಂತರ ಮಹಿಳೆಯರ ಖಾತೆಗೆ ನೇರವಾಗಿ ಹಣ ಜಮೆಯಾಗುತ್ತಿದೆ. ಕೆಲವೆಡೆ ಬ್ಯಾಂಕ್ ತಾಂತ್ರಿಕ ಸಮಸ್ಯೆ, ದಾಖಲೆ ತೊಂದರೆ ಅಥವಾ ಖಾತೆ ಲಿಂಕ್ ಆಗದಿರುವುದು ಕಾರಣವಾಗಿರಬಹುದು. ಅಂತಹ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ನಾವು ವಿಶೇಷ ಶಿಬಿರಗಳನ್ನು ನಡೆಸುತ್ತಿದ್ದೇವೆ.

ಈ ಗ್ಯಾರಂಟಿಗಳೇ ಕಾಂಗ್ರೆಸ್‌ಗೆ ಶ್ರೀ ರಕ್ಷೆ?

ಗ್ಯಾರಂಟಿಗಳು ಯಾವ ಪಕ್ಷದ ರಕ್ಷಣೆಗಾಗಿ ಅಲ್ಲ ? ಜನರ ರಕ್ಷೆಗಾಗಿ, ಜನರು ಅನುಭವಿಸುತ್ತಿರುವ ಲಾಭವೇ ನಮ್ಮ ಶಕ್ತಿ, ಜನರ ವಿಶ್ವಾಸವೇ ನಮ್ಮ ದೊಡ್ಡ ಶ್ರೀರಕ್ಷೆ. ನಾವು ಕೆಲಸ ಮಾಡುತ್ತಿದ್ದೇವೆ.

ಈ ಯೋಜನೆಗಳು ಮುಂದೆಯೂ ಮುಂದುವರೆಯುತ್ತವೆಯೇ?

ಖಂಡಿತ. ಈ ಯೋಜನೆಗಳು ತಾತ್ಕಾಲಿಕವಲ್ಲ, ಸಾಮಾಜಿಕ ಭದ್ರತಾ ವ್ಯವಸ್ಥೆಯ ಭಾಗ, ಸರ್ಕಾರ ತನ್ನ ಆರ್ಥಿಕ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತಾ, ಜನಪರ ಯೋಜನೆಗಳನ್ನು ಮುಂದುವರಿಸುತ್ತದೆ.



- ಜನರ ಮನೆಬಾಗಿಲಿಗೇ ತೆರಳಿ ಆರೋಗ್ಯ ತಪಾಸಣೆ ಮಾಡುವ ನೂತನ ಕಾರ್ಯಕ್ರಮ ಜಾರಿ.
- ಆಹಾರ ಕಲಬೆರಕೆ ವಿರುದ್ಧ ಕಠಿಣ ಸಮರ ಸಾರಲಾಗಿದ್ದು ಕ್ರಿಮಿನಲ್ ಕೃತ್ಯವೆಂದು ಪರಿಗಣಿಸಲಾಗಿದೆ.
- ರೈತರಿಗೆ ಹೆಚ್ಚುವರಿ ಬಿತ್ತನೆ ಬೀಜ ಮತ್ತು ರಸಗೊಬ್ಬರಕ್ಕಾಗಿ 2,000 ಕೋಟಿ ರೂ. ಸಹಾಯಧನ
- ಹಗಲು ವೇಳೆಯಲ್ಲಿ ರೈತರಿಗೆ 7 ಗಂಟೆಗಳ ನಿರಂತರ ವಿದ್ಯುತ್ ನೀಡಲು ಕ್ರಮ.
- ರಾಜ್ಯದ 227 ಸ್ಥಳೀಯ ಸಂಸ್ಥೆಗಳಲ್ಲಿ 9,574 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ
- ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ 42 ವಸತಿ ಶಾಲೆಗಳ ಸ್ಥಾಪನೆ.
- ದೇವಸ್ಥಾನದ ಅರ್ಚಕರ ತಸ್ತೀಕ್ ಮತ್ತು ಗೌರವ ಧನವನ್ನು 60,000 ರೂ.ನಿಂದ 72,000 ರೂ.ಏರಿಕೆ
- ಸುಮಾರು 8.5 ಲಕ್ಷ ಮಕ್ಕಳು ವಸತಿ ಶಾಲೆ ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ.
- ಮಹಿಳಾ ಕಾರ್ಮಿಕರಿಗೆ ವಾರ್ಷಿಕವಾಗಿ 12 ದಿನಗಳ ವೇತನ ಸಹಿತ ಋತುಚಕ್ರರಜೆ ನೀಡುವ ಕ್ರಾಂತಿಕಾರಕ ನಿರ್ಧಾರ.
- ಅಕ್ಕ ಕಾರ್ಯಪಡೆಗಳ ಮೂಲಕ 25ಕ್ಕೂ ಹೆಚ್ಚು ಆರ್ಥಿಕ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

ಪ್ರಾಚೀನ ವೈಜ್ಞಾನಿಕ ಮನೋಭಾವದ ಪ್ರತಿಬಿಂಬ

ಕೊಯಮತ್ತೂರು: ಭಾರತದ ಬಾಹ್ಯಾಕಾಶ ಕಾರ್ಯಾಚರಣೆಗಳಾದ ಚಂದ್ರಯಾನ ಮತ್ತು ಆದಿತ್ಯ-ಎಲ್ 1 ರಾಷ್ಟ್ರದ ಪ್ರಾಚೀನ ವೈಜ್ಞಾನಿಕ ಪರಂಪರೆಯ ಆಧುನಿಕ ಅಭಿವ್ಯಕ್ತಿಗಳನ್ನು ಪ್ರತಿನಿಧಿಸುತ್ತವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.


ಈಶಾ ಯೋಗ ಕೇಂದ್ರದಲ್ಲಿ ಭಾನುವಾರ ನಡೆದ ಮಹಾ ಶಿವರಾತ್ರಿ ಆಚರಣೆಯಲ್ಲಿ ಮಾತನಾಡಿದ ಅವರು, ಈ ತಾಂತ್ರಿಕ ಸಾಧನೆಗಳ ಮೂಲ ಭಾರತದ ಸಾಂಸ್ಕೃತಿಕ ಅಸ್ಮಿತೆಯಲ್ಲಿದೆ. ಭಾರತ ಚಂದ್ರಯಾನ, ಮಂಗಳಯಾನ ಮತ್ತು ಆದಿತ್ಯ-ಎಲ್1ನಂತಹ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದಾಗ, ಇದು ಕೇವಲ ತಾಂತ್ರಿಕ ಸಾಧನೆಯಲ್ಲ, ಇದು ನಮ್ಮ ಸಾಂಸ್ಕೃತಿಕ ಗುರುತಿನ ಭಾಗವಾಗಿರುವ ಪ್ರಾಚೀನ ಜ್ಞಾನದ ಆಧುನಿಕ ಅಭಿವ್ಯಕ್ತಿ ಎಂದರು.

ಸೂರ್ಯ ಮತ್ತು ಚಂದ್ರರು ಭಾರತದ ಪಂಚಾಂಗ ಮತ್ತು ಹಬ್ಬಗಳ ಅವಿಭಾಜ್ಯ ಅಂಗಗಳು ಎಂದ ಅವರು, ನಮ್ಮ ಉಪವಾಸಗಳು, ಹಬ್ಬಗಳು ಮತ್ತು ಶುಭ ಸಮಯಗಳನ್ನು ನಿಖರವಾದ ವೈಜ್ಞಾನಿಕ ಲೆಕ್ಕಾಚಾರಗಳ ಮೂಲಕ ನಿರ್ಧರಿಸಲಾಗುತ್ತದೆ. ಈಗ ಸಂಪ್ರದಾಯ ಮತ್ತು ತಂತ್ರಜ್ಞಾನ ಒಟ್ಟಾಗಿ ಮುಂದುವರಿಯುತ್ತಿವೆ ಎಂದರು. ನಿಜವಾದ ರಾಷ್ಟ್ರೀಯ ಭದ್ರತೆ, ದೈಹಿಕ ಶಕ್ತಿಯ ಬದಲು ಆಧ್ಯಾತ್ಮಿಕ ಮೂಲದಿಂದ ಬರುತ್ತದೆ. ನಿಜವಾದ ಭದ್ರತೆ ಕೇವಲ ಬಾಹ್ಯ ಶಕ್ತಿಯಿಂದಲ್ಲ, ಬಲವಾದ ರಾಷ್ಟ್ರೀಯ ಪ್ರಜ್ಞೆಯಿಂದ ಬರುತ್ತದೆ ಎಂದು ಹೇಳಿದ ಅವರು, ನಿರ್ಭೀತ ಸಮಾಜ ಮಾತ್ರ ಬಲವಾದ ರಾಷ್ಟ್ರವನ್ನು ನಿರ್ಮಿಸಬಹುದು ಎಂದು ಹೇಳಿದರು. ಭಗವಂತ ಶಿವನಿಂದ ಸ್ಫೂರ್ತಿ ಪಡೆದು ಮಾನವೀಯ ನೆರವು ಮತ್ತು ಅಗತ್ಯ ನಿರ್ಣಾಯಕ ಕ್ರಮಗಳೆರಡನ್ನೂ ಸಾಧ್ಯವಾಗಿಸಿದ ಸಶಸ್ತ್ರ ಪಡೆಗಳನ್ನು ಶ್ಲಾಘಿಸಿದರು. ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಾಧಕರಿಗೆ ಭವ್ಯ ಭಾರತ ಭೂಷಣ ಪ್ರಶಸ್ತಿ ಪ್ರದಾನ

ಕೊಯಮತ್ತೂರಿನ ಈಶಾ ಯೋಗ ಕೇಂದ್ರದಲ್ಲಿ ನಡೆದ ಮಹಾಶಿವರಾತ್ರಿ ಆಚರಣೆಯ ಸಂದರ್ಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭವ್ಯ ಭಾರತ ಭೂಷಣ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಪುರಸ್ಕೃತರಲ್ಲಿ ಇಸ್ರೋ ವಿಜ್ಞಾನಿಗಳಾದ ನಂಬಿ ನಾರಾಯಣ್ ಮತ್ತು ಕಿರಣ್ ಕುಮಾರ್, ನರ್ತಕಿ ಅಲರ್ಮೆಲ್ ವಲ್ಲಿ, ಪಿಟೀಲು ವಾದಕ ಎನ್. ರಾಜಮ್, ಇತಿಹಾಸಕಾರ ವಿಕ್ರಮ್ ಸಂಪತ್ ಮತ್ತು ಬ್ಯಾಡ್ಮಿಂಟನ್ ಚಾಂಪಿಯನ್ ಸೈನಾ ನೆಹ್ವಾಲ್ ಸೇರಿದ್ದಾರೆ. ಮೂರು ಸಶಸ್ತ್ರ ಪಡೆಗಳ ಕಮಾಂಡ್‌ಗಳು ಆಪರೇಷನ್ ಸಿಂದೂರ್‌ನ ಯಶಸ್ಸಿಗೆ ವಿಶೇಷ ಮನ್ನಣೆ ಪಡೆದಿವೆ.

ರಾಮ ಬಾಣ



22 ಸಾವಿರಕ್ಕೂ ಹೆಚ್ಚು ರೈತರಿಗೆ ಪಿಎಂ-ಕಿಸಾನ್ ಹಣ ಬಿಡುಗಡೆ

ಬೆಂಗಳೂರು: ಕರ್ನಾಟಕದ ಸಾವಿರಾರು ರೈತರಿಗೆ ಪಿಎಂ - ಕಿಸಾನ್ ಯೋಜನೆಯಡಿ ಬಾಕಿ ಉಳಿದಿದ್ದ ಹಣವನ್ನು ಬಿಡುಗಡೆ ಮಾಡುವಂತೆ ಕೃಷಿ ಸಚಿವ ಚಲುವರಾಯಸ್ವಾಮಿ ಸಲ್ಲಿಸಿದ್ದ ಮನವಿಗೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದ್ದು, 22 ಸಾವಿರಕ್ಕೂ ಹೆಚ್ಚು ರೈತರಿಗೆ ಪಿಎಂ-ಕಿಸಾನ್ ಹಣ ಬಿಡುಗಡೆ ಮಾಡಿದೆ.

ರಾಜ್ಯ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು 2025ರ ಡಿ.17 ರಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದು, ತಾಂತ್ರಿಕ ಕಾರಣಗಳಿಂದ ರಾಜ್ಯದ ಸುಮಾರು 30 ಸಾವಿರಕ್ಕೂ ಹೆಚ್ಚು ಅರ್ಹ ರೈತರು ಯೋಜನೆಯ ಲಾಭದಿಂದ ವಂಚಿತರಾಗುತ್ತಿರುವುದನ್ನು ಗಮನಕ್ಕೆ ತಂದಿದ್ದರು.

ಇದಕ್ಕೆ ಪೂರಕವಾಗಿ ಸ್ಪಂದಿಸಿರುವ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ರಾಜ್ಯ ಸರ್ಕಾರ ನೀಡಿರುವ ದೃಢೀಕರಣದ ಆಧಾರದ ಮೇಲೆ ಈಗಾಗಲೇ 22 ಸಾವಿರಕ್ಕೂ ಹೆಚ್ಚು ಫಲಾನುಭವಿಗಳನ್ನು 22ನೇ ಕಂತಿನ ಪಾವತಿ ಪಟ್ಟಿಯಲ್ಲಿ ಸೇರಿಸಲಾಗಿದ್ದು, ಶೀಘ್ರದಲ್ಲೇ ಅವರಿಗೆ ಹಣ ಬಿಡುಗಡೆಯಾಗಲಿದೆ ಎಂದು ತಿಳಿಸಿದ್ದರು. ಈ ಬೆಳವಣಿಗೆಯ ಕುರಿತು ಪ್ರತಿಕ್ರಿಯಿಸಿರುವ ಸಚಿವ ಎನ್. ಚಲುವರಾಯಸ್ವಾಮಿ, ರಾಜ್ಯದ ರೈತರ ಹಿತದೃಷ್ಟಿಯಿಂದ ನಾವು ಸಲ್ಲಿಸಿದ ಮನವಿಯನ್ನು ಪುರಸ್ಕರಿಸಿ, ತಾಂತ್ರಿಕ ಅಡೆತಡೆಗಳನ್ನು ನಿವಾರಿಸಿ ರೈತರಿಗೆ ನ್ಯಾಯ ಒದಗಿಸಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ರಾಜ್ಯ ಸರ್ಕಾರದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ತಿಳಿಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಕಾಂಗ್ರೆಸ್ಸಿಗರೇ ನಿಜವಾದ ಹಿಂದುಗಳು, ಬಿಜೆಪಿಯವರು ಹಿಂದುತ್ವವಾದಿಗಳು
- ರಾಮಲಿಂಗಾರೆಡ್ಡಿ
- ಹಿಂದುತ್ವ ವಿರೋಧಿಗಳು ನಿಜವಾದ ಹಿಂದುಗಳಾಗಲು ಸಾಧ್ಯವೇ?

ದಿನ ಭವಿಷ್ಯ

ಮೇಷ
ಹಣಕಾಸು ಸ್ಥಿತಿ ಅಷ್ಟೇನೂ ಪೂರಕವಲ್ಲ. ಕ್ಲಿಷ್ಟ ಪರಿಸ್ಥಿತಿಯಲ್ಲಿ ದುಡುಕಿನ ನಿರ್ಧಾರ ತಾಳದಿರಿ. ಸಂಯಮದ ನಡೆಯಿರಲಿ.

ವೃಷಭ
ಪ್ರತಿಯೊಂದನ್ನೂ ಸ್ಪಷ್ಟ ಮನಸ್ಥಿತಿಯೊಂದಿಗೆ ನಿಭಾಯಿಸಿ. ಗೊಂದಲಕ್ಕೆ ಅವಕಾಶ ಕೊಡಬೇಡಿ. ಚಂಚಲ ನಿಲುವು ಒಳ್ಳೆಯ ಫಲ ತರಲಾರದು.

ಮಿಥುನ
ಆಪ್ತರ ಜತೆ ವ್ಯವಹರಿಸುವಲ್ಲಿ ನಿಮ್ಮ ಅಹಂ ಸಮಸ್ಯೆ ತರುತ್ತದೆ. ಅವರ ಬಗ್ಗೆ ಸೂಕ್ತ ಸ್ಪಂದನೆ ಇರಲಿ. ಸಣ್ಣ ಮಾತಿಗೂ ಜಗಳಕ್ಕೆ ಇಳಿಯಬೇಡಿ.

ಕಟಕ
ಮನೆಯವರಿಗೆ ಸಂಬಂಧಿಸಿ ಏನೋ ಚಿಂತೆ ಕಾಡುತ್ತದೆ. ಆ ಬಗ್ಗೆ ನಿಮ್ಮಲ್ಲೇ ಗೊಂದಲವಿದೆ. ಮೊದಲು ಖಚಿತ ನಿಲುವು ತಾಳಿ. ಆರ್ಥಿಕ ಹಿನ್ನಡೆ.

ಸಿಂಹ
ಅದೃಷ್ಟ ಇಂದು ನಿಮ್ಮ ಜತೆಗಿಲ್ಲ. ಯಾವುದಾದರೂ ಯೋಜನೆ ಇದ್ದಲ್ಲಿ ಮುಂದೂಡಿ. ಖರೀದಿ ಹುಮ್ಮಸ್ಸು ಜೇಬಿಗೆ ದೊಡ್ಡ ಕತ್ತರಿ ಹಾಕಬಹುದು.

ಕನ್ಯಾ
ಹೃದಯದ ಭಾವನೆ ಮುಚ್ಚಿಡಬೇಡಿ. ಸಂಬಂಧಿಸಿದವರ ಮುಂದೆ ತೆರೆದಿಡಿ. ಆರ್ಥಿಕ ಪರಿಸ್ಥಿತಿ ಉತ್ತಮ. ಬಂಧುವೊಬ್ಬರ ಆರೋಗ್ಯ ಕೆಡಬಹುದು.

ತುಲಾ
ಏರುಪೇರಿನ ದಿನ. ಸಂವಹನದ ಕೊರತೆ. ಕೆಲಸದಲ್ಲಿ ವಿಳಂಬ. ಶೀತ, ನೆಗಡಿಯ ಸಮಸ್ಯೆ ಕಾಣಿಸಿಕೊಳ್ಳಬಹುದು. ವೃತ್ತಿ ಒತ್ತಡ ಅಧಿಕ.

ವೃಶ್ಚಿಕ
ಮಾನಸಿಕ ತಾಕಲಾಟ. ಕೆಲಸದ ಮೇಲೆ ಏಕಾಗ್ರತೆ ನಿಲ್ಲದು. ನಿಮ್ಮ ನಿಲುವಿನಲ್ಲಿ ದೊಡ್ಡ ಬದಲಾವಣೆ ಅಳವಡಿಸಬೇಡಿ. ಇರುವ ಸ್ಥಿತಿ ಮುಂದುವರಿಸಿ.

ಧನು
ಇಂದು ಕೆಲಸದಲ್ಲಿ ಉದಾಸೀನತೆ. ಆಪ್ತರು ಮತ್ತು ಮನೆಯ ಸುತ್ತಲೇ ಮನಸ್ಸು ತಿರುಗುತ್ತಿರುತ್ತದೆ. ಕಾನೂನು ತೊಡಕಿದ್ದರೆ ಪ್ರತಿಕೂಲ ಬೆಳವಣಿಗೆ.

ಮಕರ
ಅಸಂತೃಪ್ತಿ. ಇನ್ನೂ ಗಳಿಸಬೇಕೆಂಬ ಹಪಾಹಪಿ. ಆದರೆ ಆ ನಿಟ್ಟಿನಲ್ಲಿ ಪ್ರಯತ್ನ ವಿಫಲ. ಇದು ಇಂದಿನ ನಿಮ್ಮ ಗ್ರಹಗತಿ. ಕೌಟುಂಬಿಕ ಅಸಹಕಾರ.

ಕುಂಭ
ನಿಮ್ಮ ಸುತ್ತಲೂ ಕೋಲಾಹಲ ಪರಿಸ್ಥಿತಿ ಉಂಟಾದೀತು. ನೀವಂತೂ ಸಹನೆಯಿಂದ ಇರಿ. ದುಡುಕಿನಿಂದ ಪ್ರತಿಕ್ರಿಯೆ ತೋರಬೇಡಿ.

ಮೀನ
ಸಮಸ್ಯೆ ಪರಿಹಾರದ ದಾರಿ ತೋರಲಿದೆ. ಆದರೆ ನಿಮ್ಮ ನಿಲುವಿನಲ್ಲಿ ಸ್ಪಷ್ಟತೆ ಇರಲಿ. ಇತರರ ಸಲಹೆಗೆ ಮನಸ್ಸು ತೆರೆದಿರಲಿ. ಕೌಟುಂಬಿಕ ವಾಗ್ವಾದ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 7,0,5,1

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬಣ್ಣನೆ

ಎಲ್ಲರಲ್ಲೂ ಶಿವನು ಜೀವಂತ

ಕೊಯಂಬತೂರು/ಬೆಂಗಳೂರು: ಮಾನವ ಕುಲವು ಒತ್ತಡ, ಆತಂಕ ಮತ್ತು ಆಂತರಿಕ ಅಶಾಂತಿಯ ಮೂಲಕ ಸಾಗುತ್ತಿರುವಾಗ, ಶಿವನ ಪ್ರಸ್ತುತತೆ ಇನ್ನಷ್ಟು ಗಹನವಾಗುತ್ತದೆ. ಶಿವನು ಒಂದು ಜೀವಂತ ಸಾಧ್ಯತೆ, ಅವ್ಯವಸ್ಥೆಯ ನಡುವೆಯೂ ಸಮತೋಲನವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದನ್ನು ತೋರಿಸುವ ಸಾಧ್ಯತೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಕೊಯಂಬತ್ತೂರಿನ ಈಶ ಯೋಗ ಕೇಂದ್ರದಲ್ಲಿ ನಡೆದ ನವರಾತ್ರಿ ಸಮಾರಂಭದಲ್ಲಿ ಮಾತನಾಡಿದ ಅವರು, ನಾನು ಅನುಭವಿಸುತ್ತಿರುವ ದೈವತ್ವವು, ಯಾರೂ ಹೇಳದಿದ್ದರೂ ಸಹ ಈ ಸ್ಥಳವು ದೇವ ದೇವ ಮಹಾದೇವನ ಅನುಗ್ರಹಕ್ಕೆ ಪಾತ್ರವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಶಿವನು ಸಂಪೂರ್ಣ ಆಂತರಿಕ ಶಾಂತಿಯನ್ನು ಮತ್ತು ಅದೇ ಸಮಯದಲ್ಲಿ ಕ್ರಿಯಾಶೀಲತೆ ಮತ್ತು ರೂಪಾಂತರವನ್ನು ಸಂಕೇತಿಸುತ್ತಾನೆ. ಆಧ್ಯಾತ್ಮಿಕತೆ ಎಂಬುದು ಜೀವನವನ್ನು ಹೆಚ್ಚು ಪರಿಣಾಮಕಾರಿ ಮತ್ತು ಸಮತೋಲನಗೊಳಿಸುವ ಒಂದು ವಿಜ್ಞಾನ ಎಂದು ತೋರಿಸಿಕೊಡುವ ಮೂಲಕ ಸದ್ಗುರುಗಳು ಮಹಾಶಿವರಾತ್ರಿಯನ್ನು ಒಂದು ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಭ್ರಮಾಚರಣೆಯನ್ನಾಗಿ ಮಾಡಿದ್ದಾರೆ ಎಂದು ಅವರು ಹೇಳಿದರು.



ಈಶ ಫೌಂಡೇಶನ್ ಜಗ್ಗಿ ವಾಸುದೇವ್ ಮಾತನಾಡಿ, ಆದಿಯೋಗಿ ಕೇವಲ ಭೂತಕಾಲಕ್ಕೆ ಸೇರಿದವನಲ್ಲ, ಆದಿಯೋಗಿ ಭವಿಷ್ಯತ್ತಿಗೆ ಸೇರಿದವನು, ಏಕೆಂದರೆ ಅವನು ನೀಡಿರುವುದು ನಂಬಿಕೆಯ ಕಟ್ಟುಪಾಡುಗಳು, ತತ್ವಶಾಸ್ತ್ರಗಳು, ಸಿದ್ಧಾಂತಗಳು, ಬೋಧನೆಗಳನ್ನಲ್ಲ ಬದಲಾಗಿ ಆನಂದ ಮಯ ಜೀವನಕ್ಕೆ ಸಾಧನಗಳನ್ನು ನೀಡಿದ್ದಾನೆ ಎಂದು ತಿಳಿಸಿದ್ದಾರೆ.

ಭವ್ಯ ಭಾರತವನ್ನು ನಿರ್ಮಿಸಲು ಕೊಡುಗೆ ನೀಡಿದ ಮತ್ತು ನೀಡುತ್ತಿರುವವರನ್ನು ಗುರುತಿಸಿ ಭವ್ಯ ಭಾರತ ಭೂಷಣ್ ಪ್ರಶಸ್ತಿ ನೀಡಲಾಯಿತು. ಈ ಶಿವರಾತ್ರಿಯಿಂದ ಆರಂಭವಾದ ಈ ಪ್ರಶಸ್ತಿಯನ್ನು ವಿವಿಧ ಕ್ಷೇತ್ರದ 10 ಜನರಿಗೆ ಪ್ರದಾನ ಮಾಡಲಾಯಿತು. ಈಶ ಮಹಾಶಿವರಾತ್ರಿಯು ಪ್ರಪಂಚದಾದ್ಯಂತ 25 ಭಾಷೆಗಳಲ್ಲಿ ಪ್ರಸಾರವಾಗಿದ್ದು, 200ಕ್ಕೂ ಹೆಚ್ಚು ಟಿವಿ ಚಾನೆಲ್ ಗಳು ಹಾಗೂ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ನೇರಪ್ರಸಾರ ಮಾಡಲಾಗಿತ್ತು. ದೇಶದಾದ್ಯಂತದ ಹಲವಾರು ಪ್ರಮುಖ ಗಣ್ಯರು, ಆಧ್ಯಾತ್ಮಿಕ ನಾಯಕರು, ರಾಜಕೀಯ ಗಣ್ಯರು ಹಾಗೂ ಕ್ರೀಡಾಪಟುಗಳು, ಉದ್ಯಮದ ಪ್ರಮುಖರು, ನಟರು, ಗಾಯಕರು ಮತ್ತು ಕಲಾವಿದರು ಸೇರಿದಂತೆ ಲಕ್ಷಾಂತರ ಜನರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

9 ನ್ಯಾಯಮೂರ್ತಿಗಳ ಪೀಠ ರಚನೆ

ಪುಟ ೧➜ ಈ ಮೂಲಕ ಸಮರ್ಥನೀಯತೆ ಅಥವಾ ಸಾಧ್ಯಾಸಾಧ್ಯತೆ ವಿಚಾರ ಅಂತಿಮಗೊಂಡಿದ್ದು, ನ್ಯಾಯಾಲಯಕ್ಕಿನ್ನು ಈ ವಿಚಾರವಾಗಿ ತಡೆಯಾಗದು ಎಂದು ಸುಪ್ರೀಂಕೋರ್ಟ್ ತನ್ನ ಈಚಿನ ಆದೇಶದಲ್ಲಿ ಹೇಳಿದೆ.

ವಿಚಾರಣಾ ದಿನಾಂಕಗಳು: ಮೇಲ್ಮನವಿ ದಾರರು ಮತ್ತು ಇದನ್ನು ಬೆಂಬಲಿಸುವವರ ಮೇಲ್ಮನವಿಗಳ ವಿಚಾರಣೆ ಏ.7ರಿಂದ 9ರವರೆಗೆ ನಡೆಯಲಿದೆ. ಮೂಲ ಮೇಲ್ಮನವಿ ಸಲ್ಲಿಸಿದವರು ಮತ್ತು ಇದನ್ನು ವಿರೋಧಿಸುವವರ ದೂರುಗಳ ವಿಚಾರಣೆ ಏ.14ರಿಂದ ಏ.16ರವರೆಗೆ ಇರುವುದು. ಪ್ರತಿವಾದಿಗಳ ಉತ್ತರಕ್ಕೆ ಕಕ್ಷಿದಾರರ ಪ್ರತ್ಯುತ್ತರಗಳಿದ್ದಲ್ಲಿ ಏ.21ರಂದು ವಿಚಾರಣೆ. ಅಮಿಕಸ್ ಕ್ಯೂರಿ ಅಥವಾ ನ್ಯಾಯಾಲಯ ಪರ ವಕೀಲರಿಂದ ಅಂತಿಮ ಅಭಿಮತವು ಏ.22ರಂದು ವ್ಯಕ್ತವಾಗಲಿದೆ.

ಕೆಲವು ಪ್ರಕರಣಗಳಲ್ಲಿ ವಿಸ್ತೃತ ಪೀಠ ರಚನೆ

ಸುಪ್ರೀಂ ಈ ಹಿಂದೆ ಕೆಲವು ಸಂದರ್ಭಗಳಲ್ಲಿ 9 ನ್ಯಾಯಮೂರ್ತಿಗಳ ವಿಸ್ತೃತ ಪೀಠ ರಚಿಸಿದೆ.

- 1992ರಲ್ಲಿ ಇಂದ್ರ ಸಾಹ್ನಿ ವರ್ಸಸ್ ಕೇಂದ್ರ ಸರ್ಕಾರ ಪ್ರಕರಣ ಸಂಬಂಧ 9 ನ್ಯಾಯಮೂರ್ತಿಗಳ ಪೀಠ ತೀರ್ಪು ನೀಡಿದೆ. ಇದು ಮಂಡಲ್ ತೀರ್ಪು ಎಂದೂ ಪ್ರಸಿದ್ಧವಾಗಿದೆ.
- 1994ರಲ್ಲಿ ಎಸ್.ಆರ್. ಬೊಮ್ಮಾಯಿ ವರ್ಸಸ್ ಕೇಂದ್ರ ಸರ್ಕಾರ ಪ್ರಕರಣದಲ್ಲಿ 9 ಜಡ್ಜ್‌ಗಳ ಪೀಠ ತೀರ್ಪು ನೀಡಿದೆ.
- 2027ರಲ್ಲಿ ಪುಟ್ಟಸ್ವಾಮಿ ಮತ್ತು ಕೇಂದ್ರ ಸರ್ಕಾರ ನಡುವಿನ ಗೌಪ್ಯತೆ ಹಕ್ಕಿನ ಪ್ರಕರಣದಲ್ಲಿ 9 ನ್ಯಾಯಮೂರ್ತಿಗಳ ಪೀಠವನ್ನು ರಚಿಸಲಾಗಿತ್ತು.

2018ರ ತೀರ್ಪಿಗೆ ವ್ಯಕ್ತವಾಗಿತ್ತು ಆಕ್ರೋಶ

ಪುಟ ೧➜ ಆದರೆ ಪಿಣರಾಯಿ ಸರಕಾರ ಆ ದಿನಗಳಲ್ಲಿ ಸುಪ್ರೀಂಕೋರ್ಟ್ ಆದೇಶ ಪಾಲನೆಗೆ ಮುಂದಾಗಿತ್ತು. ಮಾತ್ರವಲ್ಲ, 2018ರ ಸುಪ್ರೀಂ ತೀರ್ಪಿನ ನಂತರದಲ್ಲಿ ಕೇರಳ ಹೊರತುಪಡಿಸಿ ಆಂಧ್ರಪ್ರದೇಶ, ತೆಲಂಗಾಣ, ಗೋವಾ, ತಮಿಳುನಾಡುಗಳಿಂದ 51 ಮಹಿಳೆಯರು ಶಬರಿಮಲೆಗೆ ತೆರಳಿದ್ದಾರೆಂದು 2020ರಲ್ಲಿ ಸುಪ್ರೀಂಕೋರ್ಟ್‌ಗೆ ವರದಿ ನೀಡಿತ್ತು. ಮಸೀದಿಗಳಿಗೆ ಮಹಿಳೆಯರ ಪ್ರವೇಶ, ಪಾರ್ಸಿಯೇತರರನ್ನು ವಿವಾಹವಾದ ಮಹಿಳೆಯರಿಗೆ 5 ದೇಗುಲಗಳಿಗೆ ತೆರಳಲು ಅವಕಾಶ ನೀಡಬೇಕೆನ್ನುವಂತಹ ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇವೆ.

ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ಕಿಡಿ

ಪುಟ ೧➜ ಜವಾಬ್ದಾರಿಯುತ ಸಚಿವ ಸ್ಥಾನದಲ್ಲಿರುವ ಪ್ರಿಯಾಂಕ್ ಖರ್ಗೆ ಅವರು ಆರೆಸ್ಸೆಸ್‌ನ 100 ವರ್ಷದ ಸಾಧನೆ, ಸಮಾಜ ಕಟ್ಟುವ ನಿಟ್ಟಿನಲ್ಲಿ ಆರೆಸ್ಸೆಸ್ಸಿನ ಸಮರ್ಪಣಾ ಮನೋಭಾವ, ದೇಶ ಕಟ್ಟುವ ನಿಟ್ಟಿನಲ್ಲಿ ಆರೆಸ್ಸೆಸ್ಸಿನ ಪಾತ್ರ ಏನು?- ಇದ್ಯಾವುದನ್ನೂ ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗದೆ ಮಾತಿನ ಚಪಲಕ್ಕೆ ಮತ್ತು ಮಾಧ್ಯಮಗಳಲ್ಲಿ ಸುದ್ದಿ ಆಗಬೇಕೆಂದು ಹೀಗೆ ಮಾತನಾಡಿದಂತಿದೆ. ಮುಖ್ಯಮಂತ್ರಿ ಬದಲಾವಣೆ ಕುರಿತ ಚರ್ಚೆ ನಡೆದಿದ್ದು, ಅವರು ಇದರಲ್ಲಿ ಆಕಾಂಕ್ಷಿಯೇ ತಿಳಿದಿಲ್ಲ ಎಂದು ತಿಳಿಸಿದರು. ಪ್ರಿಯಾಂಕ್ ಖರ್ಗೆ ಅವರು ಎರಡನೇ ಬಾರಿಗೆ ಸಚಿವರಾಗಿದ್ದಾರೆ. ಇಷ್ಟು ಸುದೀರ್ಘವಾಗಿ ರಾಜಕೀಯ ಅನುಭವ ಇರುವ ಮತ್ತು ಎಲ್ಲ ರಾಜಕೀಯ ಸ್ಥಾನಮಾನ ಅನುಭವಿಸಿದ ಕುಟುಂಬದವರಾಗಿದ್ದು, ಗುಲ್ಬರ್ಗ ಜಿಲ್ಲೆ ಅತ್ಯಂತ ಹಿಂದುಳಿದ ಜಿಲ್ಲೆ ಯಾಕೆ ಎಂಬುದಕ್ಕೆ ಪ್ರಿಯಾಂಕ್ ಅವರಿಂದ ಉತ್ತರಿಸಲು ಸಾಧ್ಯವಾಗಿಲ್ಲ ಎಂದು ಟೀಕಿಸಿದರು.

ತಂದೆ, ಮಗ ಆರ್‌ಎಸ್‌ಎಸ್ ಬಗ್ಗೆ ಅಧ್ಯಯನ ಮಾಡಲಿ

ಆರ್‌ಎಸ್‌ಎಸ್ ಸ್ಥಾಪನೆಯಾಗಿ ನೂರು ವರ್ಷವಾಗಿದೆ. ಇವತ್ತು ವಿಶ್ವದಲ್ಲಿ ನಂಬರ್ ಒನ್ ದೇಶಭಕ್ತ ಸಂಘಟನೆ ಆರ್‌ಎಸ್‌ಎಸ್ ಆರ್‌ಎಸ್‌ಎಸ್ ನಿಂದ ಹೊರಬಂದವರು ದೇಶಸೇವೆ; ಸಮಾಜಸೇವೆ ಮಾಡುತ್ತಾರೆ. ಅದನ್ನು ನೋಡಿ ಇವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ರವಿಕುಮಾರ್ ಆಕ್ಷೇಪಿಸಿದರು. ಈ ದೇಶದ ಅಭಿವೃದ್ಧಿಗೆ ಆರೆಸ್ಸೆಸ್ ಬಹಳ ದೊಡ್ಡ ಕೊಡುಗೆ ನೀಡುತ್ತಿದೆ ಎಂದು ತಿಳಿಸಿದರು. ಪ್ರಿಯಾಂಕ್ ಖರ್ಗೆ ಮತ್ತು ಅವರ ತಂದೆ ಆರು ತಿಂಗಳು ಆರ್‌ಎಸ್‌ಎಸ್ ಕುರಿತು ಅಧ್ಯಯನ ಮಾಡಲು ಬರಬೇಕೆಂದು ರವಿಕುಮಾರ್ ಮನವಿ ಮಾಡಿದರು. ಆಗ ನಿಮಗೆ ಆರ್‌ಎಸ್‌ಎಸ್ ಬಗ್ಗೆ ಗೊತ್ತಾಗಬಹುದು ಎಂದು ಆಶಿಸಿದರು.

ಎಂಟು ಕೋರ್ಟ್‌ಗೆ ಬಾಂಬ್ ಬೆದರಿಕೆ

ಪುಟ ೧➜ ಸ್ಥಳಕ್ಕೆ ಅಗ್ನಿಶಾಮಕ ದಳ ಸಹ ಆಗಮಿಸಿದ್ದು, ಗುಂಜನ್ ಆರ್ಯ ನೇತೃತ್ವದ ಬೆರಳಚ್ಚು ತಜ್ಞರು, ಬಾಂಬ್ ನಿಷ್ಕ್ರಿಯ ದಳ ಸುಮಾರು ಒಂದುವರೆ ಗಂಟೆ ಪರಿಶೀಲನೆ ಮಾಡಿದೆ. ಹೈಕೋರ್ಟ್‌ನ ಮೂಲೆ-ಮೂಲೆ ಪರಿಶೀಲಿಸಿದರೂ ಯಾವುದೇ ವಸ್ತುಗಳು ಲಭ್ಯವಾಗಲಿಲ್ಲ. ನಂತರ ಇದೊಂದು ಹುಸಿ ಬಾಂಬ್ ಕರೆ ಎಂದು ಸ್ಪಷ್ಟವಾಗಿದೆ.

ಹಾವೇರಿಯಲ್ಲೂ ಬೆದರಿಕೆ: ಹಳೆಯ ಪಿ.ಬಿ.ರಸ್ತೆಯಲ್ಲಿರುವ ಜಿಲ್ಲಾ ಕೋರ್ಟ್ ಕಟ್ಟಡಕ್ಕೆ ಬಾಂಬ್ ಇಡಲಾಗಿದೆ ಎಂದು ಅನಾಮಿಕ ಮೇಲ್‌ನಿಂದ ಸಂದೇಶ ಬಂದ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಾಧೀಶರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಉತ್ತರಕನ್ನಡ ನ್ಯಾಯಾಲಯಕ್ಕೂ ಬಾಂಬ್ ಭಯ: ಉತ್ತರ ಕನ್ನಡ ಜಿಲ್ಲೆಯ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ಕಾರ್ಯಾಲಯದಲ್ಲಿರುವ ಕಂಪ್ಯೂಟರ್ ವಿಭಾಗಕ್ಕೆ ಬೆಳಗ್ಗೆ 8.25ಕ್ಕೆ ಈ ಮೇಲ್ ಸಂದೇಶ ರವಾನಿಸಲಾಗಿದ್ದು ಸುನ್ನಿಯಾ ದಾಸನ್ ಎನ್ನುವವರ ಮೇಲ್ ಐಡಿ sunniyadasan@outlook.com ಮೂಲಕ ಸಂದೇಶ ರವಾನಿಸಲಾಗಿದೆ.

ಹಾಸನ ಜಿಲ್ಲಾ ಕೋರ್ಟ್‌ಗೆ ಬಾಂಬ್ ಸ್ಫೋಟ ಭೀತಿ: ಹಾಸನದ ಜಿಲ್ಲಾ ನ್ಯಾಯಾಲಯಕ್ಕೆ ಬೆದರಿಕೆ ಸಂದೇಶ ಬಂದಿರುವ ಮಾಹಿತಿ ತಿಳಿದು ನಗರ ಠಾಣೆ ಪೊಲೀಸರು ನ್ಯಾಯಾಲಯ ಆವರಣಕ್ಕೆ ಧಾವಿಸಿ ಪ್ರಾಥಮಿಕ ಪರಿಶೀಲನೆ ನಡೆಸಿದರು. ನಂತರ ಬಾಂಬ್ ನಿಷ್ಕ್ರಿಯದಳ ಮತ್ತು ಶ್ವಾನದಳವನ್ನು ಸ್ಥಳಕ್ಕೆ ಕರೆಸಿಕೊಂಡು ಸಂಪೂರ್ಣ ಆವರಣ ತಪಾಸಣೆ ಮಾಡಲಾಯಿತು. ಜತೆಗೆ ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಯಿತು.

ರಾಮನಗರ ಕೋರ್ಟ್‌ಗೂ ಬೆದರಿಕೆ: ರಾಮನಗರದ ನ್ಯಾಯಾಲಯ ಸಮುಚ್ಚಯಕ್ಕೆ ಅನಾಮಧೇಯ ವ್ಯಕ್ತಿ ಇ-ಮೇಲ್ ಮೂಲಕ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಸಂದೇಶ ರವಾನೆಯಾಗಿರುವ ಹಿನ್ನೆಲೆ ಈ ಬಗ್ಗೆ ಜಿಲ್ಲಾ ಸತ್ರ ನ್ಯಾಯಾಧೀಶರು, ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಂ.ಎಚ್. ಅಣ್ಣಯ್ಯನವರ ಅವರು ಅನಾಮಿಕ ವ್ಯಕ್ತಿಯ ಸಂದೇಶದ ವಿವರಗಳನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡಿದರು. ಅದೇ ರೀತಿ ದಾವಣಗೆರೆ ಮತ್ತು ಕೊಡಗು ಕೋರ್ಟ್‌ಗಳ ಆವರಣದಲ್ಲಿ ಬೆಳಗ್ಗೆ 11 ಗಂಟೆಯಿಂದ ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಸ್ಥಳಕ್ಕೆ ಆಗಮಿಸಿ ತೀವ್ರ ತಪಾಸಣೆ ನಡೆಸಿದರು. ಆದರೆ, ಯಾವುದೇ ಬಾಂಬ್ ವಸ್ತುಗಳು ಪತ್ತೆಯಾಗಿಲ್ಲ. ಇದೊಂದು ಹುಸಿ ಬಾಂಬ್ ಸಂದೇಶವಾಗಿದೆ ಎಂದು ಬಾಂಬ್ ನಿಷ್ಕ್ರಿಯ ದಳ ಮಾಹಿತಿ ನೀಡಿದೆ.



ಉತ್ತರ ಕರ್ನಾಟಕದ ಆರಾಧ್ಯ ದೈವವಾದ ಹುಬ್ಬಳ್ಳಿ ನಗರದ ಸದ್ಗುರು ಸಿದ್ಧಾರೂಢ ಸ್ವಾಮೀಜಿಯ ಮಹಾ ರಥೋತ್ಸವ ಭಕ್ತ ಸಾಗರದ ಮಧ್ಯೆ ಸೋಮವಾರ ಅದ್ದೂರಿಯಾಗಿ ನಡೆಯಿತು.
ಚಿತ್ರ: ಮಂಜುನಾಥ ಜರತಾರಘರ

ಶಾಸಕ ಸುಬ್ಬಾರೆಡ್ಡಿ ಆಯ್ಕೆ ಅಸಿಂಧು

ಪುಟ ೧➜ ತಪ್ಪು ಮಾಹಿತಿ ಕೊಟ್ಟು ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ವಂಚನೆ ಮಾಡಿದ್ದನ್ನು ಅರ್ಜಿ ಸಲ್ಲಿಸಿದ್ದೆವು ಎಂದು ತಿಳಿಸಿದರು. ಶಾಸಕ ಸ್ಥಾನದಿಂದ ಎಸ್.ಎನ್. ಸುಬ್ಬಾರೆಡ್ಡಿ ಆಯ್ಕೆಯನ್ನು ಅಸಿಂಧುಗೊಳಿಸಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಈ ತೀರ್ಪಿನಿಂದ ನನಗೆ ಖುಷಿಯಿದೆ, ನ್ಯಾಯ ಸಿಕ್ಕಿದೆ. ಸುಬ್ಬಾರೆಡ್ಡಿ ವಿರುದ್ಧ ಸಾವಿರಾರು ಕೋಟಿ ರೂ. ಹಗರಣವಿದೆ. ಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡಿಸಿದ್ದರಿಂದ ತೀರ್ಪು ಬಂದಿದೆ. ಈ ತೀರ್ಪಿನಿಂದ ನ್ಯಾಯಾಲಯದ ಮೇಲೆ ಜನರಲ್ಲಿ ವಿಶ್ವಾಸ ಹೆಚ್ಚಾಗಿದೆ ಎಂದು ಮುನಿರಾಜು ಹೇಳಿದರು.

ನಾನು ಅರ್ಜಿ ಹಾಕಿದ ಮೇಲೆ ಸರ್ಕಾರಕ್ಕೆ ಜಿಎಸ್‌ಟಿ ತೆರಿಗೆ ಕಟ್ಟಿದ್ದಾರೆ: ಪುತ್ರಿಯ ಹೆಸರಿನಲ್ಲಿರುವ ಜಮೀನು ವಿವರ ತೋರಿಸಿರಲಿಲ್ಲ. ಪತ್ನಿಯ ಹೆಸರಿನಲ್ಲಿ ಜಮೀನು, ಕಂಪನಿ ಇದ್ದರೂ ತೋರಿಸಿರಲಿಲ್ಲ. ಕುಣಿಗಲ್ ಶಾಸಕ ಡಾ. ರಂಗನಾಥ್ ಅವರಿಗೆ 23 ಲಕ್ಷ ರೂ. ದುಡ್ಡು ಕೊಟ್ಟಿದ್ದು ತೋರಿಸಿರಲಿಲ್ಲ. ವೈ.ಎ. ನಾರಾಯಣಸ್ವಾಮಿ ಅವರಿಗೂ 28 ಲಕ್ಷ ರೂ ದುಡ್ಡು ಕೊಟ್ಟಿದ್ದು ತೋರಿಸಿಕೊಂಡಿಲ್ಲ. ನಾನು ಅರ್ಜಿ ಹಾಕಿದ ಮೇಲೆ ಸರ್ಕಾರಕ್ಕೆ ಜಿಎಸ್‌ಟಿ ತೆರಿಗೆ ಕಟ್ಟಿದ್ದಾರೆ. ಸಣ್ಣಪುಟ್ಟ ತಪ್ಪಾಗಿದೆ ಎಂದು ಕೋರ್ಟ್ ಮುಂದೆ ಒಪ್ಪಿಕೊಂಡಿದ್ದಾರೆ ಎಂದರು.

ಪ್ರಿಯಾಂಕ್ ಖರ್ಗೆ ಹೇಳಿಕೆ ಸಮರ್ಥಿಸಿಕೊಂಡ ದಿನೇಶ್

ಬೆಳಗಾವಿ: ಕೋಮುವಾದದ ಕಾರಣ ಕರಾವಳಿಯಲ್ಲಿ ಐಟಿ-ಬಿಟಿ ಕಂಪನಿಗಳು ಬಂಡವಾಳ ಹಾಕಲು ಹೆದರುತ್ತಿವೆ ಎಂಬ ಪ್ರಿಯಾಂಕ್ ಖರ್ಗೆ ಅವರ ಅಭಿಪ್ರಾಯವನ್ನು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸಮರ್ಥಿಸಿಕೊಂಡಿದ್ದಾರೆ. ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೋಮು ಸೌಹಾರ್ದತೆ ಕಾಪಾಡುವ ಉದ್ದೇಶದಿಂದ ರಾಜ್ಯ ಸರ್ಕಾರದ ಹಲವು ಕ್ರಮಗಳ ನಂತರ ಪರಿಸ್ಥಿತಿ ಸುಧಾರಿಕೊಂಡಿವೆ. ಪ್ರಿಯಾಂಕ್ ಖರ್ಗೆ ಅವರು ಹೇಳಿದ್ದು ಸರಿಯಿದೆ. ಪರಿಸ್ಥಿತಿ ಸುಧಾರಿಸಿದರೆ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚು ಜನ ಬರುತ್ತಾರೆ ಎಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯಕ್ರಮವೊಂದರಲ್ಲಿ, ಕೋಮುವಾರದ ವಿಚಾರದ ಬಗ್ಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ಕೋಮುವಾದ ಪರಿಸ್ಥಿತಿ ಕಾರಣ ಹೂಡಿಕೆಗೆ ಅಡ್ಡಿಯಾಗಿದೆ ಎಂದರು. ಅಲ್ಲಿನ ಪರಿಸ್ಥಿತಿ ಸುಧಾರಿಸುವ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳಲಾಗುವುದು. ಹಾಗೂ ಅಲ್ಲಿ ಶಾಂತಿಯುತ ವಾತಾವರಣವಿದ್ದು, ಆ ಜಿಲ್ಲೆಯಲ್ಲಿಯೇ ಹೆಚ್ಚಿನ ಮಟ್ಟದಲ್ಲಿ ಹೂಡಿಕೆ ಮಾಡುವ ಪ್ರಯತ್ನ ಮಾಡಿಕೊಳ್ಳಲಾಗುವುದು ಎಂದು ಹೇಳಿದರು. ಸರ್ಕಾರ ಕಾನೂನು ಸುವ್ಯವಸ್ಥೆಯ ಬಗ್ಗೆ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ. ಕಾಂಗ್ರೆಸ್ ಸರ್ಕಾರ ಯಾರ ಪರವಾಗಿಯೂ ಇಲ್ಲ, ಯಾರ ವಿರುದ್ಧವೂ ಇಲ್ಲ. ಯಾರೇ ಆಗಲಿ ಕಾನೂನಿನ ವಿರುದ್ಧ ಕೆಲಸ ಮಾಡಿದರೆ ಅಂತವರ ಮೇಲೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು ಎಂದರು. ಇನ್ನು ಪ್ರವಾಸೋದ್ಯಮದ ಬಗ್ಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಇದರ ಬಗ್ಗೆ ಹೆಚ್ಚಿನ ಮಟ್ಟದಲ್ಲಿ ಒತ್ತು ನೀಡಲಾಗುತ್ತದೆ. ಮಂಗಳೂರಿನಲ್ಲಿ ಫೈವ್ ಸ್ಟಾರ್ ಹೋಟೆಲ್ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ ಎಂದರು.

ನಾನು ಗಾಂಧಿವಾದಿ, ರಾಹುಲ್‌ವಾದಿಯಲ್ಲ

ಪುಟ ೧➜ ರಾಹುಲ್‌ಗಾಂಧಿ ಮತ್ತು ಅವರ ಬೆಂಬಲಿಗರನ್ನು ಟೀಕಿಸಲು, ಅಂಬೇಡ್ಕರ್ ಅವರ ಆತ್ಮಚರಿತ್ರೆ 'ಎ ಪಾರ್ಟ್ ಅಪಾರ್ಟ್' ಉಲ್ಲೇಖಿಸಿದ ಅಯ್ಯರ್, 'ಒಂದು ಭಾಗ ಹೌದು, ಆದರೆ ಬೇರೆ' ಎಂದು ಅದರಲ್ಲಿ ಹೇಳಲಾಗಿದ್ದು, ಇದರಂತೆ ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ. ನಾನು ಪಕ್ಷದ ಸದಸ್ಯ ಎಂಬುದನ್ನು ರಾಹುಲ್ ಗಾಂಧಿ ಮರೆತಿರಬಹುದು. ಆದ್ದರಿಂದ ನಾನು ಒಬ್ಬ ಗಾಂಧಿವಾದಿ, ನಾನೊಬ್ಬ ನೆಹರೂವಾದಿ, ನಾನೊಬ್ಬ ರಾಜೀವ್ ವಾದಿ, ಆದರೆ ನಾನು ರಾಹುಲ್‌ವಾದಿಯಲ್ಲ ಎಂದು ವ್ಯಂಗ್ಯವಾಡಿದರು.

ನಾನು ಕಾಂಗ್ರೆಸ್‌ನಲ್ಲಿದ್ದೇನೆ. ಅದನ್ನು ಬಿಟ್ಟು ಹೋಗಿಲ್ಲ. ಒಂದು ವೇಳೆ ಪವನ್ ಖೇರಾ (ತನ್ನನ್ನು ಟೀಕಿಸಿದ ಕಾಂಗ್ರೆಸ್ ವಕ್ತಾರ-ರಾಹುಲ್ ನಿಷ್ಠ) ನನ್ನನ್ನು ಉಚ್ಚಾಟಿಸಲು ಮುಂದಾದರೆ ನಾನು ಸಂತೋಷದಿಂದ ಹೊರಹೋಗುವೆ ಮತ್ತು ಹೊರಹೋದ ಬಳಿಕ ಹಿಂದಿನಿಂದ ಅವರಿಗೆ ಒದೆಯುವೆ'' ಎಂದರು. ಪವನ್ ಖೇರಾ ಬಗ್ಗೆ ನನಗೆ ಗೌರವ ಇಲ್ಲ, ಹಾಗೆಂದು ಪೂರಾ ತಿರಸ್ಕಾರವೂ ಇಲ್ಲ ಎಂದರು.

ಏನಿದರ ಹಿನ್ನೆಲೆ?: ಇದಕ್ಕೂ ಮುನ್ನ ಭಾನುವಾರ ಕೇರಳದ ಎಡರಂಗ ಆಯೋಜಿಸಿದ್ದ 'ವಿಷನ್ 2031:ಡೆವಲಪ್‌ಮೆಂಟ್ ಅಂಡ್ ಡೆಮಾಕ್ರಸಿ' ಹೆಸರಿನ ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿದ್ದ ಮಣಿಶಂಕರ್ ಅಯ್ಯರ್, ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಶ್ಲಾಘಿಸಿ, ಮುಂಬರುವ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಪಿಣರಾಯಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ಆಶಾವಾದ ವ್ಯಕ್ತಪಡಿಸಿದ್ದರು. ಇದು ಈ ಬಾರಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿರುವ ಕಾಂಗ್ರೆಸ್‌ನಲ್ಲಿ ಭಾರೀ ಬಿರುಗಾಳಿಯನ್ನೇ ಎಬ್ಬಿಸಿತು.

ಆದರೆ, ಅಯ್ಯರ್ ಹೇಳಿಕೆಗೂ ಕಾಂಗ್ರೆಸ್‌ಗೂ ಸಂಬಂಧವಿಲ್ಲ, ಅದು ಅವರ ವೈಯಕ್ತಿಕವಾದುದು. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೆ ಬರಲಿದೆ ಎಂದು ಪವನ್ ಖೇರಾ ಮತ್ತು ಜೈರಾಮ್ ರಮೇಶ್ ತರಾತುರಿಯಲ್ಲಿ ಹೇಳಿಕೆ ನೀಡಿದರು. ಕೇರಳದಲ್ಲಿ ಹೇಗಾದರೂ ಅಧಿಕಾರಕ್ಕೆ ಬರಬೇಕೆಂದು ಹೆಣಗಾಡುತ್ತಿರುವ ಕಾಂಗ್ರೆಸ್ ಇದೀಗ, ರಾಹುಲ್ ನಾಯಕತ್ವದ ವಿರುದ್ಧ ತೀವ್ರ ಅಸಮಾಧಾನ ಹೊಂದಿರುವ ಶಶಿ ತರೂರ್ ಅವರಂತಹವರನ್ನು ಕೂಡ ಮನವೊಲಿಸಿ ಪಕ್ಷದಲ್ಲಿ ಉಳಿಸಿ, ಪಕ್ಷದಲ್ಲಿ ಯಾವುದೇ ಗೊಂದಲ ಇಲ್ಲ ಎಂಬಂತೆ ಬಿಂಬಿಸಲು ಯತ್ನಿಸಿತ್ತು. ಆದರೆ ಅಯ್ಯರ್ ಅವರ ಹೇಳಿಕೆ ಈಗ ಎಲ್ಲ ತಲೆಕೆಳಗಾಗುವಂತೆ ಮಾಡಿದೆ.

ಗಾಂಧಿ ವಿರುದ್ಧ ನೆಹರೂ ಬಂಡಾಯ ಎದ್ದಿದ್ದರು!

ಕೇರಳದ ಜನತೆಗೆ ಕಾಂಗ್ರೆಸ್ ನಾಯಕತ್ವದಲ್ಲಿ ಏನಾಗುತ್ತಿದೆ ಎಂಬುದು ಗೊತ್ತಿಲ್ಲ ಎಂದು ನೀವು ಭಾವಿಸಿದ್ದೀರಾ? ಕನಿಷ್ಠ ಪಕ್ಷ ಪಿಣರಾಯಿ ಸರ್ಕಾರದಲ್ಲಿ ಶಿಸ್ತಾದರೂ ಇದೆ. ಅಲ್ಲಿ ಮಣಿಶಂಕರ್ ಅಯ್ಯರ್‌ಗಳಿಲ್ಲ. ನಾನು ಮಣಿಶಂಕರ್. ಯಾಕೆಂದರೆ, ನೆಹರೂ ಮಹಾತ್ಮಾ ಗಾಂಧಿ ವಿರುದ್ಧ ಬಂಡೆದಿದ್ದರು. ಸುಭಾಷ್ಚಂದ್ರ ಬೋಸ್ ಅವರು ಕೂಡ ಗಾಂಧಿ ವಿರುದ್ಧ ಬಂಡೆದಿದ್ದರು. ಆದರೂ ಗಾಂಧಿ ಅವರು ನೆಹರೂ ಅವರನ್ನು ಪ್ರಧಾನಿಯನ್ನಾಗಿಸಿದರು. ಒಂದು ವೇಳೆ 1945ರ ಆ.17ರ ವಿಮಾನ ದುರಂತದಲ್ಲಿ ಸುಭಾಷ್ಚಂದ್ರ ಬೋಸ್ ಅವರು ಬದುಕುಳಿದಿರುತ್ತಿದ್ದರೆ ಅವರು ಖಂಡಿತವಾಗಿಯೂ ರಾಷ್ಟ್ರಪತಿಗಳಾಗುತ್ತಿದ್ದರು. ಹಾಗಾದರೆ ಅಂದು ಅವರು ಹೇಗೆ ಭಿನ್ನಮತವನ್ನು ನಿಭಾಯಿಸಿದರು ಮತ್ತು ಈಗಿನ ಕಾಂಗ್ರೆಸ್ ಹೇಗೆ ನಿಭಾಯಿಸುತ್ತಿದೆ ಎಂದು ಅವರು ಪ್ರಸಕ್ತ ಗಾಂಧಿ ಕುಟುಂಬದ ನಾಯಕತ್ವವನ್ನು ಉಲ್ಲೇಖಿಸಿ ಹೇಳಿದರು. ಪವನ್ ಖೇರಾ ಒಬ್ಬ ಕೈಗೊಂಬೆ. ಆತ ಕೇವಲ ಪಕ್ಷದ ಸಂಸದ ಜೈರಾಮ್ ರಮೇಶ್ ಏನು ಹೇಳಿಕೊಡುತ್ತಾರೋ ಅದನ್ನು ಪುನರಾವರ್ತಿಸುತ್ತಾರಷ್ಟೇ. ಅವರೊಬ್ಬ ವಕ್ತಾರನಲ್ಲ, ಬದಲಿಗೆ ಒಂದು ಪಂಜರದ ಗಿಣಿ ಎಂದು ಮಣಿಶಂಕರ್ ಖೇರಾ ಜನ್ಮ ಜಾಲಾಡಿದರು.

ವೇಣುಗೋಪಾಲ್ ರೌಡಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯ ಆಪ್ತ ಹಾಗೂ ಪ್ರಸಕ್ತ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಒಬ್ಬ ರೌಡಿ. ಇಂತಹ ವ್ಯಕ್ತಿಯನ್ನು ಸರ್ದಾರ್ ಪಟೇಲ್ ಮಟ್ಟಕ್ಕೆ ರಾಹುಲ್ ಗಾಂಧಿ ಮಟ್ಟಕ್ಕೆ ಎತ್ತರಿಸುವ ಪಕ್ಷದ ಸ್ಥಿತಿ ಏನೆಂಬುದನ್ನು ನೀವು ಊಹಿಸಿಕೊಳ್ಳಿ. ನಾನು ಉತ್ತರವಾಗಿ ಹೇಳಬೇಕಾದುದು ಇಷ್ಟೇ ಎಂದು ಅಯ್ಯರ್ ನುಡಿದರು.

ಇಂದು ವಿದೇಶಕ್ಕೆ ಶಾಸಕರ ತಂಡ

ಪುಟ ೧➜ ಆದರೆ ಹೈಕಮಾಂಡ್ ಕೆಂಗಣ್ಣಿಗೆ ಗುರಿ ಆಗಬಹುದು ಎಂಬ ಪರೋಕ್ಷ ಆತಂಕವೇ ಇದಕ್ಕೆ ಕಾರಣ ಎಂಬುದು ಕೆಲವರು ಅಭಿಪ್ರಾಯ. ಕುಟುಂಬಸಹಿತ ಪ್ರವಾಸಕ್ಕೆ ತೆರಳಲು ಮುಂದಾಗಿದ್ದರೂ ಈ ಪ್ರವಾಸ ರಾಜಕೀಯವಾಗಿ ಸಾಕಷ್ಟು ಸದ್ದು ಮಾಡಿರುವ ಹಿನ್ನೆಲೆಯಲ್ಲಿ ಶಾಸಕರು ಗೊಂದಲಕ್ಕೆ ಒಳಗಾಗಿದ್ದು, ಪ್ರವಾಸ ಹೊರಡಲು ಹಿಂದೇಟು ಹಾಕುತ್ತಿದ್ದಾರೆ. ಇನ್ನು ಕೆಲವು ಶಾಸಕರು ಗಟ್ಟಿ ಮನಸ್ಸು ಮಾಡಿ ಪ್ರವಾಸಕ್ಕೆ ಮುಂದಾಗಿದ್ದಾರೆ. ಹೀಗಾಗಿ ಮಂಗಳವಾರ ರಾತ್ರಿ ಬೆಂಗಳೂರಿನಿಂದ ಆಸ್ಟ್ರೇಲಿಯಾಗೆ ಶಾಸಕರು ಪ್ರವಾಸ ಬೆಳೆಸಲಿದ್ದಾರೆ. ಮಾರ್ಚ್ 1ರಂದು ಮತ್ತೆ ಬೆಂಗಳೂರಿಗೆ ಮರಳಲಿದ್ದಾರೆ. ಕೃಷಿ ಹಾಗೂ ಹೈನುಗಾರಿಕೆ ಕುರಿತಾಗಿ ಅಧ್ಯಯನ ಮಾಡುವ ನಿಟ್ಟಿನಲ್ಲಿ ಈ ಪ್ರವಾಸ ಎಂಬುದು ಶಾಸಕರ ಸಮರ್ಥನೆಯಾಗಿದೆ.

ಶಾಸಕರ ಪ್ರವಾಸ ನಾನಾ ರೀತಿಯ ವ್ಯಾಖ್ಯಾನಕ್ಕೆ ಒಳಗಾಗಿತ್ತು. ನಾಯಕತ್ವ ಬದಲಾವಣೆಯ ಚರ್ಚೆಯ ಸಂದರ್ಭದಲ್ಲಿ ದಿಢೀರ್ ವಿದೇಶಕ್ಕೆ ತೆರಳುತ್ತಿರುವ ಅಗತ್ಯ ಏನಿದೆ ಎಂಬ ಪ್ರಶ್ನೆ ಉದ್ಭವಿಸಿತ್ತು. ಈ ನಡುವೆ ಪಶುಸಂಗೋಪನೆ ಇಲಾಖೆಯಿಂದ ಪ್ರವಾಸ ಆಯೋಜನೆ ಮಾಡಲಾಗಿದೆ ಎನ್ನಲಾಗಿತ್ತು. ಆದರೆ ಸಚಿವ ಕೆ.ವೆಂಕಟೇಶ್ ಅವರು ಇದನ್ನು ನಿರಾಕರಿಸಿದ್ದರು.

ರಾಷ್ಟ್ರೀಯ ಭದ್ರತೆಗೆ ಜಿಟಿಆರ್‌ಇ ಪ್ರಯತ್ನ: ರಾಜನಾಥ್‌ಸಿಂಗ್

ಬೆಂಗಳೂರು: ಆಪರೇಷನ್ ಸಿಂದೂರ ರಕ್ಷಣಾ ವಲಯದಲ್ಲಿ ಭಾರತದ ಬೆಳೆಯುತ್ತಿರುವ ಆತ್ಮನಿರ್ಭರತೆಯನ್ನು ಪ್ರದರ್ಶಿಸಿದೆ. ವಿಶ್ವದರ್ಜೆಯ ದೇಶೀಯವ್ಯವಸ್ಥೆಗಳ ತಯಾರಿಕೆಯತ್ತ ಹೆಚ್ಚಿನ ಗಮನ ಹರಿಸುವ ಅಗತ್ಯವಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಬೆಂಗಳೂರಿನ ಡಿಆರ್‌ಡಿಒ ಅಧೀನದ ಗ್ಯಾಸ್ ಟರ್ಬೈನ್ ಸಂಶೋಧನಾ ಸಂಸ್ಥೆಗೆ (ಜಿಟಿಆರ್‌ಇ) ಭೇಟಿ ನೀಡಿ ಪ್ರಗತಿಯಲ್ಲಿರುವ ದೇಶೀಯ ಮಿಲಿಟರಿ ಗ್ಯಾಸ್ ಟರ್ಬೈನ್ ಇಂಜಿನ್ ಅಭಿವೃದ್ಧಿ ಯೋಜನೆಗಳ ಸ್ಥಿತಿಗತಿಗಳನ್ನು ಪರಾಮರ್ಶಿಸಿದರು.

ಬಳಿಕ ಮಾತನಾಡಿದ ಅವರು, ಏರೋ ಇಂಜಿನ್ ಅಭಿವೃದ್ಧಿಯಲ್ಲಿ ಸ್ವಾವಲಂಬನೆ ಸಾಧಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಆತ್ಮನಿರ್ಭರತೆಯ ಮೂಲಕ ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಜಿಟಿಆರ್‌ಇ ಪ್ರಯತ್ನಗಳನ್ನು ಶ್ಲಾಘಿಸಿದರು ಮತ್ತು ಡಿಆರ್‌ಡಿಒ ಭಾರತದ ಕಾರ್ಯತಂತ್ರದ ಸಾಮರ್ಥ್ಯದ ಅಡಿಪಾಯ ಎಂದು ಬಣ್ಣಿಸಿದರು. ಪ್ರಸ್ತುತ ವೇಗವಾಗಿ ಬದಲಾಗುತ್ತಿರುವ ಭೌಗೋಳಿಕ ರಾಜಕೀಯ ಪರಿಸ್ಥಿತಿಯಲ್ಲಿ ಏರೋ ಇಂಜಿನ್ ತಂತ್ರಜ್ಞಾನದಲ್ಲಿ ಆತ್ಮನಿರ್ಭರತೆ ಸಾಧಿಸುವುದು ಅತ್ಯಂತ ನಿರ್ಣಾಯಕವಾಗಿದೆ ಎಂದು ಅವರು ಹೇಳಿದರು.

ಭಾರತದಲ್ಲಿ ಏರೋ ಇಂಜಿನ್‌ಗಳ ಅಭಿವೃದ್ಧಿಗೆ ಆದ್ಯತೆ ನೀಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ದೇಶೀಯ ನಿರ್ಣಾಯಕ ತಂತ್ರಜ್ಞಾನಗಳನ್ನು ಹೊಂದಿರುವ ರಾಷ್ಟ್ರಗಳು ಮಾತ್ರ ಸುರಕ್ಷಿತವಾಗಿರಲು ಮತ್ತು ತಮ್ಮನ್ನು ತಾವು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಪ್ರತಿಯೊಂದು ಕ್ಷೇತ್ರದಲ್ಲೂ ಸ್ವಾವಲಂಬನೆ ಸಾಧಿಸುವುದು ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಬದ್ಧತೆಯಾಗಿದೆ ಎಂದು ತಿಳಿಸಿದರು.




ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ರಕ್ಷಣಾ ಪಡೆಗಳು ರಕ್ಷಣಾ ವಲಯದಲ್ಲಿ ಭಾರತದ ಬೆಳೆಯುತ್ತಿರುವ ಆತ್ಮನಿರ್ಭರತೆಯನ್ನು ಪ್ರದರ್ಶಿಸಿವೆ. ಸಂವಹನ ವ್ಯವಸ್ಥೆ, ಕಣ್ಗಾವಲು ಸಾಧನಗಳು, ದಾಳಿ ಮಾಡುವ ಶಸ್ತ್ರಾಸ್ತ್ರಗಳೆಲ್ಲವೂ ದೇಶೀಯವಾಗಿದ್ದವು. ಇದು ನಮ್ಮ ಸೈನಿಕರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಿತು. ನಾಗರಿಕರಲ್ಲಿ ಹೆಮ್ಮೆ ಮೂಡಿಸಿತು.
■ ರಾಜನಾಥ್‌ಸಿಂಗ್, ಕೇಂದ್ರ ರಕ್ಷಣಾ ಸಚಿವ

ಕಾಲಕ್ಕಿಂತ ಮುಂದಿರಬೇಕು

ತಂತ್ರಜ್ಞಾನ ಕ್ಷೇತ್ರದಲ್ಲಿ ಜಿಟಿಆರ್‌ಇ ಪ್ರಯತ್ನಗಳು ಶ್ಲಾಘನೀಯವಾಗಿದೆ. ಏರೋ ಇಂಜಿನ್ ಗಳಲ್ಲಿ ಸ್ವಾವಲಂಬನೆ ಸಾಧಿಸುವ ಜೊತೆಗೆ ದೇಶಾದ್ಯಂತ ಬಲವಾದ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಮೂಲಕ ಮುಂದಿನ ಪೀಳಿಗೆಯ ಇಂಜಿನ್‌ಗಳ ಮೇಲೆ ಗಮನ ಹರಿಸಿ. ಸುಧಾರಿತ ಮಧ್ಯಮ ಯುದ್ಧ ವಿಮಾನ ವಿನ್ಯಾಸ ಮತ್ತು ಅಭಿವೃದ್ಧಿಯತ್ತ ವೇಗವಾಗಿ ಸಾಗುತ್ತಿದ್ದೇವೆ. ಏರೋ ಇಂಜಿನ್ ಕ್ಷೇತ್ರದಲ್ಲಿ ಪರಿಣತಿ ಪಡೆಯಲು ನಾವು ಹಿಂದೆ ಹಲವಾರು ಪ್ರಯತ್ನಗಳನ್ನು ಮಾಡಿದ್ದೇವೆ. ಈಗ ಆ ಪ್ರಯತ್ನಗಳನ್ನು ಪೂರ್ಣಗೊಳಿಸುವ ಸಮಯ ಬಂದಿದೆ. ನಾವು ಕೇವಲ 5ನೇ ಪೀಳಿಗೆಯ ಇಂಜಿನ್‌ಗಳಿಗೆ ಸೀಮಿತವಾಗಬಾರದು. ನಾವು ಆದಷ್ಟು ಬೇಗ 6ನೇ ಪೀಳಿಗೆಯ ಸುಧಾರಿತ ತಂತ್ರಜ್ಞಾನಗಳ ಅಭಿವೃದ್ಧಿಯನ್ನು ಪ್ರಾರಂಭಿಸಬೇಕು. ಅವುಗಳ ಮೇಲಿನ ಸಂಶೋಧನೆಯು ಇಂದಿನ ಅಗತ್ಯವಾಗಿದೆ. ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್ ಮತ್ತು ಹೊಸ ವಸ್ತುಗಳ ಬಳಕೆ ಹೆಚ್ಚುತ್ತಿದೆ. ನಾವು ಕಾಲಕ್ಕಿಂತ ಮುಂದಿರಬೇಕೆಂದು ರಾಜನಾಥ್ ಸಿಂಗ್ ಹೇಳಿದರು.

ಮಹಾರಥೋತ್ಸವ...



ತುಮಕೂರು ಸಿದ್ದಗಂಗಾ ಮಠದಲ್ಲಿ ಸೋಮವಾರ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಯ ಮಹಾರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಕಿರುಸುದ್ದಿ

ಫೆ.27ರಂದು ಜೆಡಿಎಸ್ ಬೃಹತ್ ಸಮಾವೇಶ: ನಿಖಿಲ್

ವಿಜಯಪುರ: ಕರ್ನಾಟಕದ ರಾಜಕೀಯ ಇತಿಹಾಸದಲ್ಲಿಯೇ ಜೆಡಿಎಸ್ ಪಕ್ಷ 25 ವಸಂತಗಳನ್ನು ಪೂರ್ಣಗೊಳಿಸಿರುವುದು ಗಮನಾರ್ಹ ದಾಖಲೆಯೇ.



ಹೀಗಾಗಿ ಪಕ್ಷದ ಬೆಳ್ಳಿ ಮಹೋತ್ಸವವನ್ನು ಎಲ್ಲೆಡೆ ಆಚರಣೆ ಮಾಡುವುದು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಸದಾಶಯವಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಸದಾಶಯದ ಭಾಗವಾಗಿ ಎಲ್ಲ ಕಡೆ ಸಮಾವೇಶ, ಕಾರ್ಯಕರ್ತರ ಸಭೆ ಸೇರಿದಂತೆ ವಿವಿಧ ಕಾರ್ಯ ಚಟುವಟಿಕೆಗಳನ್ನು ಸಂಘಟಿಸಲಾಗುತ್ತಿದೆ. ಇದರ ಭಾಗವಾಗಿ ವಿಜಯಪುರದಲ್ಲಿ ಫೆ.27ರಂದು ಕಿತ್ತೂರ ಕರ್ನಾಟಕ ವಿಭಾಗದ ಜೆಡಿಎಸ್ ಬೃಹತ್ ಸಮಾವೇಶ ಸಂಘಟಿಸಲಾಗಿದೆ ಎಂದರು. ಇಲ್ಲಿನ ಸಿಂದಗಿ ಬೈಪಾಸ್ ಬಳಿ ಬೃಹತ್ ಮೈದಾನದಲ್ಲಿ ಈ ಬೃಹತ್ ಸಮಾವೇಶ ನಡೆಯಲಿದೆ. ಈ ಬಗ್ಗೆ ಸಕಲ ಸಿದ್ಧತೆಗಳನ್ನು ಭರದಿಂದ ಕೈಗೊಳ್ಳಲಾಗುತ್ತಿದೆ. 1 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಈ ಸಮಾವೇಶದಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು, ಹಲವಾರು ಮಾಜಿ ಸಚಿವರು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಶಿಕ್ಷಕರ ಡಿಜಿಟಲ್ ಹಾಜರಾತಿ ಶೀಘ್ರ

ಬೆಂಗಳೂರು: ರಾಜ್ಯದ ಶಾಲೆಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಹಾಜರಾತಿ ಡಿಜಿಟಲೀಕರಣಗೊಳ್ಳಲಿದ್ದು, ಶಿಕ್ಷಕರ ಡಿಜಿಟಲ್ ಹಾಜರಾತಿ ತಕ್ಷಣವೇ ಕಡ್ಡಾಯವಾಗಿ ಜಾರಿಗೆ ಬರಲಿದ್ದು, ವಿದ್ಯಾರ್ಥಿಗಳ ಡಿಜಿಟಲ್ ಹಾಜರಾತಿ ಪ್ರಕ್ರಿಯೆ ಮುಂದಿನ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳ್ಳಲಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಯ ಶಿಕ್ಷಕರು, ಪಿಯು ಉಪನ್ಯಾಸಕರು, ಮುಖ್ಯ ಶಿಕ್ಷಕರು, ಪ್ರಾಂಶುಪಾಲರು, ಸಿಬ್ಬಂದಿ, ಇಲಾಖೆಯ ಕಚೇರಿಗಳಲ್ಲಿನ ಬೋಧಕೇತರ ಸಿಬ್ಬಂದಿ ಮತ್ತು ಅಧಿಕಾರಿಗಳು ತಮ್ಮ ಹಾಜರಾತಿಯನ್ನು ಕರ್ತವ್ಯ ಸ್ಥಳದಲ್ಲಿ ಪ್ರತಿದಿನ ಹಾಗು ತರಬೇತಿ ಸಮಯದಲ್ಲಿ ತರಬೇತಿ ಕೇಂದ್ರದಲ್ಲಿ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುವ ಪರೀಕ್ಷೆಯ ಮೌಲ್ಯಮಾಪನ ಸಮಯಯಲ್ಲಿ ಮೌಲ್ಯಮಾಪನ ಕೇಂದ್ರದಲ್ಲಿ ಕಡ್ಡಾಯವಾಗಿ ಡಿಜಿಟಲ್ ಸ್ವರೂಪದಲ್ಲಿ ಹಾಜರಾತಿ ದಾಖಲಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆದೇಶಿಸಿದೆ. ಕರ್ನಾಟಕ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಕರ್ತವ್ಯ) ಮೊಬೈಲ್ ಅಪ್ಲಿಕೇಶನ್‌ನಲ್ಲಿ ಕೃತಕ ಬುದ್ಧಿಮತ್ತೆ (ಎಐ), ಭೌಗೋಳಿಕ ಮಾಹಿತಿ ವ್ಯವಸ್ಥೆಯ ಮೂಲಕ ಜಿಯೋ ಫೆನ್ಸಿಂಗ್ ಮಾಡಿ ಮುಖ ಚಹರೆಯಲ್ಲಿ ಹಾಜರಾತಿಯನ್ನು ದಾಖಲಿಸಿಕೊಳ್ಳಲಾಗುತ್ತದೆ. ಶಿಕ್ಷಕರು, ಸಿಬ್ಬಂದಿ ತಮ್ಮ ಕರ್ತವ್ಯ ಸ್ಥಳದಲ್ಲಿ ಪ್ರತಿದಿನ (ಇನ್ ಟೈಂ, ಔಟ್ ಟೈಂ) ಎರಡು ಬಾರಿ ಹಾಜರಾತಿ ದಾಖಲಿಸುವುದು ಕಡ್ಡಾಯವಾಗಿರಲಿದೆ. ಅಲ್ಲದೇ, 2026-27ನೇ ಶೈಕ್ಷಣಿಕ ವರ್ಷದಿಂದ ನಿರಂತರ ಕಾರ್ಯಕ್ರಮ ದಡಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆ, ಪಿಯು ಕಾಲೇಜುಗಳ ಮಕ್ಕಳ ಹಾಜರಾತಿಯನ್ನು ಮುಖ ಚಹರೆ ಗುರುತಿಸುವ ತಂತ್ರಜ್ಞಾನ ಬಳಸಿ ಸಂಗ್ರಹಿಸಲು ಇಲಾಖೆ ಮುಂದಾಗಿದೆ. ಇ-ಆಡಳಿತ ಇಲಾಖೆ 2.16 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿರುವ ಕೃತಕ ಬುದ್ಧಿಮತ್ತೆ ಆಧಾರಿತ ವಿದ್ಯಾರ್ಥಿಗಳ ಮುಖ ಚಹರೆ ಮೇಲ್ವಿಚಾರಣೆ ವ್ಯವಸ್ಥೆಯನ್ನು ಮುಂದಿನ ಶೈಕ್ಷಣಿಕ ವರ್ಷದ ಆರಂಭದಿಂದಲೇ ಸರ್ಕಾರಿ ಮತ್ತು ಅನುದಾನಿತ ಶಾಲಾ ಕಾಲೇಜುಗಳಲ್ಲಿ ಜಾರಿಗೊಳಿಸಲು ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯ ಕೈಗಾರಿಕಾ ನಿಗಮದ ಅಧ್ಯಕ್ಷ ನಂಜಯ್ಯನಮಠ ಭರವಸೆ
ಶೀಘ್ರ ರಾತ್ರಿ ವಿಮಾನ ಸಂಚಾರ

ಶಿವಮೊಗ್ಗ: ಮುಂದಿನ ಆರೇಳು ತಿಂಗಳಲ್ಲಿ ಇಲ್ಲಿನ ವಿಮಾನ ನಿಲ್ದಾಣದಲ್ಲಿ ರಾತ್ರಿಯೂ ವಿಮಾನಗಳು ಸಂಚರಿಸಲು ಅನುಕೂಲವಾಗುವಂತೆ ಅಗತ್ಯವಿರುವ ಎಲ್ಲಾ ಕ್ರಮ ಕೈಗೊಳ್ಳಲಾಗುವುದು. ಈ ತಿಂಗಳ ಅಂತ್ಯದೊಳಗಾಗಿ ಸುಮಾರು 6 ಕೋಟಿ ರೂ. ವೆಚ್ಚದ ಕಾಮಗಾರಿ ಆರಂಭಗೊಳ್ಳಲಿವೆ ಎಂದು ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ನಂಜಯ್ಯನಮಠ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೈಟ್ ಲ್ಯಾಂಡಿಂಗ್ ವ್ಯವಸ್ಥೆ ಕಲ್ಪಿಸಲು ನಿಯಮಾನುಸಾರ ಮಣ್ಣನ್ನು ಗುಣಮಟ್ಟದ ಪರೀಕ್ಷೆಗಾಗಿ ರವಾನಿಸಲಾಗಿದ್ದು, ಇನ್ನೊಂದು ವಾರದಲ್ಲಿ ವರದಿ ಬರುವ ನಿರೀಕ್ಷೆ ಇದೆ. ಈ ಎಲ್ಲಾ ಕಾಮಗಾರಿಗಳ ಸಕಾಲಿಕ ಪರಿಶೀಲನೆಗಾಗಿ ತಾವು ಖುದ್ದಾಗಿ ಆಗಮಿಸಿ, ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವುದಾಗಿ ಅವರು ತಿಳಿಸಿದರು.

ಈ ಹಿಂದೆ ವಿಮಾನ ನಿಲ್ದಾಣದ ಪರವಾನಗಿ ನವೀಕರಣದ ಸಮಸ್ಯೆಯನ್ನು ಇತ್ಯರ್ಥಗೊಳಿಸಿ, ಆಡಳಿತಾತ್ಮಕ ಅಡತಡೆಗಳನ್ನು ನಿವಾರಿಸಿಕೊಳ್ಳಲಾಗಿದೆ. ಬಾಕಿ ಇದ್ದ 22 ಲಕ್ಷ ರೂ. ದಂಡ ಪಾವತಿಸಲಾಗಿದ್ದು, ಮುಂದಿನ ಮೂರು ವರ್ಷಗಳ ಅವಧಿಗೆ ಪರವಾನಗಿ ನವೀಕರಿಸುವ ಅಗತ್ಯವಿಲ್ಲ ಎಂದರು.

ಹವಾಮಾನ ವೈಪರೀತ್ಯ ಹಾಗೂ ಮತ್ತಿತರ ಹಲವು ಕಾರಣಗಳಿಗಾಗಿ ಇಳಿಯಬೇಕಾದ ವಿಮಾನಗಳು ಇಳಿಯದೇ ಹಿಂದಿರುಗಿ ಹೋಗುವುದನ್ನು ನಿಯಂತ್ರಿಸಲು, ರಾತ್ರಿ ಸಂಚಾರಕ್ಕೆ ಮತ್ತು ಸರಕು ಸಾಗಾಣಿಕೆಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಅಗತ್ಯವಾಗಿರುವ ದಿಕ್ಸೂಚಿ ಯಾಂತ್ರಿಕ ವ್ಯವಸ್ಥೆ (DBOR)ಗೆ ಟೆಂಡರ್‌ಪ್ರಕ್ರಿಯೆ ಪೂರ್ಣಗೊಂಡಿದೆ.



ಪಂಚತಾರಾ ಹೋಟೆಲ್

ವಿಮಾನ ನಿಲ್ದಾಣದಲ್ಲಿ ಈಗಾಗಲೇ ಕಾಯ್ದಿರಿಸಲಾಗಿರುವ 17 ಎಕರೆ ನಿವೇಶನದಲ್ಲಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣ ಮತ್ತು ಪಂಚತಾರಾ ಹೋಟೆಲ್ ನಿರ್ಮಿಸುವ ಕುರಿತು ಈಗಾಗಲೇ ನಿಗಮದ ಸಭೆಯಲ್ಲಿ ಸಮಾಲೋಚನೆ ನಡೆಸಲಾಗಿದೆ. ಶೀಘ್ರದಲ್ಲಿ ಈ ವಿಷಯದ ಕುರಿತು ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು ಎಂದರು. ಇಲ್ಲಿ ಪೈಲೆಟ್ ತರಬೇತಿ ಕೇಂದ್ರ ಆರಂಭಿಸಲು ಈ ಹಿಂದೆ ಖಾಸಗಿ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರೆ, ಯಾವುದೇ ಕಂಪನಿಗಳು ಆಸಕ್ತಿ ತೋರಿ ಮುಂದೆ ಬಂದಿಲ್ಲ. ಆದರೂ ಪೈಲೆಟ್ ತರಬೇತಿ ಕೇಂದ್ರ ಆರಂಭಿಸಲು ಇನ್ನೊಮ್ಮೆ ಆಸಕ್ತ ತರಬೇತಿ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದು ಎಂದರು.

ವಿದ್ಯುತ್ ಸಂಪರ್ಕ ವ್ಯವಸ್ಥೆಯೂ ಪೂರ್ಣಗೊಂಡಿದೆ ಎಂದರು.

ಉಡಾನ್ ಯೋಜನೆ ಮುಂದುವರಿಸಲು ಮನವಿ: ಶಿವಮೊಗ್ಗದಿಂದ ಬೆಂಗಳೂರು, ಚೆನ್ನೈ, ಹೈದ್ರಾಬಾದ್, ಗೋವಾ ಸೇರಿದಂತೆ ಹಲವು ಪ್ರದೇಶಗಳಿಗೆ ತೆರಳುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಕೇಂದ್ರ ಪುರಸ್ಕೃತ ಹಾಗೂ ವಿಮಾನ ಪ್ರಯಾಣಕ್ಕೆ ರಿಯಾಯಿತಿ ಒದಗಿಸುವ ಉಡಾನ್ ಯೋಜನೆಯ ಅವಧಿ ಶೀಘ್ರದಲ್ಲಿ ಮುಕ್ತಾಯಗೊಳ್ಳಲಿದೆ. ಆದ್ದರಿಂದ ಪ್ರಯಾಣಿಕರಿಗೆ ಹೆಚ್ಚಿನ ಪ್ರಯಾಣದರ ಪಾವತಿಸುವ ಹೊರೆ ಬೀಳದಂತೆ ನೋಡಿಕೊಳ್ಳಲು ಸ್ಥಳೀಯ ಸಂಸದರು ಹಾಗೂ ಜನಪ್ರತಿನಿಧಿಗಳ ಸಹಕಾರವನ್ನು ಪಡೆದು, ಸದರಿ ಯೋಜನೆಯನ್ನು ಮುಂದುವರೆಸಲು ಕೇಂದ್ರ ವಿಮಾನಯಾನ ಸಚಿವರಿಗೆ ಮನವಿ ಮಾಡಲಾಗುತ್ತದೆ ಎಂದರು. ಸಭೆಯಲ್ಲಿ ವಿಮಾನ ನಿಲ್ದಾಣದ ಮುಖ್ಯಸ್ಥ ಕಮಾಂಡರ್ ಶಮಂತ್, ವಿದ್ಯಾಧರ್ ಸಾಲಿಮಠ್ ಇದ್ದರು.

ತಲಾ ಒಂದು ನಿವೇಶನ

ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ಭೂಮಿ ನೀಡಿ ಸಹಕರಿಸಿದ ರೈತರ 370 ಕುಟುಂಬಗಳಿಗೆ ಅಂದಿನ ಅಧಿಕಾರಿ-ಜನಪ್ರತಿನಿಧಿಗಳು ನೀಡಿದ ಭರವಸೆಯಂತೆ ತಲಾ ಒಂದು ನಿವೇಶನ ನೀಡಿರುವುದಿಲ್ಲ. ಈ ಬಗ್ಗೆ ಸಂತ್ರಸ್ತರು ಅನೇಕ ಬಾರಿ ಸರ್ಕಾರದ ಗಮನ ಸೆಳೆಯುವ ಕಾರ್ಯ ಮಾಡಿದ್ದಾರೆ. ಅಲ್ಲದೇ ನ್ಯಾಯಾಲಯವೂ ಕೂಡ ಸಂತ್ರಸ್ತರ ಪರವಾಗಿ ತೀರ್ಪು ನೀಡಿರುವುದು ಗಮನಕ್ಕೆ ಬಂದಿದೆ. ಈ ಸಮಸ್ಯೆಯ ಇತ್ಯರ್ಥಗೊಳಿಸಲು ಖುದ್ದಾಗಿ ಮುಖ್ಯಮಂತ್ರಿಗಳ ಗಮನಸೆಳೆದು ಅಗತ್ಯವಿರುವ ಅನುದಾನ ಬಿಡುಗಡೆಗೆ ಮನವಿ ಮಾಡಲಾಗುತ್ತದೆ ಎಂದರು.

ಔಷಧ ಸರಬರಾಜಿಗೆ ವಿಜಯೇಂದ್ರ ಆಗ್ರಹ

ಬೆಂಗಳೂರು: ಶಾಸಕರಿಗೆ ವಿದೇಶ ಪ್ರವಾಸ ಭಾಗ್ಯ ದಯಪಾಲಿಸಿದ ಮುಖ್ಯಮಂತ್ರಿಯವರು ಆರೋಗ್ಯ ಸಚಿವರನ್ನೂ ಆಸ್ಟ್ರೇಲಿಯ, ನ್ಯೂಜಿಲೆಂಡ್‌ಗೆ ಕಳಿಸಿದರೆ ಬಡವರ ಪರಿಸ್ಥಿತಿ ಏನಾದೀತು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕಳವಳ ವ್ಯಕ್ತಪಡಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರಾಮೀಣ ಭಾಗದ ಸರ್ಕಾರಿ ಆಸ್ಪತ್ರೆಗಳಲ್ಲಿ ಇದೀಗ ಔಷಧಿ ಸಿಗದೇ ಬಡಜನರು ಪರದಾಡುತ್ತಿದ್ದಾರೆ. ಎಷ್ಟೋ ಕಡೆ ಶಸ್ತ್ರಚಿಕಿತ್ಸೆಗಳನ್ನು ಮುಂದೂಡಿದ ಮಾಹಿತಿ ಬರುತ್ತಿದೆ. ಆರೋಗ್ಯ ಇಲಾಖೆ ಸಚಿವರು, ಮುಖ್ಯಮಂತ್ರಿಗಳು ಇದರ ಕುರಿತು ಗಮನ ಹರಿಸುತ್ತಿಲ್ಲ, ಸಚಿವರು, ಶಾಸಕರನ್ನು ಹೊರಕ್ಕೆ ಕಳಿಸುವ ಮುಂಚಿತವಾಗಿ ಔಷಧಿ ಸಮರ್ಪಕ ಸರಬರಾಜಿಗೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪ್ರಿಯತೆಯನ್ನು ಸಹಿಸಲು ಸಾಧ್ಯವಾಗದೇ ಜನೌಷಧಿ ಕೇಂದ್ರಗಳಿಗೂ ಕಲ್ಲು ಹಾಕುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿತ್ತು. ಗ್ರಾಮೀಣ ಭಾಗದಲ್ಲಿ ಕೃತಕವಾಗಿ ಔಷಧಿ ಕೊರತೆಯನ್ನು ಸೃಷ್ಟಿಸಿ, ಟೆಂಡರ್ ಕರೆಯದೇ ತುರ್ತು ಖರೀದಿ ಎಂದು ಕಳ್ಳ ದಂಧೆ ಮಾಡಲು ಸರ್ಕಾರ ಹೊರಟಿದೆಯೇ ಎಂಬ ವಿಚಾರ ರಾಜ್ಯದ ಜನರ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ರಾಜ್ಯ ಸರ್ಕಾರ, ಸಚಿವರು ಎಚ್ಚೆತ್ತುಕೊಂಡು ಇದರ ಕುರಿತು ಗಮನ ಹರಿಸಬೇಕು. ಈ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಎನ್.ಎಸ್. ನಂದೀಶ್ ರೆಡ್ಡಿ, ವಿಪ ಸದಸ್ಯ ಶಾಂತಾರಾಮ ಬುದ್ನ ಸಿದ್ದಿ, ಚಾಮರಾಜನಗರ ಜಿಲ್ಲಾಧ್ಯಕ್ಷ ಮತ್ತು ಮಾಜಿ ಶಾಸಕ ನಿರಂಜನ್ ಕುಮಾರ್ ಉಪಸ್ಥಿತರಿದ್ದರು.

ಕನಿಷ್ಠ ಒಂದು ಸಾವಿರ ಕೋಟಿ ಕೊಡಿಸಿ

ಶೋಷಿತ- ಪೀಡಿತ ಸಮುದಾಯಗಳ ಯುವಜನರ ಅಭಿವೃದ್ಧಿಗಾಗಿ ಹಿಂದೆ ಯಡಿಯೂರಪ್ಪನವರು ವಿವಿಧ ಮಂಡಳಿಗಳ ಮೂಲಕ 550 ಕೋಟಿ ನೀಡಿದ್ದರು. ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಿದರೆ ಕನಿಷ್ಠ ಒಂದು ಸಾವಿರ ಕೋಟಿ ಕೊಡಿಸಿ ಎಂದು ಒತ್ತಾಯವನ್ನು ಮುಂದಿಟ್ಟರು. ಪರಿಶಿಷ್ಟ ವರ್ಗ, ಪಂಗಡಗಳಿಗೂ ಶಕ್ತಿ ತುಂಬಿ ಎಂದು ಆಗ್ರಹಿಸಿದರು.

400 ಕೋಟಿ ರೂ. ದರೋಡೆ ಪ್ರಕರಣಕ್ಕೆ ಟ್ವಿಸ್ಟ್
ದರೋಡೆ ನಡೆದಿಲ್ಲ: ಎಸ್‌ಐಟಿ

ಬೆಳಗಾವಿ: ಗೋವಾ-ಕರ್ನಾಟಕ ಗಡಿಯ ಚೋರ್ಲಾ ಘಾಟನಲ್ಲಿ 400 ಕೋಟಿ ರೂ. ದರೋಡೆ ಪ್ರಕರಣಕ್ಕೆ ಈಗ ಮತ್ತೊಂದು ಟ್ವಿಸ್ಟ್ ಪಡೆದುಕೊಂಡಿದ್ದು, ಈ ಘಟನೆ ನಡೆದದ್ದೇ ಸುಳ್ಳು ಎಂಬ ಅನುಮಾನಕ್ಕೆ ಬಲ ಸಿಕ್ಕಿದೆ.

ಬೆಳಗಾವಿ ಸಮೀಪದ ಗಡಿ ಪ್ರದೇಶದಲ್ಲಿ ಹಣ ಸಾಗಿಸುತ್ತಿದ್ದ ಎರಡು ಕಂಟೇನರ್‌ಗಳನ್ನು ದರೋಡೆ ಮಾಡಲಾಗಿದೆ ಎಂದು ನೀಡಿದ್ದ ದೂರಿನ ಮೇಲೆ ಮಹಾರಾಷ್ಟ್ರ ಸರ್ಕಾರ ಎಸ್‌ಐಟಿ ರಚಿಸಿ ತನಿಖೆ ನಡೆಸಿತ್ತು. ಸುಮಾರು ಒಂದು ತಿಂಗಳು ತನಿಖೆ ನಡೆಸಿದ ಎಸ್‌ಐಟಿ ತಂಡ, ಬೆಳಗಾವಿ ಖಾನಾಪುರ ತಾಲೂಕಿನ ಚೋರ್ಲಾ ಘಾಟ್‌ಬಳಿ ದರೋಡೆ ನಡೆದಿದೆ ಎಂಬುದಕ್ಕೆ ಯಾವುದೇ ಸಾಕ್ಷ್ಯ ಸಿಕ್ಕಿಲ್ಲ ಎಂದು ವರದಿ ಸಲ್ಲಿಸಿದೆ ಎಂದು ತಿಳಿದು ಬಂದಿದೆ.

ದೂರು ನೀಡಿದ್ದ ಸಂದೀಪ್ ಪಾಟೀಲ್ ಹೇಳಿಕೆಯಲ್ಲಿ ಸ್ಥಳ, ಸಮಯ, ಪ್ರಯಾಣ ಮಾರ್ಗ ಹಾಗೂ ಕರೆ ವಿವರಗಳಲ್ಲಿ ಗಂಭೀರ ವ್ಯತ್ಯಾಸಗಳು ಕಂಡು ಬಂದಿವೆ ಎಂಬುದು ಎಸ್‌ಐಟಿ ತನಿಖೆಯಲ್ಲಿ ಬಹಿರಂಗವಾಗಿದೆ ಎಂಬುವುದರ ಬಗ್ಗೆ ತಿಳಿದು ಬಂದಿದೆ. ಖಾನಾಪುರ್ರ ತಾಲೂಕಿನ ಚೋರ್ಲಾ ಘಾಟ್‌ನಲ್ಲಿ ಯಾವುದೇ ದರೋಡೆ ನಡೆದಿಲ್ಲ ಎಂದು ಎಸ್ ಐಟಿ ಸ್ಪಷ್ಟಪಡಿಸಿದೆ. ಹೀಗಾಗಿ ಸಾಕ್ಷ್ಯಗಳ ಕೊರತೆಯಿಂದ ಪ್ರಕರಣದಲ್ಲಿ ಬಂಧಿತರಾಗಿದ್ದ ಆರೋಪಿಗಳನ್ನು ನ್ಯಾಯಾಲಯ ಸೋಮವಾರ ಬಿಡುಗಡೆ ಮಾಡಲಾಗುವುದು ಎಂದು ಕೆಲ ಮೂಲಗಳು ತಿಳಿಸಿವೆ.

ಈ ಘಟನೆಯಿಂದ ಕರ್ನಾಟಕ-ಮಹಾರಾಷ್ಟ್ರ ಎರಡೂ ರಾಜ್ಯಗಳಲ್ಲಿ ಭಾರೀ ಸಂಚಲನ ಮೂಡಿಸಿತ್ತು. ಸುಳ್ಳು ದೂರು ನೀಡಿದ ಆರೋಪದ ಮೇಲೆ ಸಂದೀಪ್ ಪಾಟೀಲ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನಾಸಿಕ್ ಪೊಲೀಸರಿಂದ ಮಾಹಿತಿ ಕೂಡ ಲಭ್ಯವಾಗಿದೆ ಎನ್ನಲಾಗುತ್ತಿದೆ.

ಏನಿದು 400 ಕೋಟಿ ರೂ.ದರೋಡೆ ಪ್ರಕರಣ?

ಬೆಳಗಾವಿಯ ಚೋರ್ಲಾ ಘಾಟ್ ಪ್ರದೇಶದಲ್ಲಿ 2025ರ ಅಕ್ಟೋಬರ್ 25ರಂದು 2 ಕಂಟೇನರ್‌ಗಳಲ್ಲಿದ್ದ ಸುಮಾರು 400 ಕೋಟಿ ರೂ. ನಗದು ಹಣ ದರೋಡೆ ಮಾಡಲಾಗಿತ್ತು ಎಂದು ಮಹಾರಾಷ್ಟ್ರದ ನಾಸಿಕ್ ಮೂಲದ ಉದ್ಯಮಿ ಸಂದೀಪ್ ದತ್ತಾ ಪಾಟೀಲ್ ಇತ್ತೀಚೆಗೆ ಮಹಾರಾಷ್ಟ್ರ ಪೊಲೀಸರಿಗೆ ದೂರು ನೀಡಿದ್ದರು. ಅವರು ದೂರು ನೀಡಿದ ನಂತರ ಪ್ರಕರಣ ಬೆಳಕಿಗೆ ಬಂದಿದ್ದು ದೇಶದಾದ್ಯಂತ ಸಂಚಲನ ಮೂಡಿಸಿತ್ತು. ದೂರುದಾರರ ಪ್ರಕಾರ ದರೋಡೆಯಾದ ಹಣ ಗುಜರಾತ್ ಮೂಲದ ಬಿಲ್ಡರ್ ಕಿಶೋರ್ ಸವಲಾ ಸೇಠ್ ಅವರಿಗೆ ಸೇರಿದ್ದು, ಅದರಲ್ಲಿ ರದ್ದಾದ 2,000 ರೂ.ಮುಖ ಬೆಲೆಯ ನೋಟುಗಳೂ ಇದ್ದವು ಎನ್ನಲಾಗಿದೆ. ಆದರೆ ಇದೀಗ, ಅಂಥದ್ದೊಂದು ಪ್ರಕರಣ ನಡೆದಿರುವ ಸಾಧ್ಯತೆಯನ್ನೇ ಮಹಾರಾಷ್ಟ್ರ ಎಸ್‌ಐಟಿ ಅಲ್ಲಗಳೆದಿದೆ. ಜತೆಗೆ, ವರದಿಯನ್ನೂ ಸಿದ್ಧಪಡಿಸಿದೆ.

ಎಫ್‌ಐಆರ್ ದಾಖಲಿಸಲು ಒತ್ತಾಯ

ದೂರುದಾರ ಸಂದೀಪ್ ಪಾಟೀಲ್ ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಭಾನುವಾರ ಪತ್ರ ಬರೆದು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ. ಮಹಾರಾಷ್ಟ್ರ ಎಸ್‌ಐಟಿ ಪಾರದರ್ಶಕ ತನಿಖೆ ನಡೆಸುತ್ತಿಲ್ಲ. ಪ್ರಕರಣಕ್ಕೆ ಸಂಬಂಧಿಸಿದ ಆಡಿಯೋ ದಾಖಲೆಗಳು ನನ್ನ ಬಳಿ ಇವೆ ಎಂದು ತಿಳಿಸಿದ್ದು, ಆ ದಾಖಲೆಗಳ ಆಧಾರದಲ್ಲಿ ಮರು ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.

ಸತ್ಯಶೋಧನಾ ವರದಿ ಎಐಸಿಸಿಗೆ: ಉಗ್ರಪ್ಪ

ಶಿವಮೊಗ್ಗ: ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿದ್ದರ ಬಗ್ಗೆ ಕಾಂಗ್ರೆಸ್ ಸತ್ಯಶೋಧನಾ ಸಮಿತಿ ವರದಿ ಸಿದ್ಧಪಡಿಸಿ ಕೆಪಿಸಿಸಿಗೆ ನೀಡಿತ್ತು. ವರದಿ ಎಐಸಿಸಿಗೂ ತಲುಪಿದೆ ಎಂದು ಮಾಜಿ ಸಂಸದ, ಸಮಿತಿ ಅಧ್ಯಕ್ಷರೂ ಆದ ವಿ.ಎಸ್. ಉಗ್ರಪ್ಪ ಹೇಳಿದರು.



ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಶಿವಮೊಗ್ಗವೂ ಸೇರಿ ರಾಜ್ಯದೆಲ್ಲೆಡೆ ಪ್ರವಾಸ ಮಾಡಿ ಸತ್ಯದ ವರದಿಯನ್ನೇ ನೀಡಿದ್ದೇನೆ. ವರದಿ ನೀಡುವುದಷ್ಟೇ ನನ್ನ ಕೆಲಸವಾಗಿತ್ತು. ಅಷ್ಟು ಕೆಲಸವನ್ನು ಮಾಡಿದ್ದೇನೆ. ವರದಿಯನ್ನು ನೋಡಿ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿ ಹೈಕಮಾಂಡ್‌ಗೆ ಬಿಟ್ಟಿದ್ದು ಎಂದರು.

ಎಸ್ಸಿ/ಎಸ್ಟಿ ಮೀಸಲಾತಿ ಹೆಚ್ಚಿಸಿ

ಮೀಸಲಾತಿಯನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಜಾರಿಗೊಳಿಸದೇ ರಾಜ್ಯದ ವಾಲ್ಮೀಕಿ ಜನಾಂಗ ಸೇರಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸುಮಾರು 4 ಕೋಟಿ ಜನರಿಗೆ ಕೇಂದ್ರ ಸರ್ಕಾರ ಅನ್ಯಾಯ ಮಾಡಿದೆ ಎಂದು ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷರೂ ಆಗಿರುವ ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು. ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸದ ಹೊರತು ಅದು ಜಾರಿಯಾಗುವುದಿಲ್ಲ. ಇದರಿಂದ ಕೋಟ್ಯಂತರ ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗಲಿದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ತಮ್ಮ ಇಚ್ಛಾಶಕ್ತಿ ಪ್ರದರ್ಶಿಸಬೇಕು. ಸಿಎಂ ಸಿದ್ದರಾಮಯ್ಯ ಅವರು ಪ್ರಧಾನಿ ಬಳಿ ಸರ್ವಪಕ್ಷ ನಿಯೋಗ ಕರೆದೊಯ್ಯುವಂತೆ ಒತ್ತಾಯಿಸಿದರು.

ಸೋಮವಾರದಿಂದಲೇ ಪರಿಷ್ಕೃತ ದರ ಜಾರಿ

ಬೆಂಗಳೂರು: ಡೀಸೆಲ್ ದರ ಹೆಚ್ಚಳ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಸಾಗಿಸುವ ಲಗೇಜ್ ದರವನ್ನು ಪರಿಷ್ಕರಿಸಲಾಗಿದ್ದು, ಪರಿಷ್ಕೃತ ದರ ಸೋಮವಾರದಿಂದಲೇ ಜಾರಿಗೆ ಬಂದಿದೆ. ಡೀಸೆಲ್, ಸಿಬ್ಬಂದಿ ಹಾಗೂ ಇತರೆ ವೆಚ್ಚಗಳ ಹೆಚ್ಚಳ ಹಿನ್ನೆಲೆಯಲ್ಲಿ ನಿಗಮದ ಬಸ್‌ಗಳಲ್ಲಿ ಸಾಗಿಸುವ ಲಗೇಜ್ ದರವನ್ನು ಪರಿಷ್ಕರಿಸಲಾಗಿದೆ. ಪ್ರತಿ ಬಾರಿಯೂ ಲಗೇಜು ದರ ಏರಿಕೆ ಬಸ್ ಪ್ರಯಾಣ ದರ ಏರಿಕೆಯೊಂದಿಗೆ ಆಗುತ್ತದೆ. ಕಳೆದ ವರ್ಷ ಜನವರಿಯಲ್ಲಿ ಬಸ್ ಪ್ರಯಾಣ ದರ ಏರಿಕೆಯಾಗಿತ್ತು. ಆದರೆ, ಲಗೇಜು ದರ ಏರಿಕೆ ಮಾಡಿರಲಿಲ್ಲ. ಇನ್ನು ಯಾವಾಗಲೂ ಬಸ್ ಪ್ರಯಾಣ ದರ ಎಷ್ಟು ಹೆಚ್ಚಾಗಿರುತ್ತದೆಯೋ ಅಷ್ಟೇ ಲಗೇಜು ದರವೂ ಹೆಚ್ಚಾಗುತ್ತದೆ. ಕಳೆದ ಬಾರಿ ಶೇ.15 ಬಸ್ ಪ್ರಯಾಣ ದರ ಹೆಚ್ಚಾಗಿತ್ತು. ಅದರಂತೆ ಈ ಬಾರಿ ಲಗೇಜು ದರವು ಶೇ.15 ಹೆಚ್ಚಾಗಿದೆ.

ಪರಿಷ್ಕೃತ ಲಗೇಜ್ ದರ

ಹಂತ	ಹಳೇ ದರ	ಪರಿಷ್ಕೃತ ದರ
1-5	₹5	₹6
6-10	₹10	₹12
11-15	₹14	₹20
16-20	₹18	₹25
21-25	₹21	₹28

ಜನರ ತೆರಿಗೆ ಹಣ ಜಾಹೀರಾತಿಗೆ ಖರ್ಚು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ
ರಾಜ್ಯದಲ್ಲಿ ಎನ್‌ಡಿಎಗೆ ಪೂರ್ಣ ಬಹುಮತ

ಚಿಕ್ಕನಾಯಕನಹಳ್ಳಿ: ರಾಜ್ಯದ ಜನರಿಗೆ ಇನ್ನೊಬ್ಬರಿಗೆ ಕೊಡುವ ಶಕ್ತಿಯನ್ನು ಕೊಡಬೇಕಿತ್ತು. ಆದರೆ, ದಿನನಿತ್ಯ ಇನ್ನೊಬ್ಬರ ಮುಂದೆ ಕೈಯೊಡ್ಡುವ ಪರಿಸ್ಥಿತಿಗೆ ಜನರನ್ನು ದೂಡಲಾಗಿದೆ. ರಾಜ್ಯದ ತೆರಿಗೆ ಹಣವನ್ನು ಜಾಹಿರಾತಿಗೆ ಬಳಸುತ್ತಿದ್ದಾರೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.



ಪಟ್ಟಣದ ಹೈಸ್ಕೂಲ್ ಮೈದಾನದಲ್ಲಿ ಸೋಮವಾರ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ಆಯೋಜಿಸಲಾಗಿದ್ದ ಜನಸ್ಪಂದನದ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದರು. ಜನರು ಬುದ್ಧಿವಂತರಾಗಬೇಕು. ಇನ್ನೊಬ್ಬರಿಗೆ ಕೊಡುವ ಶಕ್ತಿ ತಮಗೆ ಬರದೇ ಇರುವ ಬಗ್ಗೆ ಅವರು ಆಲೋಚನೆ ಮಾಡಬೇಕು. ಮಹಾತ್ಮ ಗಾಂಧೀಜಿ ಅವರ ರಾಮರಾಜ್ಯದ ಕನಸು ನನಸು ಎಂದರೆ ತಾನು ಒಬ್ಬರ ಮುಂದೆ ಕೈಚಾಚುವುದು ಅಲ್ಲ, ಇನ್ನೊಬ್ಬರಿಗೆ ಕೊಡುವುದು ಎಂದು ಕೇಂದ್ರ ಸಚಿವರು ಹೇಳಿದರು. ಪರೋಕ್ಷವಾಗಿ ಅವರು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿಗಳ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂದು ನಾನು ಹೇಳುವುದಿಲ್ಲ, ಆದರೆ, ಜನರನ್ನು ಶಾಶ್ವತವಾಗಿ ಆರ್ಥಿಕ ಸಬಲರನ್ನಾಗಿ ಮಾಡುವಷ್ಟು ಸಂಪನ್ಮೂಲ ರಾಜ್ಯದಲಿದೆ ಎಂದು ಎಂದಷ್ಟೇ ನಾನು ಹೇಳುತ್ತಿದ್ದೇನೆ ಎಂದವರು ನುಡಿದರು. ಅಭಿವೃದ್ಧಿ ಎನ್ನುವುದು ಪ್ರಚಾರದಲ್ಲಿ ಮಾತ್ರ ಕಾಣುತ್ತಿದೆ. ಕೇವಲ ಜಾಹೀರಾತುಗಳಲ್ಲಿ ಅಭಿವೃದ್ಧಿ ಕಾಣುತ್ತಿದೆ. ನೂರಾರು ಕೋಟಿ ಜನರ ತೆರಿಗೆ ಹಣವನ್ನು ಪೋಲು ಮಾಡಿ ಜಾಹೀರಾತು ನೀಡಲಾಗುತ್ತಿದೆ. ನಾನು ಎರಡು ಬಾರಿ ಮುಖ್ಯಮಂತ್ರಿ ಆಗಿದ್ದಾಗ ಸಾಕಷ್ಟು ಜನಪರ ಕೆಲಸಗಳನ್ನು ಮಾಡಿದ್ದೇನೆ.

ಆದರೆ, ಅದನ್ನು ಪ್ರಚಾರಕ್ಕೆ ಬಳಕೆ ಮಾಡಿಕೊಳ್ಳಲಿಲ್ಲ. ಈಗ ನೋಡಿದರೆ ಕೆಲಸಕ್ಕಿಂತ ಪ್ರಚಾರವೇ ಜಾಸ್ತಿಯಾಗಿದೆ ಎಂದು ಅವರು ಟೀಕಿಸಿದರು. ಪ್ರಚಾರಕ್ಕಿಂತ ಕರ್ತವ್ಯವೇ ಮಿಗಿಲು ಎಂದು ನಾನು ನಂಬಿದ್ದೇನೆ. ಕೇವಲ ರಾಜಕೀಯ ಲಾಭದ ಭರವಸೆಗಳಿಂದ ಜನರಿಗೆ ಉಪಯೋಗವಿಲ್ಲ. ಅವರನ್ನು ಶಾಶ್ವತವಾಗಿ ಮೇಲೆತ್ತುವ ಕೆಲಸ ಆಗಬೇಕಿದೆ. ಕೃಷಿಕರಿಗೆ ಶಕ್ತಿ ತುಂಬಬೇಕಿದೆ. ಶಿಕ್ಷಣ, ಆರೋಗ್ಯ, ಉದ್ಯೋಗ, ವಸತಿ ಸೌಲಭ್ಯಗಳು ಎಲ್ಲರಿಗೂ ಕೈಗೆಟುಕುವ ರೀತಿಯಲ್ಲಿರಬೇಕು. ಆದರೆ, ರಾಜ್ಯದಲ್ಲಿ ಬೇರೆಯದೇ ಪರಿಸ್ಥಿತಿ ಇದೆ ಎಂದು ಕೇಂದ್ರ ಸಚಿವರು ಕಳವಳ ವ್ಯಕ್ತಪಡಿಸಿದರು.

ಜಾತಿ ಹೆಸರಿನ ಮೇಲೆ ರಾಜಕೀಯ ಸಲ್ಲದು

ಸರ್ಕಾರಿ ಕಾರ್ಯಕ್ರಮದಲ್ಲಿ ಸಂವಿಧಾನದ ಪೀಠಿಕೆ ಓದಿ ನಾವು ಜಾತ್ಯತೀತರು ಎಂದು ಹೇಳುತ್ತೇವೆ. ಆದರೆ, ಅದಾದ ಮೇಲೆ ಜಾತಿ ಹೆಸರಿನ ಮೇಲೆ ರಾಜಕೀಯ ಮಾಡುತ್ತೇವೆ. ಇವತ್ತು ರಾಜಕೀಯ ಲಾಭಕ್ಕಾಗಿ, ಮೀಸಲಾತಿಗಾಗಿ ಜಾತಿಗಳನ್ನು ಒಡೆಯಲಾಗುತ್ತಿದೆ. ಆಮೇಲೆ ನಾವು ಜಾತ್ಯತೀತರು ಎಂದು ಹೇಳಿಕೊಳ್ಳುತ್ತಾರೆ. ಈ ವೈರುಧ್ಯಕ್ಕೆ ಏನು ಹೇಳುವುದು ಎಂದು ಅವರು ಬೇಸರ ವ್ಯಕ್ತಪಡಿಸಿದರು. ಜನತೆ ಜಾತಿಯ ವ್ಯಾಮೋಹದಿಂದ ಹೊರಬರದೇ ಹೋದರೆ ಅಭಿವೃದ್ಧಿ ಎಂಬುದು ಮರೀಚಿಕೆ ಆಗುತ್ತದೆ. ಕೃತಕ ಬುದ್ಧಿಮತ್ತೆ ಕಾಲದಲ್ಲಿಯೂ ನಮ್ಮ ಜಾತಿ ರಾಜಕಾರಣ ನಡೆಯುತ್ತಿದೆ ಎಂದು ಅವರು ಹೇಳಿದರು.

ವಿದೇಶಿ ಮಹಿಳೆ ಮೇಲೆ ಗ್ಯಾಂಗ್ ರೇಪ್ | ಒಡಿಶಾ ಪ್ರಜೆ ಹತ್ಯೆಗೈದ ಪ್ರಕರಣ
ಅತ್ಯಾಚಾರ: ಮೂವರಿಗೆ ಮರಣದಂಡನೆ

ಗಂಗಾವತಿ: ತಾಲೂಕಿನ ಸಾಣಾಪುರದಲ್ಲಿ 11ತಿಂಗಳ ಹಿಂದೆ ವಿದೇಶಿ ಮಹಿಳೆ ಹಾಗೂ ಸ್ಥಳೀಯ ಹೋಂ ಸ್ಟೇ ಒಡತಿ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಒಡಿಶಾ ಪ್ರವಾಸಿಗನ ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಮೂವರು ಅಪರಾಧಿಗಳಿಗೆ ಮರಣದಂಡನೆ ಶಿಕ್ಷೆ ವಿಧಿಸಿ ಆದೇಶಿಸಿದೆ.

ಗಂಗಾವತಿಯ ಸಾಯಿನಗರದ ಮಲ್ಲೇಶ್ (ಹಂದಿಮಲ್ಲ), ಸಾಯಿ (ಚೈತನ್ಯ ಸಾಯಿ) ಹಾಗೂ ಶರಣಪ್ಪ (ಶರಣುಬಸವರಾಜ್) ಶಿಕ್ಷೆಗೆ ಒಳಗಾದ ಅಪರಾಧಿಗಳು. 2025ರ ಮಾರ್ಚ್ ತಿಂಗಳಲ್ಲಿ ತಾಲೂಕಿನ ಹಂಪಿಯ ಸಾಣಾಪೂರ ಬಳಿ ಈ ಪೈಶಾಚಿಕ ಕೃತ್ಯ ನಡೆದಿತ್ತು. ಇಸ್ರೇಲ್ ಮೂಲದ ಮಹಿಳೆಯ ಮೇಲೆ ಅತ್ಯಾಚಾರ ವೆಸಗಿದ್ದರು. ಈ ಘಟನೆಯಲ್ಲಿ ಒಡಿಶಾ ಪ್ರವಾಸಿಗನ ಕೊಲೆಯಾಗಿತ್ತು. ಈ ಘಟನೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿ ಜಿಲ್ಲೆಯ ಪ್ರವಾಸೋದ್ಯಮದ ಮೇಲೆ ಕರಿನೆರಳು ಬಿದ್ದಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮಲ್ಲೇಶ್ ಅಲಿಯಾಸ್ ಹಂದಿಮಲ್ಲ, ಸಾಯಿ ಹಾಗೂ ಶರಣಪ್ಪ ಮೂವರ ಮೇಲೆ ಅತ್ಯಾಚಾರ, ಕೊಲೆ ಪ್ರಕರಣ ದಾಖಲಾಗಿತ್ತು. ಬಳಿಕ ಪೊಲೀಸರು ಅತ್ಯಂತ ಚುರುಕಾಗಿ ತನಿಖೆ ನಡೆಸಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ಮಲ್ಲೇಶ್ ಅಲಿಯಾಸ್ ಹಂದಿಮಲ್ಲ, ಸಾಯಿ ಮತ್ತು ಶರಣಪ್ಪ ಎಂಬ ಮೂವರನ್ನು ಆರೋಪಿಗಳೆಂದು ಹೆಸರಿಸಲಾಗಿತ್ತು. ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯವು, ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಈ ಮೂವರೂ ದೋಷಿಗಳು ಎಂದು ಆದೇಶಿಸಿದೆ.

ಪಾನಮತ್ತರಾಗಿ ಇದೇ ಮಾರ್ಗದಲ್ಲಿ ಬಂದಿದ್ದ ಅಪರಾಧಿಗಳು ವಿದೇಶಿ ಮಹಿಳೆ, ಹೊಂ ಸ್ಟೇ ಒಡತಿ ಮೇಲೆ ಅತ್ಯಾಚಾರ ಎಸಗಿದ್ದರು.

9 ತಿಂಗಳಲ್ಲೇ ತೀರ್ಪು

ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದ್ದ ಇಸ್ರೇಲ್ ಮಹಿಳೆ ಅತ್ಯಾಚಾರ ಮತ್ತು ಓರ್ವ ಪ್ರವಾಸಿಗನ ಕೊಲೆ ಪ್ರಕರಣ ಸಂಬಂಧ ಗಂಗಾವತಿ ನ್ಯಾಯಾಲಯವು ಫೆ.6ರಂದು ಮೂವರು ಆರೋಪಿಗಳನ್ನು ದೋಷಿಗಳೆಂದು ತೀರ್ಪು ನೀಡಿತ್ತು. ನ್ಯಾಯಾಧೀಶ ಸದಾನಂದ ನಾಗಪ್ಪ ನಾಯಕ ಅವರು ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ.



ಸಂಪಾದಕೀಯ

ಸೂಕ್ತ ಡಿಜಿಟಲ್ ನಿಯಮಗಳು

ಎಐ (ಕೃತಕ ಬುದ್ಧಿಮತ್ತೆ)ಯೆಂಬುದು ಈಗ ಎರಡಲಗಿನ ಕತ್ತಿಯಂತಾಗಿದೆ. ಅದು ಲಾಭದಾಯಕವಾಗಿರುವಂತೆಯೇ ಬಹಳಷ್ಟು ಹಾನಿಯನ್ನೂ ಹೊತ್ತು ತರುತ್ತಿದೆ. ವಂಚಕರು ತಮ್ಮ ವಂಚನೆಯ ಕಾರ್ಯವನ್ನು ಸುಗಮಗೊಳಿಸಲು ಎಐ ನೆರವಾಗುತ್ತಿದೆ. ಡಿಜಿಟಲ್ ಅರೆಸ್ಟ್‌ನಿಂದ ಹಿಡಿದು ಬ್ಯಾಂಕ್ ವಂಚನೆಯ ತನಕ ವಂಚಕರು ಎಐ ತಂತ್ರಜ್ಞಾನ ಬಳಸಿಕೊಂಡು ಜನರನ್ನು ವಿಮಾರಿಸುತ್ತಿದ್ದಾರೆ. ಇದರ ಜತೆಗೆ ಸುಳ್ಳು ಸುದ್ದಿ ಹಬ್ಬಿಸುವಲ್ಲಿ ಮತ್ತು ಯಾರದಾದರೂ ಬಗ್ಗೆ ಅಪಪ್ರಚಾರ ನಡೆಸುವಲ್ಲಿ ಕೂಡಾ ಎಐ ತಂತ್ರಜ್ಞಾನ ಬಳಸಿಕೊಳ್ಳಲಾಗುತ್ತಿದೆ. ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕ್ಯಾಶ್ ಒಂದರ ಪರವಾಗಿ ಮಾತನಾಡುವ ಎಐ ರಚಿತ ವಿಡಿಯೋವೊಂದು ಬಹಳಷ್ಟು ಮಂದಿಯನ್ನು ಮೋಸಗೊಳಿಸಿತ್ತು. ಪ್ರಧಾನಿ ಮೋದಿಯವರನ್ನು ಅವಹೇಳನ ಮಾಡುವ ರೀತಿಯ ಹಲವಾರು ಎಐ ರಚನೆಯ ವಿಡಿಯೋಗಳು, ಚಿತ್ರಗಳು



ಆಗಾಗ ಪ್ರಸಾರವಾಗುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ಇನ್ನು ಮುಂದೆ ಎಐ ರಚನೆಯ ಚಿತ್ರಣಗಳಿಗೆ ಅದರ ಮಾಹಿತಿಯ ನಮೂದಿಸಿರಬೇಕು ಎಂಬುದನ್ನು ಕಡ್ಡಾಯಗೊಳಿಸಿದೆ. ಇದರಿಂದಾಗಿ ನೋಡುತ್ತಿರುವುದು ಸತ್ಯವೇ ಸುಳ್ಳೇ, ವಿಡಿಯೋ ಮೂಲ ಎಲ್ಲಿಯದು ಎಂಬುದು ತಿಳಿಯಲು ಜನರಿಗೆ ಸಹಾಯಕವಾಗಲಿದೆ.

ಸಿಂಥೆಟಿಕ್ ಆಗಿ ರೂಪುಗೊಂಡ ಮಾಹಿತಿಗಳೆಲ್ಲವನ್ನೂ ಸ್ಪಷ್ಟವಾಗಿ ನಮೂದಿಸಬೇಕು ಎಂಬ ನಿಯಮ ಜಾರಿಗೆ ತರುವ ಮೂಲಕ ಸರಕಾರವು ಇವುಗಳಲ್ಲಿ ಪಾರದರ್ಶಕತೆ ತರಲು ಉದ್ದೇಶಿಸಿದೆ. ಆನ್‌ಲೈನ್ ಮೂಲಕ ಬರುವ ಮಾಹಿತಿಗಳ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವುದೂ ಈ ಪ್ರಯತ್ನದ ಹಿಂದಿದೆ. ಕೆಲವರು ಇದು ಸೆನ್ಸಾರ್‌ಶಿಪ್ ಎಂದು ಟೀಕಿಸಬಹುದಾದರೂ ಇದು ಸೆನ್ಸಾರ್‌ಶಿಪ್ ಅಲ್ಲ, ಅದಕ್ಕಿಂತಲೂ ಮುಖ್ಯವಾಗಿ ಮಾಹಿತಿ ಬಹಿರಂಗ ಪ್ರಕ್ರಿಯೆ ಎನ್ನಬಹುದು. ಎಐನ್ನು ನಿಷೇಧಿಸುವುದು ಇಲ್ಲಿನ ಉದ್ದೇಶವಲ್ಲ, ಅದನ್ನು ಹೆಚ್ಚು ಪಾರದರ್ಶಕಗೊಳಿಸುವುದೇ ಪ್ರಧಾನ ಉದ್ದೇಶವೆಂಬುದನ್ನು ಅರಿಯಬೇಕು. ತಿರುಚಿದ ವಿಡಿಯೋಗಳು ವ್ಯಕ್ತಿಯ ಮಾನಹರಣಕ್ಕೆ, ಬ್ಲ್ಯಾಕ್‌ಮೇಲ್‌ಗೆ ಕಾರಣವಾಗುವ ಸಾಧ್ಯತೆಯಿರುವುದರಿಂದ ಎಐ ಮೇಲೆ ಇಂತಹ ಕೆಲವು ನಿಬಂಧನೆ ಹಾಕುವುದು ಅಗತ್ಯವಾಗಿದೆ. ಹಾಗೆಂದು ಡೀಪ್‌ಫೇಕ್‌ಗಳನ್ನು ಸಂಪೂರ್ಣ ನಿಯಂತ್ರಿಸುವುದು ಅಷ್ಟು ಸುಲಭವಲ್ಲ ಎಂಬುದೂ ನಿಜವೆ. ಸೂಕ್ತ ಕ್ರಮ ತೆಗೆದುಕೊಳ್ಳುವ ಮೊದಲೇ ಅದು ಕೋಟ್ಯಂತರ ಜನರನ್ನು ತಲುಪಿರುವುದಿದೆ. ಆದರೂ ಸರಕಾರ ಈ ನಿಟ್ಟಿನಲ್ಲಿ ಇಟ್ಟಿರುವ ಕ್ರಮವನ್ನು ಶ್ಲಾಘಿಸಬೇಕು. ಇಂತಹ ವಿಡಿಯೋಗಳನ್ನು ಹರಡುವ ಸಾಮಾಜಿಕ ಜಾಲತಾಣಗಳೂ ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು.

ಇರಾನ್-ಅಮೇರಿಕಾ ಯುದ್ಧ ನಡೆಯಲಿದೆಯೇ?

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಕಳೆದ ವಾರದ ಅಂಕಣದಲ್ಲಿ ಅಮೇರಿಕಾ ಮತ್ತು ಇರಾನ್ ನಡುವೆ ಯುದ್ಧ ನಡೆಯಬಹುದೋ ಇಲ್ಲವೋ ಎಂಬುದರ ಬಗ್ಗೆ ಅವಲೋಕಿಸಿದ್ದೆ. ಪೂರ್ಣಪ್ರಮಾಣದ ಯುದ್ಧದ ಬದಲಿಗೆ ಅಮೇರಿಕಾ ತನ್ನ ನಿಕ್ಸನ್ ನಂತರದ ಕಾಲಾವಧಿಯಲ್ಲಿ ಕಲಿತು, ಅನುಸರಿಸಿ ಲ್ಯಾಟೀನ್ ಅಮೇರಿಕಾ, ಭಾರತ, ರಷ್ಯಾ, ತೈವಾನ್, ಫಿಲಿಪ್ಪೀನ್ಸ್, ಕ್ಯೂಬಾ, ಮಧ್ಯಪ್ರಾಚ್ಯ ಇತ್ಯಾದಿ ದೇಶಗಳಲ್ಲಿ ಮತ್ತೆ ಮತ್ತೆ ಒಳ್ಳೆಯ ಫಲಿತಾಂಶ ಪಡೆದಿರುವ ತನ್ನ ಅಭ್ಯಾಸವಾದ 'ಪ್ರಾಕ್ಸಿ-ವಾರ್' ಮೂಲಕವೇ ಇರಾನನ್ನು ಅಲ್ಲಾಡಿಸಲು ಪ್ರಯತ್ನಿಸುತ್ತದೆ ಎಂದಿದ್ದೆ. ಸದ್ಯಕ್ಕೆ ಅದೇ ತಂತ್ರವೇ ಮುಂದುವರೆಯುವ ಲಕ್ಷಣಗಳಿವೆ. ಈ ಪ್ರಹಸನ ಪೂರ್ಣಪ್ರಮಾಣದ ಯುದ್ಧಕ್ಕೆ ತಿರುಗುವ ಸಾಧ್ಯತೆಗಳು ಕಡಿಮೆಯೇ. ಅದಕ್ಕೆ ಮುಖ್ಯ ಕಾರಣ ಅಮೇರಿಕಾ ಅಥವಾ ಇರಾನ್ ಎರಡೂ ಪಕ್ಷಗಳಲ್ಲವೇ ಅಲ್ಲ. ಅಮೇರಿಕಾಕ್ಕೆ ಈ ಯುದ್ಧ ನಡೆದರೂ, ನಡೆಯದಿದ್ದರೂ ಹೆಚ್ಚಿನ ವ್ಯತ್ಯಾಸವಾಗುವುದಿಲ್ಲ. ಇತ್ತಕಡೆ ಇರಾನ್ ದಶಕಗಳಿಂದ ಹೆದರಿಸೋದೇ ಆಯ್ತು, ನಮ್ಮನ್ನು ಬಗ್ಗಿಸಲು ಅವರಿಗೆ ಸಾಧ್ಯವೇ ಆಗಿಲ್ಲ, ಯುದ್ಧ ನಡೆದರೆ ನಡೆದೇ ಬಿಡಲಿ ಎಂಬ ನಿಲುವಿನಲ್ಲಿದೆ. ಒಟ್ಟಿನಲ್ಲಿ ಇಬ್ಬರೂ ಯುದ್ಧಸನ್ನದ್ಧರಾಗಿ ನಿಂತಿದ್ದಾರೆ.

ಹೌದು. ಹೊಡೆಯುವ ತರಾತುರಿಯಲ್ಲಿ ಅಮೇರಿಕಾ ಇದ್ದರೆ, ಮಟ್ಟಹಾಕುವ ಜಿದ್ದಿನಲ್ಲಿ ಇರಾನ್ ಇದೆ. ಅಮೇರಿಕಾದ ಒಂದು ಕ್ಷಿಪಣಿ ನಮ್ಮ ಮೇಲೆ ಬಿದ್ದರೂ, ತೆಲ್-ಅವಿವ್ ಮೇಲೆ ಪರಮಾಣು ಬಾಂಬ್ ಬಿದ್ದೇ ಸರಿ ಎಂದು ಇರಾನ್ ಹೇಳಿಯಾಗಿದೆ. ನೆನಪಿರಲಿ, ನಾವು ಅಣುಬಾಂಬ್ ತಯಾರಿಸುವುದಿಲ್ಲ ಎಂಬ ಎನ್‌ಪಿಟಿ ಸಂಧಾನಕ್ಕೆ ಅಂದರೆ ನಾನ್-ಪ್ರೊಲಿಫರೇಷನ್ ಟ್ರೀಟೀ ನಾವಾಗಿಯೇ ಅಣುಬಾಂಬ್ ಮೊದಲಿಗೆ ಬಳಸುವುದಿಲ್ಲ ಎಂಬ ನೀತಿಗೆ ಇರಾನ್ ಯಾವುದೇ ನಿರ್ದಿಷ್ಟ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿಲ್ಲ. ಅತ್ತಕಡೆ ಅಮೇರಿಕಾ ಕೂಡಾ ಇದೇ ಮನಸ್ಥಿತಿಯಲ್ಲಿದೆ. ಅಂದರೆ ಇಬ್ಬರಲ್ಲಿ ಯಾರು ಬೇಕಾದರೂ ಅಣುಬಾಂಬ್ ಹಾಕಲಿಕ್ಕೆ ಬಟನ್ ಒತ್ತಬಹುದು. ಒಮಾನ್ ಮತ್ತು ಸ್ವಿಟ್ಜರ್ಲ್ಯಾಂಡ್ ಸಾಮಾನ್ಯವಾಗಿ ಜಗತ್ತಿನ ಎಲ್ಲಾ ಶಾಂತಿ ಸಂಧಾನಗಳಲ್ಲಿ ಮುಂಚೂಣಿಯಲ್ಲಿರುವ ಹೆಸರುಗಳು. ಇದರ ಜೊತೆಗೇ ಟರ್ಕಿ, ಸೌದಿ ಅರೇಬಿಯಾ, ಕತಾರ್ ಮತ್ತು ರಷ್ಯಾ ಕೂಡಾ ಯುದ್ಧವಾಗದಂತೆ ತಡೆಯಲು ಮಾತುಕತೆಗೆ ತಮ್ಮ ನೆರವನ್ನು ಘೋಷಿಸಿವೆ. ಟರ್ಕಿಗೆ ಅಮೇರಿಕಾದ ಬಳಿ ಬೆನ್ನು ತಟ್ಟಿಸಿಕೊಳ್ಳುವ ಆಸೆ, ರಷ್ಯಾಕ್ಕೆ ಅಮೇರಿಕಾದ ಮೂತಿ ತಿವಿಯುವ ಆಸೆ. ಹಾಗಾಗಿ ಈ ಮಾತುಕತೆಗೆ ಮುಂದೆಬಂದಿವೆ ಎಂದುಕೊಳ್ಳೋಣ. ಸೌದಿ ಮತ್ತು ಕತಾರ್ ಯಾಕೆ ಈ ಮಾತುಕತೆಗೆ ಬರುತ್ತಿವೆ? ಇಸ್ಲಾಮಿನ ಪ್ರಮುಖ ಪಂಗಡಗಳಾದ ಸುನ್ನಿ ಮತ್ತು ಶಿಯಾ ಕೇಂದ್ರಗಳಾಗಿರುವ ಸೌದಿ ಮತ್ತು ಇರಾನ್ ನಡುವೆ ಸ್ನೇಹಸಂಬಂಧ ಅಷ್ಟಕ್ಕಷ್ಟೇ. ಕತಾರ್ ಮೇಲಂತೂ ಕಳೆದ ವರ್ಷ ಇರಾನ್ ಕ್ಷಿಪಣಿಗಳನ್ನೇ ಉಡಾಯಿಸಿತ್ತು. ಆದರೂ ಯಾಕೆ ಇವರೆಡೂ ದೇಶಗಳು ಸಂಧಾನಕ್ಕೆ ಮುಂದಾಗಿವೆ!?

ಆರ್ಥಿಕ ಮತ್ತು ಇಂಧನ ಬಿಕ್ಕಟ್ಟಿನ ದೃಷ್ಟಿಯಿಂದ ನೋಡಿದರೆ, ಅಮೇರಿಕಾ ತನ್ನ ಮೇಲೆ ಧಾಳಿ ಮಾಡಿದರೆ ಅಥವಾ ಧಾಳಿಯ ಬಗ್ಗೆ ಯೋಚಿಸಿದರೂ ಕೂಡಾ, ಜಗತ್ತಿನ ಶೇ. 20ರಷ್ಟು ತೈಲ ರಫ್ತಾಗುವ ಟಿಹಾರ್ಮುಜ್ ಜಲಸಂಧಿ'ಯನ್ನು ಮುಚ್ಚುವುದಾಗಿ ಇರಾನ್ ಬೆದರಿಕೆ ಹಾಕಿದೆ. ಒಂದು ವೇಳೆ ಯುದ್ಧ ನಡೆದು ಈ ಮಾರ್ಗ ಬಂದ್ ಆದರೆ, ಗಲ್ಫ್ ರಾಷ್ಟ್ರಗಳ ಹಣಕಾಸಿನ ಮುಖ್ಯ ನಾಳವೇ ಬಂದ್ ಆದಂತೆ. ಇದರಿಂದಾಗಿ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 120 ಡಾಲರ್ ದಾಟಬಹುದು. ಇದು ಜಾಗತಿಕ ಆರ್ಥಿಕ ಹಿಂಜರಿತಕ್ಕೆ ಕಾರಣವಾಗುವುದಲ್ಲದೆ, ತೈಲ ಮಾರಾಟದ ಮೇಲೆ ಅವಲಂಬಿತವಾಗಿರುವ ಗಲ್ಫ್ ರಾಷ್ಟ್ರಗಳ ಬಜೆಟ್ ಸಮತೋಲನವನ್ನು ತಪ್ಪಿಸಬಹುದು. ಅನ್ನಾಹಾರಗಳನ್ನದರೂ ವಿಮಾನದ ಮೂಲಕ ತರಿಸಿಕೊಳ್ಳಬಹುದು. ಆದರೆ, ತೈಲವನ್ನು ವಿಮಾನಗಳ ಮೂಲಕ ರಫ್ತುಮಾಡಲಿಕ್ಕಾಗುವುದಿಲ್ಲ.

ಎರಡನೆಯದಾಗಿ, ಈ ಯುದ್ಧ (ನಡೆದರೆ) ಧಾರ್ಮಿಕ ಮತ್ತು ರಾಜತಾಂತ್ರಿಕ ಧ್ರುವೀಕರಣಕ್ಕೆ ದಾರಿ ಮಾಡಿಕೊಡಲಿದೆ. ಗಲ್ಫ್ ಪ್ರದೇಶದಲ್ಲಿ ಸುನ್ನಿ ಮತ್ತು ಶಿಯಾ ಪಂಗಡಗಳ ನಡುವಿನ ಧಾರ್ಮಿಕ ಭಿನ್ನತೆಗಳು ಈಗಾಗಲೇ ರಾಜಕೀಯ ಸ್ವರೂಪ ಪಡೆದಿವೆ. ಇರಾನ್ ಶಿಯಾ ಬಹುಸಂಖ್ಯಾತ ರಾಷ್ಟ್ರವಾಗಿದ್ದರೆ, ಸೌದಿ ಅರೇಬಿಯಾದಂತಹ ದೇಶಗಳು ಸುನ್ನಿ ಮುಸ್ಲಿಂ ನಾಯಕತ್ವವನ್ನು ಹೊಂದಿವೆ. ಯುದ್ಧ ಸಂಭವಿಸಿದರೆ, ಮಧ್ಯಪ್ರಾಚ್ಯದ ಎಲ್ಲಾ ದೇಶಗಳು ಯಾವುದಾದರೂ ಒಂದು ಬಣವನ್ನು ಬೆಂಬಲಿಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಮೂರನೆಯದಾಗಿ, ಗಲ್ಫ್ ರಾಷ್ಟ್ರಗಳಿಗೆ ತಮ್ಮ ವಿಷನ್ 2030 ಮತ್ತು ಆರ್ಥಿಕ ವೈವಿಧ್ಯೀಕರಣಕ್ಕೆ ಈ ಯುದ್ಧ ಮಾರಕ ಹೊಡೆತ ನೀಡಲಿದೆ. 2030ರ ಹೊತ್ತಿಗೆ ಇಡೀ ಗಲ್ಫ್ ಒಕ್ಕೂಟ 'ವಿಷನ್ 2030' ಅಡಿಯಲ್ಲಿ ಸಾವಿರಾರು ಕೋಟಿ ಡಾಲರ್ ಹೂಡಿಕೆ ಮಾಡುತ್ತಿವೆ. ಈ ಸಮಯದಲ್ಲಿ ಯುದ್ಧದ ಭೀತಿ ಹುಟ್ಟಿದರೆ ಅದು ವಿದೇಶಿ ಹೂಡಿಕೆದಾರರನ್ನು ಹಿಮ್ಮೆಟ್ಟಿಸಬಹುದು ಮತ್ತು ಈ ಮಹತ್ವಾಕಾಂಕ್ಷೆಯ ಯೋಜನೆಗಳಿಗೆ ತಡೆಯೊಡ್ಡಬಹುದು.

ಈ ಮೂರು ಕಾರಣಗಳಿಂದಾಗಿ ಈ ಯುದ್ಧವನ್ನು ಹೇಗಾದರೂ ಮಾಡಿ ತಡೆಯಲಿಕ್ಕೆ ಗಲ್ಫ್ ರಾಷ್ಟ್ರಗಳು ತೆರೆಮರೆಯಲ್ಲಿ ಬಹಳ ದೊಡ್ಡ ಪ್ರಯತ್ನ ನಡೆಸಿವೆ. 2026ರ ಆರಂಭದಲ್ಲಿ, ಅಮೆರಿಕವು ಇರಾನ್‌ನ ಸವಾಲುಗಳನ್ನು ಎದುರಿಸಲು ಪಶ್ಚಿಮ ಏಷ್ಯಾದಲ್ಲಿ ತನ್ನ 'ಸೆಂಟ್ರಲ್ ಕಮಾಂಡ್' ಮೂಲಕ ಅತ್ಯಾಧುನಿಕ ಕ್ಷಿಪಣಿ ನಿರೋಧಕ ವ್ಯವಸ್ಥೆಗಳನ್ನು ಮತ್ತು ಐದನೇ ತಲೆಮಾರಿನ ಯುದ್ಧವಿಮಾನಗಳನ್ನು ನಿಯೋಜಿಸಿತು. ವಿಶೇಷವಾಗಿ ಕತಾರ್‌ನ ಅಲ್-ಉದ್ಯೆದ್ ಮತ್ತು ಯುಎಇಯ ಅಲ್-ದಫ್ರಾ ವಾಯುನೆಲೆಗಳಲ್ಲಿ ಮಿಲಿಟರಿ ಸನ್ನದ್ಧತೆಯನ್ನು ಹೆಚ್ಚಿಸಿಕೊಂಡು, ಇದಕ್ಕೆ ಬ್ಯಾಕ್-ಅಪ್ ಆಗಿ ರಷ್ಯಾ ವಿರುದ್ಧ ಬಳಸುವ ಯೋಚನೆಯಿಟ್ಟುಕೊಂಡು ಒಂದಾನೊಂದು ಕಾಲದಲ್ಲಿ ಟರ್ಕಿಯಲ್ಲಿ ನಿಯೋಜಿಸಿದ್ದ ತನ್ನ ಕ್ಷಿಪಣಿಗಳನ್ನೂ ಇರಾನ್ ಕಡೆಗೆ ಮುಖಮಾಡಿಸಿತ್ತು. ಇತ್ತೀಚಿನ ವರದಿಗಳ ಪ್ರಕಾರ, ಅಮೆರಿಕವು ಇರಾನ್‌ನ ಡ್ರೋನ್ ದಾಳಿಗಳನ್ನು ತಡೆಯಲು ಈ ಎಲ್ಲಾ ವಾಯು ಮತ್ತು ನೌಕಾನೆಲೆಗಳಲ್ಲಿ 'ಲೇಸರ್ ಡಿಫೆನ್ಸ್ ಸಿಸ್ಟಮ್' ಅನ್ನು ಪ್ರಾಯೋಗಿಕವಾಗಿ ಅಳವಡಿಸಿದೆ.

ಇದರ ಮಧ್ಯ, ಜಿಸಿಸಿ ರಾಷ್ಟ್ರಗಳು ಈಗ ಕೇವಲ ಅಮೆರಿಕದ ಮೇಲೆ ಅವಲಂಬಿತವಾಗದೆ, ತಮ್ಮ ರಕ್ಷಣಾ ನೀತಿಯನ್ನು ವೈವಿಧ್ಯಗೊಳಿಸುವತ್ತ ತಲೆಹಾಕಿವೆ. ಸೌದಿ ಅರೇಬಿಯಾ ಮತ್ತು ಯುಎಇ ದೇಶಗಳು ಚೀನಾ ಮತ್ತು ಫ್ರಾನ್ಸ್‌ನೊಂದಿಗೆ ರಕ್ಷಣಾ ತಂತ್ರಜ್ಞಾನ ಹಂಚಿಕೆ ಒಪ್ಪಂದಗಳನ್ನು ಮಾಡಿಕೊಂಡಿವೆ. ಭಾರತದಿಂದ ರಕ್ಷಣಾ ವಲಯದಲ್ಲಿ ಬಹಳ ದೊಡ್ಡ ಸಂಧಾನಗಳಾಗಿವೆ. ಇರಾನ್‌ನ ಕ್ಷಿಪಣಿ ಬೆದರಿಕೆಯನ್ನು ಎದುರಿಸಲು ಈ ಎಲ್ಲಾ ದೇಶಗಳು ಸೇರಿ 'ಇಂಟಿಗ್ರೇಟೆಡ್ ಏರ್ ಅಂಡ್ ಮಿಸೈಲ್ ಡಿಫೆನ್ಸ್' ವ್ಯವಸ್ಥೆಯನ್ನು ಜಾರಿಗೆ ತರಲು ಒಲವು ತೋರುತ್ತಿವೆ. ಯುದ್ಧದ ಸಂದರ್ಭದಲ್ಲಿ ತಮ್ಮ ನೆಲವನ್ನು ಇರಾನ್ ಮೇಲೆ ದಾಳಿ ಮಾಡಲು ಬಳಸದಂತೆ ಅಮೆರಿಕಕ್ಕೆ ಈ ರಾಷ್ಟ್ರಗಳು ಸೂಚನೆ ನೀಡಿರುವುದು ಹೊಸ ರಾಜತಾಂತ್ರಿಕ ಬೆಳವಣಿಗೆಯಾಗಿದೆ. ಈ ಕಾರ್ಯತಂತ್ರದ ಬದಲಾವಣೆ ಗಲ್ಫ್ ರಾಷ್ಟ್ರಗಳು ತಮ್ಮ ಸ್ವಂತ ಭದ್ರತೆಯ ಬಗ್ಗೆ ಹೆಚ್ಚು ಜಾಗೃತವಾಗಿರುವುದನ್ನು ತೋರಿಸುತ್ತದೆ.

ಕುತೂಹಲಕಾರಿ ವಿಷಯವೆಂದರೆ, ಈ ಹಿಂದೆ ಇರಾನ್ ವಿರುದ್ಧ ಕಠಿಣ ನಿಲುವು ಹೊಂದಿದ್ದ ಸೌದಿ ಅರೇಬಿಯಾ ಮತ್ತು ಯುಎಇ ಈಗ 'ಸಂಘರ್ಷಕ್ಕಿಂತ ಮಾತುಕತೆ' ಲೇಸು ಎಂಬ ನಿಲುವಿಗೆ ಬಂದಿವೆ. ಅಮೆರಿಕದ ಮಿಲಿಟರಿ ದಾಳಿಯು ಇರಾನ್ ಪ್ರಭುತ್ವವನ್ನು ಪತನಗೊಳಿಸಿದರೆ, ಅದು ಆ ಭಾಗದಲ್ಲಿ ಭೀಕರ ಅರಾಜಕತೆಯನ್ನು ಸೃಷ್ಟಿಸಬಹುದು ಎಂಬುದು ಇವರ ಆತಂಕ. ಮಾತ್ರವಲ್ಲದೇ, ಈ ಹುಚ್ಚರ ಆಟದಲ್ಲಿ ಇರಾನ್ ಮೇಲೇನೇನಾದರೂ ಅಣುಬಾಂಬ್ ಬಿದ್ದರೆ, ಅದರ ಎರಡನೇ ಅಲೆಯ ವಿನಾಶಕ್ಕೆ ತುತ್ತಾಗುವುದು ಯುಎಇ, ಒಮಾನ್, ಕತಾರ್, ಕುವೈತ್ ಮತ್ತು ಬಹರೈನ್. ಛಬರ್ ಬಂದರಿನ ಮೇಲೆ ಅಮೇರಿಕಾದ ಅಣುಬಾಂಬ್ ಬಿದ್ದರೆ, ಅದರಿಂದ ಹುಟ್ಟುವ ಸುನಾಮಿ ಯುಎಇ ಮತ್ತು ಕತಾರ್ ಅನ್ನು ಸುಲಭವಾಗಿ ಮುಳುಗಿಸುತ್ತದೆ.

ಸೌದಿ ಅರೇಬಿಯಾ ಸ್ವಲ್ಪ ದೂರದಲ್ಲಿದ್ದರೂ, ಯಾವುದೇ ಜಿಸಿಸಿ ದೇಶದ ಮೇಲೆ ನಡೆದ ವಿನಾಶದ ಕೃತ್ಯ, ಸೌದಿ ಅರೇಬಿಯಾಕ್ಕೆ ನಡೆಸಿದ ವಿನಾಶಕ್ಕೇ ಸಮ. ಆದ್ದರಿಂದಲೇ ಒಮಾನ್ ಮತ್ತು ಕತಾರ್ ಈಗ ಅಮೆರಿಕ ಹಾಗೂ ಇರಾನ್ ನಡುವೆ ಮಧ್ಯಸ್ಥಿಕೆ ವಹಿಸುತ್ತಿವೆ.

ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧವು ಕೇವಲ ಎರಡು ದೇಶಗಳ ನಡುವಿನ ಹೋರಾಟವಾಗಿ ಉಳಿಯದೆ, ಇಡೀ ಪಶ್ಚಿಮ ಏಷ್ಯಾವನ್ನು ಸುಡಬಲ್ಲದು ಎಂಬ ಸತ್ಯ ಇದೀಗ ಈ ದೇಶಗಳಿಗೆ ಮನವರಿಕೆಯಾಗಿದೆ. ಅಂತಿಮವಾಗಿ, ರಾಜತಾಂತ್ರಿಕ ಪರಿಹಾರವೇ ಈ ಬಿಕ್ಕಟ್ಟಿಗೆ ಏಕೈಕ ದಾರಿಯೆಂಬುದು ಗಲ್ಫ್ ದೇಶಗಳ ಒಮ್ಮತದ ನಿರ್ಧಾರ ಹಾಗೂ ಅದೇ ಅವರ ಸದ್ಯದ ಗುರಾಣಿ ಕೂಡ. ಹೀಗೆ ಟ್ರಂಪ್ ಮತ್ತು ಖೊಮೇನಿಯ ನಡುವಿನ ಅಹಂಕಾರದ ಯುದ್ಧ, ಅರೇಬಿಯನ್ ಪ್ರಸ್ಥಭೂಮಿಗೆ ಎರವಾಗಿ ನಿಂತಿದೆ. ವಿವೇಚನೆಯ ಮಾತೇ ಕೊನೆಯದಾಗಿ ಮನ್ನಣೆ ಪಡೆಯಲಿ ಎಂಬುದು ಎಲ್ಲರ ಆಶಯ.

ಕೃತಕ ಬುದ್ಧಿಮತ್ತೆ, ಲೇ ಆಫ್ ಮತ್ತು 'ನಮ್ಮ ನಾಳೆ'


ಹೊಸ ಸವಾಲು ಬರುತ್ತಿರುವಾಗ ಕೆಲಸವೇ ಜೀವನ ಎಂಬ ಭ್ರಮೆ ಬಿಟ್ಟು, ಬದುಕಲು ಕೆಲಸ ಮಾಡುವ ಪ್ರಜ್ಞೆ ಬರಬೇಕಿದೆ.

ಪ್ರಸನ್ನ ಹೆಗಡೆ

ಸೆಪ್ಟೆಂಬರ್ 2008ರಲ್ಲಿ ಅಮೆರಿಕದಲ್ಲಿ ನಡೆದ ಲೇಮನ್ ಬ್ರದರ್ಸ್ ಕಂಪನಿಯ ಹಗರಣ ಇಡೀ ವಿಶ್ವದ ಆರ್ಥಿಕತೆಯ ಮೇಲೆ ಬೀರಿದ ಪರಿಣಾಮ ಭೀಕರ. ಜಾಗತಿಕ ಆರ್ಥಿಕ ರಂಗ ಒಮ್ಮೆಲೆ ಬೆಚ್ಚಿಬಿದ್ದಿತ್ತು. ಲಕ್ಷಾಂತರ ಜನರ ಉದ್ಯೋಗ ಹೋಯಿತು, ಶ್ರೀಮಂತ ದೇಶಗಳ ಮಧ್ಯಮ ವರ್ಗ ನಡುಗಿಹೋಯಿತು, ಭಾರತ ಸೇರಿದಂತೆ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೂ ಅದರ ಛಾಯೆ ಬಿದ್ದಿತ್ತು. ಆ ಆಘಾತದಿಂದ ಚೇತರಿಸಿಕೊಳ್ಳಲು ವಿಶ್ವಕ್ಕೆ ಒಂದು ದಶಕಕ್ಕೂ ಹೆಚ್ಚು ಕಾಲ ಬೇಕಾಯಿತು.

ಆ ನೋವು ಮರೆಯಾಗುವ ಮೊದಲೇ 2020ರಲ್ಲಿ ಕೋವಿಡ್ ಮಹಾಮಾರಿ ಜಗತ್ತನ್ನು ಮತ್ತೊಮ್ಮೆ ತಲ್ಲಣಗೊಳಿಸಿತು. ವ್ಯಾಪಾರ ವಹಿವಾಟು ಸ್ಥಗಿತಗೊಂಡಿತು, ದೇಶ-ದೇಶಗಳ ನಡುವಣ ಗಡಿಗಳು ಮುಚ್ಚಿದವು, ಕೋಟ್ಯಂತರ ಜನ ಕೆಲಸ ಕಳೆದುಕೊಂಡರು. ಅದರ ನಂತರ ಪ್ರಪಂಚ ಮತ್ತೆ ಹಳಿ ಹತ್ತುತ್ತಿದೆ ಎಂದು ನಿಟ್ಟುಸಿರು ಬಿಡುವ ಮೊದಲೇ, 2022ರ ಮಧ್ಯದಿಂದ ಮತ್ತೊಂದು ಆರ್ಥಿಕ ಚಳಿ ಜಗತ್ತಿನ ತಂತ್ರಜ್ಞಾನ ವಲಯದಲ್ಲಿ ಮೆಲ್ಲಗೆ ಶುರುವಾಗಿ 2023, 2024ರಲ್ಲಿ ಭರ್ಜರಿಯಾಗಿ ಅಪ್ಪಳಿಸಿತು. ಅದರ ಕಂಪು 2025-26ರ ವರೆಗೂ ಮುಂದುವರಿದಿದೆ.

2022ರಲ್ಲಿ ಅಮೆರಿಕದ ಟೆಕ್ ಕಂಪನಿಗಳಲ್ಲಿ ಸುಮಾರು 93,000 ಉದ್ಯೋಗಿಗಳು ಕೆಲಸ ಕಳೆದುಕೊಂಡರು. 2023 ರಲ್ಲಿ ಅದು ದ್ವಿಗುಣವಾಗಿ ಸುಮಾರು 2,64,000 ಜನ ಕೆಲಸ ಕಳೆದುಕೊಂಡರು. ಮೆಟಾದ ಮಾರ್ಕ್ ಜೂಕರ್ಬರ್ಗ್ ಆ ವರ್ಷವನ್ನು 'Year of Efficiency' ಎಂದು ಕರೆದ. 2024ರಲ್ಲಿ ಸ್ವಲ್ಪ ಇಳಿಮುಖವಾಗಿ ಸುಮಾರು 1,52,000 ಉದ್ಯೋಗಿಗಳು ಟೆಕ್ ಕ್ಷೇತ್ರ ಬಿಡಬೇಕಾಯಿತು. 2025ರಲ್ಲಿ ಜಗತ್ತಿನಾದ್ಯಂತ ಟೆಕ್ ಕ್ಷೇತ್ರದಲ್ಲಿ 2,45,953 ಮಂದಿ ಕೆಲಸ ಕಳೆದುಕೊಂಡಿದ್ದಾರೆ; ಅಂದರೆ ಪ್ರತಿದಿನ ಸರಾಸರಿ 674 ಉದ್ಯೋಗಿಗಳು ಕೆಲಸ ಕಳೆದುಕೊಂಡ ಲೆಕ್ಕ. 2026ರ ಮೊದಲ ಆರು ವಾರಗಳಲ್ಲಿ ಇದಾಗಲೇ 36,000ಕ್ಕೂ ಹೆಚ್ಚು ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ಇದೆಲ್ಲ ಅಧಿಕೃತ ದಾಖಲೆ ಹೇಳುವ ಕಥೆ. ಅನಧಿಕೃತವಾಗಿ ಕೆಲಸ ಕಳೆದುಕೊಳ್ಳುವವರ ಸಂಖ್ಯೆಯ ಲೆಕ್ಕವೇ ಇಲ್ಲ ಎಂದು ಹೇಳಬಹುದು.



ಒಂದು ಕಾಲದಲ್ಲಿ ಅಭೇದ್ಯ ಎಂದು ಕಾಣುತ್ತಿದ್ದ ಗೂಗಲ್, ಮೆಟಾ, ಮೈಕ್ರೋಸಾಫ್ಟ್ ನಂತಹ ದಿಗ್ಗಜ ಕಂಪನಿಗಳಲ್ಲಿ ಎರಡು ದಶಕಕ್ಕೂ ಮೀರಿ ಕೆಲಸ ಮಾಡಿದ್ದ ಅನೇಕ ಅನುಭವಿ ಉದ್ಯೋಗಿಗಳೂ ಈ ಬಾರಿ ಕೆಲಸ ಕಳೆದುಕೊಂಡಿದ್ದಾರೆ. ಇಂಟೆಲ್ ಒಂದೇ ಕಂಪನಿ 2025ರಲ್ಲಿ ಸುಮಾರು 33,900 ಜನರನ್ನು ಕೆಲಸದಿಂದ ತೆಗೆದಿದೆ. ಇದು ಅದರ ಒಟ್ಟು ಉದ್ಯೋಗ ಸಂಖ್ಯೆಯ 25-30%. ಮೈಕ್ರೋಸಾಫ್ಟ್ 19,215 ಉದ್ಯೋಗಿಗಳನ್ನು ವಜಾಗೊಳಿಸಿದೆ. ಅಮೆಜಾನ್ 30,000 ಉದ್ಯೋಗ ಕಡಿತದ ಯೋಜನೆ ಪ್ರಕಟಿಸಿದ್ದು ಅದರ ಇತಿಹಾಸದಲ್ಲೇ ಅತಿ ದೊಡ್ಡ ವಜಾ ಕ್ರಮ ಎನ್ನಲಾಗಿದೆ. ಭಾರತೀಯ ಐಟಿ ದಿಗ್ಗಜ ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ (TCS) ಕೂಡಾ 12,000 ಉದ್ಯೋಗಿಗಳನ್ನು ಕೈಬಿಟ್ಟಿದೆ.

2008ರ ಆರ್ಥಿಕ ಬಿಕ್ಕಟ್ಟಿಗೆ ಬ್ಯಾಂಕಿಂಗ್ ವಲಯದ ಅತಿ ದುಡುಕು ಮತ್ತು ಅಪಾಯಕಾರಿ ಸಾಲ ನೀಡಿಕೆ ಕಾರಣ ವಾಗಿತ್ತು. ಈ ಬಾರಿ ಕಾರಣಗಳು ಬೇರೆಯೇ ಇವೆ. ಕೋವಿಡ್ ಸಮಯದಲ್ಲಿ ಡಿಜಿಟಲ್ ಸೇವೆಗಳ ಬೇಡಿಕೆ ಅಗಾಧವಾಗಿ ಏರಿತು. ಎಲ್ಲ ಟೆಕ್ ಕಂಪನಿಗಳು ತರಾತುರಿಯಲ್ಲಿ ಸಾವಿರಾರು ಜನರನ್ನು ನೇಮಕ ಮಾಡಿಕೊಂಡವು. 2021ರಲ್ಲಿ ಸ್ಟಾರ್ಟಪ್‌ಗಳಿಗೆ ಹಣ ಎಷ್ಟು ಸುಲಭವಾಗಿ ಹರಿದು ಬಂತೆಂದರೆ, ಅನೇಕ ಕಂಪನಿಗಳು ಲಾಭ-ನಷ್ಟದ ಲೆಕ್ಕಾಚಾರ ಬಿಟ್ಟು ಬರೀ ಬೆಳೆಯುತ್ತ ಹೋಗುವ ಮತ್ತು ಹಣ ಖರ್ಚು ಮಾಡುವ (Cash Burn) ಸ್ಪರ್ಧೆಯಲ್ಲಿ ಮುಳುಗಿಹೋದವು.

ಕೋವಿಡ್ ನಂತರ ಡಿಜಿಟಲ್ ಬೇಡಿಕೆ ಇಳಿದಾಗ, ಉಕ್ರೇನ್ -ರಷ್ಯಾ ಯುದ್ಧ ಮತ್ತು ಅದರಿಂದಾಗಿ ಜಾಗತಿಕ ಬೆಲೆ ಏರಿಕೆ, ತೀವ್ರ ಹಣದುಬ್ಬರ, ಬಡ್ಡಿದರ ಏರಿಕೆ ಎಲ್ಲ ಒಟ್ಟಿಗೆ ಸಂಭವಿಸಿ ಟೆಕ್ ವಲಯ ತಲ್ಲಣಗೊಂಡಿತು. Sequoia, KKR ಮತ್ತು Combinator ನಂತಹ ಬಂಡವಾಳ ಹೂಡಿಕೆದಾರರು ತಾವು ಹಣ ಹಾಕಿದ ಸ್ಟಾರ್ಟಪ್‌ಗಳಿಗೆ ನೇರ ಸೂಚನೆ ನೀಡಿದರು: ''ಖರ್ಚು ಕಡಿಮೆ ಮಾಡಿ, ಲಾಭದತ್ತ ಗಮನ ಕೊಡಿ.'' ಪರಿಣಾಮ - ಸಾಮೂಹಿಕ ಉದ್ಯೋಗ ಕಡಿತ.

ಇದರ ಜೊತೆಗೆ ಈಗ ಹೊಸ ಭೂತ ಒಂದು ಬಂದಿದೆ-ಕೃತಕ ಬುದ್ಧಿಮತ್ತೆ ಅಥವಾ Artificial Intelligence (AI). 2025ರ ವೇಳೆಗೆ ಜಗತ್ತಿನಾದ್ಯಂತ ನಡೆದ ಉದ್ಯೋಗ ಕಡಿತಗಳಲ್ಲಿ ಸುಮಾರು ಶೇ.27ರಷ್ಟು ನೇರವಾಗಿ AI ಮತ್ತು ಸ್ವಯಂಚಾಲಿತ ತಂತ್ರಜ್ಞಾನ ಅಳವಡಿಕೆಯ ಕಾರಣದಿಂದ ಆಗಿವೆ. Customer Support, Data Processing, HR ಆಡಳಿತ ಕಾರ್ಯಗಳನ್ನು AI ವ್ಯವಸ್ಥೆಗಳು ನಿಭಾಯಿಸಲು ಶುರು ಮಾಡಿದ ಮೇಲೆ ಆ ಕೆಲಸ ಮಾಡುತ್ತಿದ್ದ ಮನುಷ್ಯರಿಗೆ ಏನಾಗಬೇಕು? ಅವರಿಗೆ ಗೇಟ್ ಪಾಸ್ ಕೊಡಲಾಯಿತು. World Economic Forum ಅಂದಾಜಿಸಿರುವ ಪ್ರಕಾರ, ಮುಂದಿನ ಮೂರು ವರ್ಷಗಳಲ್ಲಿ 80-85 ಮಿಲಿಯನ್ ಉದ್ಯೋಗಗಳು ಯಂತ್ರ ಮತ್ತು AI ಕಾರಣದಿಂದ ಹೋಗಬಹುದು. ಆದರೆ 170 ಮಿಲಿಯನ್ ಹೊಸ ಉದ್ಯೋಗಗಳು ಸೃಷ್ಟಿಯಾಗಬಹುದು ಎಂದೂ ಹೇಳಲಾಗಿದೆ. ಆದರೆ ಆ ಹೊಸ ಉದ್ಯೋಗಗಳಿಗೆ ಇಂದಿನ ಕೆಲಸಗಾರರು ಸಿದ್ಧರಾಗಿರುವರೇ ಎಂಬ ದೊಡ್ಡ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ.

ಭಾರತದ ಸ್ಟಾರ್ಟಪ್‌ಗಳ ಪಾಲಿಗೆ 2021 ಅತ್ಯಂತ ಸಮೃದ್ಧ ವರ್ಷವಾಗಿತ್ತು. ದೇಶದ ಒಟ್ಟು ಸ್ಟಾರ್ಟಪ್‌ಗಳಿಗೆ ಸುಮಾರು 42 ಬಿಲಿಯ ಡಾಲರ್ ಹೂಡಿಕೆ ಹರಿದುಬಂದಿತ್ತು. ಆದರೆ 2022ರಲ್ಲಿ ಅದು ಸುಮಾರು ಶೇ. 40ರಷ್ಟು ಕಡಿಮೆಯಾಗಿ 25 ಬಿಲಿಯ ಡಾಲರ್‌ಗೆ ಇಳಿಯಿತು. 2023ರಲ್ಲಿ ಇದು ಮತ್ತಷ್ಟು ಕುಸಿಯಿತು. ಬೆಂಗಳೂರನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ 2021ರಲ್ಲಿ 21.3 ಬಿಲಿಯ ಡಾಲರ್ ಹೂಡಿಕೆ ಬಂದಿದ್ದ ನಗರಕ್ಕೆ 2022ರಲ್ಲಿ ಕೇವಲ 11 ಬಿಲಿಯ ಡಾಲರ್ ಮಾತ್ರ ಬಂತು. ಅಂದರೆ ಶೇ 48ರಷ್ಟು ಕುಸಿತ. ಜಗತ್ತಿನ ಪ್ರಮುಖ ಸ್ಟಾರ್ಟಪ್ ಹಬ್‌ಗಳಲ್ಲಿ ಒಂದಾಗಿರುವ ಬೆಂಗಳೂರಿನ ಸ್ಥಿತಿ ಇದಾಗಿದ್ದರೆ, ಭಾರತದ ಉಳಿದ ಭಾಗಗಳ ಬಗ್ಗೆ ಇನ್ನೇನು ಹೇಳಬೇಕು?

2022-23ರ ಆರ್ಥಿಕ ಸಂಕಷ್ಟ ಕಾಲದಲ್ಲಿ ಭಾರತದ ಸ್ಟಾರ್ಟಪ್ ವಲಯದಿಂದ 20,000ಕ್ಕೂ ಹೆಚ್ಚು ಉದ್ಯೋಗಿಗಳು ಕೆಲಸ ಕಳೆದುಕೊಂಡರು. ಬೈಜೂಸ್, ಮೆಡಿಬಡ್ಡಿ, ಕಾರ್ಸ್24, ಓಲಾ, ಓಯೋ, ಮೀಶೋ, ಅನ್ ಅಕ್ಯಾಡಮಿ, ವೇದಾಂತು, ಎಂಪಿಎಲ್ ಸೇರಿ 67ಕ್ಕೂ ಹೆಚ್ಚು ಸ್ಟಾರ್ಟಪ್‌ಗಳು ದೊಡ್ಡ ಪ್ರಮಾಣದ ಉದ್ಯೋಗ ಕಡಿತ ನಡೆಸಿದವು. 2023ರಲ್ಲಿ ಸ್ಟಾರ್ಟಪ್‌ಗಳಿಂದ ಒಟ್ಟು 16,398 ಉದ್ಯೋಗಿಗಳು ಹೊರ ನೂಕಲ್ಪಟ್ಟರು. 2024ರಲ್ಲಿ ಓಲಾ ಎಲೆಕ್ಟ್ರಿಕ್, ಪೇಟಿಎಂ, ಫ್ಲಿಪ್‌ಕಾರ್ಟ್, ಸ್ವಿಗ್ಗಿ, ಅನ್ ಅಕ್ಯಾಡಮಿ ಸೇರಿ 44 ಕಂಪನಿಗಳು 9,000ಕ್ಕೂ ಹೆಚ್ಚು ಉದ್ಯೋಗಿಗಳನ್ನು ಮನೆಗೆ ಕಳಿಸಿದವು.

ಆದರೆ 2025ರ ವೇಳೆಗೆ ಒಳ್ಳೆಯ ಸುದ್ದಿಯೊಂದು ಬಂದಿದೆ. ಭಾರತದ ಸ್ಟಾರ್ಟಪ್‌ಗಳಲ್ಲಿ ಉದ್ಯೋಗ ಕಡಿತದ ಸಂಖ್ಯೆ 2024ಕ್ಕೆ ಹೋಲಿಸಿದರೆ ಶೇ 52ರಷ್ಟು ಕಡಿಮೆಯಾಗಿದೆ. ಅಂಕಿ-ಅಂಶಗಳ ಪ್ರಕಾರ, 2025ರ ಮೊದಲ ಭಾಗದಲ್ಲಿ ಕೇವಲ ಏಳು ಭಾರತೀಯ ಸ್ಟಾರ್ಟಪ್‌ಗಳು 1,602 ಉದ್ಯೋಗಿಗಳನ್ನು ವಜಾ ಮಾಡಿದ್ದು, 2024ರ ಅದೇ ಅವಧಿಗೆ ಹೋಲಿಸಿದರೆ ಇದು ಅರ್ಧಕ್ಕಿಂತ ಕಡಿಮೆ. 2025ರಲ್ಲಿ ಭಾರತೀಯ ಟೆಕ್ ಸ್ಟಾರ್ಟಪ್‌ಗಳು 2.5 ಬಿಲಿಯ ಡಾಲರ್ ಹೂಡಿಕೆ ಆಕರ್ಷಿಸಿದ್ದು, ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 8.7ರಷ್ಟು ಹೆಚ್ಚಳ. ಭಾರತ ಈಗ ಅಮೆರಿಕ ಮತ್ತು ಇಂಗ್ಲೆಂಡ್ ನಂತರ ಜಗತ್ತಿನ ಮೂರನೇ ಅತ್ಯಂತ ದೊಡ್ಡ ಸ್ಟಾರ್ಟಪ್ ಹೂಡಿಕೆ ತಾಣವಾಗಿದ್ದು, ಈ ಒಂದು ಸಂಗತಿ ಆಶಾವಾದದ ಕಿಡಿ ಹೊತ್ತಿಸುತ್ತಿದೆ.

ಇಂದು ಇಡೀ ಜಗತ್ತಿನ ಆರ್ಥಿಕ ಮತ್ತು ತಂತ್ರಜ್ಞಾನ ವಲಯದ ಬಹು ಮುಖ್ಯ ಚರ್ಚೆ Artificial Intelligence (AI) ಸುತ್ತಲೇ ನಡೆಯುತ್ತಿದೆ. ಒಂದು ಕಡೆ ಕಂಪನಿಗಳು AI ಮೂಲಕ ದಕ್ಷತೆ ಹೆಚ್ಚಿಸಿಕೊಳ್ಳಲು ಮಾನವ ಉದ್ಯೋಗಿಗಳನ್ನು ತೆಗೆಯುತ್ತಿವೆ. ಮತ್ತೊಂದು ಕಡೆ, AI ಅಭಿವೃದ್ಧಿಯಲ್ಲೇ ಹೂಡಿಕೆ ಮಾಡಲು ಹಣ ಸಂಗ್ರಹಿಸಲು ಉದ್ಯೋಗ ಕಡಿತ ಮಾಡಲಾಗುತ್ತಿದೆ. ಮೈಕ್ರೋಸಾಫ್ಟ್ ಭಾರಿ ಉದ್ಯೋಗ ಕಡಿತ ಮಾಡಿ ರಿಕಾರ್ಡ್ 76.44 ಬಿಲಿಯ ಡಾಲರ್ ಆದಾಯ ಗಳಿಸಿದೆ. ಮೆಟಾ ಕಂಪನಿ ಕೆಲವು ಸಾವಿರ ಉದ್ಯೋಗ ಕಡಿತ ಮಾಡಿ ಶೇ.22 ಆದಾಯ ಏರಿಕೆ ದಾಖಲಿಸಿದೆ. ಇಲ್ಲಿ ಒಂದು ವಿಚಿತ್ರ ಸಂಗತಿ ಕಾಣಸಿಗುತ್ತದೆ; ಕಂಪನಿಗಳ ಲಾಭ ದಾಖಲೆ ಮಟ್ಟ ತಲುಪಿದೆ, ಆದರೆ ಉದ್ಯೋಗಿಗಳಿಗೆ ಕೆಲಸ ಇಲ್ಲ. ಇನ್ಮುಂದೆ AI ಎಂಬ ತಂತ್ರಜ್ಞಾನದ ಜೊತೆ ಸ್ಪರ್ಧೆ ಮಾಡುತ್ತ ಬದುಕಬೇಕಾದ ಕಾಲ ಬಂದಿದೆ. ಡೇಟಾ ಅನಾಲಿಸಿಸ್, AI ಪ್ರಾಂಪ್ಟ್ ಇಂಜಿನಿಯರಿಂಗ್, ಸೈಬರ್ ಸೆಕ್ಯೂರಿಟಿ, ಕ್ಲೌಡ್ ಕಂಪ್ಯೂಟಿಂಗ್ ಮತ್ತು ಮಾನವ ಭಾವನೆ ಅರ್ಥ ಮಾಡಿಕೊಳ್ಳಬಲ್ಲ ಕೌಶಲ್ಯ... ಇವು AI ಮಾಡಲಾಗದ ಕೆಲಸಗಳು. ಈ ಕ್ಷೇತ್ರಗಳಲ್ಲಿ ಕೌಶಲ್ಯ ಬೆಳೆಸಿಕೊಂಡವರಿಗೆ ಮಾತ್ರ ಮುಂದಿನ ದಶಕ ಸ್ವಾಗತ ಹೇಳಲಿದೆ. ಆದ್ದರಿಂದ ಈಗಲೇ Reskilling ಮತ್ತು Upskilling ಮೇಲೆ ಗಮನ ಕೊಡಬೇಕಾದ ಅನಿವಾರ್ಯ ನಮ್ಮ ಮುಂದಿದೆ.

ಈ ಇಡೀ ಬಿಕ್ಕಟ್ಟಿನಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯ ಒಂದು ದೊಡ್ಡ ವೈಫಲ್ಯ ಇನ್ನಷ್ಟು ಎದ್ದು ಕಾಣುತ್ತಿದೆ. ನಮ್ಮ ದೇಶದ ಯಾವ ಶಾಲೆಯಲ್ಲೂ, ಯಾವ ಕಾಲೇಜಿನಲ್ಲೂ Personal Finance ಎಂಬ ವಿಷಯ ಕಲಿಸಲಾಗುವುದಿಲ್ಲ. ಹಣ ಹೇಗೆ ಸಂಪಾದಿಸಬೇಕು ಎಂದು ಜೀವನವಿಡೀ ಕಲಿಯಲ್ಪಡುತ್ತೇವೆ, ಆದರೆ ಸಂಪಾದಿಸಿದ ಹಣವನ್ನು ಹೇಗೆ ಉಳಿಸಬೇಕು, ಎಲ್ಲಿ ಹೂಡಿಕೆ ಮಾಡಬೇಕು, ತೆರಿಗೆ ಹೇಗೆ ಉಳಿಸಿಕೊಳ್ಳಬೇಕು, ತುರ್ತು ನಿಧಿ ಹೇಗೆ ನಿರ್ಮಿಸಬೇಕು ಎಂಬ ಕನಿಷ್ಠ ಜ್ಞಾನ ಯಾರೂ ಕಲಿಸಿಕೊಡುವುದಿಲ್ಲ. ಲಕ್ಷಲಕ್ಷ ಸಂಬಳ ಪಡೆಯುವ ಉದ್ಯೋಗಿ ಇದ್ದಕ್ಕಿದ್ದಂತೆ ಕೆಲಸ ಕಳೆದುಕೊಂಡಾಗ, ಅವನ ಹತ್ತಿರ ಒಂದು ತಿಂಗಳ ಖರ್ಚಿಗೆ ಕೂಡ ಉಳಿತಾಯ ಇಲ್ಲದ ಸ್ಥಿತಿ ನಿಜಕ್ಕೂ ಅಯ್ಯೋ ಅನ್ನಿಸುತ್ತದೆ. ಹಣಕಾಸು ತಜ್ಞರು ಹೇಳುವ ಪ್ರಕಾರ, ಕನಿಷ್ಠ 6 ತಿಂಗಳ ಜೀವನ ವೆಚ್ಚಕ್ಕೆ ತಕ್ಕ Emergency Fund ಇರಬೇಕು. SIP (Systematic Investment Plan), ಮ್ಯೂಚ್ಯುಯಲ್ ಫಂಡ್, ಇನ್ಶೂರೆನ್ಸ್ ಇವುಗಳ ಬಗ್ಗೆ ಮೂಲ ಅರಿವಿರಬೇಕು. Passive Income ಎಂದರೆ ಕೆಲಸ ಇಲ್ಲದಿದ್ದರೂ ಒಳಗೆ ಬರುವ ಆದಾಯ - ಬಾಡಿಗೆ, ಷೇರು ಲಾಭಾಂಶ, ಡಿಜಿಟಲ್ ಉತ್ಪನ್ನ - ಇವನ್ನು ಬೆಳೆಸಿಕೊಳ್ಳುವ ಅಗತ್ಯ ಈ ಅನಿಶ್ಚಿತ ಕಾಲದಲ್ಲಿ ಮತ್ತಷ್ಟು ತೀಕ್ಷ್ಣವಾಗಿ ಅನ್ನಿಸುತ್ತಿದೆ.

ಜಗತ್ತಿನ ಅನೇಕ ಕಂಪನಿಗಳು ಭಾರತೀಯ ಉದ್ಯೋಗಿಗಳನ್ನು ಆದರಿಸಲು ಮುಖ್ಯ ಕಾರಣ ಕೆಲಸದ ಬಗೆಗಿನ ಶ್ರದ್ಧೆ, ನಿಷ್ಠೆ ಮತ್ತು ತ್ಯಾಗ. ದಿನ-ರಾತ್ರಿ ಕೆಲಸ ಮಾಡಿ ಡೆಡ್‌ಲೈನ್ ಪೂರೈಸುವ ನಮ್ಮ ಮನೋಭಾವ ಜಗತ್ತಿನ ಹಲವು ದೇಶಗಳಲ್ಲಿ ಮೆಚ್ಚುಗೆ ಪಡೆದಿದೆ. ಆದರೆ ಅದೇ ಅತಿಯಾದ ಕೆಲಸದ ಪ್ರೀತಿ ಒಳ್ಳೆಯದಲ್ಲ ಎಂಬ ಸತ್ಯ ಕೂಡ ಅಷ್ಟೇ ಮಹತ್ವದ್ದು. ಆರೋಗ್ಯ, ಕುಟುಂಬ, ಖುಷಿ ಇವೆಲ್ಲ ಕೆಲಸಕ್ಕಿಂತ ಮೊದಲು ಎಂದು ನಾವು ಭಾರತೀಯರು ತಿಳಿದುಕೊಳ್ಳಬೇಕು. ಕಂಪನಿಗಳು ನಮಗೆ ಭಾವನಾತ್ಮಕ ಸಂಬಂಧ ತೋರಿಸುವ ರೀತಿಯಲ್ಲೇ ಲಾಭ-ನಷ್ಟ ನೋಡಿ ನಮ್ಮನ್ನು ಸ್ಪ್ರೆಡ್‌ಶೀಟ್‌ನ ಸಂಖ್ಯೆಯಂತೆ ತೆಗೆದುಬಿಡಬಹುದು ಎಂಬ ವಾಸ್ತವ ಅರ್ಥ ಮಾಡಿಕೊಳ್ಳಬೇಕಿದೆ. Work to Live, not Live to Work ಎಂಬ ತತ್ತ್ವ ನಮ್ಮ ಮೂಲ ಸೂತ್ರವಾಗಬೇಕಿದೆ.

ಆರ್ಥಿಕ ಹಿಂಜರಿತ, ಉದ್ಯೋಗ ನಷ್ಟ ಮತ್ತು AI ಎಂಬ ಮೂರು ಸವಾಲುಗಳನ್ನು ಎದುರಿಸಲು ನಾವು ಕೆಲವು ಮೂಲ ತಯಾರಿ ಮಾಡಿಕೊಳ್ಳಬೇಕಿದೆ: ಮೊದಲನೆಯದಾಗಿ, ಕೌಶಲ್ಯ ನವೀಕರಣ ಅಥವಾ Reskilling ಅಗತ್ಯ. ಇಂದಿನ ಕೆಲಸ ನಾಳೆ AI ಮಾಡಿದರೆ ಏನು ಮಾಡುವುದು ಎಂದು ಯೋಚಿಸಿ, ಆ ದಿನಕ್ಕೆ ಮೊದಲೇ ಹೊಸ ಕೌಶಲ್ಯ ಕಲಿಯಬೇಕು. ಎರಡನೆಯದಾಗಿ, ಹಣಕಾಸು ಶಿಕ್ಷಣ ತೆಗೆದುಕೊಳ್ಳಬೇಕು. ಉಳಿತಾಯ, ಹೂಡಿಕೆ, ವಿಮೆ, ತೆರಿಗೆ ನಿರ್ವಹಣೆ - ಇವನ್ನು ಅರ್ಥ ಮಾಡಿಕೊಳ್ಳಬೇಕು. ಮೂರನೆಯದಾಗಿ, Passive Income ಮೂಲ ನಿರ್ಮಿಸಿಕೊಳ್ಳಬೇಕು. ನಾಲ್ಕನೆಯದಾಗಿ, Emergency Fund ಸಿದ್ಧ ಮಾಡಿಕೊಳ್ಳಬೇಕು, ಕನಿಷ್ಠ 6 ತಿಂಗಳ ಜೀವನ ವೆಚ್ಚ ಕೈಯಲ್ಲಿ ಇಟ್ಟುಕೊಳ್ಳಬೇಕಾದ ಅನಿವಾರ್ಯತೆ ಈಗ ಇದೆ. ಐದನೆಯದಾಗಿ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು. ಕೆಲಸ ಹೋದರೆ ಮನಸ್ಸು ಹಾಳಾಗಬಹುದು.

ಲೇಮನ್ ಬ್ರದರ್ಸ್ ಹಗರಣದಿಂದ ಪಾಠ ಕಲಿಯಲಾಗಿಲ್ಲ, ಕೋವಿಡ್‌ನ ಸಂಕಟದಿಂದ ಕಲಿಯಲಾಗಿಲ್ಲ ಎಂದು ಕಾಣಿಸುತ್ತಿದೆ. ಆದರೆ AI ಎಂಬ ಈ ನೂತನ ಕ್ರಾಂತಿ ಮತ್ತು ಆರ್ಥಿಕ ಅನಿಶ್ಚಿತತೆ ಜೊತೆಯಾಗಿ ಬಂದಾಗ, ಇನ್ನಾದರೂ ನಾವು ಕಲಿಯಬೇಕಿದೆ. ಕೆಲಸವೇ ಜೀವನ ಎಂಬ ಭ್ರಮೆ ಬಿಟ್ಟು, ಬದುಕಲು ಕೆಲಸ ಮಾಡುವ ಪ್ರಜ್ಞೆ ಬರಬೇಕಿದೆ. ಒಂದೇ ಸಂಸ್ಥೆಯ ಸಂಬಳಕ್ಕೆ ಜೀವ ತೊರೆಯದೆ, ನಮ್ಮ ಹಣಕಾಸು ಸ್ವಾತಂತ್ರ್ಯ ಕಟ್ಟಿಕೊಳ್ಳಬೇಕಿದೆ.

ಹಿಮಾಲಯದ ಹೀರೋ ದೈತ್ಯ ಯಾಕ್

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಯಾಕ್ ಎಂಬುದು ದೊಡ್ಡ ಗಾತ್ರದ ಸಸ್ಯಾಹಾರಿ ಪ್ರಾಣಿಯಾಗಿದ್ದು, ಹಿಮಾಲಯದ ತಪ್ಪಲಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ವಿಪರ್ಯಾಸವೆಂದರೆ ಹಿಮಾಲಯದ ತಪ್ಪಲಿನಲ್ಲಿ ತನ್ನದೇ ಸಾಮ್ರಾಜ್ಯವನ್ನು ಕಟ್ಟಿಕೊಂಡು ಬದುಕುತ್ತಿದ್ದ ಈ ಪ್ರಾಣಿ ಇಂದು ಅವಸಾನದ ಅಂಚಿನಲ್ಲಿದೆ. ಪ್ರವಾಸಕ್ಕೇನಾದರೂ ಹಿಮಾಲಯದ ತಪ್ಪಲಿನ ಪ್ರದೇಶಗಳಿಗೆ ಹೋದಲ್ಲಿ ಈ ಅಪರೂಪದ ಪ್ರಾಣಿಯನ್ನು ಕಾಣಬಹುದು. ಅಲ್ಲಿನ ಹೆಚ್ಚಿನ ಪ್ರವಾಸಿ ತಾಣಗಳಲ್ಲಿ ಇವುಗಳ ಮೇಲೆ ಪ್ರವಾಸಿಗರನ್ನು ಸವಾರಿ ಮಾಡಿಸಲೆಂದೇ ಸಾಲಾಗಿ ಇವುಗಳನ್ನು ಕಟ್ಟಿಹಾಕಲಾಗುತ್ತದೆ. ಚಿಕ್ಕ ಮಕ್ಕಳಲ್ಲದೇ ದೊಡ್ಡವರಿಗೂ ಸಹ ಒಮ್ಮೆಲೆ ಇದರ ಬಳಿ ಹೋಗಲು ಹಿಂಜರಿಕೆಯಾಗುವಂತಿದೆ.. ಅಂತಹ ದೈತ್ಯ ದೇಹ ಈ ಪ್ರಾಣಿಯದ್ದು. ಭಾರತದಲ್ಲಿ ಲಡಾಖ್, ಸಿಕ್ಕಿಂ ಮತ್ತು ಅರುಣಾಚಲ ಪ್ರದೇಶದಲ್ಲಿ ಇವು ಹೆಚ್ಚಾಗಿ ಕಂಡುಬರುತ್ತವೆ. ಹಾಗೆಯೇ ಟಿಬೇಟ್, ನೇಪಾಳ, ಮಂಗೋಲಿಯಾ, ಸೈಬೀರಿಯಾ ಮತ್ತು ಚೀನಾದ ಹಿಮಾಲಯ ಪ್ರದೇಶಗಳಲ್ಲಿ ಇವು ಕಂಡುಬರುತ್ತವೆ. ವಿವಿಧ ಪ್ರದೇಶಗಳಲ್ಲಿ ಇವುಗಳನ್ನು ಹಲವು ಹೆಸರುಗಳಿಂದ ಕರೆಯಲಾಗುತತಿದ್ದು, ಭಾರತದಲ್ಲಿ ಒಂಟೆಕೋಲು ಪ್ರಾಣಿ ಎಂದೂ ಕರೆಯಲಾಗುತ್ತದೆ.

ಹಿಮಾಲಯ ಪರ್ವತಗಳ ಮಧ್ಯದಲ್ಲಿ ಮತ್ತು ಎತ್ತರದ ಹಿಮ ಮುಚ್ಚಿದ ಪ್ರದೇಶಗಳಲ್ಲಿ ಯಾಕ್ ಸಾಮಾನ್ಯವಾಗಿ ವಾಸಿಸುತ್ತದೆ. ಗಟ್ಟಿಯಾದ ದೇಹವನ್ನು ಹೊಂದಿರುವ ಇದು ಅತೀ ಶಕ್ತಿಶಾಲಿ ಮತ್ತು ಧೈರ್ಯಶಾಲಿ ಪ್ರಾಣಿ. ಇವುಗಳು ಸಸ್ತನಿ ಪ್ರಾಣಿಗಳಾಗಿದ್ದು, ಹುಲ್ಲು, ಗಿಡಗಳ ಕಾಂಡ, ಬಳ್ಳಿಗಳು ಮತ್ತು ಗಿಡದ ಬೇರುಗಳು ಹಾಗೂ ಹಿಮದ ಅಡಿಯಲ್ಲಿ ಬೆಳೆಯುವ ಗಿಡಗಳನ್ನು ಆಹಾರವಾಗಿ ಸೇವಿಸುತ್ತವೆ. ಇವುಗಳ ವಿಶೇಷತೆ ಎಂದರೆ ಚಳಿಗಾಲದಲ್ಲೂ ಹಿಮದಿಂದ ಆವೃತವಾದ ಪ್ರದೇಶದಲ್ಲೂ ಭೂಮಿಯನ್ನು ತೋಡಿ ಹುಲ್ಲನ್ನು ಹುಡುಕಿ ಮೇಯುತ್ತವೆ. ಇವುಗಳು ಒಂಟಿಯಾಗಿ ಇರದೇ ಗುಂಪುಗಳಲ್ಲೇ ಕಂಡುಬರುತ್ತವೆ. ದಟ್ಟ ಚಳಿ ಮತ್ತು ಹಿಮಮಯ ಪ್ರದೇಶ ಇವುಗಳ ವಾಸಸ್ಥಾನ. ಹಿಮದ ತೀಕ್ಷ್ಣ ಚಳಿಯಿಂದ ಇದನ್ನು ರಕ್ಷಿಸುವುದು ದಪ್ಪನಾದ ಮತ್ತು ಉದ್ದವಾದ ಇದರ ಕೂದಲುಗಳು. ಇದರೊಂದಿಗೆ ದಪ್ಪನಾದ ಚರ್ಮ ಮತ್ತು ಅದರಲ್ಲಿರುವ ದಪ್ಪನಾದ ಕೊಬ್ಬಿನಂಶದಿಂದ ಇದು ಚಳಿಯನ್ನು ಸಹಿಸಲು ಶಕ್ತವಾಗಿದೆ. ಹೀಗಾಗಿ ಇವುಗಳು ಶೂನ್ಯಕ್ಕೂ ಕಡಿಮೆ ತಾಪಮಾನದಲ್ಲೂ ಸಹ ಬದುಕಬಲ್ಲವಾಗಿದ್ದು, ಮೈನಸ್ ನಲವತ್ತು ಡಿಗ್ರಿ ತಾಪಮಾನವನ್ನು ಸಾಮಾನ್ಯವಾಗಿ ಸಹಿಸಿಕೊಳ್ಳಬಲ್ಲವಾಗಿವೆ. ಉಷ್ಣತೆ ಕಡಿಮೆ ಇರುವ ಪ್ರದೇಶಗಳಲ್ಲಿ ಇವು ಹೆಚ್ಚಾಗಿ ಕಂಡುಬರುತ್ತವೆ. ಸಮುದ್ರ ಮಟ್ಟಕ್ಕಿಂತ 9,800 ರಿಂದ 18,000 ಅಡಿ ಎತ್ತರದ ಪ್ರದೇಶಗಳಲ್ಲಿ ಇವುಗಳು ಕಂಡುಬರುತ್ತವೆ. ಇವುಗಳ ರಕ್ತದಲ್ಲಿ ಹೆಚ್ಚಿನ ಹಿಮೋಗ್ಲೋಬಿನ್ ಇರುವುದರಿಂದ ಆಮ್ಲಜನಕದ ಮಟ್ಟ ಕಡಿಮೆ ಇರುವ ಎತ್ತರದ ಪ್ರದೇಶಗಳಲ್ಲೂ ಇವುಗಳು ಸುಲಭವಾಗಿ ಉಸಿರಾಡಬಲ್ಲವು ಮತ್ತು ಬದುಕಬಲ್ಲವು. ಅಲ್ಲಿ ಸಿಗುವ ಅಲ್ಪ ಪ್ರಮಾಣದ ಆಮ್ಲಜನಕವನ್ನು ಸರಿಯಾಗಿ ಹೀರಿಕೊಳ್ಳಬಲ್ಲ ಶಕ್ತಿ ಇವುಗಳಿಗಿರುವುದೇ ಇದಕ್ಕೆ ಕಾರಣ.

ಇವುಗಳ ಬಾಲ ದೇಶಿ ಗೋತಳಿಗಳಂತೆ ಉದ್ದವಾಗಿರುತ್ತದೆ. ಎತ್ತರದ ಪರ್ವತಗಳನ್ನು ಸುಲಭವಾಗಿ ಏರಲು ಪಾದಗಳು ಸಹಾಯ ಮಾಡುವುದರಿಂದ ಇವು ಪರ್ವತ ಪ್ರದೇಶಗಳಲ್ಲಿ ಸುಲಭವಾಗಿ ಸಂಚರಿಸಬಲ್ಲವಾಗಿವೆ. ಇವುಗಳ ನಡಿಗೆ ಸ್ವಲ್ಪ ನಿಧಾನ. ಹೀಗಾಗಿ ಇವುಗಳು ಓಡುವುದನ್ನು ನೋಡಿದವರ ಸಂಖ್ಯೆ ಅತಿ ವಿರಳ ಎಂದೇ ಹೇಳಬಹುದು. ಇವುಗಳನ್ನು ಹೆಚ್ಚಾಗಿ ಭಾರವನ್ನು ಸಾಗಿಸಲು ಮತ್ತು ಪರ್ವತಗಳಲ್ಲಿ ಪ್ರಯಾಣಿಸಲು ಬಳಸಲಾಗುತ್ತದೆ. ಇವುಗಳಲ್ಲಿ ಗಂಡುಗಳು ಹೆಣ್ಣುಗಳಿಗಿಂತ ಹೆಚ್ಚು ತೂಕವನ್ನು ಹೊಂದಿರುತ್ತವೆ. ಹೆಣ್ಣುಗಳು 300 ರಿಂದ 500 ಕೆಜಿಯಷ್ಟು ತೂಕವನ್ನು ಹೊಂದಿದ್ದರೆ, ಗಂಡುಗಳು ಸುಮಾರು ಒಂದು ಟನ್‌ವರೆಗೂ ತೂಕವನ್ನು ಹೊಂದಿರುತ್ತವೆ.

ಬೋವಿಡೇ ಕುಟುಂಬಕ್ಕೆ ಸೇರಿದ ಇವುಗಳಲ್ಲಿ ಸಾಮಾನ್ಯವಾಗಿ ಎರಡು ಪ್ರಭೇದಗಳಿವೆ. ಮೊದಲನೆಯದು ಬಾಸ್ ಗ್ರೂನ್ನೀನ್ಸ್ ಮತ್ತು ಎರಡನೆಯದು ಬಾಸ್ ಮೂಟಸ್ ಎಂಬುದಾಗಿ. ಬಾಸ್ ಗ್ರೂನ್ನೀನ್ಸ್ ಎನ್ನುವುದನ್ನು ಹೆಚ್ಚಾಗಿ ಮನುಷ್ಯರು ತಮ್ಮ ದಿನನಿತ್ಯದ ಸಂಪನ್ಮೂಲಗಳಿಗಾಗಿ ಸಾಕಿಕೊಂಡಿರುವುದು ಕಂಡುಬರುತ್ತದೆ. ಇದರ ಹಾಲು ಮತ್ತು ಮಾಂಸವನ್ನು ಆಹಾರವಾಗಿ ಬಳಸಲಾಗುತ್ತದೆ. ಇದನ್ನು ಸರಕು ಹಾಗೂ ಜನರ ಸಾಗಾಣಿಕೆಗೆ ಹೆಚ್ಚಾಗಿ ಬಳಸಲಾಗುತ್ತದೆ. ಮತ್ತೊಂದು ಪ್ರಭೇದವಾದ ಬಾಸ್ ಮೂಟಸ್ ಮನುಷ್ಯರಿಂದ ದೂರವಿದ್ದು, ಎತ್ತರದ ಪ್ರದೇಶಗಳಲ್ಲಿ ಸ್ವತಂತ್ರವಾಗಿ ವಾಸಿಸುತ್ತದೆ. ಇದನ್ನು ಕಾಡು ಯಾಕ್ ಎಂದು ಸಹ ಕರೆಯಲಾಗುತ್ತದೆ. ಈ ಎರಡು ಪ್ರಭೇದಗಳಲ್ಲೂ ಇವುಗಳ ಸಂತತಿ ಇಂದು ವಿನಾಶದ ಅಂಚಿನಲ್ಲಿದೆ. ಹೀಗಾಗಿ ಐ.ಯೂ.ಸಿ.ಎನ್.(ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್) ಇದನ್ನು ಅಪಾಯದಲ್ಲಿರುವ ಪ್ರಾಣಿಗಳ ಪಟ್ಟಿಗೆ ಸೇರಿಸಿದೆ. ಇವುಗಳು ನಾಶವಾಗುತ್ತಿರುವುದಕ್ಕೆ ಸಾಕಷ್ಟು ಕಾರಣಗಳಿವೆ. ಇವುಗಳನ್ನು ಆಹಾರವಾಗಿ ಸೇವಿಸುತ್ತಿರುವುದು, ಇದೊಂದು ಹೆಚ್ಚಿನ ಮಾರಾಟದ ವಸ್ತುವಾಗಿರುವುದು, ಇವುಗಳು ವಾಸಿಸುವ ಸ್ಥಳ ನಗರೀಕರಣವಾಗುತ್ತಿರುವುದು, ವಾತಾವರಣದಲ್ಲಾಗುವ ಬದಲಾವಣೆಗಳು ಮತ್ತು ಇವುಗಳನ್ನು ಬೇಟೆಯಾಡುವ ಪ್ರವೃತ್ತಿ ಇವುಗಳನ್ನಿಂದು ಇನ್ನಿಲ್ಲದಂತೆ ಮಾಡುತ್ತಿವೆ. ಇದನ್ನು ಮನಗಂಡ ಚೀನಾ ಸರ್ಕಾರ ಮತ್ತು ಅಂತಾರಾಷ್ಟ್ರೀಯ ಜೀವಶಾಸ್ತ್ರ ಸಂಸ್ಥೆಗಳು ಇದರ ಸಂರಕ್ಷಣೆಗೆ ಇಂದು ಟೊಂಕ ಕಟ್ಟಿ ನಿಂತು ಕೆಲಸ ಮಾಡುತ್ತಿವೆ. ಚೀನಾ, ಟಿಬೇಟ್ ಮತ್ತು ನೇಪಾಳದಲ್ಲಿ ಇವುಗಳ ಉಳಿವಿಗಾಗಿ ಕಾನೂನು ರೂಪಿಸಲಾಗಿದ್ದು, ಇದರ ಜೊತೆಗೆ ನೈಸರ್ಗಿಕ ಅಭಯಾರಣ್ಯಗಳನ್ನು ನಿರ್ಮಿಸಲಾಗಿದೆ. ಹಾಗೆಯೇ ಜೀವವೈವಿಧ್ಯ ಸಂರಕ್ಷಣಾ ಯೋಜನೆಗಳನ್ನು ಸಹ ಇದರ ಅಸ್ತಿತ್ವಕ್ಕಾಗಿ ರೂಪಿಸಲಾಗಿದೆ.

ಇವು ಹಿಮಾಲಯ ತಪ್ಪಲಿನಲ್ಲಿ ವಾಸಿಸುವ ಜನರ ಜೀವನದ ಒಂದು ಭಾಗವಾಗಿದೆ. ಹಿಮಾಲಯದ ತಪ್ಪಲಿನಲ್ಲಿ ವಾಸಿಸುವ ಜನರು ತಮ್ಮ ಜೀವನೋಪಾಯಕ್ಕಾಗಿ ಇವನ್ನು ಸಾಕುತ್ತಾರೆ. ದಪ್ಪನಾದ ಮತ್ತು ಪೌಷ್ಟಿಕತೆಯಿಂದ ಕೂಡಿರುವ ಇದರ ಹಾಲನ್ನು ಪ್ರತಿನಿತ್ಯ ಸೇವಿಸುತ್ತಾರೆ. ಇದರ ಹಾಲಿನಿಂದ ಮಖಾನ್ ಹಾಗೂ ಚೀಸ್ ತಯಾರಿಸಿ ಆಹಾರದ ಒಂದು ಭಾಗವಾಗಿ ಸೇವಿಸುತ್ತಾರೆ. ಇದರ ಮಾಂಸವನ್ನು ಆಹಾರವಾಗಿ ಮತ್ತು ಇದರ ಚರ್ಮವನ್ನು ಚಳಿಯಿಂದ ರಕ್ಷಣೆ ಪಡೆಯಲು ಬಟ್ಟೆಯಾಗಿ ಬಳಸುತ್ತಾರೆ. ವಿಶೇಷವಾಗಿ ತಮಾಂಗ್ ಎಂಬ ಬುಡಕಟ್ಟು ಜನಾಂಗದ ಗೋರಖಿ ಜನರ ಹಿಂಡಿಗೆ ಈ ಪ್ರಾಣಿ ಸೇರಿದ್ದಾಗಿದೆ ಎನ್ನಲಾಗುತ್ತದೆ. ಇವರ ಬದುಕಿನಲ್ಲಿ ಯಾಕ್‌ಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಇವುಗಳು ಅವರಿಗೆ ಸಾಗಾಣಿಕೆಗೆ, ಹಾಲಿಗೆ, ಬೆಚ್ಚಗಿನ ಇದರ ಉಣ್ಣೆಗೆ ಮತ್ತು ಮಾಂಸಕ್ಕಾಗಿ ಅತ್ಯವಶ್ಯಕವಾಗಿದೆ. ಪ್ರತಿವರ್ಷ ಈ ಜನಾಂಗ ಚಳಿಗಾಲಕ್ಕೆ ಸೂಕ್ತ ಸ್ಥಳವನ್ನು ಹುಡುಕಿಕೊಂಡು ಪರ್ವತಗಳ ಮೂಲಕ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗುತ್ತವೆ. ಈ ಸಂದರ್ಭದಲ್ಲಿ ಯಾಕ್ ಇವರಿಗೆ ಅತ್ಯಂತ ಭರವಸೆಯ ಪ್ರಾಣಿಯಾಗಿದೆ. ಇದು ದೊಡ್ಡ ದೊಡ್ಡ ಸರಕುಗಳನ್ನು ಹೊತ್ತು ಸಾಗಿಸುತ್ತದೆ. ಸರಕು ಸರಂಜಾಮು ಸೇರಿದಂತೆ ನಡೆಯಲಾಗದ ಮಕ್ಕಳು ಮತ್ತು ವೃದ್ಧರನ್ನು ಸಹ ಇದು ಹೊತ್ತು ಸಾಗುತ್ತದೆ.

ಒಂದರ್ಥದಲ್ಲಿ ಇದು ಹಿಮಾಲಯ ಮತ್ತು ಟಿಬೇಟ್ ಪ್ರದೇಶದ ಜನರ ಜೀವನ ಶೈಲಿಗೆ ಅತಿ ಮಹತ್ವವಾದ ಪ್ರಾಣಿಯಾಗಿದೆ. ಇವುಗಳು ನೀಡುವ ಹಾಲು, ಚರ್ಮ ಮತ್ತು ಇವುಗಳ ಭಾರ ಹೊರುವ ಸಾಮರ್ಥ್ಯ ಹಾಗೂ ಆಹಾರದ ರೂಪದಲ್ಲಿ ಇವುಗಳು ಲಭ್ಯವಿರುವುದರಿಂದ ಈ ಭಾಗದ ಜನರ ಜೀವನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಇದರ ಹಾಲಿನಿಂದ ತಯಾರಿಸಲಾಗುವ ಬಟರ್ ಟೀ ಟಿಬೇಟಿಯನ್ನರ ಅತ್ಯುತ್ತಮ ಪಾನಿಯಗಳಲ್ಲೊಂದು. ಟಿಬೇಟಿಯನ್ನರು ಯಾಕ್‌ನ್ನು ತಮ್ಮ ಸಾಂಪ್ರದಾಯಿಕ ಕ್ರೀಡೆಗಳಲ್ಲಿ ಬಳಸುತ್ತಾರೆ. ಇಲ್ಲಿ ಪ್ರತಿವರ್ಷ ಇವುಗಳ ರೇಸ್‌ಗಳು ನಡೆಯುತ್ತವೆ. ಈ ಕ್ರೀಡೆ ಇಲ್ಲಿಯ ಜನರ ನೆಚ್ಚಿನದಾಗಿದ್ದು, ಬಹು ಜನಪ್ರಿಯವಾದುದಾಗಿದೆ. ಟಿಬೇಟ್ ಮತ್ತು ಮಂಗೋಲಿಯಾದಲ್ಲಿ ಜನರು ಇದನ್ನು ಪವಿತ್ರ ಪ್ರಾಣಿಯನ್ನಾಗಿ ಪರಿಗಣಿಸುತ್ತಾರೆ. ಹೀಗಾಗಿ ಇದರ ಕೊಂಬಿಗೆ ಪವಿತ್ರ ತುಳಸಿ ಹೂವಿನ ಮಾಲೆ ಕಟ್ಟಿ ಪೂಜೆ ಮಾಡಿ ಪ್ರಾರ್ಥಿಸುತ್ತಾರೆ. ಭಾರತದಲ್ಲೂ ಇವುಗಳು ಹೆಚ್ಚಾಗಿ ಕಂಡುಬರುವ ಪ್ರದೇಶಗಳಲ್ಲಿ ಕೆಲವೊಂದು ಸಮುದಾಯ ಗಳು ಗೋವುಗಳಂತೆ ಇವುಗಳನ್ನು ಇಂದಿಗೂ ಪೂಜಿಸಿ ಆರಾಧಿಸುತ್ತವೆ.

ಈ ಜೀವಿಯನ್ನು ಸಂರಕ್ಷಿಸುವುದು ಪರಿಸರದ ಉಳಿವಿಗಾಗಿ ಅತಿ ಮುಖ್ಯ ಎಂಬುದು ವಿಶ್ವದ ಬಹುತೇಕ ಪರಿಸರ ಪ್ರೇಮಿಗಳ ಮತ್ತು ಪ್ರಾಣಿ ಪ್ರೇಮಿಗಳ ಬಹು ದಿನದ ಬೇಡಿಕೆಯಾಗಿದೆ. ನೇಪಥ್ಯಕ್ಕೆ ಸರಿಯುವ ಮುನ್ನ ಈ ಪ್ರಾಣಿಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಸ್ಥಳೀಯ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ಮಾಡಬೇಕಿದೆ. ಇಲ್ಲವಾದಲ್ಲಿ ಮುಂದಿನ ಜನಾಂಗ ಈ ಅಪರೂಪದ ತಳಿಯನ್ನು ನೋಡಲು ಸಾಧ್ಯವಿಲ್ಲ.

ಶಿವರಾಜ್ ಸಿಂಗ್ ಚೌಹಾಣ್‌ರಿಂದ ಇಂದು ಚಾಲನೆ

ಭಾರತ್ ವಿಸ್ತಾರ್‌ನಿಂದ ಎಐ ರೈತ ಕ್ರಾಂತಿಯತ್ತ

ಜೈಪುರ: ರೈತರಿಗೆ ಡಿಜಿಟಲ್ ಸಹಚರನಾಗಿ ರೂಪುಗೊಂಡಿರುವ ಎಐ ಆಧಾರಿತ ವೇದಿಕೆ ಭಾರತ್-ವಿಸ್ತಾರ್‌ಗೆ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಮಂಗಳವಾರ ಇಲ್ಲಿ ಚಾಲನೆ ನೀಡಲಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಅಭಿವೃದ್ಧಿಗೊಂಡಿರುವ ಈ ರೈತ ಕೇಂದ್ರಿತ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಹವಾಮಾನ ಮುನ್ಸೂಚನೆ, ಮಾರುಕಟ್ಟೆ ದರ, ಕೀಟ-ರೋಗ ನಿರ್ವಹಣೆ, ಮಣ್ಣು ಆರೋಗ್ಯ, ಬೆಳೆ ಸಲಹೆ ಹಾಗೂ ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳ ಮಾಹಿತಿಯನ್ನು ಒಂದೇ ವೇದಿಕೆಯಲ್ಲಿ ರೈತರಿಗೆ ಒದಗಿಸುವ ಉದ್ದೇಶ ಹೊಂದಿದೆ. ಇತ್ತೀಚೆಗಷ್ಟೇ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ್ದ ಬಜೆಟ್‌ನಲ್ಲಿ ಇದರ ಪ್ರಸ್ತಾಪವಾಗಿತ್ತು.

ವಾಯ್ಸ್-ಫಸ್ಟ್ ಎಐ ತತ್ವದಲ್ಲಿ ವಿನ್ಯಾಸಗೊಂಡಿರುವ ಭಾರತ್-ವಿಸ್ತಾರ್, ಸರಳ ಫೀಚರ್ ಫೋನ್ ಬಳಕೆದಾರರಿಗೂ ಲಭ್ಯವಾಗುವಂತೆ ರೂಪಿಸಲಾಗಿದೆ. ರೈತರು 155261 ಸಹಾಯವಾಣಿ ಗೆ ಕರೆಮಾಡುವ ಮೂಲಕ ಹವಾಮಾನ, ಮಾರುಕಟ್ಟೆ ದರ, ಯೋಜನೆಗಳ ವಿವರ, ಲಾಭ ಸ್ಥಿತಿ, ದೂರು ನೋಂದಣಿ ಸೇರಿದಂತೆ ವಿವಿಧ ಸೇವೆಗಳನ್ನು ಪಡೆಯಬಹುದು. ವೆಬ್‌ಸೈಟ್, ಮೊಬೈಲ್ ಸೈಟ್ ಚಾಟ್ ಬಾಟ್ ಹಾಗೂ ಆ್ಯಂಡ್ರಾಯ್ಡ್ ಆ್ಯಪ್ ಸೌಲಭ್ಯವೂ ಹಂತ ಹಂತವಾಗಿ ಲಭ್ಯವಾಗಲಿದೆ.

ಪ್ರಥಮ ಹಂತದಲ್ಲಿ ಐಎಂಡಿಯಿಂದ ಹವಾಮಾನ ಮಾಹಿತಿ, ಎಜಿಮಾರ್ಕೆಟ್‌ನಿಂದ ಮಾರುಕಟ್ಟೆ ದರ, ರಾಷ್ಟ್ರೀಯ ಕೀಟ ನಿಗಾವಳಿ ವ್ಯವಸ್ಥೆ (ಎನ್‌ಪಿಎಸ್‌ಎಸ್) ಮೂಲಕ ಕೀಟ-ರೋಗ ನಿರ್ವಹಣೆ, ಅಗ್ರಿ-ಸ್ಟೇಕ್ ಡೇಟಾ ಹಾಗೂ 10 ಪ್ರಮುಖ ಕೇಂದ್ರ ಯೋಜನೆಗಳ ವಿವರಗಳನ್ನು ಒಂದೆಡೆ ಸೇರಿಸಲಾಗಿದೆ. ಯೋಜನೆ ಅರ್ಜಿ ಸ್ಥಿತಿ, ಟ್ರ್ಯಾಕಿಂಗ್ ಮತ್ತು ದೂರು ಪರಿಹಾರ ವ್ಯವಸ್ಥೆಯೂ ವೇದಿಕೆಯಲ್ಲಿ ಒಳಗೊಂಡಿದೆ. ಈ ಸಂದರ್ಭದಲ್ಲಿ ಎಐ ಫಾರ್ ಅಗ್ರಿಕಲ್ಚರ್ ರೋಡ್‌ಮ್ಯಾಪ್ ಬಿಡುಗಡೆಗೊಳ್ಳಲಿದ್ದು, ಎಐ ಹ್ಯಾಕಥಾನ್ ಹಾಗೂ ಅಗ್ರಿಕೋಶ್ ಕುರಿತ ಘೋಷಣೆಗಳೂ ನಡೆಯಲಿವೆ.

ಭಾರತ್-ವಿಸ್ತಾರ್ ಮುಂದಿನ ತಿಂಗಳುಗಳಲ್ಲಿ ಕನ್ನಡ ಸೇರಿದಂತೆ ಹಲವು ಭಾರತೀಯ ಭಾಷೆಗಳಿಗೆ ವಿಸ್ತರಿಸಲಿದ್ದು, ದೇಶವ್ಯಾಪಿ ರೈತರಿಗೆ ಒಂದೇ ವಿಶ್ವಾಸಾರ್ಹ ಡಿಜಿಟಲ್ ದ್ವಾರವಾಗಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ.



ಭಾರತೀ ಎಐ ಸಹಾಯಕ

ವೇದಿಕೆಯೊಳಗಿನ ಭಾರತೀ ಎಂಬ ಎಐ ಸಹಾಯಕ ರೈತರೊಂದಿಗೆ ಸಂಭಾಷಣೆ ನಡೆಸಿ, ಸರಳ ಭಾಷೆಯಲ್ಲಿ ಉತ್ತರ ನೀಡಲಿದೆ.

ಸೇವೆಗೆ ಮೂರು ಮಾರ್ಗ

- ಮೊಬೈಲ್ ಆಪ್
- ವೆಬ್ ಇಂಟರ್‌ಫೇಸ್
- 155261 ಕರೆ

ಅಧಿಕಾರ ಹಂಚಿಕೆಯ ಬೇಡಿಕೆ ತಿರಸ್ಕರಿಸಿದ ಸಿಎಂ ಸ್ಟಾಲಿನ್

ತ.ನಾಡು ಕೈನಲ್ಲಿ ಭಿನ್ನಮತ ಭುಗಿಲು

ಚೆನ್ನೈ: ಅಧಿಕಾರ ಹಂಚಿಕೆಯ ಬೇಡಿಕೆಗಳನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಸೋಮವಾರ ತಿರಸ್ಕರಿಸಿದ ನಂತರ ತಮಿಳುನಾಡು ಕಾಂಗ್ರೆಸ್‌ನಲ್ಲಿ ವಿವಾದ ಭುಗಿಲೆದ್ದಿದ್ದು, ಪಕ್ಷದೊಳಗೆ ಮತ್ತು ಅದರ ಮಿತ್ರಪಕ್ಷವಾದ ಡಿಎಂಕೆಯೊಂದಿಗೆ ಘರ್ಷಣೆ ತೀವ್ರಗೊಂಡಿದೆ.

ಜಿಲ್ಲಾ ಸಭೆಯಲ್ಲಿ ಅಧಿಕಾರ ಹಂಚಿಕೆಯನ್ನು ಎತ್ತಿದ್ದಕ್ಕಾಗಿ ಪಕ್ಷದ ಹಿರಿಯ ಸಂಸದರೊಬ್ಬರನ್ನು ತಮಿಳುನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ನಿಂದಿಸಿದ್ದು, ಆಂತರಿಕ ಭಿನ್ನಾಭಿಪ್ರಾಯಕ್ಕೆ ತುಪ್ಪ ಸುರಿದಿದೆ. ಮೈತ್ರಿಕೂಟದ ಚರ್ಚೆಗಳು ಸೂಕ್ತ ರೀತಿಯಲ್ಲಿರಬೇಕು ಎಂದು ಹೇಳುವ ಮೂಲಕ ಭಿನ್ನಾಭಿಪ್ರಾಯ ಶಮನಕ್ಕೆ ರಾಜ್ಯ ನಾಯಕತ್ವ ಮುಂದಾಗಿದೆ.

2026ರ ಚುನಾವಣೆಗೆ ಮುಂಚಿತವಾಗಿ ಕಾಂಗ್ರೆಸ್-ಡಿಎಂಕೆ ಮೈತ್ರಿಯನ್ನು ದೃಢಪಡಿಸಿದ್ದರೂ, ಅಧಿಕಾರ ಹಂಚಿಕೊಳ್ಳಲು ಸಾಧ್ಯವಿಲ್ಲ ಎಂಬ ಸ್ಟಾಲಿನ್ ಅವರ ದೃಢ ನಿಲುವಿಗೆ ಖಂಡನೆ ವ್ಯಕ್ತವಾಗಿದೆ. ಮೈತ್ರಿಕೂಟದ ವಿಷಯಗಳನ್ನು ಸಾರ್ವಜನಿಕವಾಗಿ ಮಾತನಾಡಬಾರದು ಎಂದು ಕಾಂಗ್ರೆಸ್ ಹೈಕಮಾಂಡ್ ನಿರ್ದೇಶಿಸಿದೆ ಎನ್ನಲಾಗಿದೆ. ಆಂತರಿಕ ಸಂಘರ್ಷ ಡಿಎಂಕೆಗೆ ಲಾಭವಾಗುತ್ತಿರುವುದರಿಂದ, ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹತಾಶೆ ಮೂಡಿದೆ. ಪಕ್ಷದ ಹಿರಿಯ ನಾಯಕರು ಮೈತ್ರಿಕೂಟಕ್ಕೆ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ಆಂತರಿಕ ಒಗ್ಗಟ್ಟಿನ ಮಾತುಗಳನ್ನಾಡಿದ್ದರೂ ಅಸಮಾಧಾನ ಹೊಗೆಯಾಡುತ್ತಲೇ ಇದೆ.

ರಾಜೀನಾಮೆ ಹಿಂಪಡೆದ ಅಸ್ಸಾಂ ಕೈ ಮುಖಂಡ: ಗುವಾಹಟಿ: ಪಕ್ಷದ ವರಿಷ್ಠರ ಮಧ್ಯಪ್ರವೇಶದ ನಂತರ ಅಸ್ಸಾಂ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಭೂಪೆನ್ ಬೋರಾ ಅವರು ತಮ್ಮ ರಾಜೀನಾಮೆಯನ್ನು ಹಿಂಪಡೆದಿದ್ದಾರೆ ಎಂದು ಎಐಸಿಸಿ ರಾಜ್ಯ ಉಸ್ತುವಾರಿ ಜಿತೇಂದ್ರ ಸಿಂಗ್ ಸೋಮವಾರ ಹೇಳಿದ್ದಾರೆ. ಬೋರಾ ಅವರು ತಮ್ಮ ರಾಜೀನಾಮೆಯನ್ನು ಘೋಷಿಸಿ ಪಕ್ಷದ ಹೈ ಕಮಾಂಡ್‌ಗೆ ಪತ್ರವನ್ನು ಕಳುಹಿಸಿದ ಬೆನ್ನಲ್ಲೇ ಜಿತೇಂದ್ರ ಸಿಂಗ್ ಮತ್ತು ಅಸ್ಸಾಂ ಘಟಕದ ಮುಖ್ಯಸ್ಥ ಗೌರವ್ ಗೊಗೊಯ್ ಸೇರಿದಂತೆ ಹಿರಿಯ ಕಾಂಗ್ರೆಸ್ ನಾಯಕರು ಬೋರಾಹ್ ಅವರನ್ನು ಗುವಾಹಟಿಯಲ್ಲಿರುವ ಅವರ ನಿವಾಸದಲ್ಲಿ ಭೇಟಿಯಾಗಿ ಮನವೊಲಿಸಿದ್ದಾರೆ.

ಸನಾತನ ಬದುಕಲ್ಲಿ ಗೋವಿಗಿದೆ ತಾಯಿ ಸ್ಥಾನ

ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್ ಅವರ ನಿರ್ದೇಶ ಮೇರೆಗೆ ತಲೆಎತ್ತಲಿರುವ ಗೋ ಸಂಸ್ಕೃತಿ ಮ್ಯೂಸಿಯಂ, ಭಾರತೀಯ ಸಂಪ್ರದಾಯದಲ್ಲಿ ಗೋಮಾತೆಗೆ ಇರುವ ತಾಯಿಯ ಸ್ಥಾನ ಮತ್ತು ಸನಾತನ ಬದುಕಿನಲ್ಲಿ ಗೋವಿನ ಪಾತ್ರವನ್ನು ಎತ್ತಿಹಿಡಿಯಲಿದೆ. ಕೃಷಿ ಕಾರ್ಯಗಳು ಮತ್ತು ಆರ್ಥಿಕತೆ ಮಾತ್ರವಲ್ಲ, ಸಂಸ್ಕೃತಿ ಹಾಗೂ ಸಾಮಾಜಿಕ ಕಲ್ಯಾಣ ರಂಗದಲ್ಲೂ ಪ್ರಮುಖ ಪಾತ್ರ ವಹಿಸಿರುವ ಗೋಮಾತೆಯ ಸಂರಕ್ಷಣೆ ಅತ್ಯಗತ್ಯವೆಂಬ ಸಂದೇಶ ಸಾರೋದು ಮ್ಯೂಸಿಯಂನ ಧ್ಯೇಯವಾಗಿದೆ.



ಕೋಟ್ಯಂತರ ದೇವ ದೇವರುಗಳ ಆವಾಸ ಸ್ಥಾನ ಖ್ಯಾತಿಯ ಗೋಮಾತೆಗೆ ಭಾರತೀಯ ಸಂಸ್ಕೃತಿಯಲ್ಲಿ ಅತೀ ಪೂಜ್ಯ ಸ್ಥಾನವಿದೆ. ಹೆತ್ತ ತಾಯಿ ಸಮಾನ ಆರಾಧಿತಳು ಗೋಮಾತೆ. ಸಮಾಜ ವ್ಯವಸ್ಥೆ ಮತ್ತು ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಗೋವುಗಳ ಪಾತ್ರವನ್ನು ಎತ್ತಿಹಿಡಿಯುವ ಯತ್ನವಾಗಿ ಮತ್ತು ಸಂಪ್ರದಾಯ ಹಾಗೂ ವಿಜ್ಞಾನಗಳ ಸಂಯೋಜನೆ ರೂಪದಲ್ಲಿ, ಭಾರತದ ಪ್ರಪ್ರಥಮ ಅಪೂರ್ವ ರಾಷ್ಟ್ರೀಯ ಗೋ ಸಂಸ್ಕೃತಿ ಮ್ಯೂಸಿಯಂ ಉತ್ತರಪ್ರದೇಶದ ಮಥುರಾದಲ್ಲಿ ಮೈದಳೆಯಲಿದೆ. ಉತ್ತರಪ್ರದೇಶ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್ ನಿರ್ದೇಶನ ಮೇರೆಗೆ ಬ್ರಜ ತೀರ್ಥ ವಿಕಾಸ ಪರಿಷದ್ ಪ್ರಸ್ತಾವಿತ ಯೋಜನೆಯನ್ನು ಅನುಷ್ಠಾನಗೊಳ್ಳಲಿದೆ.

ಭಾರತದ ಪ್ರಪ್ರಥಮ ಗೋ ಸಂಗ್ರಹಾಲಯ

ಉತ್ತರಪ್ರದೇಶದ ಮಥುರಾದಲ್ಲಿ ರಾಷ್ಟ್ರೀಯ ಗೋ ಸಂಸ್ಕೃತಿ ಮ್ಯೂಸಿಯಂ ಸ್ಥಾಪನೆಗೆ ಸಿದ್ಧತೆ

ಗೋಮಾತೆಗೆ ಯಾಕಾಗಿ ವಿಶೇಷ ಸ್ಥಾನ?

ಭಾರತೀಯ ಜನಜೀವನದಲ್ಲಿ ಧರ್ಮ ಮತ್ತು ಸಂಪ್ರದಾಯಗಳ ನೆಲೆಯಿಂದ ಮಾತ್ರವಲ್ಲ, ಕೃಷಿ, ಆರೋಗ್ಯ ಹಾಗೂ ಗ್ರಾಮೀಣ ಆರ್ಥಿಕ ರಂಗದಲ್ಲೂ ಗೋವು ಮಹತ್ತ್ವದ ವಿಶೇಷವಾದ ಸ್ಥಾನ ಹೊಂದಿರುವುದು ಯಾಕಾಗಿ ಎಂಬುದನ್ನು ಜನರಿಗೆ ಸಾರಿ ಹೇಳುವುದು ಪ್ರಸ್ತಾವಿತ ಮ್ಯೂಸಿಯಂನ ಪ್ರಧಾನ ಧ್ಯೇಯವಾಗಿದೆ. ಮ್ಯೂಸಿಯಂಗಾಗಿ ಪಂಡಿತ್ ದೀನದಯಾಳ್ ಉಪಾಧ್ಯಾಯ ಪಶುಸಂಗೋಪನಾ ವಿಜ್ಞಾನ ವಿವಿ ಕ್ಯಾಂಪಸ್‌ನಲ್ಲಿ ಅಧಿಕಾರಿಗಳು ಜಮೀನು ಗುರುತಿಸಿದ್ದಾರೆ.

ಏನಿದರ ಹೆಸರು?
ನ್ಯಾಷನಲ್ ಕೌ ಕಲ್ಚರ್ ಮ್ಯೂಸಿಯಂ(ರಾಷ್ಟ್ರೀಯ ಗೋ ಸಂಸ್ಕೃತಿ ಸಂಗ್ರಹಾಲಯ)

ಸ್ಥಾಪನೆ ಎಲ್ಲಿ?
ಉತ್ತರ ಪ್ರದೇಶದ ಮಥುರಾದಲ್ಲಿನ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಪಶುಸಂಗೋಪನಾ ವಿಜ್ಞಾನ ವಿವಿ ಕ್ಯಾಂಪಸ್

ಆಡಳಿತ ವ್ಯವಸ್ಥೆ?
ಉತ್ತರಪ್ರದೇಶದ ಬ್ರಜ್ ತೀರ್ಥ ವಿಕಾಸ ಪರಿಷದ್

ಸದ್ಯದ ಸ್ಥಿತಿಗತಿ?
ಜಮೀನು ಗುರುತಿಸಲಾಗಿದೆ ಮತ್ತು ಜಮೀನಿನ ಪರಿಶೀಲನೆ ನಡೆದಿದೆ (ಫೆ.2026)

ಆಶಯದ ಮೂಲ?
ಉತ್ತರ ಪ್ರದೇಶದ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್

ಸಂವಾದಾತ್ಮಕ ವಿಶಿಷ್ಟ ಶಿಕ್ಷಣ ಕೇಂದ್ರ

ಮ್ಯೂಸಿಯಂ ಎನ್ನುವುದಕ್ಕಿಂತಲೂ, ಗೋಮಾತೆಯ ಮೌಲ್ಯಯುತ ಪರಂಪರೆಯ ಅಪೂರ್ವ ಮಾಹಿತಿ ನೀಡುವ ಸಂವಾದಾತ್ಮಕ ಶಿಕ್ಷಣ ಕೇಂದ್ರವಾಗಿ ರೂಪುಗೊಳ್ಳುತ್ತಿರುವ ಮ್ಯೂಸಿಯಂ, ಗೋಮಾತೆಯ ಆಧ್ಯಾತ್ಮಿಕ ಮೌಲ್ಯಗಳು ಹಾಗೂ ಗೋವಿನಿಂದ ಸಿಗುವ ಪ್ರಾಯೋಗಿಕ ಪ್ರಯೋಜನಗಳ ಮಾಹಿತಿಯನ್ನು ಜನರಿಗೆ ತಲುಪಿಸಲಿದೆ. ಗೋಮಾತೆಯ ಸಂರಕ್ಷಣೆ, ನಿತ್ಯ ಬದುಕಲ್ಲಿ ಗೋವಿನ ಉತ್ಪನ್ನಗಳ ಬಳಕೆ ಮತ್ತು ಸಮಾಜದಲ್ಲಿ ಗೋವಿನ ಮಹತ್ವದ ಪಾತ್ರ ಇತ್ಯಾದಿ ಮಾಹಿತಿಗಳು ಸಂದರ್ಶಕರು, ಪ್ರವಾಸಿಗರಿಗೆ ಮ್ಯೂಸಿಯಂ ನೀಡಲಿದೆ. ಧಾರ್ಮಿಕ ನೆಲೆಯಲ್ಲಿ ಗೋವಿಗಿರುವ ಪೂಜನೀಯ ಪಾತ್ರದ ಜತೆ ಜತೆ ಅವುಗಳ ವೈಜ್ಞಾನಿಕ ಮತ್ತು ಆರ್ಥಿಕ ಪ್ರಸ್ತುತತೆಯನ್ನು ಜನರಿಗೆ ತಿಳಿಹೇಳಲು ಪೂರಕ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ ಎಂದು ಆಗ್ರಾ ಡಿವಿಜನಲ್ ಕಮಿಷನರ್ ನಾಗೇಂದ್ರ ಪ್ರತಾಪ್ ಹೇಳಿದ್ದಾರೆ.



ಏನಿದರ ಮಹತ್ವ?

ಭಾರತೀಯ ಸಂಸ್ಕೃತಿಯಲ್ಲಿ ಮಾತೆ ಸ್ಥಾನ ಹೊಂದಿರುವ ಗೋಮಾತೆಯ ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಮಹತ್ವದ ಜತೆ, ಗೋವು ಮತ್ತು ಗೋ ಉತ್ಪನ್ನಗಳಿಂದ ಸಿಗುವ ವೈಜ್ಞಾನಿಕ ಪ್ರಯೋಜನಗಳ ಮಾಹಿತಿಗಳನ್ನು ಮ್ಯೂಸಿಯಂ ಜನರಿಗೆ ನೀಡಲಿದೆ. ಸಂಪ್ರದಾಯ ಮತ್ತು ವಿಜ್ಞಾನಗಳ ವಿಶಿಷ್ಟ ಸಂಯೋಜನೆಯಿಂದ ಗೋಮಾತೆಯ ಸಂರಕ್ಷಣೆಯ ಮಹತ್ವ ಜನರಿಗೆ ಸ್ಪಷ್ಟ ವೇದ್ಯವಾಗಲಿದೆ. ಸನಾತನದ ಧರ್ಮದಲ್ಲಿ ಮಾತೆ ಸ್ಥಾನಮಾನ ಹೊಂದಿರುವ ಗೋಮಾತೆ ಸುಸ್ಥಿರ ಭವಿಷ್ಯಕ್ಕೂ ಕಾರಣಕರ್ತಳೆಂಬ ಸತ್ಯವನ್ನು ಜನರಿಗೆ ಪ್ರಸ್ತಾವಿತ ಮ್ಯೂಸಿಯಂ ಮನವರಿಕೆ ಮಾಡಲಿದೆ. ಆಯುರ್ವೇದ ಮತ್ತು ಆಧುನಿಕ ವಿಜ್ಞಾನದ ಸಮಗ್ರತೆ ಮುಖೇನ ಸಾತ್ವಿಕ ಜೀವನಶೈಲಿ ಮತ್ತು ಜನ ಕಲ್ಯಾಣವನ್ನು ಮ್ಯೂಸಿಯಂ ಉತ್ತೇಜಿಸಲಿದೆ.

ಅಧಿಕಾರಿ ತಂಡದಿಂದ ನಿವೇಶನ ಪರಿಶೀಲನೆ

ಗೋಮಾತೆಯ ಮ್ಯೂಸಿಯಂ ನಿರ್ಮಾಣಕ್ಕೆ ಗುರುತಿಸಲ್ಪಟ್ಟಿರುವ ಪ್ರಸ್ತಾವಿತ ಜಮೀನಿಗೆ ಅಧಿಕಾರಿಗಳ ತಂಡವೊಂದು ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಬ್ರಜ ತೀರ್ಥ ವಿಕಾಸ್ ಪರಿಷತ್ ಉಪಾಧ್ಯಕ್ಷ ಶೈಲಜಕಾಂತ್ ಮಿಶ್ರಾ, ಜಿಲ್ಲಾ ಮ್ಯಾಜಿಸ್ಟ್ರೇಟ್ ಸಿ.ಪಿ.ಸಿಂಗ್, ಮಥುರಾ-ವೃಂದಾವನ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರಾದ ಲಕ್ಷ್ಮಿ ಎನ್., ಸಿಇಒ ಸೂರಜ್ ಪಟೇಲ್, ಪರಿಸರಾತ್ಮಕ ಸಲಹೆಗಾರ ಮುಖೇಶ್ ಶರ್ಮಾ, ಪಶುಸಂಗೋಪನಾ ತಜ್ಞ ಅಮಿತ್ ಶುಕ್ಲಾ ತಂಡದಲ್ಲಿದ್ದರು.

ಮುಂದಿನ ಪೀಳಿಗೆಗೆ ಗೋ ಪರಂಪರೆ ಮಾಹಿತಿ

ಭಾರತದಾದ್ಯಂತ ಅಪಾಯದಂಚಲ್ಲಿರುವ ಗೋತಳಿಗಳ ಸಹಿತ ದೇಶದ ಹೈನುಗಾರರು ಪೋಷಿಸುತ್ತಿರುವ ಪ್ರಮುಖ ದೇಶೀ ಗೋ ತಳಿಗಳನ್ನು ಪರಿಚಯಿಸಲಿರುವ ನೂರು ಡಿಜಿಟಲ್ ಮತ್ತು ಭೌತಿಕ ಪ್ರದರ್ಶನಗಳನ್ನು ಮ್ಯೂಸಿಯಂ ಒಳಗೊಂಡಿರುತ್ತದೆ. ರಾಷ್ಟ್ರದ ಗೋ ಪರಂಪರೆ ಜತೆ ಸಂಪನ್ನ ಜೀವವೈವಿಧ್ಯಗಳು ಹಾಗೂ ಇವುಗಳ ಮಹತ್ವ ಕುರಿತು ಮಾಹಿತಿ ಪಡೆಯಲು ಮುಂದಿನ ಪೀಳಿಗೆಗೆ ಪ್ರಸ್ತಾವಿತ ಮ್ಯೂಸಿಯಂ ಪರಿಣಾಮಕಾರಿ ಮಾಧ್ಯಮವಾಗಲಿದೆ.

ಸಿಗಲಿವೆ ತಾಜಾ ಡೇರಿ ಉತ್ಪನ್ನಗಳು

ಹಾಲು, ಬೆಣ್ಣೆ, ಮೊಸರು, ತುಪ್ಪ ಇತ್ಯಾದಿ ಡೇರಿ ಉತ್ಪನ್ನಗಳ ಮಹತ್ವವನ್ನು ಮ್ಯೂಸಿಯಂನಲ್ಲಿ ತೆರೆಯಲಾಗುವ ಪ್ರತ್ಯೇಕ ವಿಭಾಗ ಸಾರಲಿದೆ. ಅತ್ಯಾಧುನಿಕ ಮಂಡನಾ ವಿಧಾನ ಮುಖೇನ ಈ ಡೇರಿ ಉತ್ಪನ್ನಗಳ ಪೌಷ್ಟಿಕ ಮಹತ್ವ ಮತ್ತು ಆಯುರ್ವೇದಿಕ್ ಮೌಲ್ಯಗಳನ್ನು ಸಂದರ್ಶಕರಿಗೆ ವಿವರಿಸಲಾಗುವುದು. ಕಾಂಪ್ಲೆಕ್ಸ್‌ನಲ್ಲಿ ತೆರೆಯಲು ಯೋಜಿಸಲಾಗಿರುವ ಡೇರಿ ಪಾರ್ಲರ್‌ನಿಂದ ಸಂದರ್ಶಕರು ಶುಚಿರುಚಿಕರ ಡೇರಿ ಉತ್ಪನ್ನಗಳನ್ನು ಸ್ಥಳದಲ್ಲೇ ವಿಕ್ರಯಿಸಲು ಅವಕಾಶವಿರುವುದು

ಗೋಪಾಲಕೃಷ್ಣನ ನಾಡಿನ ಅಸ್ಮಿತೆಯ ಬಲವರ್ಧನೆ

ಪ್ರಸ್ತಾವಿತ ಮ್ಯೂಸಿಯಂ ಪೊಡವಿಗೊಡೆಯ ಭಗವಾನ್ ಶ್ರೀಕೃಷ್ಣ ಮತ್ತಾತನ ಗೋಸಮೂಹ ನೆಲೆನಿಂತ ನಾಡಾಗಿರುವ ಬ್ರಜ ವಲಯದ ಅಸ್ಮಿತೆಯ ಬಲವರ್ಧಿಸಲಿದೆ. ಗೋ ಆಧಾರಿತ ಗ್ರಾಮೀಣ ಆರ್ಥಿಕತೆ ಮತ್ತು ಗೋಮಾತೆಯ ಪರಂಪರೆ- ಸಾಂಸ್ಕೃತಿಕ ಸಂರಕ್ಷಣೆ ಹಾಗೂ ವೈಜ್ಞಾನಿಕ ಶಿಕ್ಷಣದ ಜಾಗತಿಕ ಕೇಂದ್ರವಾಗಿ ಮಥುರಾ ಪ್ರಸಿದ್ಧಿ ಪಡೆಯಲಿದೆ. ವೈಜ್ಞಾನಿಕ ವಿಧಾನಗಳಿಂದ ಬೆಂಬಲಿತ ಗೋ ಆಧಾರಿತ ಗ್ರಾಮೀಣ ಆರ್ಥಿಕತೆ ಬಗ್ಗೆ ಜನಜಾಗೃತಿಯನ್ನು ಮ್ಯೂಸಿಯಂ ಉತ್ತೇಜಿಸಲಿದೆ ಎಂಬುದು ಅಧಿಕಾರಿಗಳ ವಿಶ್ವಾಸ. ಮ್ಯೂಸಿಯಂನಿಂದಾಗಿ ಮಥುರಾವು ಪ್ರಮುಖ ಶೈಕ್ಷಣಿಕ ಕೇಂದ್ರ ಹಾಗೂ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿ ರೂಪುಗೊಳ್ಳುವ ನಿರೀಕ್ಷೆಗಳೂ ಬಲವಾಗಿವೆ.

ಕಿರುಸುದ್ದಿ

ಎಸ್‌ಐಆರ್: ಪ.ಬಂಗಾಳದ 7 ಅಧಿಕಾರಿಗಳ ಅಮಾನತು

ಹೊಸದಿಲ್ಲಿ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಗೆ ಸಂಬಂಧಿಸಿದ ದುರ್ನಡತೆ ಮತ್ತು ಕರ್ತವ್ಯ ಲೋಪದ ಆರೋಪಗಳ ಹಿನ್ನೆಲೆ, ಪಶ್ಚಿಮ ಬಂಗಾಳದ ಏಳು ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳನ್ನು(ಎಇಆರ್‌ಒ) ಚುನಾವಣಾ ಆಯೋಗ(ಇಸಿ) ತಕ್ಷಣದಿಂದಲೇ ಅಮಾನತು ಮಾಡಿದೆ. ಅಮಾನತುಗೊಂಡ ಅಧಿಕಾರಿಗಳು ರಾಜ್ಯ ಸರ್ಕಾರದ ನೌಕರರಾಗಿದ್ದು, ಚುನಾವಣಾ ಕರ್ತವ್ಯಕ್ಕಾಗಿ ಆಯೋಗಕ್ಕೆ ಡೆಪ್ಯುಟೇಶನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರ ವಿರುದ್ಧ ಶಿಸ್ತಿನ ಕ್ರಮಗಳನ್ನು ಯಾವುದೇ ವಿಳಂಬವಿಲ್ಲದೆ ಆರಂಭಿಸುವಂತೆ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಆಯೋಗ ನಿರ್ದೇಶಿಸಿದೆ. ಮತದಾರರ ಪಟ್ಟಿಯ ಪರಿಷ್ಕರಣೆ ವಿಚಾರದಲ್ಲಿ ಚುನಾವಣಾ ಆಯೋಗ ಮತ್ತು ತೃಣಮೂಲ ಕಾಂಗ್ರೆಸ್ ಸರ್ಕಾರ ನಡುವೆ ಉದ್ವಿಗ್ನತೆ ಮುಂದುವರಿದಿರುವ ಸಂದರ್ಭದಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ಪರೀಕ್ಷೆ 1ಕ್ಕೆ ಹಾಜರಾದರೆ 2ನೇ ಪರೀಕ್ಷೆಗೆ ಅವಕಾಶ

ಹೊಸದಿಲ್ಲಿ: ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್(ಸಿಬಿಎಸ್‌ಇ) 10ನೇ ತರಗತಿಯ ವಿದ್ಯಾರ್ಥಿಗಳು ಮೊದಲ ಬೋರ್ಡ್ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯವಾಗಿದೆ. ಮೊದಲ ಆವೃತ್ತಿಯಲ್ಲಿ ಕನಿಷ್ಠ ಮೂರು ಪರೀಕ್ಷೆ ಬರೆಯದವರು ಎಸೆನ್ಷಿಯಲ್ ರಿಪೀಟ್ ವಿಭಾಗದಲ್ಲಿ ಇರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ವರ್ಷದಿಂದ ಸಿಬಿಎಸ್‌ಇ 10ನೇ ತರಗತಿ ಮಕ್ಕಳಿಗೆ 2 ಪರೀಕ್ಷೆಯನ್ನು ಆಯೋಜಿಸುತ್ತಿದೆ. ಮೊದಲ ಪರೀಕ್ಷೆಗೆ ಹಾಜರಾಗದ ವಿದ್ಯಾರ್ಥಿಗಳಿಗೆ ಎರಡನೇ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವುದಿಲ್ಲ ಮಂಡಳಿ ಈ ಸ್ಪಷ್ಟೀಕರಣ ನೀಡಿದೆ. ಎಲ್ಲಾ ವಿದ್ಯಾರ್ಥಿಗಳು ಮೊದಲ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯವಾಗಿದೆ. 10ನೇ ತರಗತಿಯಲ್ಲಿ ಎರಡನೇ ಪರೀಕ್ಷೆಯೇ ಸುಧಾರಣಾ ಪರೀಕ್ಷೆಯಾಗಿ ಪರಿಗಣಿಸಲಾಗುತ್ತದೆ.

ವ್ಯಾಪಾರ ಒಪ್ಪಂದಕ್ಕಾಗಿ ಅಮೆರಿಕಕ್ಕೆ ತಂಡ ಶೀಘ್ರ

ಹೊಸದಿಲ್ಲಿ: ಮಧ್ಯಂತರ ವ್ಯಾಪಾರ ಒಪ್ಪಂದದ ಕಾನೂನಾತ್ಮಕ ಅಂಶಗಳನ್ನು ಅಂತಿಮಗೊಳಿಸಲು ಭಾರತೀಯ ನಿಯೋಗ ಮುಂದಿನ ವಾರ ಅಮೆರಿಕಕ್ಕೆ ಭೇಟಿ ನೀಡಲಿದೆ, ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗ್ರವಾಲ್ ಸೋಮವಾರ ತಿಳಿಸಿದ್ದಾರೆ. ಈ ಭೇಟಿ ಫೆಬ್ರವರಿ 23ರಂದು ಪ್ರಾರಂಭವಾಗಲಿದ್ದು, ಮಾರ್ಚ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆಯಿದೆ. ಈ ತಿಂಗಳ ಆರಂಭದಲ್ಲಿ ಬಿಡುಗಡೆಯಾದ ಜಂಟಿ ಹೇಳಿಕೆಯಲ್ಲಿ ಒಪ್ಪಂದದ ಚೌಕಟ್ಟನ್ನು ಈಗಾಗಲೇ ರೂಪಿಸಲಾಗಿದೆ, ಎಂದು ಹೇಳಲಾಗಿದೆ.

ವಿವಾಹಪೂರ್ವ ಸಂಬಂಧ ಕುರಿತು ಸುಪ್ರೀಂ ಎಚ್ಚರಿಕೆ

ಹೊಸದಿಲ್ಲಿ: ಮದುವೆಯಾಗುವುದಾಗಿ ಸುಳ್ಳು ಭರವಸೆ ನೀಡಿ ನಡೆದ ಅತ್ಯಾಚಾರ ಪ್ರಕರಣವೊಂದರ ಜಾಮೀನು ಅರ್ಜಿಯ ವಿಚಾರಣೆಯ ವೇಳೆ, ಸುಪ್ರೀಂ ಕೋರ್ಟ್ ವಿವಾಹಪೂರ್ವ ದೈಹಿಕ ಸಂಬಂಧಗಳ ಬಗ್ಗೆ ಎಚ್ಚರಿಕೆ ನೀಡಿದೆ. ಮದುವೆಗೆ ಮೊದಲು ಪುರುಷ ಮತ್ತು ಮಹಿಳೆಯನ್ನು ಅಪರಿಚಿತರು ಎಂದೇ ಪರಿಗಣಿಸಲಾಗುತ್ತದೆ, ಅವರೇ ಜಾಗರೂಕರಾಗಿರಬೇಕು ಎಂದಿದೆ. ವಿವಾಹವಾದರೂ ಮದುವೆಯಾಗುತ್ತೇನೆಂದು 30 ವರ್ಷದ ಮಹಿಳೆಯೊಂದಿಗೆ ದೈಹಿಕ ಸಂಬಂಧ ಬೆಳೆಸಿ ನಂತರ ಇನ್ನೊಬ್ಬ ಮಹಿಳೆಯನ್ನು ಮದುವೆಯಾದ ಆರೋಪ ಹೊತ್ತಿರುವ ವ್ಯಕ್ತಿಯೊಬ್ಬರ ಅರ್ಜಿಯ ವಿಚಾರಣೆಯ ವೇಳೆ, ನ್ಯಾಯಮೂರ್ತಿ ಬಿವಿ ನಾಗರತ್ನ ಮತ್ತು ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು. 2022ರಲ್ಲಿ ದೂರುದಾರರನ್ನು ವೈವಾಹಿಕ ವೆಬ್‌ಸೈಟ್ ಮೂಲಕ ಭೇಟಿಯಾದ ಮಹಿಳೆ, ಬಳಿಕ ಆತನೊಂದಿಗೆ ದಿಲ್ಲಿ ಮತ್ತು ದುಬೈಗೆ ಪ್ರವಾಸ ನಡೆಸಿದ್ದರು. ಆದರೆ ಅರ್ಜಿದಾರ, ಒಪ್ಪಿಗೆಯಿಲ್ಲದೆ ವೀಡಿಯೊಗಳನ್ನು ರೆಕಾರ್ಡ್ ಮಾಡಿ ಬೆದರಿಕೆ ಹಾಕಿದ್ದಾರೆ, ಅಲ್ಲದೆ ಪಂಜಾಬ್‌ನಲ್ಲಿ ಎರಡನೇ ವಿವಾಹ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. "ನಾವು ಹಿಂದಿನ ಫ್ಯಾಷನ್‌ನವರಾಗಿರಬಹುದು. ಆದರೆ, ವಿವಾಹಕ್ಕೆ ಮೊದಲು ಪುರುಷ ಮತ್ತು ಮಹಿಳೆಯನ್ನು ಅಪರಿಚಿತರು ಎಂದೇ ಭಾವಿಸಲಾಗುತ್ತದೆ. ಅವರು, ಯಾವ ನಂಬಿಕೆಯ ಮೇಲೆ ದೈಹಿಕ ಸಂಬಂಧ ಬೆಳೆಸುತ್ತಾರೆ? ಎಂದು ಪ್ರಶ್ನಿಸಿದ್ದಾರೆ.

ಕ್ರಿಮಿನಲ್ ಕಾನೂನು ಪೂರ್ಣ ಜಾರಿ ಆದರೆ ಶಿಕ್ಷೆ ಹೆಚ್ಚಳ: ಶಾ

ಹೊಸದಿಲ್ಲಿ: ದೇಶದಲ್ಲಿ ಮೂರು ಅಪರಾಧ ಕಾನೂನು ಸಂಪೂರ್ಣ ಜಾರಿಯಾದರೇ ಶಿಕ್ಷೆ ಪ್ರಮಾಣ ಕೂಡ ಶೇ.80ರಷ್ಟು ಹೆಚ್ಚಳವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ದಿಲ್ಲಿ ಪೊಲೀಸರ 79ನೇ ಸಂಸ್ಥಾಪನಾ ದಿನದ ಪಥಸಂಚಲನ ಸಮಾರಂಭದಲ್ಲಿ ಮಾತನಾಡಿದ ಅವರು, ನ್ಯಾಯ ಆಧಾರಿತ ಮೂರು ಹೊಸ ಕ್ರಿಮಿನಲ್ ಕಾನೂನುಗಳು ಕಳೆದ 11 ವರ್ಷಗಳಲ್ಲಿ ದೇಶವು ಸಾಧಿಸಿದ ಮೈಲಿಗಲ್ಲುಗಳಲ್ಲಿ ಒಂದಾಗಿದೆ. ಇದು ಮುಂಬರುವ ಕೆಲವು ವರ್ಷಗಳಲ್ಲಿ ಸಂಪೂರ್ಣವಾಗಿ ಜಾರಿಗೆ ಬಂದ ನಂತರ ಪ್ರಕರಣಗಳ ವಿಲೇವಾರಿ ಮತ್ತು ಅಪರಾಧ ನಿರ್ಣಯದ ಪ್ರಮಾಣವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಶಾ ಹೇಳಿದರು.



ಇದರ ಜತೆಗೆ ದೇಶದಲ್ಲಿ ಈಗಾಗಲೇ ನಕ್ಸಲ್ ವಾದದ ವಿರುದ್ಧದ ಹೋರಾಟವು ಕೊನೆ ಹಂತದಲ್ಲಿದೆ. ಈ ಹಿಂದೆ ನಾವು ಹೇಳಿದಂತೆ ಮಾರ್ಚ್ ಅಂತ್ಯಕ್ಕೆ ನಕ್ಸಲ್‌ವಾದವು ಕೊನೆಗೊಳ್ಳಲಿದೆ ಎಂದಿದ್ದಾರೆ. ಕಳೆದ 12 ವರ್ಷಗಳು, 2014 ರಿಂದ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ದೇಶದ ಆಂತರಿಕ ಭದ್ರತೆಯ ಇತಿಹಾಸದಲ್ಲಿ ಸುವರ್ಣ ಯುಗ ವಾಗಿದೆ. 2014ರ ಮೊದಲು ದೇಶವು ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದನೆ, ಎಡಪಂಥೀಯ ಉಗ್ರವಾದ ಮತ್ತು ಈಶಾನ್ಯದಲ್ಲಿ ಹಿಂಸಾಚಾರ ಸೇರಿದಂತೆ ಮೂರು ಸಮಸ್ಯೆಗಳನ್ನು ಎದುರಿಸಿತ್ತು. 11 ರಾಜ್ಯಗಳಲ್ಲಿ ಹರಡಿರುವ ನಕ್ಸಲಿಸಂ ದೇಶದ ಆಂತರಿಕ ಭದ್ರತೆಗೆ ಯಾವಾಗಲೂ ದೊಡ್ಡ ಸವಾಲಾಗಿದೆ. ನಾವು ನಕ್ಸಲಿಸಂ ಅನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಬಹಳ ಹತ್ತಿರದಲ್ಲಿದ್ದೇವೆ ಎಂದು ಹೇಳಿದರು.

ಕಾರ್ಖಾನೆಯಲ್ಲಿ ಬೆಂಕಿ; 7 ಜನ ಸಜೀವ ದಹನ

ಜೈಪುರ: ಅಕ್ರಮ ಪಟಾಕಿ ತಯಾರಿಕಾ ಕಾರ್ಖಾನೆಯಲ್ಲಿ ಅಗ್ನಿ ಅವಘಡ ಸಂಭವಿಸಿ 7 ಮಂದಿ ಸಜೀವ ದಹನಗೊಂಡಿರುವ ಘಟನೆ ರಾಜಸ್ಥಾನದ ಭಿವಾಡಿಯ ಕೈರ್ತಾಲ್ ತಿಜಾರದಲ್ಲಿ ಸಂಭವಿಸಿದೆ. ಇದು ಗಾರ್ಮೆಂಟ್ಸ್ ಕಾರ್ಖಾನೆಯಾಗಿದ್ದು, ಕಾರ್ಖಾನೆಯೊಳಗೆ ಅಕ್ರಮವಾಗಿ ಪಟಾಕಿ ತಯಾರಿಸಲಾಗುತ್ತಿತ್ತು ಎಂದು ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಸುಮಿತ್ರಾ ಪರೀಕ್ ಮಾಹಿತಿ ನೀಡಿದ್ದಾರೆ. ಭಿವಾಡಿಯ ಖುಷ್ಖೇರಾ-ಕರೋಲಿ ಕೈಗಾರಿಕಾ ಪ್ರದೇಶದಲ್ಲಿ ಈ ಘಟನೆ ಸಂಭವಿಸಿದೆ. ಆವರಣವನ್ನು ಉಡುಪಿನ ಕಾರ್ಖಾನೆಯ ಹೆಸರಿನಲ್ಲಿ ಗುತ್ತಿಗೆಗೆ ನೀಡಲಾಗಿತ್ತು. ಆದರೆ ಪ್ರಾಥಮಿಕ ವರದಿಯ ಪ್ರಕಾರ, ಪಟಾಕಿಗಳನ್ನು ಅಕ್ರಮವಾಗಿ ತಯಾರಿಸಲಾಗುತ್ತಿತ್ತು ಎಂದು ಅವರು ಹೇಳಿದರು. ವಾಡಿಕೆಯ ಗಸ್ತು ಸಮಯದಲ್ಲಿ ಪೊಲೀಸರಿಗೆ ಈ ಘಟನೆಯ ಬಗ್ಗೆ ತಿಳಿಯಿತು, ಅದರ ನಂತರ ತಕ್ಷಣವೇ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು ಎಂದು ಹೇಳಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ. ಪ್ರಾಥಮಿಕ ವರದಿ ಪ್ರಕಾರ, ಕಾರ್ಖಾನೆಯೊಳಗೆ 20 ಮಂದಿ ಒಳಗಿದ್ದರು. ಬೆಂಕಿ ತಗುಲಿದ ಕೂಡಲೇ ಅವರೆಲ್ಲಾ ಅಲ್ಲಿಂದ ಹೊರಬರುವಲ್ಲಿ ಯಶಸ್ವಿಯಾಗಿದ್ದಾರೆ. ಉಳಿದಂತೆ ಇಬ್ಬರೂ ಕಾರ್ಖಾನೆಯೊಳಗೆ ಸಿಲುಕಿದ್ದಾರೆಂದು ಶಂಕೆಯಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಧಾನಿ ಮೋದಿ ಸಂತಾಪ: ಮೃತರ ಕುಟುಂಬಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಅವರು ಸಂತಾಪ ಸೂಚಿಸಿದ್ದಾರೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸಿದ್ದಾರೆ.

ಹವಾಲಾ ಜಾಲ; 8,000 ಬ್ಯಾಂಕ್ ಖಾತೆಗಳು ಸ್ಥಗಿತ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ದೊಡ್ಡ ಪ್ರಮಾಣದ ಹವಾಲಾ ದಂಧೆ ಬೆಳಕಿಗೆ ಬಂದಿದ್ದು, ಕಳೆದ ಮೂರು ವರ್ಷಗಳಲ್ಲಿ ಭಾರತ ವಿರೋಧಿ ಚಟುವಟಿಕೆ ನಡೆಸುತ್ತಿವೆ ಎಂದು ಶಂಕಿಸಿ, ಭದ್ರತಾ ಸಂಸ್ಥೆಗಳು 8,000ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿವೆ. ಡಿಜಿಟಲ್ ಹವಾಲಾ ಜಾಲ, 2017ರಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ ಅಕ್ರಮ ಹಣ ವರ್ಗಾವಣೆಯನ್ನು ಭೇದಿಸಿದ ನಂತರ ಬೆಳಕಿಗೆ ಬಂದಿದೆ ಎನ್ನಲಾಗಿದೆ. ಈ ಖಾತೆಗಳ ಮೂಲಕ ವರ್ಗಾವಣೆಯಾಗುವ ಹಣ, ಪ್ರತ್ಯೇಕತಾವಾದಿ ಮತ್ತು ರಾಷ್ಟ್ರ ವಿರೋಧಿ ಕಾರ್ಯಾಚರಣೆಗಳಿಗೆ ಬೆಂಬಲ ನೀಡುತ್ತಿದೆ ಎಂದು ಶಂಕಿಸಲಾಗಿದೆ, ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ಸುಲಭ ಹಣದ ಆಮಿಷಕ್ಕೊಳಗಾದ ವ್ಯಕ್ತಿಗಳು ಮ್ಯೂಲ್ ಖಾತೆಗಳನ್ನು ನಿರ್ವಹಿಸುತ್ತಾರೆ. ಖಾತೆದಾರರು ಸಂಪೂರ್ಣ ಬ್ಯಾಂಕಿಂಗ್ ದಾಖಲೆಗಳನ್ನು ಒಪ್ಪಿಸುತ್ತಾರೆ. ಇದು ಸ್ಕ್ಯಾಮರ್‌ಗಳಿಗೆ ಸೈಬರ್ ವಂಚನೆಯಿಂದ ಬಂದ ಹಣವನ್ನು ಅಕ್ರಮವಾಗಿ ವರ್ಗಾಯಿಸಲು ಅನುವು ಮಾಡಿಕೊಡುತ್ತದೆ. ಒಬ್ಬ ಆಪರೇಟರ್ ಸಾಮಾನ್ಯವಾಗಿ ಏಕಕಾಲದಲ್ಲಿ 10 ರಿಂದ 30 ಖಾತೆಗಳನ್ನು ನಿಯಂತ್ರಿಸುತ್ತಾನೆ, ಕೆಲವು ಶೆಲ್ ಕಂಪನಿ ಖಾತೆಗಳು ದಿನಕ್ಕೆ 40 ಲಕ್ಷ ರೂ.ಗಳವರೆಗೆ ಅಕ್ರಮ ವರ್ಗಾವಣೆಯನ್ನು ಸಾಧ್ಯವಾಗಿಸುತ್ತವೆ.

ಮಂಗಳೂರು ಉದ್ಯಮಿಯ ಯಶೋಗಾಥೆ | ಬರದ ನಷ್ಟದಿಂದ ತಂತ್ರಜ್ಞಾನ ಕ್ರಾಂತಿವರೆಗೆ ವಿವೇಕ್ ರಾಜ್ ಹೆಜ್ಜೆ

ಎಐ ಹೈಡ್ರೋಪೋನಿಕ್ ಕೃಷಿಗೆ 214 ಕೋಟಿ ರೂ. ಹೂಡಿಕೆ

ಹೊಸದಿಲ್ಲಿ: ದಶಕದ ಹಿಂದೆ ಬರದಿಂದ ಸಂಪೂರ್ಣ ಬೆಳೆ ಕಳೆದುಕೊಂಡ ಅನುಭವವೇ ಮಂಗಳೂರು ಮೂಲದ ಉದ್ಯಮಿ ವಿವೇಕ್ ರಾಜ್ ಅವರನ್ನು ಎಐ ಆಧಾರಿತ ಹೈಡ್ರೋಪೋನಿಕ್ ಕೃಷಿಯತ್ತ ಕೊಂಡೊಯ್ದಿದೆ. ಕರ್ನಾಟಕದಲ್ಲಿ ಉನ್ನತ ಮೌಲ್ಯದ ಮಸಾಲೆ ಹಾಗೂ ಔಷಧೀಯ ಸಸ್ಯಗಳ ಬೆಳೆಗೆ ಅವರ ಪನಾಮಾ ಹೈಡ್ರೋ-ಎಕ್ಸ್ ಸಂಸ್ಥೆ 214 ಕೋಟಿ ರೂ. ಹೂಡಿಕೆ ಘೋಷಿಸಿದೆ.

ಇಲ್ಲಿನಡೆಯುತ್ತಿರುವ ಎಐ ಶೃಂಗದ ನಿಮಿತ್ತ ಸಂಸ್ಥಾಪಕ ಹಾಗೂ ಸಿಇಒ ವಿವೇಕ್ ರಾಜ್ ಮಾತನಾಡಿದ್ದು, ಹಲವು ವರ್ಷಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ 146 ಕೋಟಿ ರೂ. ವೆಚ್ಚ ಮಾಡಿದ ಬಳಿಕ ಕಂಪನಿಯು ನಾಲ್ಕು ಪೇಟೆಂಟ್ ಪಡೆದ ಎಐ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದೆ ಎಂದು ತಿಳಿಸಿದ್ದಾರೆ.

ಬೆಳೆಗಳಿಗೆ ಲಕ್ಷಣಗಳು ಗೋಚರಿಸುವ ಮುನ್ನವೇ ರೋಗ ಪತ್ತೆ, ಫೋಟೋಸಿಂಥಸಿಸ್‌ಗೆ ಸೂಕ್ತ ಕೃತಕ ಬೆಳಕು ವ್ಯವಸ್ಥೆ ಸೇರಿದಂತೆ ಅತ್ಯಾಧುನಿಕ ಪರಿಹಾರಗಳು ಈ ತಂತ್ರಜ್ಞಾನಗಳ ಭಾಗವಾಗಿದೆ. ಪರೀಕ್ಷಾ ಹಂತದಲ್ಲಿ ಉತ್ತಮ ಫಲಿತಾಂಶ ಕಂಡಿದ್ದೇವೆ. ಇಂಗ್ಲೆಂಡ್, ಜರ್ಮನಿ, ಆಸ್ಟ್ರೇಲಿಯಾ ದಿಂದ ಪೇಟೆಂಟ್‌ಗಳು ಲಭಿಸಿವೆ. ಈಗ ದೊಡ್ಡ ಪ್ರಮಾಣದ ಜಾರಿಗೆ ಸಿದ್ಧತೆ ನಡೆಸಿದ್ದೇವೆ ಎಂದು ರಾಜ್ ಹೇಳಿದ್ದಾರೆ.



ಕಂಪನಿಯು ಮೂಡಬಿದರೆಯಲ್ಲಿ 16 ಎಕರೆ ಜಮೀನು ಖರೀದಿಸಿದ್ದು, 2026ರ ಅಂತ್ಯದೊಳಗೆ ಹೈಡ್ರೋಪೋನಿಕ್ ಮೂಲಸೌಕರ್ಯ ನಿರ್ಮಾಣ ಗುರಿ ಇರಿಸಿಕೊಂಡಿದ್ದೇವೆ. ಮೊದಲ ವಾಣಿಜ್ಯ ಕೊಯ್ಲು 2027ರ ಜೂನ್‌ನಲ್ಲಿ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ಯೋಜನೆಯಂತೆ ಐದು ಎಕರೆಗಳಲ್ಲಿ ಕೇಸರಿ, ಐದು ಎಕರೆಗಳಲ್ಲಿ ಶುಂಠಿ, ಉಳಿದ ಜಮೀನಿನಲ್ಲಿ ಅರಿಶಿನ, ಅಶ್ವಗಂಧ ಸೇರಿದಂತೆ ಔಷಧೀಯ ಸಸ್ಯಗಳ ಬೆಳೆಗೆ ಯೋಜನೆ ಹಾಕಿಕೊಂಡಿದ್ದೇವೆ. ಕೇಸರಿ ಹಾಗೂ ಶುಂಠಿಯನ್ನು ರಫ್ತು, ಔಷಧೀಯ ಬೆಳೆಗಳನ್ನು ದೇಶೀಯ ಮಾರುಕಟ್ಟೆಗೆ ಮಾರಾಟ ಮಾಡುವ ತಂತ್ರ ಇದೆ ಎಂದು ಹೇಳಿದ್ದಾರೆ.

ಉತ್ಪಾದನೆಯಲ್ಲಿ ಭಾರೀ ಏರಿಕೆ: ಪರೀಕ್ಷಾ ಹಂತದಲ್ಲಿ ಎಐ ಹೈಡ್ರೋಪೋನಿಕ್ ಕೃಷಿಯಿಂದ ಎಕರೆಗೆ 1,200 ಚೀಲಗಳಷ್ಟು ಶುಂಠಿ ಉತ್ಪಾದನೆ ಕಂಡುಬಂದಿದ್ದು, ಪರಂಪರಾತ್ಮಕ ಕೃಷಿಯಲ್ಲಿ ಇದು 400 ಚೀಲಗಳಷ್ಟೇ ಇತ್ತು. ವರ್ಷಕ್ಕೆ ಒಂದು ಬೆಳೆ ಚಕ್ರದ ಬದಲು ಮೂರು ಬೆಳೆ ಚಕ್ರ ಸಾಧ್ಯವಾಗಿರುವುದೂ ಗಮನಾರ್ಹವಾಗಿದೆ. ಕಂಪನಿಯ ಪೇಟೆಂಟ್‌ಗಳಲ್ಲಿ ಸ್ಮಾರ್ಟ್ ಕೃಷಿ ಮಾನಿಟರ್, ಕೇಸರಿ ರೋಗ ಪತ್ತೆ ವ್ಯವಸ್ಥೆ, ಎಲೆ ಬಣ್ಣ ಬದಲಾವಣೆ ಗುರುತಿಸುವ ಡಿಸಿಸಿಎನ್‌ಎನ್ ತಂತ್ರಜ್ಞಾನ, ಸ್ಮಾರ್ಟ್ ಎಲ್‌ಇಡಿ ಕೃಷಿ ವ್ಯವಸ್ಥೆ ಸೇರಿವೆ.

ಬೆಳೆ ಸಾಯದಂತೆ ಮಾಡುವುದೇ ನಮ್ಮ ತಂತ್ರಜ್ಞಾನದ ಬಲ ಎಂದು ರಾಜ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ವಾಣಿಜ್ಯ ಯಶಸ್ಸು ದೃಢಪಟ್ಟ ಬಳಿಕವೇ ತಂತ್ರಜ್ಞಾನ ಪರವಾನಗಿ ಕುರಿತು ಚಿಂತನೆ ಎಂದಿದ್ದಾರೆ.

ಎಐ ಪರಿವರ್ತನೆಯಲ್ಲಿ ಭಾರತ ಮುಂಚೂಣಿ: ಮೋದಿ

ಕೃತಕ ಬುದ್ಧಿಮತ್ತೆಯ ಪರಿವರ್ತನೆಯಲ್ಲಿ ಭಾರತ ಮುಂಚೂಣಿಯಲ್ಲಿದೆ. ಕೃತಕ ಬುದ್ಧಿಮತ್ತೆಯಲ್ಲಿ ಅದರ ದಾಪುಗಾಲು ಮಹತ್ವಾಕಾಂಕ್ಷೆ ಮತ್ತು ಜವಾಬ್ದಾರಿ ಎರಡನ್ನೂ ಪ್ರತಿಬಿಂಬಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ. ಅವರು ಇಲ್ಲಿನ ಭಾರತ್ ಮಂಟಪದಲ್ಲಿ ಇಂಡಿಯಾ ಎಐ ಇಂಪ್ಯಾಕ್ಟ್ ಎಕ್ಸ್‌ಪೋ ಉದ್ಘಾಟನಾ ಕಾರ್ಯಕ್ರಮ ಮುನ್ನ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಕೃತಕ ಬುದ್ಧಿಮತ್ತೆಯನ್ನು ಚರ್ಚಿಸಲು ಜಗತ್ತನ್ನು ಒಗ್ಗೂಡಿಸುವುದು. ಇಂದಿನಿಂದ, ಭಾರತವು ದಿಲ್ಲಿಯ ಭಾರತ್ ಮಂಟಪದಲ್ಲಿ ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಆಯೋಜಿಸುತ್ತಿದೆ. ಈ ಶೃಂಗಸಭೆಗೆ ವಿಶ್ವದಾದ್ಯಂತದ ವಿಶ್ವ ನಾಯಕರು, ಉದ್ಯಮದ ಮುಖ್ಯಸ್ಥರು, ನಾವೀನ್ಯಕಾರರು, ನೀತಿ ನಿರೂಪಕರು, ಸಂಶೋಧಕರು ಮತ್ತು ತಂತ್ರಜ್ಞಾನ ಉತ್ಸಾಹಿಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಶೃಂಗಸಭೆಯ ವಿಷಯವೆಂದರೆ ಸರ್ವಜನ ಹಿತಾಯ, ಸರ್ವಜನ ಸುಖಾಯ ಅಥವಾ ಎಲ್ಲರಿಗೂ ಕಲ್ಯಾಣ, ಎಲ್ಲರಿಗೂ ಸಂತೋಷ, ಇದು ಮಾನವ ಕೇಂದ್ರಿತ ಪ್ರಗತಿಗಾಗಿ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳುವ ನಮ್ಮ ಹಂಚಿಕೆಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಹೇಳಿದರು.

CHANGE OF NAME

I, **GUNDAPPA RAMANAIKA HONDALGADDE (Old Name)** have changed my name to **GUNDAPPA RAMANAIK HONDALGADDE (New Name)** vide affidavit before - V H Patil - Notary Public- Hubli dated 16.02.2026

CHANGE OF NAME

I, **VIDHYASHRI DHANAPAL ARGI** (old name) Resident of At Post Hidakal, Tq: Raybag, District Belagavi, Karnataka 591220, have changed my name as **VIDHYASHRI RAMESH NAIK** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **UMADEVI GUNDAPPA HONDALGADDE (Old Name)** have changed my name to **NERLE UMADEVI VEERBHADRAPPA** (New Name) vide affidavit before - V H Patil - Notary Public- Hubli dated 16.02.2026

CHANGE OF NAME

I, **MALINI SHENOY (Old Name)** have changed my name to **MALINI RAVINDRA SHENOY (New Name)** vide affidavit before - V H Patil - Notary Public- Hubli dated 12.02.2026

CHANGE OF NAME

I, **ASHRAFALI SAYED AHMED KHADRI SAYED** (old name) R/o: Sultanpur Kadwad Karwar 581339, have changed my name as **SAYED ASHRAF ALI** (new name) henceforth I will be called and recognized by new name for all future purposes, dated: 13/02/2026.

CHANGE OF NAME

I, **PRADIP BHUSHI** (Old Name) Resident of H. No: 1101, Church Street, Khanapur, Belgaum - 591302, Karnataka, have changed my name as **PRADEEP NAGAPPA BHUSHI** (New Name) for all purposes affidavit Dtd. 16-02-2026 sworn before notary **Geeta D. Hireholi.**

CHANGE OF NAME

I, **NAZHAT SULTANA SAITHSANADI (Old Name)** have changed my name to **NAZAHATSULTANA BANGI** (New Name) vide affidavit before - V H Patil - Notary Public- Hubli dated 16.02.2026

CHANGE OF NAME & DATE OF BIRTH

Drakshayini Mother of Mr. **Veerayya Veerabhadrayya Mudhol** servicing in Unit 12, Maratha LI Residing at Vill: Kotabal, Post: Kotabal, Teh. Ron, Dist. Gadag, Pin Code-582209 have changed my mother name from **Drakshayini Mudhol** and Changed my mother **Date of Birth from 26-08-1957 to 01-02-1950 vide affidavit 16-02-2026** before the M.M. Hiremath, Advocate & Notary, Karnataka, Affidavit No. 12621.

ಕ್ರಿ. ಮಿ. ನಂ .220/2026
ರಾಣೇಬೆನ್ನೂರಿನ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧಿಶರು ವ ಜೆ, ಎಂ, ಎಫ್, ಸಿ, ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : 1) ಶ್ರೀಮತಿ ದ್ಯಾಮಕ್ಕ ಕೋಂ ನಿಂಗಪ್ಪ, ವಯಾ: 52, ವರ್ಷ ಉದ್ಯೋಗ: ಮನೆಕೆಲಸ, ಸಾ: ಕೊಂಡಜ್ಜಿ ತಾ; ಹರಿಹರ ಜಿ: ದಾವಣಗೇರಿ ಹಾಗೂ ಇತರರು.

ವಿರುದ್ಧ

ಎದುರುಗಾರರು : 1) ಉಪ ತಹಶೀಲ್ದಾರರು ವ ಜನನ, ಮರಣ ನೋಂದಣಾಧಿಕಾರಿಗಳು ನಾಡ ಕಛೇರಿ ಮೇಡ್ಲೇರಿ, ತಾ: ರಾಣೇಬೆನ್ನೂರು ಜಿ; ಹಾವೇರಿ.

:- ಇಷ್ತಿಯಾರ ನಾಮ -:

ಇದರಲ್ಲಿ 1 ಮತ್ತು 2 ಅರ್ಜಿದಾರರ ಅಜ್ಜ ಹಾಗೂ 3 ನೇ ಅರ್ಜಿದಾರರ ತಾಯಿ ಮಾಳಮ್ಮ ಕೋಂ ಹೊಳೆಯಪ್ಪ ದ್ಯಾವಳರ ಇವರು ರಾಣೇಬೆನ್ನೂರು ತಾಲೂಕಾ ಕೋಣನತಂಬಗಿ ಗ್ರಾಮದಲ್ಲಿ ದಿನಾಂಕ: 10/06/1986 ರಂದು ಮರಣ ಹೊಂದಿರುತ್ತಾರೆ. ಸದರ ಅರ್ಜಿದಾರರ ಅಜ್ಜಿ ವ ತಾಯಿಯ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಮರಣ ನೋಂದಣಿ ದಾಖಲಾತಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಅತೀ ಅವಶ್ಯವಿದ್ದು ಇದರ ಬಗ್ಗೆ ಸಾರ್ವಜನಿಕರ ಯಾವುದೆ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ 28/3/2026 ರಂದು ಬೆಳಿಗ್ಗೆ 10-30 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಏಕತರ್ಫಿ ಇದ್ದು ಯಾರದ್ದು ತಕರಾರು ಇರುವುದಿಲ್ಲ. ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟಸು.
ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ: 16/02/2026 ರಂದು ನೀಡಿದೆ.
ಸ್ಥಳ; ರಾಣೇಬೆನ್ನೂರು
ದಿನಾಂಕ : 16/2/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧಿಶರು ವ ಜೆ.ಎಂ.ಎಫ್.ಸಿ ರಾಣೇಬೆನ್ನೂರು ಇವರ ನ್ಯಾಯಾಲಯ.
ಸಹಿ/-ಶ್ರೀ ವಿಯು, ಎನ್, ಕೂನಬೇವು,
ಅರ್ಜಿದಾರರ ಪರ ವಕೀಲರು

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 1808/2025

ಅರ್ಜಿದಾರರು: 1) ಬುರ್ಲೆ ನಾಗೇಶ ತಂದೆ ಬುರ್ಲೆ ಮಾರೆಪ್ಪ, ವಯಸ್ಸು 45 ವರ್ಷ ವಾಸ: ಮನೆ ನಂ: 147, 3ನೇ ವಾರ್ಡ್, ಅಂಬೇಡ್ಕರ್ ಕಾಲೋನಿ, ತಾರಾನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
2) ಹರಿಜನ ನಿಂಗಮ್ಮ ಗಂಡ ಹರಿಜನ ದೇವೇಂದ್ರಪ್ಪ, ವಯಸ್ಸು 66 ವರ್ಷ, ವಾಸ ಓಬಳಾಪುರಂ, ಡಿ. ಹಿರಾಳ್, ಅನಂತಪುರ, ಆಂಧ್ರಪ್ರದೇಶ,
3) ಶಿವಮ್ಮ ಗಂಡ ಹೊನ್ನೂರಪ್ಪ, ವ ಯಸ್ಸು 62 ವರ್ಷ, ವಾಸ: ಮನೆ ನಂ: 94, 3ನೇ ವಾರ್ಡ್, ಅಂಬೇಡ್ಕರ್ ಕಾಲೋನಿ, ತಾರಾನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
4) ಹೆಚ್.ಹನುಮಂತಪ್ಪ ಗಂಡ ಹೆಚ್. ದುರುಗಪ್ಪ, ವಯ್ಸು 51 ವರ್ಷ, ವಾಸ: ಹುಲಿಗೆಮ್ಮ ದೇವಸ್ಥಾನದ ಹತ್ತಿರ, ನರಸಾಪುರ, ನಾಗೇನಹಳ್ಳಿ, ವಿಜಯನಗರ ಜಿಲ್ಲೆ.

ಹಾಗೂ

ಎದುರುದಾರರು: ಮಾನ್ಯ ತಹಶೀಲ್ದಾರರು ಮತ್ತು ಜನನ ಮರಣ ನೋಂದಣಿ ಅಧಿಕಾರಿಗಳು ತಾಲೂಕು ಕಛೇರಿ, ಸಂಡೂರು

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಾಯಿಯವರಾದ ಮಾರೆಮ್ಮ ಗಂಡ ಬುರ್ಲೆ ಮಾರೆಪ್ಪ ಇವರು ದಿನಾಂಕ: 04.04.2003 ರಂದು ತಾರಾನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 18-03-2026 ಬೆಳಿಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 16-02-2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಧರ್ಮಪ್ಪ,
ಅರ್ಜಿದಾರರ ಪರ ವಕೀಲರು ಸಂಡೂರು

IN THE COURT OF THE HONOURABLE PRINCIPAL CIVIL. JUDGE AND J.M.F.C. BALLARI
Cri.M.C.No 54/2026

Suma Sathish Akki .... Petitioner
-VS-
The Tahasildar -cum-Registrar Birth & Deaths Taluk Office, Kampli, Kampli taluk
....Respondent

To,
Whom so ever it may concern.
WHEREAS the above named petitioner Suma Sathish Akki wife of Late Akki Sathish, aged about 48 years, housewife, R/o House No. 33, 3rd Ward, Ramasagara village, Kampli taluk, Ballari district has filed the petition under section 13(3) of Registration of birth and death Act, seeking the direction of this court to issue direction to the respondent to enter the date of death of her husband Akki Sathish son of Late Gurubasappa who died on 03-05-2018 at his residence at Ramasagara village, Kampli taluk.
WHEREAS, if any persons interested with respect to the above proceedings are hereby noticed to appear in this court in person or by pleader duly able to answer all material question relating to the said petition on 03.03 2026 at about 11-00 A.M, otherwise the matter will be heard and determined.
Given under my hand and seal of this court on this 09th day of Feb-2026.

By order of the court.
Chief Ministerial Officer,
PCJ & J M F C Ballari.
From,
Sri.T.Shivappa
Advocate for Petitioner Hosapete

IN THE COURT OF THE CIVIL JUDGE AND JMFC AT H B HALLI
O.S.NO 201/2015

BETWEEN : The Manager Karnataka Gramina Bank Morigeri
......Plaintiffs
AND
Sri.B.M.Nagayya Since died by his LR'sB M Thipamma
.....Defendant

PUBLIC NOTICE

Whereas the above plaintiff have isstituted above plaint against the defendants for recovery of money the LR;s of deceased by name B.M Thippamma W/O Late B.M Nagayya Aged abou 58 years R/O House No 44 8th ward Vasudevanayidu street bengalore road ballari on the file of the civil judge & JMFC at H B Halli .Those who are the interested persons are hereby summoned to appear in this court in person or by pleader duly instructed and able to answer all material questions relating to the above petition on 27-03-2026 at 11-00 am and interested persons are directed to produce all the material documents upon which you intended to rely in support of defense.Take notice that in default of your appearance on that day above mentioned case will be heard and determined ex-parte.
Given under my hand and seal of this honble court on 13-11-2025

by order of this court
ministerial officer
civil judge & JMFC H B Halli
Sri.Kotresh S Shettar
Advocate H B Halli

IN THE COURT OF THE CIVIL JUDGE AND JMFC AT HAGARIBOMMANAHALLI
PDP NO.5/2017

BETWEEN : K.Manjula Petitoner
And
Rukmoji Rao Halale ......Respondent

SUMMONS TO THE RESPONDENT NO 1(C) UNDER ORDER 5 RULE 20 OF CPC

Whereas the above named petitioner No 1 (a) K.Krishna S/O NarasingaRao Aged about 76 years R/O 5th ward Ranipet Hosapete Town & Taluk Vijayanagara Dist.Has fiked above FDP Petition for separate possession before the honble court against the Respondants.Respondent No 1(c) Smt.M.Rajeshwari W/O M.Gopal Ambedkar aged about 34 years R/O Kappagal Road Ballari Town & Taluk and Dist.Whreas the honble court has ordered to issue notice /summous and RPAD to you not received so further substantial steps the honble court may ordered to issued through this paper publication.
wherefore in any person interested with respect to the above proceeding are hereby noticed to appear before the court of the civil judge & JMFC H B Halli on 26-03-2026 at 11 am in person or by pleader dully able to answer all materials question relating to the said petition if any filling to appear on the above said date and time the matter will be hear and determined exparte. Given under my hand and seal of this honble court 06-02-2026

By order this court
chief ministerisl officer civil judge & JMFC H B Halli
SRI.S.Linganagouda
Sri. Rakeshgouda.S
Advocates H.B.HALLI

ಮೂಲ ದಾವಾ ನಂ:- 4/2025
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು, ಹಾನಗಲ್ಲ ಇವರ ನ್ಯಾಯಾಲಯದಲ್ಲಿ,...

ವಾದಿಯರು :ಪಕ್ಕೀರಪ್ಪ, ಪಕ್ಕೀರಪ್ಪ, ಹರಿಜನ,
DELETED as per order passed on 24-10-2025 on memorandum
ಬೈಚವಳ್ಳಿ-ಗ್ರಾಮ, ಹಾನಗಲ್ಲ-ತಾಲೂಕ, ಹಾವೇರಿ-ಜಿಲ್ಲೆ ಮತ್ತು ಇತರರು.

ವಿರುದ್ಧ

ಪ್ರತಿವಾದಿಯರು : ಏಕನಂದಯ್ಯ ಗಂಗಾಧರಯ್ಯಾ ಛಾಪಿ, ವಯಸ್ಸು-55 ವರ್ಷ, ಉದ್ಯೋಗ-ಒಕ್ಕಲುತನ, ಆದಿಶಕ್ತಿ ಸೌಹಾರ್ದ ಸಹಕಾರ ಬ್ಯಾಂಕ ಹತ್ತಿರ, ವಿವೇಕಾನಂದ ನಗರ, ಹಾನಗಲ್ಲ, ಹಾವೇರಿ-ಜಿಲ್ಲೆ ಮತ್ತು ಇತರರು.

ನಾಗರೀಕ ಪ್ರಕ್ರಿಯಾ ಸಂಹಿತೆಯ ಆದೇಶ 5 ನಿಯಮ 20(1)(ಎ)ನೇದರ ಕೆಳಗೆ ಪ್ರಕಟಿಸುವ ದಾವಾ ಸಮನ್ಸ

ವಾದಿಯರು,
1ನೇ ಪ್ರತಿವಾದಿಯಾದ, ಏಕನಂದಯ್ಯ ಗಂಗಾಧರಯ್ಯಾ ಛಾಪಿ, ವಯಸ್ಸು 55 ವರ್ಷ, ಉದ್ಯೋಗ-ಒಕ್ಕಲುತನ, ಆದಿಶಕ್ತಿ ಸೌಹಾರ್ದ ಸಹಕಾರ ಬ್ಯಾಂಕ ಹತ್ತಿರ, ವಿವೇಕಾನಂದ ನಗರ, ಹಾನಗಲ್ಲ, ಹಾವೇರಿ-ಜಿಲ್ಲೆ.

ಮತ್ತು

14ನೇ ಪ್ರತಿವಾದಿಯಾದ ಶ್ರೀಮತಿ ಇಂದಿರಾ ಕೋಂ ಜಿ.ಹೆಚ್. ಮಲ್ಲಿಕಾರ್ಜುನ, ವಯಸ್ಸು-49 ವರ್ಷ, ಉದ್ಯೋಗ-ಮನೆಕೆಲಸ..ವಾಲಗದವರ ಓಣಿ, ಬೆನವಕೇರಿ, ಶಿರಾಳಕೊಪ್ಪ, ಶಿಕಾರಿಪೂರ-ತಾಲೂಕ.ಶಿವಮೊಗ್ಗ-ಜಿಲ್ಲೆ.
ಆದ ನಿಮ್ಮ ಮತ್ತು ಇನ್ನಿತರರ ವಿರುದ್ಧ, ಈ ದಾವೆಯನ್ನು ದಾಖಲಿಸಿದ್ದು, ನೀವು, ದಿನಾಂಕ 02-04-2026ರಂದು ಮುಂಜಾನೆ 11ಘಂಟೆಗೆ ವಾದಿಯರ ಕೋರಿಕೆ/ಮಾಗಣೆಗೆ ಉತ್ತರಿಸುವದಕ್ಕಾಗಿ ಖುದ್ದಾಗಿ ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಈ ಮೂಲಕ ಸಮನ್ಸನ್ನು ಹೊರಡಿಸಲಾಗಿರುತ್ತದೆ. ಈ ಮೇಲೆ ನಮೂದಿಸಿದ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಹಾಜರಾಗಲು ನೀವು ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯ ಸುನಾವಣೆಯನ್ನು ಮಾಡಿ ತೀರಮಾನಿಸಲಾಗುವದು. ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 2026 ನೇ ಫೆಬ್ರುವರಿ.....ನೇ ದಿನದಂದು ಇದನ್ನು ಕೊಡಲಾಯಿತು.

ಸಹಿ/- ಶ್ರೀಮತಿ ಎಮ್.ಎಸ್.ಪಾಟೀಲ
ಶಿರಸ್ತೆದಾರರು.
ಹಿರಿಯ ವ್ಯವಹಾರ ನ್ಯಾಯಾದೀಶರ ನ್ಯಾಯಾಲಯ, ಹಾನಗಲ್ಲ..
ಸಹಿ/-ದಳವಾಯಿ.
ವಾದಿ ಪರ ವಕೀಲರು.

ಅಸಲ ದಾವಾ ಸಂಖ್ಯೆ: 77/2025
ಮಾ॥ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ವಾದಿಯರು :1) ಕೃಷ್ಣಾ @ ಅಣ್ಣಾರಾವ್ ತಂ॥ ಕೇಶವರಾವ್ ಎಡಕೆ ವಯಾ:64 ವರ್ಷ, ಉದ್ಯೋಗ : ಸ್ವಂತ ಉದ್ಯೋಗ ಸಾ॥ ಪ್ಲಾಟ್ ನಂ: 85 ಇ-ಸ್ಪೆಷಲ್, ಸೆಕ್ಟರ್ ನಂ: 18,ನವನಗರ-ಬಾಗಲಕೋಟ ಹಾಗೂ ಇತರರು

-ವಿರುದ್ಧ-

ಪ್ರತಿವಾದಿ :1) ಕುಂದನ ತಂ॥ ಕೇಶವರಾವ್ ಎಡಕೆ ವಯಾ : 55 ವರ್ಷ, ಉದ್ಯೋಗ : ವ್ಯಾಪಾರ ಸಾ॥ ಫ್ಲಾಟ್ ನಂ: 85 ಈ, ಸೆಕ್ಟರ್ ನಂ: 18, ನವನಗರ-ಬಾಗಲಕೋಟ

=: ಕೋರ್ಟ ಸಮನ್ಸ ನೋಟಿಸು =
(ದಿ.ಪ್ರ ಸಂಹಿತೆ ಆದೇಶ 5 ನಿಯಮ 20 ರಡಿ)

ಇವರಿಗೆ : 1) ಕುಂದನ ತಂ॥ ಕೇಶವರಾವ್, ಎಡಕೆ, ವಯಾ : 55 ವರ್ಷ ಉದ್ಯೋಗ : ವ್ಯಾಪಾರ, ಸಾ॥ ಫ್ಲಾಟ್ ನಂ: 85 ಈ, ಸೆಕ್ಟರ್ ನಂ: 18, ನವನಗರ-ಬಾಗಲಕೋಟ
ಇದರಲ್ಲಿ ಮಾನ್ಯ ನ್ಯಾಯಾಲಯದವರು ಪ್ರತಿವಾದಿಗೆ ಈ ಮೂಲಕ ನೀಡುವ ಕೋರ್ಟ ಸಮನ್ಸ್ ನೋಟಿಸು ಏನೆಂದರೆ,
ವಾದಿ ಕೃಷ್ಣಾ @ ಅಣ್ಣಾರಾವ್ ತಂದೆ: ಕೇಶವರಾವ್ ಎಡಕೆ ವಯಾ: 64 ವರ್ಷ ಉದ್ಯೋಗ : ಸ್ವಂತ ಉದ್ಯೋಗ ಸಾ॥ ಪ್ಲಾಟ್ ನಂ: 85 ಇ-ಸ್ಪೆಷಲ್, ಸೆಕ್ಟರ್ ನಂ: 18, ನವನಗರ-ಬಾಗಲಕೋಟ ಇವರು ಹಾಗೂ 10 ಜನ ಅಸಲ ದಾವಾ ನಂ: 77/2025 ಅಂತಾ ಪ್ರಕರಣವನ್ನು ದಾಖಲ ಮಾಡಿ 1 ನೇ ಹೆಚ್ಚುವರಿ ಹಿರಿಯ ದಿವಾಣೀ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರಲ್ಲಿ ಸದರ ದಾವೆ ಚಾಲ್ತಿಯಲ್ಲಿ ಇರುತ್ತದೆ. ಬಾಗಲಕೋಟೆಯ ನವನಗರದಲ್ಲಿರುವ ದಾವಾ ಆಸ್ತಿ ವಿವರ ಯುನಿಟ್ ಸಂಖ್ಯೆ:1, ಸೆಕ್ಟರ್ ನಂ:18, ದಾವಾ ಆಸ್ತಿ ನಿವೇಶನ ಕ್ರಮ ಸಂಖ್ಯೆ: 85, ನಿವೇಶನದ ಮಾದರಿ-"ಇ-ಸ್ಪೇಷಲ್" ದಾವಾ ಆಸ್ತಿ ನಿವೇಶನದ ಗಾತ್ರ : ಉದ್ದ-27 ಮೀಟರ, ಅಗಲ : 21 ಮೀಟರ ಈ ಆಸ್ತಿಯ ಗಡಿಗಳು ಪೂರ್ವಕ್ಕೆ : ಇ-86 ಪಶ್ಚಿಮಕ್ಕೆ : ಖುಲ್ಲಾ ಜಾಗೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಖುಲ್ಲಾ ಜಾಗೆ, ಈ ನಿವೇಶನ ಚೆಕ್ಕಬಂದಿ ಮಧ್ಯದಲ್ಲಿರುವ ಮೇಲ್ಕಾಣಿಸಿದ ದಾವಾ ಆಸ್ತಿಯಲ್ಲಿ ವಾದಿಯರು ಮತ್ತು ನೀವು ವಾರ್ಸಾ ನಾತೆಯಿಂದ ಜಂಟಿ ಮಾಲೀಕರಾಗಿ ದಾಖಲ ಇರುತ್ತದೆ. ಸದರ ಹಕ್ಕು ಪತ್ರದ ಪ್ರಕಾರ ವಾದಿಯರು ಎಲ್ಲರಿಗೆ ಅಂದರೆ ತಲಾ 9/10 ಅಂಶ ವಾಟ್ನಿ ತರೀಖ ಹಿಸ್ಸಾ ಇರುತ್ತದೆ. ಮತ್ತು ನಿಮಗೆ 1/10 ಅಂಶ ಹಿಸ್ಸಾ ಇರುತ್ತದೆ. ಸದರ ಆಸ್ತಿಯನ್ನು ವಾಟ್ನಿ ಮಾಡಿ ಹಿಸ್ಸಾ ವಿಂಗಡಿಸಲು ಮೇಲ್ಕಾಣಿಸಿದ ದಾವೆಯನ್ನು ದಾಖಲ ಮಾಡಿದ್ದು ಇರುತ್ತದೆ. ನೀವು ವಿದ್ಯಾಗಿರಿಯಲ್ಲಿ ಇದ್ದು ದಾವಾ ಸಮನ್ಸ್ ನೋಟಿಸು ಪಡೆದುಕೊಳ್ಳುವುದರಿಂದ ಜಾರಿ ಕೊಂಡದ್ದು ಇರುತ್ತದೆ. ಈ ಮೂಲಕ ನಿಮಗೆ ತಿಳಿಸುವುದೆನೆಂದರೆ ನಿಮ್ಮದು ಸದರ ಪ್ರಕರಣದಲ್ಲಿ ಏನಾದರೂ ತಕರಾರು ವಗೈರೆ ಇದ್ದಲ್ಲಿ ಮತ್ತು ಹಿತಾಸಕ್ತಿಯ ಕುರಿತು ಪ್ರತಿವಾದ ಸಲ್ಲಿಸಲು ಮಾನ್ಯ ನ್ಯಾಯಾಲಯದ ಮುಂದೆ ದಿ: 18-03-2026 ರಂದು 11 ಗಂಟೆಗೆ ನ್ಯಾಯಾಲಯದ ಮುಂದೆ ವೈಯಕ್ತಿಕವಾಗಲಿ ಅಥವಾ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು ಜರ್ ಒಂದು ವೇಳೆ ಇದ್ದಕ್ಕೆ ತಪ್ಪಿದಲ್ಲಿ ಮಾನ್ಯ ನ್ಯಾಯಾಲಯದವರು ಏಕತರಫ ಆದೇಶ ಮಾಡಿ ದಾವಾ ಆಸ್ತಿಯ ಕುರಿತು ನಿಮ್ಮ ತಕರಾರು ಏನೂ ಇರುವುದಿಲ್ಲ ಅಂತಾ ಪರಿಗಣಿಸಿ ದಾವೆಯನ್ನು ಏಕತರಫ ಚೌಕಸಿ ಮಾಡಿ ಕಾನೂನು ರೀತ್ಯ ಜಡ್ಜಮೆಂಟ್ ಮತ್ತು ಡಿಕ್ರಿ ಆದೇಶ ಮಾಡಲು ಬರುವುದು ಅಂತಾ ಈ ಮೂಲಕ ನೀಡಿದ ಕೋರ್ಟ ಸಮನ್ಸ್ ಇರುತ್ತದೆ ಅಂತಾ ಕೊಟ್ಟ ಸಮನ್ಸ್ ನೋಟಿಸು.
ಸ್ಥಳ : ಬಾಗಲಕೋಟ
ದಿನಾಂಕ 7/2/2026

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ.
ಸಹಿ/- (ಎಸ್.ಬಿ.ಕಿಲ್ಲೇದ)
ವಾದಿಯರ ಪರ ವಕೀಲರು

THE COURT OF THE HON'BLE IN PRINCIPAL CIVIL JUDGE AND J.M.F.C. AT BELLARY.
Cr. M.C 96/2026.

BETWEEN:-Ramjanamma and others...Petitioners
-And-
The Tahasildar Cum- Register Of Births and deaths, Kampli.
....Respondent

WHOMSOEVER IT MAY CONCERN
WHEREAS the above named the petitioners No. by name 1. Ramjanamma Petiioner No.2, K Moulasab, petitioner No-3. K Sakina begum, petitioner No-6 Shaikshavali. All are resident of, R/o # 66 Near Masjid, Near Maszjid, Near Bus stand Suggenhalli, Mavinahalli, Kampli, Kampli Taluk, Bellary district., Petitioner No.4 Smt. Katika Patima resident of House No. 2-170-2 B C Colony, Hanavalu, Adoni Kurnool, Andra Pradesha-516344., and Petitioner No. 5. Smt. K Yasmin resident of Door No. 1/10, Nagenhalli, Bellary Taluk, Bellary district., The above petitioners are filed the petition Under Section 13(3) of Registration of Births and Deaths Act. The Husband of the Petitioner No1, Father of the Petitioner no 02 to 06 by name Janglisab K Son of Katugara Sahebanna died on 22.02.2018 at Suggenhalli Village of Kampli taluk for seeking the direction of this honorable Court to issue direction to the Respondent to enter the Date of death of the deceased.
Whereas, if any person interested with respect to the above proceedings are hereby noticed to appear in this Court in person or by pleader duly able to answer all material question relating to the said petition on 16-03-2026 at about 11.00 AM., to answer the claim, otherwise the petition will be heard and determined in your absence.
Given under my hand and seal of this Court on this 16th day of Feb 2026.

By Order of the Court,
Sheristedar,
Principal Civil Judge & J.M.F.C.
Court Bellary.
S Sateesh and Ganghar Gouda, Advocates, Hosapete and Bellary.

ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಕರು ನಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಿಲೇನಿಯಸ್ ಸಂಖ್ಯೆ:1656/2025
ಶ್ರೀ ಚಂದ್ರಶೇಖರಗೌಡ ಮತ್ತು ಇತರರು

-ವಿರುದ್ಧ-

ಮಾನ್ಯ ತಹಶೀಲ್ದಾರರು, ತಹಶೀಲ್‌ಕಾರ್ಯಾಲಯ, ಗಂಗಾವತಿ ತಾ: ಗಂಗಾವತಿ, ಜಿ: ಕೊಪ್ಪಳ

ಅರ್ಜಿದಾರರು:-ಶ್ರೀ ಚಂದ್ರಶೇಖರಗೌಡ ತಂದೆ ಭೀಮೇಶಗೌಡ @ಭೀಮನಗೌಡ, ವ: 40 ವರ್ಷ, ಉ: ಒಕ್ಕಲುತನ, ಸಾ: ಜಂಗಮರ ಕಲ್ಗುಡಿ ವಾರ್ಡ, ತಾ: ಗಂಗಾವತಿ, ಜಿ: ಕೊಪ್ಪಳ.

-ವಿರುದ್ಧ-

ಎದುರುದಾರರು: ಮಾನ್ಯ ತಹಶೀಲ್ದಾರರು, ತಹಶೀಲ್ ಕಾರ್ಯಾಲಯ, ಗಂಗಾವತಿ ತಾ: ಗಂಗಾವತಿ, ಜಿ: ಕೊಪ್ಪಳ ಮತ್ತು ಇತರರು
1.ಸಂಬಂಧಪಟ್ಟವರು

ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ ಕಲಂ 13 (3) ನಿಯಮ 9 (3) ರ ಅಡಿಯಲ್ಲಿ ಅರ್ಜಿದಾರರವರ ತಂದೆಯಾದ ದಿ॥ ಬೀಮೇಶಗೌಡ @ ಮನಗೌಡ ತಂದೆ ಲಕ್ಷ್ಮಣಗೌಡ ಇವರು ದಿನಾಂಕ: 27-06-1982ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸಾ: ಜಂಗಮರ ಕಲ್ಗುಡಿ ವಾರ್ಡ ನಂ.3 ತಾ: ಗಂಗಾವತಿ, ಜಿ: ಕೊಪ್ಪಳ, ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ ಈ ಪ್ರಕರಣವು ದಿನಾಂಕ:07-03-2023ರಂದು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಗಂಗಾವತಿಯಲ್ಲಿ ಬೆಳಿಗ್ಗೆ11-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.
ಸ್ಥಳ: ಗಂಗಾವತಿ
ದಿ: 16-02-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು,
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ.ಕೋರ್ಟ ಗಂಗಾವತಿ
ನ್ಯಾಯಾಲಯ ಹಾಗೂ ವಕೀಲರ ಸಹಿ,
ಜೆ.ಎಮ್.ಎಫ್.ಸಿ.ಕೋರ್ಟ ಗಂಗಾವತಿ

IN THE COURT OF THE HONOURABLE CIVIL JUDGE AND J.M.F.C., SANDUR.
Cri.M.C.No 77/2026

Durugappa & others....Petitioners
-VS-
The Tahasildar -cum-Registrar Birth & Deaths Taluk Office, Sandur
.....Respondent

TO,
Whom so ever it may concern.
WHEREAS the above named petitioners (1) Durugappa son of Late Baramappa, aged about 53 years, R/o No.149, Hulikunti village, Nidugurthi post, Sandur taluk, Ballari district. (2) Nagaraj son of Bharmappa, aged about 50 years, R/o No.68, Hulikunti village, Nidugurthi post, Sandur taluk, Ballari district (3) Mailavva wife of Kotresh, aged about 46 years, housewife Hulikunti village, Nidugurthi post, Sandur taluk, Ballari district (4) A K Shivaraj son of Late Bharmappa, aged about 36 years, R/o No. 73, Hulikunti village, Nidugurthi post, Sandur taluk, Ballari district (5) Kenchamma wife of Chinnappa, aged about 31 years, housewife R/o Nidagurthi village, Sandur taluk, Ballari district have filed the petition under section 13(3) of Registration of birth and death Act, seeking the direction of this court to issue direction to the respondent to enter the date of death of Ningaraj son of M.Channayya who died on 05-08-2021 at his residence at Murarpura village, Sandur taluk, who is the son of petitioner No. 1 and 2 and brother of petitioner No.3 and 4.WHEREAS, if any persons interested with respect to the above proceedings are hereby noticed to appear in this court in person or by pleader duly able to answer all material question relating to the said petition on 25-03-2026 at about 11-00 A.M, otherwise the matter will be heard and determined.
Given under my hand and seal of this court on this day of 13-02-2026.

By order of the court.
Shirestedar,
Civil Judge & JMFC Sandur.
Sri.H Mukappa. Sri.H Huligesh,
Advocate for Petitioners.Sandur

ಪೌರ ಕಾರ್ಮಿಕರಿಗೆ ಜಿಲ್ಲಾಡಳಿತದಿಂದ ಹೃದಯ ಸ್ಪರ್ಶಿ ಅಭಿನಂದನೆ
ಸ್ವಚ್ಛತಾ ಸೇನಾನಿಗಳಿಗೆ ಆಕಾಶಯಾನದ ಸಂಭ್ರಮ

ವೀರೇಂದ್ರ, ನಾಗಲದಿನ್ನಿ



ದಿಗಂತ ವಿಶೇಷ

ವಿಜಯನಗರ: ಬಾನಂಗಳದಲ್ಲಿ ಸೂರ್ಯನ ಕಿರಣ ಮೂಡುವುದಕ್ಕೂ ಮುನ್ನವೇ ಪೌರ ಕಾರ್ಮಿಕರು ನಗರಗಳ ಸ್ವಚ್ಛತೆಯ ಸೇನಾನಿಗಳಂತೆ ಕೆಲಸ ಮಾಡುತ್ತಾರೆ. ಸರ್ಕಾರದ ಕಾರ್ಯಕ್ರಮಗಳ ಸ್ಥಳಗಳಲ್ಲಿ ಸ್ವಚ್ಛತೆಯ ನಾಯಕತ್ವ ವಹಿಸಿಕೊಳ್ಳುವ ಪೌರ ಕಾರ್ಮಿಕರು ಇಂದು ಅಕ್ಷರಶಃ ಗಣ್ಯ ಮಾನ್ಯರಂತೆ ಹೆಲಿಕಾಪ್ಟರ್ ಏರಿ ಸಂಭ್ರಮಿಸಿದರು.

ವಿಶ್ವ ಪ್ರಸಿದ್ಧ ಹಂಪಿ ಉತ್ಸವದಲ್ಲಿ ಸ್ವಚ್ಛತೆ ನಿರ್ವಹಣೆಗಾಗಿ ಜಿಲ್ಲೆಯ 8 ನಗರ ಸ್ಥಳೀಯ ಸಂಸ್ಥೆಗಳಿಂದ 134 ಪೌರ ಕಾರ್ಮಿಕರು ಆಗಮಿಸಿದ್ದರು. ಉತ್ಸವ ಆರಂಭಕ್ಕೂ ಎರಡು ದಿನ ಮೊದಲೇ ಆಗಮಿಸಿದ್ದ ಅವರು, ಮೂರು ದಿನಗಳ ಉತ್ಸವದಲ್ಲಿ ಯಶಸ್ವಿಯಾಗಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಿದರು. ಉತ್ಸವ ಮುಗಿದ ಬಳಿಕ ಮಾರನೇ ದಿನವಾದ ಸೋಮವಾರವೂ ಎಲ್ಲೆಡೆ ಸ್ವಚ್ಛತಾ ಕಾರ್ಯ ಮುಗಿಸಿ ಸುಸ್ತುಗಿದ್ದರು. ಇನ್ನೇನು ತಮ್ಮೂರುಗಳಿಗೆ ತೆರಳಬೇಕು ಎನ್ನುವಷ್ಟರಲ್ಲಿ ಜಿಲ್ಲಾಡಳಿತದಿಂದ ಬಂದ ಮಾನವೀಯತೆಯ ಕರೆ ಅವರೆಲ್ಲರನ್ನೂ ಹುಚ್ಚೆದ್ದು ಕುಣಿಯುವಂತೆ ಮಾಡಿತು.

ಹಂಪಿ ಉತ್ಸವದ ನಿಮಿತ್ತ ಮೂರು ದಿನ ಹಂಪಿ ಪರಿಸರವನ್ನು ಸ್ವಚ್ಛತೆಯೊಂದಿಗೆ ಅಂದಗೊಳಿಸಿದ ಪೌರ ಕಾರ್ಮಿಕರಿಗೆ ಸೋಮವಾರ ಮಧ್ಯಾಹ್ನ ಆಕಾಶದಲ್ಲಿ ಹಾರಾಡುವ ಅವಕಾಶ ಕಲ್ಪಿಸಿತು. ಜಿಲ್ಲೆಯಾದ್ಯಂತದ 134 ಪೌರಕಾರ್ಮಿಕರು 'ಹಂಪಿ ಬೈ ಸ್ಕೈ' ಕಾರ್ಯಕ್ರಮದಡಿ ಹೆಲಿಕಾಪ್ಟರ್ ಏರಿ ಹಂಪಿಯ ವೈಭವವನ್ನು ಕಂಡು ಪುಳಕಿತರಾದರು.

ಶ್ರಮಜೀವಿಗಳಿಗೆ ಸಂದ ಗೌರವ: ಯಾವುದೇ ಒಂದು ಬೃಹತ್ ಉತ್ಸವ ನಡೆದಾಗ ಅಲ್ಲಿನ ಸ್ವಚ್ಛತೆಯ ಜವಾಬ್ದಾರಿ ಹೊರುವ ಪೌರಕಾರ್ಮಿಕರು ಬಹುತೇಕ ತೆರೆಮರೆಯಲ್ಲೇ ಉಳಿಯುತ್ತಾರೆ. ಆದರೆ, ಕಳೆದ ವರ್ಷ ಪೌರ ಕಾರ್ಮಿಕರಿಗೆ ವಿವಿಐಪಿ ಪಾಸ್ ನೀಡುವ ಮೂಲಕ ವಿಶೇಷವಾಗಿ ಗುರುತಿಸಿದ್ದ ಜಿಲ್ಲಾಡಳಿತ ಈ ಬಾರಿ ಆಕಾಶಯಾನದ ಅವಕಾಶ ಕಲ್ಪಿಸಿದ್ದು, ಪೌರ ಕಾರ್ಮಿಕರಿಗೆ ಮರೆಯಲಾಗದ ಉಡುಗೊರೆ ನೀಡಿದೆ.

ಸ್ಥಳೀಯ ಶಾಸಕ ಎಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಹಾಗೂ ಯೋಜನಾ ನಿರ್ದೇಶಕ ಮನೋಹರ್ ನೇತೃತ್ವದಲ್ಲಿ ಸಾಲಾಗಿ ಹೆಲಿಪ್ಯಾಡ್‌ಗೆ ಬಂದ ಪೌರ ಕಾರ್ಮಿಕರು ಹೆಲಿಕಾಪ್ಟರ್ ಮುಂದೆ ನಿಂತು ಗ್ರುಪ್ ಫೋಟೋಗೆ ಪೋಸ್ ನೀಡಿದರು. ಅವರೆಲ್ಲರನ್ನೂ ಅಭಿನಂದಿಸಿದ ಶಾಸಕರು ಹಾಗೂ ಅಧಿಕಾರಿಗಳು ಪೌರಕಾರ್ಮಿಕರಿಗೆ ಶುಭ ಕೋರಿದರು.

134 ಪೌರಕಾರ್ಮಿಕರು ಸಾಲಾಗಿ ನಿಂತು ಉತ್ಸಾಹದಿಂದ ಹೆಲಿಕಾಪ್ಟರ್ ಏರಿದರು. ಹೆಲಿಕಾಪ್ಟರ್‌ನಲ್ಲಿ ಕುಳಿತು ಪಕ್ಷಿ ನೋಟದಿಂದಲ್ಲಿ ತುಂಗಭದ್ರೆಯ ಹರಿವು, ವಿರೂಪಾಕ್ಷೇಶ್ವರನ ಗೋಪುರ, ಕಲ್ಲಿನ ರಥ ಮತ್ತು ಹಂಪಿಯ ಸ್ಮಾರಕಗಳ ವೈಭವವನ್ನು ಕಂಡು ಬೆರಗಾದರು. ಅಧಿಕಾರಿಗಳು ಕೂಡ ಪೌರಕಾರ್ಮಿಕರ ಜೊತೆಗೆ ಬೆರೆತು ಅವರ ಉತ್ಸಾಹವನ್ನು ಹೆಚ್ಚಿಸಿದ್ದು ವಿಶೇಷ.

ಖುಷಿ ಹಂಚಿಕೊಂಡ ಕಾರ್ಮಿಕರು: ನಾವು ದಿನವೂ ರಸ್ತೆಯಲ್ಲಿ ಕೆಲಸ ಮಾಡುವಾಗ ಆಕಾಶದಲ್ಲೇ ಹೋಗುವ 'ಹೆಲಿಕಾಪ್ಟರ್' ನೋಡಿ ಸಂಭ್ರಮಿಸುತ್ತಿದ್ದೆವು. ನಾವೂ ಒಮ್ಮೆ ಅದರಲ್ಲಿ ಕೂರುತ್ತೇವೆ ಎಂದು ಕನಸಿನಲ್ಲೂ ಊಹಿಸಿರಲಿಲ್ಲ. ಇಂದು ನಾವೇ ಅದರಲ್ಲಿ ಕುಳಿತು ಹಂಪಿ, ತುಂಗಭದ್ರಾ ನದಿ ಹಲವು ಸ್ಮಾರಕಗಳನ್ನು ನೋಡಿದೆವು. ನಮಗೆ ಈ ಅವಕಾಶ ಮಾಡಿಕೊಟ್ಟ ಶಾಸಕರು, ಜಿಲ್ಲಾಡಳಿತ ಹಾಗೂ ಮನೋಹರ್ ಸರ್‌ಗೆ ಧನ್ಯವಾದಗಳು ಎಂದು ಮಹಿಳಾ ಪೌರಕಾರ್ಮಿಕರೊಬ್ಬರು ತಮ್ಮ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡು ಹೆಲಿಕಾಪ್ಟರ್ ರೈಡ್‌ನ ಅನುಭವ ಹಂಚಿಕೊಂಡರು.

> **ನಗರವನ್ನು ಸುಂದರವಾಗಿಡುವ ಪೌರಕಾರ್ಮಿಕರು ನಮ್ಮ ಸಮಾಜದ ಬೆನ್ನೆಲುಬು. ಹಂಪಿ ಉತ್ಸವಕ್ಕೆ ಬರುವ ಲಕ್ಷಾಂತರ ಪ್ರವಾಸಿಗರಿಗೆ ಶುದ್ಧ ಪರಿಸರ ನೀಡುವ ಇವರ ಮುಖದಲ್ಲಿ ಖುಷಿ ಕಾಣುವುದೇ ನಮಗೆ ನಿಜವಾದ ಉತ್ಸವ. ಪೌರ ಕಾರ್ಮಿಕರ ಹೆಲಿಕಾಪ್ಟರ್ ರೈಡ್‌ಗೆ ನಮ್ಮ ಸ್ಥಳೀಯ ಸಂಸ್ಥೆಗಳೇ ಶುಲ್ಕ ಭರಿಸಿದ್ದು, ಶಾಸಕ ಎಚ್.ಆರ್.ಗವಿಯಪ್ಪ ಅವರು 1ಲಕ್ಷ ರೂ. ನೆರವು ನೋಡಿದ್ದಾರೆ.**
>
> **■ ಮನೋಹರ್, ಯೋಜನಾ ನಿರ್ದೇಶಕ, ಜಿಲ್ಲಾ ನಗರಾಭಿವೃದ್ಧಿ ಕೋಶ**

ರಾಷ್ಟ್ರೀಯ ಮಹಿಳಾ ಚಿಂತಕರ ಮಹಾಸಮ್ಮೇಳನ

ಧಾರವಾಡ: ಭಾರತೀಯ ವಿದ್ವತ್ ಪರಿಷತ್ತು, ರಾಷ್ಟ್ರ ಸೇವಿಕಾ ಸಮಿತಿ ಆಶ್ರಯದಲ್ಲಿ ಎರಡು ದಿನಗಳ 'ರಾಷ್ಟ್ರೀಯ ಮಹಿಳಾ ಚಿಂತಕರ ಮಹಾಸಮ್ಮೇಳನ' ಮಾ.7, 8ರಂದು ನವದೆಹಲ್ಲಿ ವಿಜ್ಞಾನ ಭವನದಲ್ಲಿ ಹಮ್ಮಿಕೊಂಡಿದೆ ಎಂದು ರಾಷ್ಟ್ರ ಸೇವಿಕಾ ಸಮಿತಿ ಉತ್ತರ ಪ್ರಾಂತ ಕಾರ್ಯವಾಹಿಕಾ ವೇದಾ ಕುಲಕರ್ಣಿ ಮಾಹಿತಿ ನೀಡಿದರು.

ಸೋಮವಾರ ಸುದ್ದಿಗೋಷ್ಠಿ ಯಲ್ಲಿ ಅವರು ಮಾತನಾಡಿ, 'ನಾರಿಯಿಂದ ನಾರಿಮಣಿ-ಮೌನ ಶಕ್ತಿಯಿಂದ ಕಾರ್ಯತಂತ್ರ ಶಕ್ತಿಯ ಕಡೆಗೆ' ಎಂಬ ಉದ್ಘೋಷದೊಂದಿಗೆ ನಡೆಯಲಿರುವ ಸಮ್ಮೇಳನದಲ್ಲಿ ಮಹಿಳೆಯರ ಅಸಾಧಾರಣ ಶಕ್ತಿಯನ್ನು ಗುರುತಿಸಿ, ಅದನ್ನು ರಾಷ್ಟ್ರ ನಿರ್ಮಾಣದ ದಿಕ್ಕಿನಲ್ಲಿ ರೂಪಿಸುವ ಮಹತ್ವದ ಪ್ರಯತ್ನ ಇದಾಗಿದೆ ಎಂದರು.

ಶತಮಾನಗಳಿಂದ ಮಹಿಳೆಯರ ಕುಟುಂಬ, ಸಂಸ್ಕೃತಿ, ಸಮಾಜವನ್ನು ತಮ್ಮ ಮೌನ ಶಕ್ತಿಯಿಂದ ಪೋಷಿಸುತ್ತ ಬಂದಿದ್ದು, 'ಮಹಿಳಾ ಸಬಲೀಕರಣದಿಂದ ಅಭಿವೃದ್ಧಿ ಕಡೆ' ಸಾಗುತ್ತಿರುವ ಭಾರತದ ಹೊಸ ಯುಗದಲ್ಲಿ ಈ ಶಕ್ತಿಯನ್ನು ಸಮಾಜ, ಆರ್ಥಿಕತೆ, ರಾಷ್ಟ್ರ ರೂಪಿಸುವ ತಂತ್ರವಾಗಿ ಪರಿವರ್ತಿಸುವುದು ಸಮ್ಮೇಳನದ ಉದ್ದೇಶ ಎಂದು ತಿಳಿಸಿದರು.

ಭಿನ್ನ-ವಿಭಿನ್ನ ಪ್ರದೇಶಗಳು, ಸಂಸ್ಕೃತಿ, ವೃತ್ತಿಗಳು ಹಾಗೂ ಒಂದು ಪೀಳಿಗಗಳ ಮಹಿಳರೆಲ್ಲರನ್ನೂ ಒಂದೇ ವೇದಿಕೆಯಲ್ಲಿ ಕರೆ ತಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 2047ರ ವಿಕಸಿತ ಭಾರತದ ಕನಸಿಗೆ ನೀರೆರೆಯುವುದು ಈ ಸಮ್ಮೇಳನವು ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಗೂ ಕೂಡ ದಾರಿ ಮಾಡಿಕೊಡಲಿದೆ ಎಂದು ಹೇಳಿದರು.

ಭಾರತೀ ರಾಷ್ಟ್ರೀಯ ಮಹಿಳಾ ಚಿಂತಕರ ಸಮ್ಮೇಳನದ ರಾಜ್ಯ ಸಂಯೋಜಕಿ ಡಾ. ಗೀತಾ ಉತ್ತೂರ, ವಿದ್ಯಾ-ಜ್ಞಾನ ಶಕ್ತಿ, ಮುಕ್ತಿ-ಆತ್ಮ ವಿಮೋಚನೆ, ಸಿದ್ಧಿ-ಯಶಸ್ಸಿನ ಕಥೆ, ಪ್ರಕೃತಿ-ಪೋಷಣೆ, ಆತ್ಮ ನಿರ್ಭರತೆ, ಚೇತನ ಎನರ್ಜಿ, ಸಂಸ್ಕೃತಿ ಬೇರುಗಳು ಬಲಪಡಿಸುವ ಬಗ್ಗೆ ಮಹಾಸಮ್ಮೇಳನದಲ್ಲಿ ಚಿಂತನ-ಮಂಥನ ನಡೆಯಲಿವೆ ಎಂದು ತಿಳಿಸಿದರು. ಮಹಿಳಾ ವೃತ್ತಿ ನಾಯಕತ್ವದ ಅವಕಾಶಗಳು, ಕೌಟುಂಬಿಕ, ಸಾಮಾಜಿಕ ದೌರ್ಜನ್ಯ, ಜಾಗೃತಿ, ಮಹಿಳೆಯರ ಮಾನಸಿಕ-ಸಮಾಜಿಕ ಸ್ಥಿತಿಗತಿ ಚರ್ಚೆ, ಯಶಸ್ವಿ ಮಹಿಳೆರ ಚಿಂತನ-ಮಂಥನ, ಆರ್ಥಿಕ ಜ್ಞಾನ, ವೃತ್ತಿ ಕೌಶಲ್ಯ, ಸರ್ಕಾರಿ ಸೌಲಭ್ಯಗಳು, ದೇಶದ ಸಂಸ್ಕೃತಿ ರಕ್ಷಣೆ-ಅಭಿವೃದ್ಧಿಗೆ ಮಹಿಳಾ ಕೊಡುಗೆ ಬಗ್ಗೆ ಚರ್ಚೆ ನಡೆಯಲಿವೆ ಎಂದು ಹೇಳಿದರು.



ರಾಷ್ಟ್ರಪತಿಗಳಾದ ದ್ರೌಪತಿ ಮುರ್ಮು, ವಿವಿಧ ರಾಜ್ಯಗಳ ಮಹಿಳಾ ಸಂಸದರು, ವಿಶ್ವವಿದ್ಯಾಲಯಗಳ ಮಹಿಳಾ ಕುಲಪತಿಗಳು ಮತ್ತು ಚಿಂತಕರು ಪಾಲ್ಗೊಳ್ಳುವರು. ಎರಡು ದಿನಗಳ ಈ ಸಮ್ಮೇಳನದಲ್ಲಿ ಚರ್ಚಿಸಿದ ಹಲವಾರು ವಿಷಯಗಳ ಕುರಿತು ಕೈಗೊಂಡ ನಿರ್ಣಯಗಳ ಅನುಷ್ಠಾನಕ್ಕೆ ಭಾರತ ಸರ್ಕಾರಕ್ಕೆ ಸಲ್ಲಿಸುವುದಾಗಿಯೂ ಸಹ ಮಾಹಿತಿ ನೀಡಿದರು.

ಮಹಾಸಮ್ಮೇಳನಕ್ಕೂ ಪೂರ್ವದಲ್ಲಿ ಫೆ.21ರಿಂದ 26ರ ವರೆಗೆ ಆನ್ ಲೈನ್ ವೆಬಿನಾರ್ ನಡೆಯಲಿದೆ. ಆಸಕ್ತ ಮಹಿಳೆಯರು ಹೆಚ್ಚಿನ ಮಾಹಿತಿಗಾಗಿ ಮೊ:6361351318ಕ್ಕೆ ಸಂಪರ್ಕಿಸುವಂತೆ ಗೀತಾ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ರಾಷ್ಟ್ರ ಸೇವಿಕಾ ಸಮಿತಿ ಜಿಲ್ಲಾ ಕಾರ್ಯವಾಹಿಕಾ ರಜನಿ ಕುಲಕರ್ಣಿ, ನಗರ ಕಾರ್ಯವಾಹಿಕಾ ಸಾಧನಾ ಗೋಖಲೆ ಸೇರಿ ಅನೇಕರು ಇದ್ದರು.

G & W No. 29/2026
IN THE COURT OF HON'BLE I-ADDL. SR. CIVIL JUDGE. HUBBALLI, AT : HUBBALLI

Petitioners : 1) Smt. Afreen Banu W/o. Dadahayat Dalal and others,
V/s.
Respondent : Nil

CITATION

Whereas the petitioners above named has filed an Petition under section 7 & 10 of Guardianship and Wards Act, seeking to appoint guardian of **Ziya Noor D/o Dadahayat Dalal and Mohammad Zaid S/o Dadahayat Dalal,** to enable her to sell the undivided share of the minor in the property bearing City Survey No. 1492A/1A/1A, CTS Ward No. I, measuring 9-34-48-4/9 Sq. Yards, situated at Tabib Land Hubballi.

If anybody having objection for the same, he/they shall appear before this Court either personally or through duly instructed advocate and file objections if any on 09-03-2026 at 10:30 a.m. Failing which the case will be heard and decided.

Given under my hand and seal of the Court on 16-02-2026 at Hubballi.

COURT SEAL
By order of the Court
Sd/- Sherestedar
I Addl. Sr. Civil Judge, Hubballi
(A.A. Kamangar)
Advocate for Petitioners

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 1809/2025

ಅರ್ಜಿದಾರರು: 1) ಶ್ರೀಮತಿ ನಾಗಮ್ಮ ಗಂಡ ದಿವಂಗತ ತಳವಾರ ನಾಗಪ್ಪ, ವಯಸ್ಸು 37 ವರ್ಷ, ವ್ಯವಸಾಯಗಾರರು ವಾಸ: ಉಬ್ಬಲಗಂಡಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ,
2) ಸುಮಿತ್ರ ಗಂಡ ಭೀಮಪ, ತಂದೆ ದಿವಂಗತ ತಳವಾರ ನಾಗಪ್ಪ, 19 ವರ್ಷ, ವ್ಯವಸಾಯಗಾರರು ವಾಸ: ಉಬ್ಬಲಗಂಡಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ,

ವಿರುದ್ಧ

ಎದುರುದಾರರು:ಮಾನ್ಯ ತಹಶೀಲ್ದಾರರು ಮತ್ತು ಜನನ ಮರಣ ನೊಂದಣಿ ಅಧಿಕಾರಿಗಳು ತಾಲೂಕು ಕಛೇರಿ, ಸಂಡೂರು

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ಗಂಡನಾದ ತಳವಾರ ನಾಗಪ್ಪ ತಂದೆ ಹೊನ್ನೂರಪ್ಪ, ಇವರು ದಿನಾಂಕ: 18.09.2022 ರಂದು ಉಬ್ಬಲಗಂಡಿ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 18-03-2026 ಬೆಳಿಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 16-02-2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಧರ್ಮರೆಡ್ಡಿ ಮತ್ತು ಎನ್.ಎಂ.ನಟರಾಜ
ಅರ್ಜಿದಾರರ ಪರ ವಕೀಲರು ಸಂಡೂರು

IN THE COURT OF THE III ADDITIONAL CIVIL JUDGE & JMFC AT BALLARI
Crl. M.C. No.642 OF 2025

Between:-Ramzan Sab and others....Petitioners
AND
The Tahsildar cum Registrar Of Birth and Death, Taluk Office, Ballari
....Respondent

NOTICE

To,
The Tahsildar cum Registrar Of Birth and Death, Taluk Office, Ballari.
Whereas the above named petitioners have filed application against the respondent seeking death certificate of petitioner BROTHER SABJAN S/O. NANNESAB, DIED ON 08.05.2020 AT MINCHERI VILLAGE OF BALLARI TALUK AND DISTRICT.
You are hereby summoned to appear in this court in person or by an Advocate duly instructed and able to answer all material questions relating to the claim or who shall be accompanied by some person able to answer all such questions on the day 23-03-2026 at 11-00 'O' Clock in the forenoon, to answer the claim And further you are hereby directed to file on that day a Counter of your defense and to produce on the said day all documents in your possession or Power upon which you base. Your defense, where you rely on any other document whether in your possession or power or not, as evidence in support of your defense you shall enter such documents in a list to be annexed to the counter). Take notice that, in default of your appearance on the day before mentioned, the suit will be heard and determined in your absence. Given under my hand and seal of the court on this 16th day Jan-2026

By Order of the court.
Chief Administrative Officer
III Addl Civil Judge and JMFC Ballari
H. RUDRAPPA
Advocate for the petitioner

ನೇಹಾ ಹಿರೇಮಠ ಹತ್ಯೆ ಪ್ರಕರಣ: ಜಾಮೀನು ಅರ್ಜಿ ತಿರಸ್ಕರಿಸಿದ ಹೈಕೋರ್ಟ್

ಧಾರವಾಡ: ದೇಶಾದ್ಯಂತ ಸಂಚಲನ ಮೂಡಿಸಿದ್ದ ಹುಬ್ಬಳ್ಳಿಯ ನೇಹಾ ಹಿರೇಮಠ ಹತ್ಯೆ ಪ್ರಕರಣದಲ್ಲಿ ಹೈಕೋರ್ಟ್‌ನಲ್ಲಿ ಜಾಮೀನು ಕೇಳಿದ್ದ ಆರೋಪಿ ಫಯಾಜ್‌ಗೆ ಮತ್ತೊಮ್ಮೆ ಹಿನ್ನಡೆಯಾಗಿದೆ.

ಈಗಾಗಲೇ ಎರಡು ಬಾರಿ ಆರೋಪಿ ಫಯಾಜ್ ತನಗೆ ಜಾಮೀನು ಮಂಜೂರು ಮಾಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದನು. ನ್ಯಾಯಾಲಯ ವಿಚಾರಣೆ ನಡೆಸಿ ಅರ್ಜಿ ತಿರಸ್ಕರಿಸಿತ್ತು. 3ನೇ ಬಾರಿ ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್ ಪೀಠವು ತಿರಸ್ಕರಿಸಿದೆ. ಆರೋಪಿ ಫಯಾಜ್ ಸಲ್ಲಿಸಿದ್ದ ಜಾಮೀನು ಅರ್ಜಿ ವಜಾಗೊಂಡಿದ್ದು ನ್ಯಾಯಕ್ಕೆ ಸಂದ ಜಯ. ಈ ವಿಷಯದಲ್ಲಿ ಸಂಪೂರ್ಣವಾಗಿ ನ್ಯಾಯಾಂಗ ಬಗ್ಗೆ ವಿಶ್ವಾಸವಿದೆ. ಆರೋಪಿ ನ್ಯಾಯಾಲಯದ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದು, ಇದರಿಂದ ವಿಚಾರಣೆಯಲ್ಲಿ ತುಸು ವಿಳಂಬವಾಗುತ್ತಿದೆ. ಇಷ್ಟಾಗಿಯೂ ನ್ಯಾಯ ನಮ್ಮ ಪರವಾಗಿ ಬರಲಿದೆ ಎಂಬ ವಿಶ್ವಾಸವಿದೆ ಎಂದು ನೇಹ ಕುಟುಂಬದ ಪರ ನ್ಯಾಯವಾದಿ ರಾಘವೇಂದ್ರ ಮುತ್ತಗಿಕರ ಮಾಧ್ಯಮಗಳಿಗೆ ತಿಳಿಸಿದರು.

ಕಳೆದ 2024ರ ಏ.18ರಂದು ಹುಬ್ಬಳ್ಳಿಯ ಬಿವಿಬಿ ಕಾಲೇಜು ಆವರಣದಲ್ಲಿಯೇ ಫಯಾಜ್ ನೇಹಾಳನ್ನು ಚಾಕುವಿನಿಂದ ಇರಿದು ಬರ್ಬರವಾಗಿ ಕೊಲೆ ಮಾಡಿದ್ದನು. ಆತನನ್ನು ಬಂಧಿಸಿದ್ದ ವಿದ್ಯಾನಗರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ಕಳೆದ ಆಗಸ್ಟ್ ತಿಂಗಳಲ್ಲಿ ಹುಬ್ಬಳ್ಳಿಯ ಒಂದನೇ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಆರೋಪಿ ಫಯಾಜ್ ಜಾಮೀನು ಅರ್ಜಿ ಸಲ್ಲಿಸಿದ್ದನು. ಆದರೆ, ನ್ಯಾಯಾಲಯ ಅರ್ಜಿ ತಿರಸ್ಕರಿಸಿತ್ತು. ನಂತರ ಹೈಕೋರ್ಟ್ ಮೆಟ್ಟಿಲೇರಿದ್ದು ಅಲ್ಲಿಯೂ ಎರಡು ಬಾರಿ ಜಾಮೀನು ತಿರಸ್ಕಾರವಾಗಿದ್ದು, ಫಯಾಜಗೆ ಮತ್ತೆ ಜೈಲೇ ಗತಿಯಾಗಿದೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	6710	6710
ಕಡಲೆಕಾಳು	1010	5799
ಉದ್ದಿನಬೇಳೆ	11585	11585
ಉದ್ದಿನಕಾಳು	6511	6511
ಒಣ ಮೆಣಸಿನಕಾಯಿ	2830	65659
ಹೆಸರುಕಾಳು	801	6089
ನೆಲಗಡಲೆ (ಶೇಂಗಾ)	6190	6190
ಹುರುಳಿ ಕಾಳು	3352	3352
ಬೆಲ್ಲ	4211	4211
ಜೋಳ	1710	3736
ಮೆಕ್ಕೆಜೋಳ	1569	1865
ಮಡಿಕೆ (ಮಟಕಿ)	10111	12751
ಸಾಸುವೆ	5211	6852
ಈರುಳ್ಳಿ	800	2100
ಆಲೂಗಡ್ಡೆ	1000	1700
ಸೋಯಾಬಿನ್	1510	5545
ತೊಗರಿ	2025	5929
ತೊಗರಿ ಬೇಳೆ	10200	12401
ಗೋಧಿ	1510	2716

CHANGE OF NAME

I, **ASHWINI SHEREWAD** (old name) Resident of 4740/B14, Vijayapur Road, Choudaryplot, Jamkhandi, Tq: Jamkhandi, Dist: Bahalkot 587301 (address), have changed my name as **ASHWINI RAHUL NYAMAGOUDA** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **MOHAMMAD SHAFI BABUSAB KUMTA** (old name) Resident of No 13 Cross Giriyal Road Ishwar Nagar Old Hubli 580024 (address) have changed my name as **MOHAMMED SHAFI KUMTA** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **AHMED RAZAKH** (old name) Resident of At Post: Herur Tq: Siddapur 581450 (address) have changed my name as **AHMEDRAZAKH YUSUF BONGE** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **AJITKUMAR KANTILAL OSWAL** (Old Name) Resident of Cement Road, Veereshwar Nagar, Muddebihal Pin - 586212, have changed my name as **AJITKUMAR OSWAL** (New Name) for all purposes, vide affidavit dated: 16/02/2026 before notary **S. S. MALAGATTI** of Muddebihal.

CHANGE OF NAME

I, **KALASH OSWAL** (Old Name) Resident of MIG 280, 20 Cross, Hudco Colony, Muddebihal Pin-586212, have changed my name as **KALASH AJIT OSWAL** (New Name) for all purposes, vide affidavit dated: 16/02/2026 before notary **S. S. MALAGATTI** of Muddebihal.

CHANGE OF NAME

I, **MISHKAAT** (old name) R/o: B 172 1st Block, Yogananda Badavane, Baichanahalli, Po: Kushalnagar, Kodagu - 571234, Karnataka have changed my name as **MISHKAATH MOULA AZEEM W/O: SAMIT RUKNUDDIN** (new name) henceforth I will be called and recognized by new name for all future purposes, dated: 13/02/2026.

CHANGE OF NAME

I, **BASAVARAJ** (old name) Resident of LIG, 41, Mahantesh Nagar, Belagavi - 590016, have changed my name as **BASAVARAJ SIDDAPPA SULTANPURI** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **MEENAKSHI** (old name) Resident of H N 1024/4A Attar Compound Siddeshwar Nagar, Gulbarga Dist: Gulbarga 585101 (address), have changed my name as **MEENAKSHI BALI** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **GANGA CHOUDARI** (old name) Resident of Ward No: 7, Laxmi Nagar Near APMC, Ilkal Sub Dist: Hungund, Dist: Bagalkot - 587154 (address), have changed my name as **GANGADEVI CHOUDARI** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **RAHUL RAKESH GOYAL** (old name) Resident of 13, 3rd Cross, Housr, Dharwad - 580021, have changed my name as **RAHUL GOYAL** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **VIDHYASHRI DHANAPAL ARGI** (old name) Resident of At Post Hidakal, Tq Raybag, District Belagavi, Karnataka 591220, have changed my name as **VIDHYASHRI RAMESH NAIK** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **SOUJANYA BASAVARAJ SANGAM** (old name) Resident of H No: 4 Prashant Colony, Vidyanagar, Hubballi, Dist: Dharwad - 580031 (address), have changed my name as **SOUJANYA SANGAM** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **MUSKAN SAYYAD MAIDIN SAB** (old name) Resident of At Post Herur Tq: Siddapur 581450 (address) have changed my name as **MUSKAN AHMEDRAZAKH BONGE** (new name) henceforth I will be called and recognized by new name for all future purposes, dated: 16/02/2026.

CHANGE OF NAME

I, **SAYYED SALEEM AHAMAD MAHAMMAD USMAN NASWALE** (old name) Resident of 11 Mantoor Road Byalli Plot 2nd Croos Hubli 580020 (address) have changed my name as **SAYED SALEEM NASWALE** (new name) henceforth I will be called and recognized by new name for all future purposes, dated: 16/02/2026.

ನಗರಸಭಾ ಕಾರ್ಯಾಲಯ, ಉಡುಪಿ.

ಸಂಖ್ಯೆ:ಉನಸ:ಬಿ2:ಸಿ.ಆರ್.:2025-26 ದಿನಾಂಕ : 16.02.2026

ಟೆಂಡರು ಪ್ರಕಟಣೆ

2025-26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿ ಈ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W - 3 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 02.03.2026 ಸಂಜೆ 5.00 ಗಂಟೆಗೆ 2) ಸ್ವೀಕರಿಸಲಾದ ಟೆಂಡರುಗಳ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 03.03.2026 ಸಂಜೆ 5.01 ಗಂಟೆಗೆ 3) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ ಅರ್ಹ ಬಿಡ್ಡುದಾರರಿಗೆ ಪ್ರತ್ಯೇಕ ತಿಳಿಸಲಾಗುವುದು.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
1	DMA/2025-26/ WS/WORK_ IDENT53594/CALL-2	7310000.00	109650.00	12 ತಿಂಗಳು

ಸಹಿ/- ಪೌರಾಯುಕ್ತರು
ಉಡುಪಿ ನಗರಸಭೆ

ಸಾರ್ವಜನಿಕ ನೋಟಿಸು

ನಮ್ಮ ಪಕ್ಷಗಾರರಾದ **ಟಿನ್ನಯ್ಯ ತಂದೆ ರಾಮಸಿಂಗ್ ರಜಪೂತ ಮತ್ತು ಶ್ರೀಮತಿ ಸಹನಾ ಕೋಂ. ಟಿನ್ನಯ್ಯ ರಜಪೂತ** ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ,

ನಮ್ಮ ಪಕ್ಷಗಾರರು ಧಾರವಾಡ ಜಿಲ್ಲಾ ಹುಬ್ಬಳ್ಳಿ ನಗರ ತಾಲೂಕ ಹುಬ್ಬಳ್ಳಿ ಸಬ್ ರಜಿಸ್ಟಾರ ಹದ್ದಿಯ ಪೈಕಿ ಹುಬ್ಬಳ್ಳಿ ಶಹರದ ಉಣಕಲ್ ಗ್ರಾಮದ ಲಿಂಗರಾಜನಗರದಲ್ಲಿರುವ ಖುಲ್ಲಾ ಜಾಗೆ ಇದರ ಸ್ವತ್ತಿನ ಸಂಖ್ಯೆ **25-1-525-2079, ವಾರ್ಡ ನಂ.25, ಸ್ವತ್ತಿನ ಹಳೇಯ ಸಂಖ್ಯೆ 25ಎ/2079, ನಿರ್ಧರಣಾ ಸಂಖ್ಯೆ 3518ಬಿ/77ಎ ಸರ್ವೆ ನಂ.3518ಬಿ/77ಎ, ಕ್ಷೇತ್ರ 185.87 ಚ. ಮೀ.** ಸಂಪೂರ್ಣ ಆಸ್ತಿಯ ಮಾಲಕರಾದ **ಶ್ರೀಮತಿ ಮಂಜುಳಾ ಕೋಂ. ಶಿವಪ್ಪ ಗಂಗಾಯಿ ಸಾ: ಗಂಗಾಯಿ ಓಣಿ, ಕುಂದಗೋಳ ತಾ: ಕುಂದಗೋಳ ಜಿ: ಧಾರವಾಡ** ಇವರಿಂದ ಖರೀದಿ ಸಂಚಗಾರ ಪತ್ರ ಮಾಡಿಕೊಂಡಿದ್ದು ಇರುತ್ತದೆ.

ಆದ್ದರಿಂದ ಮೇಲ್ಕಂಡ ಆಸ್ತಿಯ ಬಗ್ಗೆ ಯಾರದಾದರು ತಂಟೆ-ತಕರಾರು, ಜಂಟಿ ಮಾಲ್ಕಿಹಕ್ಕು, ಅಲ್ಪವಯಿ-ಹಕ್ಕು, ವಾರಸಾಹಕ್ಕು, ಇತರೆ ಹಕ್ಕು-ಹಿತ ಸಂಬಂಧ, ಮೊಕ್ತಿಯಾರನಾಮೆ ವ್ಯವಹಾರ, ಕೋರ್ಟಿನ ಟಾಚು ವಗೈರೆ, ಭೋಜಾ, ಖರೀದಿ ಸಂಚಗಾರ ವ್ಯವಹಾರ ವ ಲೇಣಿ-ದೇಣಿ ವ್ಯವಹಾರ ಏನಾದರೂ ಇದ್ದಲ್ಲಿ ಈ ನೋಟೀಸು ಪ್ರಕಟವಾದ 7 (ಏಳು) ದಿನಗಳೊಳಗಾಗಿ ಲಿಖಿತ ರೂಪದಲ್ಲಿ ದಾಖಲೆ ಸಮೇತ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು, ನಂತರ ಬಂದ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ನಮ್ಮ ಪಕ್ಷಗಾರರು ಮೇಲ್ಕಂಡ ಖುಲ್ಲಾ ಜಾಗೆಯನ್ನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಕಬ್ಜಾ ಸಮೇತ ಖರೀದಿಸುವುದರಲ್ಲಿ ಬರುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಹುಬ್ಬಳ್ಳಿ,
16-02-2026

ಬಸವರಾಜ ಎಸ್.ಅಸುಂಡಿ, ವಕೀಲರು,
ಆರ್.ಎಮ್.ಲೋಹಿಯಾನಗರ, ಗೋಕುಲ ರಸ್ತೆ, ಹುಬ್ಬಳ್ಳಿ, ಮೊ : 9945254259

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ

3ನೇ ಮಹಡಿ, "ಗ್ರಾಮೀಣಾಭಿವೃದ್ಧಿ ಭವನ", ಆನಂದರಾವ್ ವೃತ್ತ, ಬೆಂಗಳೂರು - 560009.
ದೂರವಾಣಿ ಸಂಖ್ಯೆ: 080-29710021/22/23/24 ಫ್ಯಾಕ್ಸ್: 080-29710025
ಇ-ಮೇಲ್: coo.krrda.karbng@gmail.com ವೆಬ್‌ಸೈಟ್: http://www.krrda.in

ಸಂಖ್ಯೆ:ಕೆಆರ್‌ಆರ್‌ಡಿಎ/ತಾಂ.ಸ-03/ಜೆ.ಇ-02/208/ಟೆಂಡರ್ ನೋ-8/2025-26/3060 ದಿನಾಂಕ: 16-02-2026

ಟೆಂಡರ್ ಪ್ರಕಟಣೆ-8

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕೆ.ಆರ್.ಆರ್.ಡಿ.ಎ ಯಿಂದ 2025-26 ನೇ ಸಾಲಿನ **ಆರ್ಥಿಕ ಪ್ರೋತ್ಸಾಹಧನ ಯೋಜನೆಯಡಿ** ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿದೆ.

ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿಯ ವಿವರಗಳು ಕೆಳಕಂಡಂತಿವೆ:

1) ಪ್ರಿ-ಬಿಡ್ ಸಭೆಯ ದಿನಾಂಕ: **20-02-2026 ರಂದು ಬೆಳಿಗ್ಗೆ 11.00 ಗಂಟೆಗೆ.** 2) ಬಿಡ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: **24-02-2026 ರಂದು ಸಂಜೆ 5.00 ಗಂಟೆವರೆಗೆ.** 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **25-02-2026 ರಂದು ಸಂಜೆ 5.05 ಗಂಟೆ ನಂತರ.** 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **27-02-2026 ರಂದು ಸಂಜೆ 5.00 ಗಂಟೆ ನಂತರ ಅಥವಾ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.**

ಈ ಸಂಬಂಧ ಮಾಹಿತಿಗಾಗಿ **ಕಾರ್ಯಪಾಲಕ ಇಂಜಿನಿಯರ್, ಕೆ.ಆರ್.ಆರ್.ಡಿ.ಎ.,** ರವರನ್ನು ಸಂಪರ್ಕಿಸಲು ಹಾಗೂ ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಟಿಪ್ಪಣಿ: ಈ ಅಧಿಸೂಚನೆಯಲ್ಲಿ ಎಸ್.ಸಿ., ಎಸ್.ಟಿ., ಪ್ರವರ್ಗ-I ಮತ್ತು ಪ್ರವರ್ಗ-II(ಎ) ವರ್ಗಗಳಿಗೆ ಮೀಸಲಿರಿಸಿದ ಇಂಡೆಂಟ್‌ಗಳಿಗೆ ಸಂಬಂಧಿತ ಗುತ್ತಿಗೆದಾರರು ಜಾತಿ ಪ್ರಮಾಣ ಪತ್ರ ಹಾಗೂ ಹತ್ತು ವರ್ಷಕ್ಕಿಂತ ಹೆಚ್ಚಾಗಿ ಕರ್ನಾಟಕದಲ್ಲಿ ವಾಸ ಮಾಡಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಅಪ್‌ಲೋಡ್ ಮಾಡತಕ್ಕದ್ದು, ಇಲ್ಲವಾದ್ದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

ಸದರಿ ಟೆಂಡರ್ ಪ್ರಕಟಣೆ ಸಂಬಂಧ ಮುಂದಿನ ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

**ಸಹಿ/- ಟೆಂಡರಿಂಗ್ ಅಧಿಕಾರಿ ಮತ್ತು ಕಾರ್ಯಪಾಲಕ ಇಂಜಿನಿಯರ್
ಕ.ಗ್ರಾ.ರ.ಅ. ಸಂಸ್ಥೆ, ಬೆಂಗಳೂರು.**

ವಾಸಾಸಂಇ/ವಾ.ಪ್ರ/5672/ಆದ್ಯಮೋರ್/2025-26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀರಿಂಗ್ ವಿಭಾಗ, ಬೆಳಗಾವಿ

ಕ್ರ.ಸಂ.:ಪಂರಾಇಂ/ವಿಬೆ/ಪಿಬಿ-2/ಟೆಂಡರ-65/2025-26/7017 ದಿನಾಂಕ:16-02-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ 7 (24513, 24514, 24521, 24518, 24519, 24665, 24668) ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 40.00 ಹಾಗೂ ರೂ. 8.00 ಲಕ್ಷಗಳು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ. 80,000/- ಹಾಗೂ 20000/- ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: 27-02-2026 ಸಂಜೆ 17:28 ರೊಳಗಾಗಿ, ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: 27-02-2026 ಸಂಜೆ 17.30 ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 02-03-2026 ಮುಂಜಾನೆ 11:00 ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 02-03-2026 ರಂದು ಮುಂಜಾನೆ 11.30 ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.inರಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.

DIPR/BGM/RO-NO-1847/KSMCA/2025-26

ಕರ್ನಾಟಕ ಸರ್ಕಾರ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ (ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)

ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15-03-2013
Website : www.kimskoppal.com
email :directorkimskoppal@gmail.com
Office : 08539 225522 Office : 08539-225523

ಸಂ:ಕಿಮ್ಸ್/ಕೊಪ್ಪಳ/ಟೆಂಡರ್/2025-26/695 ದಿನಾಂಕ: 16/02/2026

ಟೆಂಡರ್ ಅಧಿಸೂಚನೆ

ಕಿಮ್ಸ್ ಕೊಪ್ಪಳ ಸಂಸ್ಥೆಯ ವಿವಿಧ ವಿಭಾಗಳಿಗೆ ಅವಶ್ಯವಿರುವ ಸಾಮಾಗ್ರಿ/ಉಪಕರಣಗಳನ್ನು ಖರೀದಿಸಿ ಪೂರೈಸಿಕೊಳ್ಳಲು ಕೆಟಿಪಿಪಿ ಕಾಯ್ದೆ 1999-2000 ರಅನ್ವಯ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣ ಕೋಶದ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

1) ಪ್ಲೋರ್ ಕ್ಲಿನಿಂಗ್ ಮಷಿನ್ - ಅಂದಾಜು ಮೊತ್ತ: ರೂ.12.50 ಲಕ್ಷ ಇ.ಎಂ.ಡಿ: ರೂ.31250/-
2) ಝುರಾಕ್ಸ್ ಮಷೀನ್ - ಅಂದಾಜು ಮೊತ್ತ: ರೂ.9.00 ಲಕ್ಷ ಇ.ಎಂ.ಡಿ: ರೂ.22500/-
3) ಶರೀರ ಕ್ರಿಯಾ ಶಾಸ್ತ್ರ ವಿಭಾಗ - ಅಂದಾಜು ಮೊತ್ತ: ರೂ.8.70 ಲಕ್ಷ ಇ.ಎಂ.ಡಿ: ರೂ. 21750/-
4) ಬಿ.ಎಸ್.ಸಿ ನರ್ಸಿಂಗ್ ವಿಭಾಗ - ಅಂದಾಜು ಮೊತ್ತ: ರೂ.27.75 ಲಕ್ಷ ಇ.ಎಂ.ಡಿ: ರೂ. 55500/-

1. ಟೆಂಡರ್‌ಗಳನ್ನು ದಿನಾಂಕ: **17.02.2026** ರಿಂದ ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸಾಯಂಕಾಲ 5:30 ಗಂಟೆಯಿಂದ. 2. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **04.03.2026** ಸಾಯಂಕಾಲ 5:30 ರವರೆಗೆ.

ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http// www.kimskoppal.kar.nic.in ನಿಂದ ಪಡೆಯಬಹುದು.

ಸಹಿ/- ನಿರ್ದೇಶಕರು,
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/681/ಕೆಎಸ್‌ಎಂಸಿಎ/2025-26

ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ

ದೂರವಾಣಿ ಸಂಖ್ಯೆ: 08158-256277, ಇ-ಮೇಲ್ ವಿಳಾಸ: ghsdl105@gmail.com

ಸಂಖ್ಯೆ: ಸಾ.ಆ.ಶಿ/ಗ್ರೂಪ್‌ಡಿಹೊ.ಗು/ಟೆಂಡರ್/03/2025-26
ದಿನಾಂಕ: 09.02.2026

-:ಇ-ಟೆಂಡರ್ ಅಧಿಸೂಚನೆ:-

ವಿಷಯ: 2026-27 ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ ಇಲ್ಲಿಗೆ ಗ್ರೂಪ್ 'ಡಿ' ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಉಲ್ಲೇಖ: (1) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಮುಲೆಪ(ಆಂ/ಆಡಿ/ಹೊ.ಗುತ್ತಿಗೆ-ಗ್ರೂಪ್ ಡಿ/56/2019-20, ದಿನಾಂಕ: 31.12.2019.

(2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಮುಲೆಪ(ಆಂ/ಆಡಿ/ಗ್ರೂಪ್ ಡಿ-ನಿಬಂದನೆ/61/2019-20, ದಿನಾಂಕ: 13.01.2020.

(3) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ ಅನುಮೋದನೆ ದಿನಾಂಕ: 03.02.2026

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನುಸಾರ 2026-27ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ ಇಲ್ಲಿಗೆ ಅವಶ್ಯವಿರುವ ಗ್ರೂಪ್ 'ಡಿ' ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲದಿಂದ ಪಡೆಯುವ ಸಲುವಾಗಿ ಇ-ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

ವಿವರಗಳು ಕೆಳಕಂಡಂತಿದೆ. ವಿವರ: (1) ಟೆಂಡರ್ ಪ್ರಕಟಣೆಯ **ದಿನಾಂಕ: 09.02.2026 (2)** ಇ.ಎಂ.ಡಿ ಮೊತ್ತ: **ರೂ. 40340/-+** ಇ-**ಪ್ರೊಕ್ಯೂರ್‌ಮೆಂಟ್ ಶುಲ್ಕ. (3)** ಟೆಂಡರ್ ಪ್ರಾರಂಭದ ದಿನಾಂಕ (Web Portal) **09.02.2026 (4)** ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ & ಸಮಯ: **01.03.2026 ರಂದು ಮಧ್ಯಾಹ್ನ: 3.00 ಗಂಟೆಗೆ. (5)** ಪ್ರಿ ಬಿಡ್ ಸಭೆಯ ದಿನಾಂಕ & ಸಮಯ: ದಿನಾಂಕ: **18.02.2026 ರಂದು ಮಧ್ಯಾಹ್ನ: 3.00 ಗಂಟೆಗೆ. (6)** ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **ದಿನಾಂಕ: 02.03.2026 ರಂದು ಮಧ್ಯಾಹ್ನ: 3.00 ಗಂಟೆಗೆ. (7)** ಸಾಧ್ಯವಾದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ದಿನಾಂಕ: 03.03.2026 ರಂದು ಮಧ್ಯಾಹ್ನ: 3.00 ಗಂಟೆಗೆ.**

ಹೆಚ್ಚಿನ ವಿವರಗಳನ್ನು **http://kppp.karnataka.gov.in** ಹಾಗೂ ಕಚೇರಿ ವೇಳೆಯಲ್ಲಿ ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ ಇಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/-
**ಆಡಳಿತ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ
ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ**

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:420/ಕೆಎಸ್‌ಎಂಸಿಎ/2025-26

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇಂಜನೀಯರಿಂಗ್ ಘಟಕ,
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಆ & ಕು.ಕ.ಇ,ಇಂ. ವಿಭಾಗ, ಫೋರ್ಟ ರೋಡ್, ಧಾರವಾಡ - 580 008.
ದೂ. : 0836 - 2955800. ಇ-ಮೇಲ್ : eehfwedvndwd1@gmail.com

ಸಂಖ್ಯೆ : ಕಾ.ನಿ.ಅ./ಆ.ಕು.ಕ.ಇ.ಇಂ./ವಿಭಾಗ-ಧಾ./ನ.ಪ್ರಾ.ಆ.ಕೇಂ./1672/25-26
ದಿನಾಂಕ : 31-01-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯನಿರ್ವಾಹಕ ಅಭಿಯಂತರರು, ಆ & ಕು.ಕ.ಇ.ಇಂ., ವಿಭಾಗ, ಧಾರವಾಡ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆ ವರ್ಗದ ಗುತ್ತಿಗೆದಾರರಿಂದ ಕಾಮಗಾರಿವಾರು ಹಾಗೂ ಜಿಲ್ಲಾವಾರು ಸಂಬಂಧಿಸಿದ ಈ ವಿಭಾಗದಡಿಯಲ್ಲಿಯ 1) 15ನೇ ಹಣಕಾಸು - ಧಾರವಾಡ ಜಿಲ್ಲೆಯ : 01 ಸಂಖ್ಯೆ ಕಾಮಗಾರಿಗಳು, 2) ಪಿ.ಎಮ್. ಅಭಿಮ್ - ಬೆಳಗಾವಿ ಜಿಲ್ಲೆಯ : 02 ಸಂಖ್ಯೆ, 3) ಡಿ.ಪಿ.ಆರ್. - ಹಾವೇರಿ ಜಿಲ್ಲೆ : 01 ಸಂಖ್ಯೆ, ಬೆಳಗಾವಿ ಜಿಲ್ಲೆ : 01 ಸಂಖ್ಯೆ ಮತ್ತು 4) 2210-01-110-1-01-21-200 (ಕಟ್ಟಡ ಮತ್ತು ನಿರ್ವಹಣೆ) : ಬಾಗಲಕೋಟ ಜಿಲ್ಲೆ : 01 ಸಂಖ್ಯೆ ಕಾಮಗಾರಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿರುವಂತೆ ಕಾಮಗಾರಿವಾರು ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ದರದ ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ಕರೆಯಲಾಗಿದೆ.

ಸದರಿ ಟೆಂಡರ್‌ಗಳನ್ನು ದಿನಾಂಕ : 17-02-2026 ರಿಂದ 24-02-2026 ರ ಸಂಜೆ 4.00 ಘಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ, ಹಾಗೂ ಸದರಿ ಕಾಮಗಾರಿಯ ಬಿಡ್‌ಗಳನ್ನು ದಿನಾಂಕ : 25-02-2026 ರಂದು ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಒಂದು ವೇಳೆ ಮಾಹಿತಿ ಹಾಗೂ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ, ನಿಖರವಾದ ಮಾಹಿತಿ ಹಾಗೂ ದಿನಾಂಕಗಳನ್ನು ಕೆ.ಪಿ.ಪಿ. ಪೋರ್ಟಲ್ **ವೆಬ್‌ಸೈಟ್ : www.kppp.karnataka.gov.in** ನಲ್ಲಿ ಬಿಡ್‌ಗಳನ್ನು ಪಡೆದು, ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಇನ್ನೂ ಹೆಚ್ಚಿನ ಮಾಹಿತಿಯನ್ನು **www.kppp.karnataka.gov.in** ನಲ್ಲಿ ವೀಕ್ಷಿಸಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಆ.&ಕು.ಕ. ಇಲಾಖೆ, ಇಂ. ವಿಭಾಗ, ಧಾರವಾಡ.

ಡಿಐಪಿಆರ್/ ಧಾರವಾಡ/1235/ಮಣಿಪಾಲ್/2025-26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ/2025-26/7189 ದಿನಾಂಕ: 13/02/2026

ಅಲ್ಪಾವಧಿ ಇ-ಮರುಟೆಂಡರ್ ಪ್ರಕಟಣೆ (Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059-ಮುಖ್ಯ ಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು (ಅಬಿಬಿಆಕ) ಅಡಿ 2 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ಕ್ರಮವಾಗಿ ರೂ. 316.00 ಲಕ್ಷ ಹಾಗೂ ರೂ. 260.00 ಲಕ್ಷ ಇರುವ ಕಾಮಗಾರಿಗಳಿಗೆ ಮರುಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 18-02-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:19-02-2026 (ಸಾಯಂಕಾಲ 5.30 ಗಂಟೆಯವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :21-02-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):23-02-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1853/KSMCA/2025-26

ಪೊಲೀಸ್ ಇಲಾಖೆ

ಪೊಲೀಸ್ ಮಹಾನಿರ್ದೇಶಕರು ರವರ ಕಛೇರಿ ಪೊಲೀಸ್ ಗಣಕ ವಿಭಾಗ,
7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು-560001, ಇ-ಮೇಲ್ :dgppcw@ksp.gov.in ದೂರವಾಣಿ : 22353871

ಸಂಖ್ಯೆ: 16/ಸಂಗ್ರಹ/ಎಡಿಜಿಪಿ/ಪಿಸಿಡಬ್ಲ್ಯೂ/2024-25 ದಿನಾಂಕ : 13.02.2026

ಇ-ಟೆಂಡರ್ ಪ್ರಕಟಣೆ

ಪೊಲೀಸ್ ಗಣಕ ವಿಭಾಗದ ವತಿಯಿಂದ ರಾಜ್ಯದ ವಿವಿಧ ಪೊಲೀಸ್ ಶಾಖೆಗಳಿಗೆ ಅವಶ್ಯಕತೆ ಇರುವ ಈ ಕೆಳಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕುರಿತು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ ಇ-ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್ ಸಂಕ್ಷಿಪ್ತ ವಿವರ	ಸಂಖ್ಯೆ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	KSP/2025-26/ IND0303/ Call-3	Supply of Medium End Desktop	400	18/03/2026 by 17:30 hrs
2		Supply of Medium End Laptop	24	

ಈ ನಿಟ್ಟಿನಲ್ಲಿ ಕುಶಲತೆ ಪಡೆದಿರುವ ಸಂಸ್ಥೆಗಳು ವಿವರವಾದ ಷರತ್ತು ಮತ್ತು ನಿಬಂಧನೆ ಹಾಗೂ ತಾಂತ್ರಿಕ ವಿವರ ಒಳಗೊಂಡಿರುವ ಟೆಂಡರ್ ದಾಖಲಾತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಮೇಲ್ಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸಲು ಇಚ್ಛಿಸುವವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು. ಇ-ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ-ಪ್ರೊಕ್ಯೂರ್‌ಮೆಂಟ್ ಸೆಲ್, ಇ-ಆಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ 91-8046010000 + 91-8068948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ-ಖರೀದಿ ವ್ಯವಸ್ಥೆಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ 91-8046010000 +91-8068948777ಗಳನ್ನು ಸಂಪರ್ಕಿಸತಕ್ಕದ್ದು. ದಿನಾಂಕ : 17.02.2026 ರಿಂದ ದಾಖಲಾತಿಯು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.

1) ವಿವರಗಳು : ಟೆಂಡರ್ ಫಾರಂ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : (17/02/2026 ರಿಂದ 18/03/2026 ರ 17:30 ಗಂಟೆಯವರೆಗೆ) (2) ಇಎಂಡಿ ಮೊತ್ತ : ರೂ. 4,71,200/-(ನಾಲ್ಕು ಲಕ್ಷದ ಎಪ್ಪತ್ತೊಂದು ಸಾವಿರದ ಎರಡು ನೂರು ಮಾತ್ರ) ಗಳನ್ನು, ಈ ಕೆಳಕಂಡ ವಿಧಾನಗಳ ಮೂಲಕ ಪಾವತಿ ಮಾಡಬಹುದು. (ಎ) ಕ್ರೆಡಿಟ್ ಕಾರ್ಡ್, (ಬಿ) ಡೆಬಿಟ್ ಕಾರ್ಡ್, (ಸಿ) ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್, (ಡಿ) ಪಾವತಿ ವಿವರ ಬಿಡ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ (ಇ-ಪಾವತಿ ವಿವರ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ) (3) ಪ್ರೀ ಬಿಡ್ ಸಭೆ : 25-02-2026 ರ 12.00 ಗಂಟೆಗೆ (4) ತಾಂತ್ರಿಕ ಬಿಡ್ : 20-03-2026 ರ 11.00 ಗಂಟೆಗೆ (5) ವಾಣಿಜ್ಯ ಬಿಡ್ : 26-03-2026 ರ ಬೆಳಿಗ್ಗೆ 11.30 ಗಂಟೆಗೆ.

ಸಹಿ/-
ಪೊಲೀಸ್ ಮಹಾ ನಿರ್ದೇಶಕರು,
ಪೊಲೀಸ್ ಗಣಕ ವಿಭಾಗ, ಬೆಂಗಳೂರು

DIPR/CP/5654/Zen/2025-26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-1/2025-26/5949 ದಿನಾಂಕ: 16-02-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https://kppp.karnataka.gov.in/** ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/RD/WORK_INDENT33102	100.00
2)	PWD/2025-26/RD/WORK_INDENT33101	150.00
3)	PWD/2025-26/RD/WORK_INDENT33103	150.00
4)	PWD/2025-26/BR/WORK_INDENT33206	400.00
5)	PWD/2025-26/RD/WORK_INDENT33494	125.00
6)	PWD/2025-26/RD/WORK_INDENT33495	200.00
7)	PWD/2025-26/RD/WORK_INDENT33655	400.00
8)	PWD/2025-26/RD/WORK_INDENT33656	300.00
9)	PWD/2025-26/RD/WORK_INDENT33375	100.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **20-02-2026 ರಂದು 12.00 ಗಂಟೆಯ ವರೆಗೆ.**
ಆ)ಕೆಪಿಪಿ-ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ.: **24-02-2026 ರಂದು 16.00 ಗಂಟೆಯ ವರೆಗೆ.** ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **25-02-2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1008/ಕೆಎಸ್‌ಎಂಸಿಎ/2025-26

ಕರ್ನಾಟಕ ರೂರಲ್ ಇನ್‌ಫ್ರಾಸ್ಟಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು-560009

ಸಂಖ್ಯೆ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಸಿಎಂಟಿ/ಟಿಎನ್‌ಡಿ/2025-26 ದಿನಾಂಕ: 16.02.2026

ಅಲ್ಪಾವಧಿ ಮರು-ಟೆಂಡರ್ ಪ್ರಕಟಣೆ

ಕರ್ನಾಟಕದ ಕೆಆರ್‌ಐಡಿಎಲ್ ಉಪ ವಿಭಾಗಗಳಿಗೆ ಸಿಮೆಂಟ್ ಪೂರೈಕೆಗಾಗಿ ಕೆಳಗೆ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದಂತೆ ಕಳೆದ 3 ಹಣಕಾಸು ವರ್ಷಗಳಲ್ಲಿ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ತಯಾರಕರು/ಏಜೆಂಟರು/ಡೀಲರ್‌ಗಳು ಇ-ಆಡಳಿತ ಸಚಿವಾಲಯದ ಮೂಲಕ ಮಾತ್ರ ವೀಕ್ಷಿಸಬಹುದು, ಡೌನ್‌ಲೋಡ್ ಮಾಡಬಹುದು ಮತ್ತು ಅರ್ಜಿ ಸಲ್ಲಿಸಬಹುದು. ನೂತನ ವೆಬ್‌ಸೈಟ್: **www.kppp.karnataka.gov.in** ಸಂಪರ್ಕಿಸಿ: +91 9240214000, +91 9240214001, +91 80 68948777, +91 80 46010000.

ಕ್ರ. ಸಂ.	ಟೆಂಡರ್‌ನ ವಿವರ	ಟೆಂಡರಿಗಿಟ್ಟಿರುವ ಒಪಿ ಸಿಮೆಂಟ್ ಪ್ರಮಾಣ ಚೀಲಗಳಲ್ಲಿ	ಟೆಂಡರಿಗಿಟ್ಟಿರುವ ಪಿಪಿ ಸಿಮೆಂಟ್ ಪ್ರಮಾಣ ಚೀಲಗಳಲ್ಲಿ	ಟೆಂಡರಿಗಿಟ್ಟಿರುವ ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಸಂಸ್ಥೆಯು ಹೊಂದಿರಬೇಕಾದ ವಾರ್ಷಿಕ ವಹಿವಾಟು ರೂ.ಲಕ್ಷಗಳಲ್ಲಿ
1	ಟೆಂಡರ್ ಭಾಗ-I, ಬೆಂಗಳೂರು ಮತ್ತು ಬಿಬಿಎಂಪಿ ವಲಯ ಒಪಿ ಸಿಮೆಂಟ್	158900	-	487.82	7.32	1561.00
2	ಟೆಂಡರ್ ಭಾಗ-II, ಕೇಂದ್ರ (ಚಿತ್ರದುರ್ಗ) ವಲಯ ಒಪಿ ಸಿಮೆಂಟ್	386500	-	1186.55	15.00	3796.00
3	ಟೆಂಡರ್ ಭಾಗ-III, ಮೈಸೂರು ವಲಯ ಒಪಿ ಸಿಮೆಂಟ್	425000	-	1318.13	15.00	4218.00
4	ಟೆಂಡರ್ ಭಾಗ-IV, ಬೆಳಗಾವಿ ವಲಯ ಒಪಿ ಸಿಮೆಂಟ್	210500	-	617.05	9.26	1974.00

ಪೂರೈಕೆಗೆ ಆದೇಶ ನೀಡಿದ ದಿನಾಂಕದಿಂದ 3 ತಿಂಗಳು ಪೂರೈಕೆ ಅವಧಿ ಆಗಿರುತ್ತದೆ. ವಿಚಾರಣೆಯ ಕಡೆಯ ದಿನಾಂಕ ಮತ್ತು ಸಮಯ: **24.02.2026 ರಂದು 14.00 ಗಂಟೆವರೆಗೆ.** ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **24.02.2026 ರಂದು 15.00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26.02.2026 ರಂದು 15.00 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **27.02.2026 ರಂದು 15.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ಅಭಿಯಂತರರು (ಉತ್ತರ)
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು-09.
ದೂರವಾಣಿ: 080-28015605. ಇ-ಮೇಲ್: ddworkskridl@gmail.com
ಮಾಹಿತಿಗಾಗಿ ಇಲ್ಲಿಗೆ ಲಾಗ್‌ಆನ್ ಆಗಿ: www.kridl.org.in

ಸಹಿ/- ಮುಖ್ಯ ಅಭಿಯಂತರರು (ಉತ್ತರ)

ಇಂದಿನ ಪಂದ್ಯಗಳು

ಕೆನಡಾ vs ನ್ಯೂಜಿಲ್ಯಾಂಡ್
ಬೆಳಗ್ಗೆ 11 (ಚೆನ್ನೈ)

ಐರ್ಲೆಂಡ್ vs ಜಿಂಬಾಬ್ವೆ
ಮಧ್ಯಾಹ್ನ 3 (ಪಲ್ಲಿಕೆಲೆ)

ನೇಪಾಳ vs ಸ್ಕಾಟ್ಲೆಂಡ್
ಸಂಜೆ 7 (ವಾಂಖೇಡೆ)

ಕಿರುಸುದ್ದಿ

ಇಂಗ್ಲೆಂಡ್ ವಿರುದ್ಧ ಇಟಲಿಗೆ 24 ರನ್ ವೀರೋಚಿತ ಸೋಲು

ಕೋಲ್ಕತ: ಈಡನ್ ಗಾರ್ಡನ್‌ನಲ್ಲಿ ನಡೆದ ಇನ್ನೊಂದು ವಿಶ್ವಕಪ್ ಪಂದ್ಯದಲ್ಲಿ ವಿಲ್ ಜ್ಯಾಕ್ಸ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದಿಂದಾಗಿ ಇಂಗ್ಲೆಂಡ್ ತಂಡ ಇಟಲಿಯನ್ನು 24 ರನ್‌ಗಳಿಂದ ಸೋಲಿಸಿದೆ.



ಆದರೆ ಇಟಲಿ ತಂಡವು ವಿರೋಚಿತ ಸೋಲುಂಡಿತ್ತು. ಇಂಗ್ಲೆಂಡ್ ನೀಡಿದ 203 ರನ್ ಸವಾಲನ್ನು ಬೆನ್ನತ್ತಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು 178 ರನ್ ಪೇರಿಸಿ ಸೋಲುಂಡಿತು. ಇಂಗ್ಲೆಂಡ್ ಪರ ಜ್ಯಾಕ್ಸ್ 22 ಎಸೆತಗಳಿಂದ ಔಟಾಗದೆ 53 ರನ್ ಗಳಿಸಿದರು. ಜ್ಯಾಕ್ಸ್ ಇನ್ನಿಂಗ್ಸ್‌ನಲ್ಲಿ 3 ಬೌಂಡರಿ ಮತ್ತು 4 ಸಿಕ್ಸರ್‌ಗಳು ಒಳಗೊಂಡಿದ್ದವು. 203 ರನ್ ಸವಾಲು ಬೆನ್ನತ್ತಿದ ಇಟಲಿ ಪರ ಬೆನ್ ಮಾನೆಂಟಿ ಸ್ಫೋಟಕ ಬ್ಯಾಟಿಂಗ್‌ನಿಂದ ಗಮನಸೆಳೆದಿದ್ದು, ಕೇವಲ 25 ಎಸೆತಗಳಿಂದ 60 ರನ್ ಚಚ್ಚಿದ್ದರು. ಅವರ ಇನ್ನಿಂಗ್ಸ್‌ನಲ್ಲಿ 4 ಬೌಂಡರಿಗಳು ಮತ್ತು 6 ಭರ್ಜರಿ ಸಿಕ್ಸರ್‌ಗಳಿದ್ದವು.

ಲಂಕೆಗೆ 8 ವಿಕೆಟ್ ಜಯ

ಪಲ್ಲಿಕೆಲೆ: ಆಸ್ಟ್ರೇಲಿಯಾ ವಿರುದ್ಧ ವಿಶ್ವಕಪ್ ಪಂದ್ಯದಲ್ಲಿ ಸೋಮವಾರ ಆರಂಭಿಕ ಬ್ಯಾಟ್ಸ್‌ಮನ್ ಪಥುಮ್ ನಿಸ್ಸಾಂಕ ಅಜೇಯ ಶತಕದ ಸಹಾಯದಿಂದ ಆತಿಥೇಯ ಶ್ರೀಲಂಕಾ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆಸೀಸ್ ನೀಡಿದ 182 ರನ್ ಸವಾಲು ಬೆನ್ನತ್ತಿದ ಶ್ರೀಲಂಕಾ ಪರ ಭರ್ತಿ 100 ರನ್ ಮಾಡಿ ಅಜೇಯರಾಗುಳಿದ ನಿಸ್ಸಾಂಕ 52 ಎಸೆತಗಳನ್ನಷ್ಟೇ ಎದುರಿಸಿದ್ದರು. ಕುಸಲ್ ಮೆಂಡಿಸ್ ಅರ್ಧಶತಕ



(51) ದಾಖಲಿಸಿದರು. ಮೊದಲು ಬ್ಯಾಟ್ ಮಾಡಿದ್ದ ಆಸ್ಟ್ರೇಲಿಯಾ ನಿಗದಿತ 20 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು 181 ರನ್ ಕಲೆಹಾಕಿತು. ಶ್ರೀಲಂಕಾ 18 ಓವರ್‌ಗಳಲ್ಲೇ 2 ವಿಕೆಟ್ ನಷ್ಟಕ್ಕೆ 184 ರನ್ ಪೇರಿಸಿ ಗೆದ್ದಿತು.ಆಸ್ಟ್ರೇಲಿಯಾ ಪರ ಆರಂಭಿಕ ಬ್ಯಾಟ್ಸ್‌ಮನ್‌ಗಳಾದ ನಾಯಕ ಮಿಚೆಲ್ ಮಾರ್ಷ್ (54) ಮತ್ತು ಟ್ರಾವಿಸ್ ಹೆಡ್ (56) ಅದ್ಭುತ ಆರಂಭವನ್ನು ಒದಗಿಸಿಕೊಟ್ಟರೂ ಅದನ್ನು ಮುಂದುವರಿಸಿ 200ರ ಗಡಿ ದಾಟುವಲ್ಲಿ ಆಸೀಸ್ ವಿಫಲವಾಯಿತು. ಶ್ರೀಲಂಕಾ ಪರ ಲೆಗ್‌ಸ್ಪಿನ್ನರ್ ದೂಶನ್ ಹೇಮಂತ 37 ರನ್‌ಗಳಿಗೆ 3 ವಿಕೆಟ್ ಕಿತ್ತರು. ವೇಗಿಗಳಾದ ಚಾಮೀರ 2 ವಿಕೆಟ್ ಕಿತ್ತರು.

ಫುಟ್ಬಾಲ್ ಲೀಗ್; ಬೆಂಗಳೂರು ಶುಭಾರಂಭ

ಬೆಂಗಳೂರು: ಶಿವಶಕ್ತಿ ಮತ್ತು ಸುನೀಲ್ ಚೆಟ್ರಿ ಅವರ ಗೋಲ್‌ಗಳ ಸಹಾಯದಿಂದ ಬೆಂಗಳೂರು ಎಫ್‌ಸಿ ಇಂಡಿಯನ್ ಸೂಪರ್ ಲೀಗ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದೆ. ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ದಿಲ್ಲಿ ವಿರುದ್ಧ 2-0 ಗೋಲ್‌ಗಳಿಂದ ಬಿಎಫ್‌ಸಿ ಜಯ ಸಾಧಿಸಿದೆ. ಪಂದ್ಯದ 46ನೇ ನಿಮಿಷದಲ್ಲಿ ಶಿವಶಕ್ತಿ ನಾರಾಯಣನ್ ಗೋಲ್ ದಾಖಲಿಸಿದ್ದು, 94ನೇ ನಿಮಿಷದಲ್ಲಿ ಸುನೀಲ್ ಚೆಟ್ರಿ ಗೋಲ್ ಹೊಡೆದಿದ್ದರು.

ಪಾಕ್ ಇನ್ನಿಂಗ್ಸ್ ಮುನ್ನ ಭಾರತ ತಂಡಕ್ಕೆ ಪೆಪ್ ಟಾಕ್ ಸಲಹೆ ನೀಡಿದ್ದ ನಾಯಕ ಸೂರ್ಯ

ಸ್ಲೆಜ್ ಮಾಡದೆ, ಶ್ರೇಷ್ಠ ಕ್ರಿಕೆಟ್‌ನಿಂದ ಗೆಲ್ಲೋಣ

ಕೊಲಂಬೋ: ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನದ ಬ್ಯಾಟರ್‌ಗಳಿಗೆ ಸ್ಲೆಜ್ ಮಾಡದೆ, ಉತ್ತಮ ಕ್ರಿಕೆಟ್ ಆಡಿ ಪಂದ್ಯ ಗೆಲ್ಲೋಣ ಎಂದು ನಾಯಕ ಸೂರ್ಯಕುಮಾರ್ ಯಾದವ್ ಭಾರತ ತಂಡಕ್ಕೆ ಪೆಪ್ ಟಾಕ್ ಸಲಹೆ ನೀಡಿದ್ದರು. ನಾಯಕ ಸೂರ್ಯ ಅವರ ಪೆಪ್ ಟಾಕ್ ವಿಡಿಯೋವನ್ನು ಬಿಸಿಸಿಐ ಬಿಡುಗಡೆಗೊಳಿಸಿದೆ.

ಓವರ್‌ಗಳ ಮಧ್ಯೆ ಮೈದಾನದಲ್ಲಿ ಓಡಾಡುತ್ತಾ (ಸಕ್ರಿಯವಾಗಿ) ಇರಬೇಕು. ಯಾರಿಗೂ ಏನೂ ಹೇಳಬೇಡಿ (ಸ್ಲೆಜ್ ಮಾಡಬೇಡಿ). ನಾವು ಉತ್ತಮ ಕ್ರಿಕೆಟ್ ಆಡೋಣ. ಈ ಪಂದ್ಯವನ್ನು ಉತ್ತಮ ಕೌಶಲದಿಂದ ಗೆಲ್ಲೋಣ ಎಂದು ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ನೀಡಿದ ಪೆಪ್ ಟಾಕ್ ಸಲಹೆಯನ್ನು ಬಿಸಿಸಿಐ ಫೆ.16ರಂದು ಬಿಡುಗಡೆಗೊಳಿಸಿದೆ.

ಭಾರತದಲ್ಲಿ ಆಡುವುದಿಲ್ಲವೆಂದು ವಿಶ್ವಕಪ್‌ನಿಂದ ಹೊರಗುಳಿದ ಬಾಂಗ್ಲಾದೇಶಕ್ಕೆ ಬೆಂಬಲಿಸಿ ಭಾರತ ವಿರುದ್ಧದ ಗುಂಪಿನ ಪಂದ್ಯವನ್ನು ಬಹಿಷ್ಕರಿಸಿ ಯೂಟರ್ನ್ ಹೊಡೆದಿದ್ದರಿಂದ ಪಂದ್ಯವನ್ನು ಗೆಲ್ಲಲೇಬೇಕಾದ ಅಗತ್ಯವಿತ್ತು. ಆದರೆ ಪಾಕಿಸ್ತಾನ ಕ್ರಿಕೆಟ್ ತಂಡ ಕಳಪೆ ಪ್ರದರ್ಶನ ನೀಡಿ ಸೋಲೊಪ್ಪಿಕೊಂಡಿತು. ಕೊಲಂಬೋದ ಪ್ರೇಮದಾಸ ಮೈದಾನದಲ್ಲಿ ಆರಂಭವಾದ ಹೈವೋಲ್ಟೇಜ್ ಪಂದ್ಯದಲ್ಲಿ ಇಶಾನ್ ಕಿಶನ್ ಸ್ಫೋಟಕ ಅರ್ಧ ಶತಕದ (77) ನೆರವಿನಿಂದ ಭಾರತ, ಪಾಕ್ ಗೆಲುವಿಗೆ 175 ರನ್ ಸವಾಲೊಡ್ಡಿತು. ಗುರಿ ಬೆನ್ನತ್ತಿದ ಪಾಕ್ 18 ಓವರ್‌ಗಳಲ್ಲೇ 114 ರನ್‌ಗಳಿಗೆ ಆಲೌಟಾಗಿ, 61 ರನ್‌ಗಳ ಹೀನಾಯ ಸೋಲೊಪ್ಪಿತು. ನಾಯಕನ ಸಲಹೆಯನ್ನು ಅನುಸರಿಸಿದ ಭಾರತ ತಂಡ ಯಾವುದೇ ಸ್ಲೆಜಿಂಗ್‌ನಲ್ಲಿ ಭಾಗಿಯಾಗದೆ, ಪೂರ್ಣ ಕೌಶಲದಿಂದ ಉತ್ತಮ ಕ್ರಿಕೆಟ್ ಮೂಲಕವೇ ಪಾಕಿಸ್ತಾನಿಗಳಿಗೆ ಗೆಲುವಿನ ಮೂಲಕ ಉತ್ತರ ನೀಡಿದ್ದಾರೆ.

ಸ್ಪಿನ್ ಪಿಚ್‌ನಲ್ಲಿ ಎಡವಿದ ಪಾಕ್: ಸ್ಪಿನ್ ಸ್ನೇಹಿ ಪಿಚ್‌ನಲ್ಲಿ ದೊಡ್ಡ ಸ್ಕೋರ್ ಬೆನ್ನತ್ತುವ ಒತ್ತಡದಲ್ಲಿ ಪಾಕ್ ಬ್ಯಾಟಿಂಗ್ ಕ್ರಮಾಂಕ ಬೇಗನೆ ಪತನ ಕಂಡಿತು. ಪವರ್‌ಪ್ಲೇ ಓವರ್‌ಗಳಲ್ಲಿ



34 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡು ಪಾಕ್ ಭಾರೀ ಸೋಲಿನ ಮುನ್ಸೂಚನೆ ನೀಡಿತ್ತು. ಎಲ್ಲೂ ಪಂದ್ಯದಲ್ಲಿ ಪಾಕ್ ಹೋರಾಟ ಪ್ರದರ್ಶಿಸಲಿಲ್ಲ, 61 ರನ್‌ಗಳಿಂದ ಪಾಕ್ ಸೋತಿದ್ದು, ಭಾರತದ ವಿರುದ್ಧ ಅದರ ಅತಿ ದೊಡ್ಡ ಟಿ20 ಸೋಲು ಇದಾಗಿದೆ. ಟಿ20 ವಿಶ್ವಕಪ್‌ನಲ್ಲಿ ಇದು ಪಾಕಿಸ್ತಾನದ 2ನೇ ಅತಿ ದೊಡ್ಡ ಸೋಲಾಗಿದೆ.

ಕಿಶನ್ ಹೊಗಳಿದ ಸೂರ್ಯ: ಕಠಿಣ ಸ್ಪಿನ್ ಪಿಚ್‌ನಲ್ಲಿ ಸ್ಫೋಟಕ ಅರ್ಧಶತಕ ಚಚ್ಚಿ ಪಾಕಿಸ್ತಾನದ ಮೇಲೆ ಮೇಲುಗೈ ಸಾಧಿಸಲು ನೆರವಾದ ಇಶಾನ್ ಕಿಶನ್ ಪರಾಕ್ರಮವನ್ನು ನಾಯಕ ಸೂರ್ಯಕುಮಾರ್ ಯಾದವ್ ಹೊಗಳಿದರು. ಪಾಕ್ ನಾಯಕ ಸಲ್ಮಾನ್ ಆಘಾ ಟಾಸ್ ಗೆದ್ದು ಕ್ಷೇತ್ರರಕ್ಷಣೆ ಆಯ್ದುಕೊಂಡಾಗ, ತಂಡದ ಬ್ಯಾಟರ್‌ಗಳಿಂದ ಇದೇ ರೀತಿಯ ಬ್ಯಾಟಿಂಗ್ ಅನ್ನು ಸೂರ್ಯ ನಿರೀಕ್ಷಿಸಿದ್ದರು.

ಈ ವಿಕೆಟ್‌ನಲ್ಲಿ ಮೊದಲು ಬ್ಯಾಟ್ ಮಾಡುವುದು ಉತ್ತಮ ಆಯ್ಕೆಯಾಗಿತ್ತು. ದೇಶೀಯ ಕ್ರಿಕೆಟ್‌ನ ಕಳೆದ ಕೆಲವು ಪಂದ್ಯಗಳಲ್ಲಿ ಇಶಾನ್ ಉತ್ತಮ ಪ್ರದರ್ಶನ ನೀಡಿದ್ದರು. ಅದೇ ರೀತಿ ಇಶಾನ್ ತಮ್ಮ ಬ್ಯಾಟಿಂಗ್ ಮೂಲಕ ಪಾಕ್ ವಿರುದ್ಧ ಪ್ರಾಬಲ್ಯ ಸಾಧಿಸಲು ನೆರವಾದರು ಎಂದು ಸೂರ್ಯ ಹೇಳಿದ್ದಾರೆ.

ಸೂಪರ್-8 ಎದುರಾಳಿ?

ಮೂರು ಪಂದ್ಯಗಳನ್ನು ಗೆದ್ದ ಭಾರತ ತಂಡ ಈಗಾಗಲೇ ಸೂಪರ್-8 ಹಂತವನ್ನು ಪ್ರವೇಶಿಸಿದೆ. ಫೆ.18ರ ಬುಧವಾರ ಅಹಮದಾಬಾದ್‌ನಲ್ಲಿ ನಡೆಯಲಿರುವ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಭಾರತ ತಂಡ ನೆದರ್‌ಲೆಂಡ್ಸ್ ಅನ್ನು ಎದುರಿಸಲಿದೆ. ಸೂಪರ್-8ನಲ್ಲಿ ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳನ್ನು ಭಾರತ ಎದುರಿಸುವ ಸಾಧ್ಯತೆಯಿದೆ. ಸೂಪರ್-8 ಪ್ರವೇಶಿಸಲು ಆಸ್ಟ್ರೇಲಿಯಾ ಮತ್ತು ಜಿಂಬಾಬ್ವೆ ತಂಡಗಳ ಮಧ್ಯೆ ಪೈಪೋಟಿ ಇದೆ. ಇನ್ನೊಂದೆಡೆ ಅಫ್ಘಾನಿಸ್ತಾನವೂ ರೇಸ್‌ನಲ್ಲಿ ಉಳಿದಿದೆ.

ಚೇಸಿಂಗ್ ಅರ್ಧದಲ್ಲೇ ಕಾಲ್ಕಿತ್ತ ಪಿಸಿಬಿ ಅಧ್ಯಕ್ಷ

ಭಾನುವಾರದ ಹೈವೋಲ್ಟೇಜ್ ಪಂದ್ಯದಲ್ಲಿ ಪಾಕ್ ಬ್ಯಾಟಿಂಗ್ ಕ್ರಮಾಂಕ ನೀಡಿದ ಲೋವೋಲ್ಟೇಜ್ ಪ್ರದರ್ಶನ ನೋಡಿ ಇನ್ನೇನು ಸೋಲುವುದು ಖಚಿತವಾದಾಗ, ಸೋಲನ್ನು ಜೀರ್ಣಿಸಲಾಗದೆ ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಪಾಕ್ ಇನ್ನಿಂಗ್ಸ್ ಅನ್ನು ಪೂರ್ತಿ ವೀಕ್ಷಿಸದೆ ಮೈದಾನದಿಂದ ಕಾಲ್ಕಿತ್ತರು. 176 ರನ್ ಕಠಿಣ ಸವಾಲು ಬೆನ್ನತ್ತಿದ ಪಾಕ್ 78 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿದ್ದಾಗ, ನಖ್ವಿ ಪ್ರೇಮದಾಸ ಸ್ಟೇಡಿಯಂನಿಂದ ಹೊರನಡೆದರು. ಪಾಕ್ ಸೋಲಿನ ಮುಖಭಂಗ ಆಗುವುದನ್ನು ಮೊದಲೇ ನಿರೀಕ್ಷಿಸಿದ ನಖ್ವಿ ಅಲ್ಲಿಂದ ನಾಚಿಕೆಯಿಂದ ಹೊರನಡೆದಿದ್ದು, ಕಪ್ಪು ಬಣ್ಣದ ಕಾರಿನಲ್ಲಿ ನಖ್ವಿ ಸ್ಟೇಡಿಯಂನಿಂದ ತೆರಳಿದ್ದರು.

ಪಡಿಕ್ಕಲ್ ಚೊಚ್ಚಲ ದ್ವಿಶತಕ

ಲಖನೌ: ರಣಜಿ ಸೆಮಿಫೈನಲ್‌ನಲ್ಲಿ ನಾಯಕ ದೇವದತ್ ಪಡಿಕ್ಕಲ್ ಅವರ ಚೊಚ್ಚಲ ದ್ವಿಶತಕ ಮತ್ತು ಆರ್.ಸ್ಮರಣ್ ಅವರ 5ನೇ ಶತಕದ ನೆರವಿನಿಂದ ಕರ್ನಾಟಕ ರನ್ ಶಿಖರವನ್ನೇರಿದೆ. ಉತ್ತರಾಖಂಡ್ ವಿರುದ್ಧದ ಮೊದಲ ಸೆಮಿಫೈನಲ್‌ನಲ್ಲಿ ಕರ್ನಾಟಕ 6 ವಿಕೆಟ್ ಕಳೆದುಕೊಂಡು 689 ರನ್‌ಗಳ ಬೃಹತ್ ಮೊತ್ತ ಕಲೆಹಾಕಿದೆ.

ಇಲ್ಲಿನ ಏಕಾನ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ 2025-26ರ ಮೊದಲ ಸೆಮಿಫೈನಲ್‌ನ ಎರಡನೇ ದಿನದಾಟದಲ್ಲಿ ಚೊಚ್ಚಲ ದ್ವಿಶತಕ ದಾಖಲಿಸಿದ ಪಡಿಕ್ಕಲ್, ರಾಷ್ಟ್ರೀಯ ತಂಡದ ಮ್ಯಾನೇಜ್‌ಮೆಂಟ್‌ಗೆ ಬಲವಾದ ಸಂದೇಶ ರವಾನಿಸಿದ್ದಾರೆ. 2024ರ ನವೆಂಬರ್‌ನಿಂದ ಈವರೆಗೂ ಪಡಿಕ್ಕಲ್ ಭಾರತ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದಿಲ್ಲ.

ಪ್ರಸಕ್ತ ರಣಜಿ ಋತುವಿನಲ್ಲಿ ಪ್ರಾಬಲ್ಯ ಮೆರೆಯುತ್ತಲೇ ಬಂದಿರುವ ಉತ್ತರಾಖಂಡ್ ಅನ್ನು ಕರ್ನಾಟಕ ಅಗ್ನಿಪರೀಕ್ಷೆಗೆ ಒಳಪಡಿಸಿದೆ. ಮೊದಲ ದಿನದಾಟದಲ್ಲಿ ಕೆಎಲ್ ರಾಹುಲ್ ಮತ್ತು ಪಡಿಕ್ಕಲ್ ಶತಕದ ನೆರವಿನಿಂದ ಕರ್ನಾಟಕ 2 ವಿಕೆಟ್ ನಷ್ಟಕ್ಕೆ 355 ರನ್ ಪೇರಿಸಿತ್ತು. ಅಲ್ಲಿಂದ ಬ್ಯಾಟಿಂಗ್ ಮುಂದುವರಿಸಿದ ಕರ್ನಾಟಕ ಎರಡನೇ ದಿನದಾಟದ ಅಂತ್ಯಕ್ಕೆ 6 ವಿಕೆಟ್ ಕಳೆದುಕೊಂಡು 689 ರನ್ ಪೇರಿಸಿದೆ.

ಪಡಿಕ್ಕಲ್-ಕರುಣ್ 129 ರನ್ ಜತೆಯಾಟ: ಮೊದಲ ದಿನದಾಟದಲ್ಲಿ 148 ರನ್ ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದ ಪಡಿಕ್ಕಲ್ 330 ಎಸೆತಗಳನ್ನು ಎದುರಿಸಿ 29 ಬೌಂಡರಿಗಳನ್ನು ಮತ್ತು 3 ಸಿಕ್ಸರ್‌ಗಳನ್ನು ಒಳಗೊಂಡಿದ್ದ 232 ರನ್‌ಗಳನ್ನು ಕಲೆಹಾಕಿದರು. ಪಡಿಕ್ಕಲ್ ಮತ್ತು ಆರ್.ಸ್ಮರಣ್ 59 ರನ್‌ಗಳ ಜತೆಯಾಟ ಆಡಿದರು. ಅದಕ್ಕೂ ಮುನ್ನ ಪಡಿಕ್ಕಲ್ ಮತ್ತು ಕರುಣ್ ನಾಯರ್ 3ನೇ ವಿಕೆಟ್‌ಗೆ ಜತೆಗೂಡಿ 129 ರನ್ ಕಲೆಹಾಕಿದ್ದರು. 105 ಎಸೆತಗಳನ್ನು ಎದುರಿಸಿ 8 ಬೌಂಡರಿ ಮತ್ತು ಸಿಕ್ಸರ್ ಸಿಡಿಸಿದ ಕರುಣ್ 60 ರನ್



ಗಳಿಸಿದ್ದರು.

ಸ್ಮರಣ್-ಕೃತಿಕ್ 123 ರನ್ ಜತೆಯಾಟ: ಐದನೇ ಪ್ರಥಮದರ್ಜೆ ಶತಕ ದಾಖಲಿಸಿದ ರವಿಚಂದ್ರನ್ ಸ್ಮರಣ್ 191 ಎಸೆತಗಳಿಂದ 11 ಬೌಂಡರಿ ಒಳಗೊಂಡ ಅಜೇಯ 121 ರನ್ ಕಲೆಹಾಕಿದರು. ಸ್ಮರಣ್ ಮೂರನೇ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಪಡಿಕ್ಕಲ್ ಪೆವಿಲಿಯನ್ ಸೇರಿದ ಬಳಿಕ ಕರ್ನಾಟಕ ತಂಡದ ರನ್ ಮಳೆಯನ್ನು ಮುಂದುವರಿಸಿದ ಸ್ಮರಣ್, ವಿಕೆಟ್ ಕೀಪರ್ ಬ್ಯಾಟರ್ ಕೃತಿಕ್ ಕೃಷ್ಣ (60) ಅವರ ಜತೆಗೂಡಿ 6ನೇ ವಿಕೆಟ್‌ಗೆ 123 ರನ್‌ಗಳ ಮಹತ್ವದ ಜತೆಯಾಟವಾಡಿದರು. ಈ ವೇಳೆ ತಮ್ಮ ಚೊಚ್ಚಲ ರಣಜಿ ಅರ್ಧ ಶತಕ ದಾಖಲಿಸಿದ ಕೃಷ್ಣ 103 ಎಸೆತಗಳಿಂದ 6 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡ 60 ರನ್ ಗಳಿಸಿದರು. ಆಕರ್ಷಕ ಹೊಡೆತಗಳಿಂದ ಕೃತಿಕ್ ಗಮನಸೆಳೆದರು. ಕೃತಿಕ್ ಔಟಾದ ಬಳಿಕ ಕ್ರೀಸ್‌ಗಿಳಿದ ವಿದ್ಯಾಧರ್ ಪಾಟೀಲ್ ತಾಳ್ಮೆಯಿಂದ ಬ್ಯಾಟ್ ಮಾಡಿದ್ದು, 107 ಎಸೆತಗಳನ್ನು ಎದುರಿಸಿ 1 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡ 35 ರನ್ ಮಾಡಿ ಸ್ಮರಣ್ ಜತೆ ಮೂರನೇ ದಿನದಾಟಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಸ್ಕೋರ್ ಬೋರ್ಡ್

ರಣಜಿ ಮೊದಲ ಸೆಮಿಫೈನಲ್
ಕರ್ನಾಟಕ 689/6(180)

ಪಡಿಕ್ಕಲ್ ಸಿ ರಾವತ್ ಬಿ ರೈ ಚಂದಾನಿ	232
ಕರುಣ್ ಸಿ ರಾವತ್ ಬಿ ನೇಗಿ	60
ಸ್ಮರಣ್ ಅಜೇಯ	121
ಗೋಪಾಲ್ ಬಿ ಎಡಿ ರಾವತ್	0
ಕೃತಿಕ್ ಬಿ ಅವನೀಶ್	60
ವಿದ್ಯಾಧರ್ ಅಜೇಯ	35
ಇತರೆ	35

ಬೌಲಿಂಗ್ ವಿವರ

ಅಭಯ್ ನೇಗಿ	29-4-99-1
ಜನಮೇಜಯ್ ಜೋಷಿ	29-5-94-0
ಆದಿತ್ಯ ರಾವತ್	29-3-132-3
ಮಯಾಂಕ್ ಮಿಶ್ರಾ	38-1-167-0
ಜಗದೀಶ ಸುಚಿತ್	10-0-43-0
ಅವನೀಶ್ ಸುಧಾ	35-2-107-1
ಲಕ್ಷ್ಯ ರೈಚಂದಾನಿ	10-1-25-1

ಜಮ್ಮು ಕಾಶ್ಮೀರಕ್ಕೆ 130 ರನ್ ಹಿನ್ನಡೆ

ಎರಡನೇ ಸೆಮಿಫೈನಲ್‌ನಲ್ಲಿ ಆತಿಥೇಯ ಪಶ್ಚಿಮ ಬಂಗಾಳ ವಿರುದ್ಧ ಜಮ್ಮು ಕಾಶ್ಮೀರ 130 ರನ್ ಹಿನ್ನಡೆ ಅನುಭವಿಸಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು ಬಂಗಾಳ 328 ರನ್ ಕಲೆಹಾಕಿತ್ತು. ಎರಡನೇ ದಿನದಾಟದ ಅಂತ್ಯಕ್ಕೆ ಜಮ್ಮು ಕಾಶ್ಮೀರ 5 ವಿಕೆಟ್ ನಷ್ಟಕ್ಕೆ 198 ರನ್ ಗಳಿಸಿದೆ. ಇದರಿಂದ ಇನ್ನೂ 130 ರನ್‌ಗಳ ಹಿನ್ನಡೆ ಅನುಭವಿಸಿದೆ.

ರಣಜಿ ಸೆಮಿಫೈನಲ್; ಉತ್ತರಾಖಂಡ್ ವಿರುದ್ಧ ಕರ್ನಾಟಕ ಬೃಹತ್ ಮೊತ್ತ

ಪಾಕ್ ಹಾಕಿ ಸಂಸ್ಥೆಗೆ ಭಾರೀ ಮುಖಭಂಗ!

ಹೊಸದಿಲ್ಲಿ: ವಿಶ್ವದಲ್ಲಿ ಮುಖಭಂಗಕ್ಕೆಂದೇ ಒಂದು ರಾಷ್ಟ್ರವಿದ್ದರೆ ಅದು ಬಹುಶಃ ಪಾಕಿಸ್ತಾನ ಎನ್ನಬಹುದು. ಮುಖಭಂಗ ಎಂದಾಕ್ಷಣ ಪಾಕಿಸ್ತಾನ ನೆನಪಾಗುತ್ತದೆ. ಟಿ20 ವಿಶ್ವಕಪ್‌ನಲ್ಲಿ ಭಾರತ ವಿರುದ್ಧ ಹೀನಾಯ ಪರಾಭವಗೊಂಡ ಪಾಕ್, ಸೋಲುವುದಕ್ಕಾಗಿಯೇ ಪಂದ್ಯ ಬಹಿಷ್ಕಾರದ ಬೆದರಿಕೆಯೊಡ್ಡಿದಂತಾಗಿದೆ. ಇದೀಗ ಪಾಕಿಸ್ತಾನ ಕ್ರೀಡಾ ಮಂಡಳಿ(ಪಿಎಸ್‌ಬಿ) 10.5 ದಶಲಕ್ಷ ರೂ. ಪಾವತಿಸಿರುವುದನ್ನು ದೃಢೀಕರಿಸಿದ್ದು, ಬೇಕಾದಷ್ಟು ಹಣಕಾಸಿನ ನೆರವು ಪಡೆದೂ ಹೋಟೆಲ್‌ನಲ್ಲಿ ಮುಂಗಡ ಬುಕ್ಕಿಂಗ್ ಮಾಡದೆ ಪಾಕಿಸ್ತಾನ ಹಾಕಿ ಸಂಸ್ಥೆ (ಪಿಎಚ್‌ಎಫ್) ಭಾರೀ ಮುಖಭಂಗ ಅನುಭವಿಸಿದೆ. ಆಸ್ಟ್ರೇಲಿಯಾದ ಕ್ಯಾನ್‌ಬೆರಾದಲ್ಲಿ ಪಾಕಿಸ್ತಾನ ರಾಷ್ಟ್ರೀಯ ಹಾಕಿ ತಂಡ ಬಿಲ್ ಪಾವತಿಸದ ಕಾರಣ ಹೋಟೆಲ್‌ನವರು ಬುಕಿಂಗ್ ರದ್ದುಗೊಳಿಸಿದ ಆಚ್ಚರಿಯ ಘಟನೆ ಇತ್ತೀಚೆಗೆ ನಡೆದಿತ್ತು. ಈ ವಿಚಾರ ಸಂಬಂಧ ಪಾಕಿಸ್ತಾನ ಕ್ರೀಡಾ ಮಂಡಳಿ ಮತ್ತು ಹಾಕಿ



10.5 ದಶಲಕ್ಷ ರೂ. ಅನುದಾನ ದೃಢೀಕರಿಸಿದ ಕ್ರೀಡಾ ಮಂಡಳಿ

ಸಂಸ್ಥೆ ಮುಂಗಡ ಪಾವತಿ ಮಾಡಿದ್ದಾಗಿ ಆಟಗಾರರಿಗೆ ಭರವಸೆ ನೀಡಿದ್ದರು. ಈ ಘಟನೆಯಿಂದ ಪಾಕ್ ರಾಷ್ಟ್ರೀಯ ಹಾಕಿ ತಂಡದ ಆಟಗಾರರು ಗಂಟೆಗಟ್ಟಲೆ ಬೀದಿಯಲ್ಲಿ ಅಸಹಾಯಕರಾಗಿ ನಿಂತಿದ್ದರು. ಎಫ್‌ಐಎಚ್ ಪ್ರೊ ಲೀಗ್‌ನ ದ್ವಿತೀಯ ಸುತ್ತಿನ ಪಂದ್ಯಗಳನ್ನಾಡಲು ಪಾಕಿಸ್ತಾನ ಭೇಟಿ ನೀಡಿದ್ದಾಗ ಘಟನೆ ನಡೆದಿದೆ. ಮರುದಿನ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಪಾಕ್ 2-3 ಗೋಲ್‌ಗಳ ಅಂತರದಿಂದ ಹೀನಾಯ ಸೋಲುಂಡಿತ್ತು.

ಪಾವತಿ ದಾಖಲೆ ನೀಡಿದ ಪಿಎಸ್‌ಬಿ


ಆಸ್ಟ್ರೇಲಿಯಾದಲ್ಲಿ ರಾಷ್ಟ್ರೀಯ ಹಾಕಿ ತಂಡದ ಹೋಟೆಲ್ ಬುಕ್ಕಿಂಗ್ ಸೇರಿದಂತೆ ಉಳಿದುಕೊಳ್ಳುವ ವ್ಯವಸ್ಥೆಗಾಗಿ 10.5 ದಶಲಕ್ಷ ರೂ. ಅನ್ನು ಹಾಕಿ ಸಂಸ್ಥೆಗೆ (ಪಿಎಚ್‌ಎಫ್) ಪಾವತಿಸಿರುವುದನ್ನು ಕ್ರೀಡಾ ಮಂಡಳಿ ದೃಢೀಕರಿಸಿದೆ. ಜ.28ರಂದೇ ಹೋಟೆಲ್ ವಸತಿಗಾಗಿ ಹಾಕಿ ಸಂಸ್ಥೆಗೆ 10.5 ದಶಲಕ್ಷ ರೂ. ಪಾವತಿ ಮಾಡಿರುವ ದಾಖಲೆಯನ್ನು ಕ್ರೀಡಾ ಮಂಡಳಿ ಬಿಡುಗಡೆಗೊಳಿಸಿದೆ. ತಂಡದ ವಿಮಾನ ಟಿಕೆಟ್‌ಗಳು, ಹೋಟೆಲ್ ಬುಕ್ಕಿಂಗ್ ಮತ್ತು ದಿನನಿತ್ಯದ ಖರ್ಚಿಗಾಗಿ ಮುಂಗಡವಾಗಿ 10.5 ದಶಲಕ್ಷ ರೂ. ಪಾವತಿಸಿದ್ದು, ತನ್ನ ಜವಾಬ್ದಾರಿ ನಿಭಾಯಿಸಿದ್ದಾಗಿ ಕ್ರೀಡಾ ಮಂಡಳಿ ತಿಳಿಸಿದೆ. ಇದಲ್ಲದೆ ಪ್ರೊ ಲೀಗ್‌ನಲ್ಲಿನ ವೆಚ್ಚಗಳಾಗಿ ಪಾಕ್ ಸರ್ಕಾರದಿಂದ 30 ದಶಲಕ್ಷ ರೂ. ಅನುದಾನ ಪಡೆದಿದ್ದ ಹಾಕಿ ಸಂಸ್ಥೆ, ಆಸ್ಟ್ರೇಲಿಯಾದಲ್ಲಿ ಮುಂಗಡ ಬುಕ್ಕಿಂಗ್ ಮಾಡದೆ ಆಟಗಾರರು ಬೀದಿಯಲ್ಲಿ ಗಂಟೆಗಟ್ಟಲು ನಿಲ್ಲುವಂತೆ ಮಾಡಿದೆ.

ಟಿ20 ವಿಶ್ವಕಪ್: ಖಾತೆ ತೆರೆದ ಅಫ್ಘಾನಿಸ್ತಾನ

ಹೊಸದಿಲ್ಲಿ: ಟಿ20 ವಿಶ್ವಕಪ್‌ನಲ್ಲಿ ಅಜ್ಮತುಲ್ಲಾ ಓಮರ್‌ಝಾಯ್ ಆಲ್‌ರೌಂಡ್ ಪ್ರದರ್ಶನದ ನೆರವಿನಿಂದ ಅಫ್ಘಾನಿಸ್ತಾನ ತಂಡ ಯುಎಇ ವಿರುದ್ಧ ಸೋಮವಾರ 5 ವಿಕೆಟ್‌ಗಳ ಜಯ ಸಾಧಿಸಿದೆ. ಅಫ್ಘಾನಿಸ್ತಾನದ ಗೆಲುವಿನಿಂದಾಗಿ ದಕ್ಷಿಣ ಆಫ್ರಿಕಾ ಸೂಪರ್-8 ಹಂತವನ್ನು ಪ್ರವೇಶಿಸಿದೆ.

ಮಾಡು ಇಲ್ಲವೇ ಮಡಿ ಪಂದ್ಯವನ್ನು ಗೆದ್ದಿರುವ ಅಫ್ಘಾನಿಸ್ತಾನ, ಡಿ ಗುಂಪಿನಿಂದ ಸೂಪರ್-8 ಅರ್ಹತೆ ಸಂಪಾದಿಸುವ ಆಸೆ ಜೀವಂತವಾಗಿರಿಸಿದೆ. ಬೌಲಿಂಗ್‌ನಲ್ಲಿ 15 ರನ್ ನೀಡಿ 4 ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದ ಓಮರ್‌ಝಾಯ್, ಚೇಸಿಂಗ್ ವೇಳೆ 21 ಎಸೆತಗಳಿಂದ 40 ರನ್ ಹೊಡೆದು ತಂಡವನ್ನು ಗೆಲುವಿನ ದಡ ಸೇರಿಸಿದರು. ಡಿ ಗುಂಪಿನಲ್ಲಿ 6 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ ಸೂಪರ್-8 ಹಂತವನ್ನು ಪ್ರವೇಶಿಸಿದೆ. ನ್ಯೂಜಿಲ್ಯಾಂಡ್ ದ್ವಿತೀಯ ಸ್ಥಾನದಲ್ಲಿದ್ದು, ಈ ಗೆಲುವಿನೊಂದಿಗೆ ಅಫ್ಘಾನಿಸ್ತಾನ ತೃತೀಯ ಸ್ಥಾನ ಪಡೆದುಕೊಂಡಿದೆ. ಯುಎಇ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಟಾಸ್ ಗೆದ್ದ ಅಫ್ಘಾನಿಸ್ತಾನ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದು, ಓಮರ್‌ಝಾಯ್ ದಾಳಿ ಪರಿಣಾಮವಾಗಿ ಯುಎಇ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 160 ರನ್‌ಗಳ ಸ್ಪರ್ಧಾತ್ಮಕ ಮೊತ್ತವನ್ನು ಪೇರಿಸಿತು. ಯುಎಇ ಪರ ಸೊಹೈಬ್ ಖಾನ್ 48 ಎಸೆತಗಳಿಂದ 68 ರನ್ ಹೊಡೆದಿದ್ದರಿಂದ ಅದು ಗೌರವದ ಮೊತ್ತ ಕಲೆಹಾಕಲು ಸಾಧ್ಯವಾಯಿತು. 161 ರನ್ ಸವಾಲನ್ನು ಬೆನ್ನತ್ತಿದ ಅಫ್ಘಾನಿಸ್ತಾನ ಆರಂಭಿಕ ಆಘಾತವನ್ನು ಅನುಭವಿಸಿತು. ಪವರ್‌ಪ್ಲೇ ಓವರ್‌ಗಳ ಮುಕ್ತಾಯದ ವೇಳೆಗೆ ಅಫ್ಘಾನಿಸ್ತಾನ ರಹ್ಮಾನುಲ್ಲಾ ಗುರ್ಬಾಜ್ (0) ಮತ್ತು ಗುಲ್ಬದಿನ್ ನೈಬ್ (13) ವಿಕೆಟ್‌ಗಳನ್ನು ಕಳೆದುಕೊಂಡು 41 ರನ್ ಗಳಿಸಿತ್ತು. ಆದರೆ ಇಬ್ರಾಹಿಂ ಜಾಡ್ರಾನ್ 41 ಎಸೆತಗಳ 53 ರನ್ ಕಲೆಹಾಕಿ ತಂಡಕ್ಕೆ ಆಧಾರವಾಗಿದ್ದರಿಂದ ಅಫ್ಘಾನಿಸ್ತಾನ ಗೆಲುವಿನತ್ತ ಮುಖ ಮಾಡಿತು. ಒಂದು ಹಂತದಲ್ಲಿ 6 ಓವರ್‌ಗಳಲ್ಲಿ 61 ರನ್ ಬೇಕಿದ್ದ ಸ್ಥಿತಿಯಿತ್ತು. ಆದರೆ ರಸೂಲಿ ಮತ್ತು ಓಮರ್‌ಝಾಯ್ ಅವರ ಬಿರುಸಿನ ಇನ್ನಿಂಗ್ಸ್‌ನಿಂದ ಅಫ್ಘಾನಿಸ್ತಾನ 19.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 162 ರನ್ ಪೇರಿಸುವ ಮೂಲಕ ಗೆಲುವಿನ ಕೇಕೆ ಹಾಕಿತು. (ಜುನೈದ್ 23ಕ್ಕೆ 2)

- ಓಮರ್‌ಝಾಯ್ ಆಲ್‌ರೌಂಡರ್ ಆಟ
- ಯುಎಇ ವಿರುದ್ಧ 5 ವಿಕೆಟ್ ಜಯ



ಸಂಕಿಪ್ತ ಸ್ಕೋರ್

ಯುಎಇ 160/9(20)
ಸೊಹೈಬ್ ಖಾನ್ 68
(ಅಜ್ಮತುಲ್ಲಾ 15ಕ್ಕೆ 4),
ಅಫ್ಘಾನಿಸ್ತಾನ 162/5(19.2)
ಜಾಡ್ರಾನ್ 53, ಅಜ್ಮತುಲ್ಲಾ ಅಜೇಯ 40, ರಸೂಲಿ 33

ಐಟಿಎಫ್ ಓಪನ್; ಪ್ರಮುಖ ಹಂತ ಪ್ರವೇಶಿಸಿದ ವೈದೇಹಿ

ಬೆಂಗಳೂರು: ನಗರದಲ್ಲಿ ನಡೆಯುತ್ತಿರುವ ಐಟಿಎಫ್ ಮಹಿಳೆಯರ ಓಪನ್ ಡಬ್ಲ್ಯು100 ಟೆನಿಸ್ ಪಂದ್ಯಾವಳಿಯಲ್ಲಿ ಭಾರತದ ಭವಿಷ್ಯದ ಭರವಸೆಯ ತಾರೆ ವೈದೇಹಿ ಚೌಧರಿ



ಬಲವಾದ ಪ್ರದರ್ಶನದೊಂದಿಗೆ ಪ್ರಮುಖ ಹಂತವನ್ನು ಪ್ರವೇಶಿಸಿದ್ದಾರೆ. ಅರ್ಹತಾ ಸುತ್ತಿನ ಪಂದ್ಯಗಳ ಕೊನೆಯ ಸುತ್ತಿನಲ್ಲಿ ಆತ್ಮವಿಶ್ವಾಸದಿಂದ ನೇರ ಸೆಟ್‌ಗಳ ಅಂತರದಲ್ಲಿ ವೈದೇಹಿ ಜಯ ಸಾಧಿಸಿದ್ದಾರೆ. ಇವ್ಜೆನಿಯಾ ಬರ್ಡಿನಾ ಅವರನ್ನು 6-2, 7-5 ನೇರ ಸೆಟ್‌ಗಳಿಂದ ಸೋಲಿಸಿದ ವೈದೇಹಿ ಪ್ರಮುಖ ಹಂತವನ್ನು ಪ್ರವೇಶಿಸಿದ್ದಾರೆ. ಭಾರತೀಯ ಆಟಗಾರ್ತಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪ್ರಶಸ್ತಿ ಪ್ರಾಯೋಜಕ ಕೆಪಿಬಿ ಟ್ರಸ್ಟ್ ವೈದೇಹಿ ಅವರಿಗೆ 10 ಲಕ್ಷ ರೂ. ವಿಶೇಷ ಬಹುಮಾನವನ್ನು ಘೋಷಿಸಿದೆ.

ಕಿಚ್ಚಾಸ್ ಕಿಂಗ್ಸ್ ಪೋಡಿಯಂ ಫಿನಿಶ್

ಬೆಂಗಳೂರು: ಭಾರತೀಯ ರೇಸಿಂಗ್ ಉತ್ಸವದ 4ನೇ ಸುತ್ತು ರೋಮಾಂಚಕ ಬೀದಿ ರೇಸಿಂಗ್ ಆಕ್ಷನ್ ಮೂಲಕ ನಗರವನ್ನು ಬೆಳಗಿಸಿದ್ದರಿಂದ ಗೋವಾ ಹೈ-ಎನರ್ಜಿ ಮೋಟಾರ್ ಸ್ಪೋರ್ಟ್ ಅಖಾಡವಾಗಿ ಮಾರ್ಪಟ್ಟಿದೆ.

ಅಪಾರ ಜನಸಂದಣಿ, ಹೆಚ್ಚುತ್ತಿರುವ ಸ್ಥಳೀಯ ಅಭಿಮಾನಿಗಳು ಮತ್ತು ರೋಮಾಂಚಕ ರೇಸ್ ವಾತಾವರಣದೊಂದಿಗೆ ಗೋವಾ ಸ್ಟ್ರೀಟ್ ಸರ್ಕ್ಯೂಟ್ ಮತ್ತೊಮ್ಮೆ ಭಾರತದಲ್ಲಿ ಮೋಟಾರ್ ಸ್ಪೋರ್ಟ್‌ನ ಹೆಚ್ಚುತ್ತಿರುವ ಆಕರ್ಷಣೆಯನ್ನು ಪ್ರದರ್ಶಿಸಿತು. ಟ್ರ್ಯಾಕ್‌ನ ಆಕರ್ಷಣೆಯೆಂದರೆ ರೌಲ್ ಹೈಮನ್ ಮತ್ತು ಫ್ಯಾಬಿಯೆನ್ ವೊಲ್ವೆಂಡ್ ಅವರು ಗೋವಾ ಏಸಸ್ ಜೆಎ ರೇಸಿಂಗ್‌ಗೆ 42:11.779 ಸಂಯೋಜಿತ ಸಮಯದೊಂದಿಗೆ ಸ್ಮರಣೀಯ ರಿಲೇ-ಫಾರ್ಮ್ಯಾಟ್ ಗೆಲುವಿಗೆ ಮಾರ್ಗದರ್ಶನ ನೀಡಿದರು. ಕಿಚ್ಚಸ್ ಕಿಂಗ್ಸ್ ಬೆಂಗಳೂರು ಮಾಲೀಕ ಕಿಚ್ಚ ಸುದೀಪ್ ಮಾತನಾಡಿ, ನಾವೆಲ್ಲರೂ ಟಿವಿಯಲ್ಲಿ ರೇಸಿಂಗ್ ಮಾಡುವುದನ್ನು ನೋಡಿದ್ದೇವೆ, ಆದರೆ ಅದನ್ನು ನೇರವಾಗಿ ಅನುಭವಿಸುವುದು, ಎಂಜಿನ್ ಶಬ್ದವನ್ನು



ಹೈ-ಆಕ್ಟೇನ್ ಗೋವಾ ಸ್ಟ್ರೀಟ್ ರೇಸ್‌ನಲ್ಲಿ ಸುದೀಪ್

ಹತ್ತಿರದಿಂದ ಕೇಳುವುದು ಮತ್ತು ಸರ್ಕ್ಯೂಟ್‌ನಲ್ಲಿನ ಚಿತ್ರಣ ಸಂಪೂರ್ಣವಾಗಿ ವಿಭಿನ್ನವಾಗಿದೆ ಎಂದು ಭಾವಿಸುತ್ತೇವೆ. ಗೋವಾ ಸ್ಟ್ರೀಟ್ ರೇಸ್‌ನಲ್ಲಿರುವುದು ನಂಬಲಾಗದ ಅನುಭವವಾಗಿದೆ. ಈ ವಾತಾವರಣವನ್ನು ಭಾರತಕ್ಕೆ ತಂದ ಮತ್ತು ಮೋಟಾರ್ ಸ್ಪೋರ್ಟ್ ಮೂಲಕ ನಮ್ಮೆಲ್ಲರನ್ನೂ ಒಟ್ಟುಗೂಡಿಸಿದ್ದಕ್ಕಾಗಿ ಕೀರ್ತಿ ಭಾರತೀಯ ರೇಸಿಂಗ್ ಫೆಸ್ಟಿವಲ್ ಗೆ ಸಲ್ಲುತ್ತದೆ. ರೇಸಿಂಗ್ ಪ್ರಬಲ ಶಕ್ತಿಯನ್ನು ಹೊಂದಿದೆ ಮತ್ತು ನಾವು ನೋಡುತ್ತಿರುವ ಉತ್ಸಾಹ ಮತ್ತು ಬೆಂಬಲದೊಂದಿಗೆ ಮುಂಬರುವ ವರ್ಷಗಳಲ್ಲಿ ಭಾರತದಲ್ಲಿ ಕ್ರೀಡೆಯು ದೊಡ್ಡದಾಗಿ ಬೆಳೆಯುತ್ತದೆ ಎಂದು ನಾನು ನಿಜವಾಗಿಯೂ ನಂಬುತ್ತೇನೆ. ತಂಡದ ಮಾಲೀಕರಾದ ಜಾನ್ ಅಬ್ರಹಾಂ (ಗೋವಾ ಏಸಸ್ ಜೆಎ ರೇಸಿಂಗ್), ಕಿಚ್ಚ ಸುದೀಪ್ (ಕಿಚ್ಚಾಸ್ ಕಿಂಗ್ಸ್ ಬೆಂಗಳೂರು), ನಾಗಚೈತನ್ಯ (ಹೈದರಾಬಾದ್ ಬ್ಲ್ಯಾಕ್ ಬರ್ಡ್ಸ್) ಮತ್ತು ಸೌರವ್ ಗಂಗೂಲಿ (ಕೋಲ್ಕತಾ ರಾಯಲ್ ಟೈಗರ್ಸ್) ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


ಪ್ರಮುಖ ಫಲಿತಾಂಶಗಳು

- ಪ್ರಥಮ: ಗೋವಾ ಏಸಸ್ ಜೆಎ ರೇಸಿಂಗ್ (ರೌಲ್ ಹೈಮನ್ ಮತ್ತು ಫ್ಯಾಬಿಯೆನ್ ವೊಲ್ವೆಂಡ್) - 42:11.779
- ದ್ವಿತೀಯ: ಕಿಚ್ಚಸ್ ಕಿಂಗ್ಸ್ ಬೆಂಗಳೂರು (ಸ್ಯಾಚೆಲ್ ರೋಟ್ ಮತ್ತು ರುಹಾನ್ ಆಳ್ವ) - 42:12.759
- ತೃತೀಯ: ಸ್ಪೀಡ್ ಡೆಮನ್ಸ್ ಡೆಲ್ಲಿ (ಅಲಿಸ್ಟರ್ ಯೂಂಗ್ ಮತ್ತು ಕೈಟ್ಲಿನ್ ವುಡ್) - 42:16.601

ಪದಬಂಧ

ರಾಜಾ ಸಂಗಮೇಶ ಹಿರೇಮಠ

5898



ಎಡದಿಂದ ಬಲಕ್ಕೆ
2.ಕೊಳದಲ್ಲಿ ಹುಟ್ಟಿದ್ದು-ತಾವರೆ (4)
5.ಒಂದು ಶಬ್ದದಷ್ಟಾದರೂ ಮಾತು (3)
6.ಗ್ರಾಮೀಣ ಲಗ್ನ ಚೆಂಡಾಟವಿದು (3)
7.ಪಟ್ಟು ಇದರ ನಡುವೆ ಅಡಗಿದ ಮಾದರಿ (4)
9.ಹಲ್ಲಿನಿಂದ ಹಿಡಿಯುವಿಕೆ ತಿರುಗಿದೆ (2)
11.ಮಂಗಳಕರವಾದುದು-ಒಳ್ಳೆಯದು (2)
14.ಸಜಾ ಪಡೆದ ಒಡಹುಟ್ಟಿದವನು (4)
16.ಗೋಳಿನಿಂದ ಕೂಡಿದ ಅಳು (3)
17.ಕೋಗಿಲೆಯಿಲ್ಲಿ ತಿರುಗಿದೆ (3)
18.ಪರ್ವತರಾಜನ ಮಗಳು-ಗಿರಿಜೆ (4)

ಮೇಲಿನಿಂದ ಕೆಳಕ್ಕೆ
1.ಒಳ್ಳೆಯ ನಡತೆಯಿಂದ ಕೂಡಿದ್ದು (4)
2.ಮಾಲೆ-ಹಾರ ಎಂಬರ್ಥದ ಶಬ್ದ (2)
3.ಗಡಿ ಕಡೆಯಲ್ಲಿರುವ ಮೀನಿನ ಒಂದು ಬಗೆ (3)
4.ಕಿತಾಪತಿ ಮಾಡು ಎಂಬರ್ಥದ ನುಡಿಗಟ್ಟು (4)
8.ನಾಯಿಯಿಲ್ಲಿ ತಲೆಕೆಳಗಾಗಿ ಕಾಣುತ್ತಿದೆ (3)
10.ಸಲಹೆ ಕೇಳದೇ ಮಾಡಿದ ಜಗಳ (3)
12.ಈತ ನಾಟ್ಯಶಾಸ್ತ್ರ ತಿಳಿದವನು (4)
13.ಚರ್ಮದ ಹೆಣಿಕೆಯುಳ್ಳ ಚಾವಟಿ (4)
15.ಇದು ತೂತುಗಳಿರುವ ಸೌಟು (3)
17.ಲಲಿತೆಯು ಬೆಳೆಸುತ್ತಿರುವ ಬಳ್ಳಿ (2)

5897 ಉತ್ತರ

ಎಡದಿಂದ ಬಲಕ್ಕೆ:
2.ಕರಾಳದಿನ
5.ಹಲಾಯುಧ 7.ನಗದು
8.ವರಾಹ 10.ನೇರ
12.ಕಾಸು 13.ದದ್ದರ
14.ಬವರ 16.ಸಮಾಹಿತ
17.ಹೈನುಗಾರಿಕೆ

ಮೇಲಿನಿಂದ ಕೆಳಕ್ಕೆ :
1.ಸಹಜೀವನ 3.ರಾಕೆಂದು
4.ದಿವಾಕರ 6.ಧನ
7.ಹರಸು 10.ನೇಸರ
11.ತದನಂತರ
12.ಕಾಮಧೇನು
14.ಬಜಾರಿ 15.ರಸ

ಕಿರುಸುದ್ದಿ

ಗ್ಯಾರಂಟಿ ಕಾರ್ಯಾಗಾರ ನಾಳೆ

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಗ್ಯಾರಂಟಿ ಕಾರ್ಯಾಗಾರ ಹಾಗೂ ಉತ್ಸವವನ್ನು ಫೆ.18 ರಂದು ಬೆಳಗ್ಗೆ 11ಕ್ಕೆ ನಗರದ ಎಪಿಎಂಸಿ ಯಾರ್ಡ್‌ದಲ್ಲಿನ ಸ್ವಾಮಿ ವಿವೇಕಾನಂದ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕ ಹಾಗೂ ವಿಧಾನ ಪರಿಷತ್ ಶಾಸಕ ಸಲೀಂ ಅಹ್ಮದ್, ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜಿ.ಎಸ್.ಪಾಟೀಲ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ (ಬೆಳಗಾವಿ ವಿಭಾಗ) ಎಸ್.ಆರ್.ಪಾಟೀಲ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ (ಮೈಸೂರು ವಿಭಾಗ) ಡಾ. ಪುಷ್ಪಾ ಅಮರನಾಥ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ (ಬೆಂಗಳೂರು-1) ಸೂರಜ್ ಹೆಗಡೆ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ (ಕಲಬುರ್ಗಿ ವಿಭಾಗ) ಎಸ್.ಆರ್.ಮೆಹರೂಜ್ ಖಾನ್ ವಹಿಸುವರು. ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ, ಸಂಸದ ಪಿ.ಸಿ.ಗದ್ದಿಗೌಡ್ರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕ ಸಿ.ಸಿ.ಪಾಟೀಲ, ಶಾಸಕ ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ್ ಶೆಟ್ಟರ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ (ಬೆಂಗಳೂರು-2) ಹಾಗೂ ವಿಧಾನಪರಿಷತ್ ಶಾಸಕ ದಿನೇಶ ಗೂಳಿಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಬಿ.ಬಿ.ಅಸೂಟಿ, ಕರ್ನಾಟಕ ರಾಜ್ಯ ಪಂಚ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ವಿಶ್ಲೇಷಕ ಮುತ್ತುರಾಜು ಆಗಮಿಸುವರು ಎಂದು ಜಿಲ್ಲಾಧಿಕಾರಿ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎನ್. ಶ್ರೀಧರ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ತಿಳಿಸಿದ್ದಾರೆ.

ನಿರ್ದೇಶಕರಾಗಿ ಆಯ್ಕೆ

ಲಕ್ಷ್ಮೇಶ್ವರ: ಇಲ್ಲಿನ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಇದರ ಆಡಳಿತ ಮಂಡಳಿಯ ನಿರ್ದೇಶಕರಾಗಿ ಮಾಜಿ ಶಾಸಕ ದಿ. ಶಂಕರಗೌಡ ಪಾಟೀಲ ಅವರ ಪುತ್ರ ಸತೀಶಗೌಡ ಪಾಟೀಲ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಬಿ.ಆರ್ ನಿಡಗುಂದಿ ಘೋಷಿಸಿದ್ದಾರೆ.



ಬೈಕ್ ಸವಾರ ಸಾವು

ಲಕ್ಷ್ಮೇಶ್ವರ: ತಾಲೂಕಿನ ದೊಡ್ಡೂರು ಗ್ರಾಮದ ಬಸ್ ನಿಲ್ದಾಣದ ಹತ್ತಿರ ಬೈಕ್ ಮತ್ತು ಲಾರಿ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಸೋಮವಾರ ಸಂಭವಿಸಿದೆ.

ಇಲ್ಲಿನ ಹಿರೇಬಣದ ಕೊಟ್ರೇಶ ದ್ಯಾವಪ್ಪ ಗದ್ದಿಗೌಡ್ರ(32) ಮೃತ ದುರ್ದೈವಿ. ಯುವಕ ಲಕ್ಷ್ಮೇಶ್ವರದಿಂದ ದೊಡ್ಡೂರು ಮಾರ್ಗವಾಗಿ ಯಲ್ಲಾಪುರ ಕಡೆ ಹೊರಟ ವೇಳೆ ಲಾರಿ ಚಾಲಕನ ಅತಿಯಾದ ವೇಗ ಮತ್ತು ನಿರ್ಲಕ್ಷ್ಯತನ ಬೈಕ್ ಸವಾರನ ಸಾವಿಗೆ ಕಾರಣವಾಗಿದೆ ಎಂದು ಕುಟುಂಬಸ್ಥರು ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಮೃತನಿಗೆ ತಾಯಿ, ಪತ್ನಿ, ಮಗಳು ಇದ್ದಾರೆ.



ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	4512-6640
ಅಜವಾನ	9819-10470
ಅಲಸಂದಿಕಾಳು	5569-6897
ಕಡಲೆ	3125-5509
ಉದ್ದು	5897-5897
ಹವೀಜ	9411-9411
ಹೆಸರು	1007-6591
ಹುರಳಿ	2833-4044
ಗೋವಿನಜೋಳ	1569-3899
ಮಡಕಿ	11882-11889
ಕುಸಬಿ	4509-6629
ಸೂರ್ಯಕಾಂತಿ	6432-6682
ತೊಗರಿ	2677-5441
ಗೋಧಿ	2069-3477



ಗದಗ: ಸ್ಥಳೀಯ ಕಳಸಾಪೂರ ರಸ್ತೆಯಲ್ಲಿನ ಶಿವಾನಂದ ಮಠದಲ್ಲಿ ಶಿವರಾತ್ರಿ ಹಾಗೂ ಜಾತ್ರಾಮಹೋತ್ಸವ ಅಂಗವಾಗಿ ಸಾವಿರಾರು ಭಕ್ತರ ಮಧ್ಯೆ ಸಡಗರ, ಸಂಭ್ರಮದ ಮಹಾರಥೋತ್ಸವ ಸೋಮವಾರ ವಿಜೃಂಭಣೆಯಿಂದ ಜರುಗಿತು.

ಇಂದಿನಿಂದ ಮುದುಕೇಶ್ವರ ಜಾತ್ರಾ ಮಹೋತ್ಸವ

ಮುಂಡರಗಿ: ಕಲಕೇರಿ-ವಿರುಪಾಪುರದ ಮುದುಕೇಶ್ವರ ಜಾತ್ರಾ ಮಹೋತ್ಸವವು ಫೆ.17ರಿಂದ 20ರವರೆಗೆ ಜರುಗಲಿದೆ. ಫೆ.17ರಂದು ಸಂಜೆ 6ಗಂಟೆಗೆ ಮಹಾರಥೋತ್ಸವ ಜರುಗಲಿದ್ದು, 6.30ಗಂಟೆಗೆ ಧರ್ಮಸಭೆ ನಡೆಯಲಿದೆ. ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಧರ್ಮಸಭೆಯ ಸಾನ್ನಿಧ್ಯ ವಹಿಸಿಕೊಳ್ಳಲಿದ್ದಾರೆ. ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಡಾ.ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಿಕೊಳ್ಳಲಿದ್ದಾರೆ. ಗುರುಸಿದ್ಧ ಶಿವಾಚಾರ್ಯ ಸ್ವಾಮೀಜಿ ಹಾಗೂ ಕುಮಾರ ದೇವರು ಗುರು ಉಪದೇಶ ನೀಡಲಿದ್ದಾರೆ. ಹನುಮರಡ್ಡಿ ಇಟಗಿ ಉಪನ್ಯಾಸ ನೀಡಲಿದ್ದಾರೆ. ಫೆ.18ರಂದು ಸಂಜೆ 5ಗಂಟೆಗೆ ಕಡುಬಿನ ಕಾಳಗ ಜರುಗಲಿದ್ದು, 6.30ಗಂಟೆಗೆ ಧರ್ಮಸಭೆ ಜರುಗಲಿದೆ. ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ ಧರ್ಮಸಭೆಯ ಸಾನ್ನಿಧ್ಯ ವಹಿಸಿಕೊಳ್ಳಲಿದ್ದಾರೆ. ಶಿವಕುಮಾರ ದೇವರು ಉಪದೇಶ ನೀಡಲಿದ್ದಾರೆ. ಶಾಸಕ ಡಾ.ಚಂದ್ರು ಲಮಾಣಿ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದು, ಡಾ.ನಿಂಗು ಸೊಲಗಿ ಉಪನ್ಯಾಸ ನೀಡಲಿದ್ದಾರೆ. ಫೆ.19ರಂದು ಸಂಜೆ 4ಗಂಟೆಗೆ ಜಂಗಿ ಕುಸ್ತಿ ಪಂದ್ಯಾವಳಿ ನಡೆಯಲಿದೆ. ಫೆ.20ರಂದು ಬೆಳಗ್ಗೆ 10 ಗಂಟೆಗೆ ರಂಭಾಪುರಿ ಹಾಗೂ ಉಜ್ಜಯಿನಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಜರುಗಲಿದೆ. ಮಧ್ಯಾಹ್ನ 12.45ಕ್ಕೆ ಕಲಕೇರಿ-ವಿರುಪಾಪುರದ ಮುದುಕೇಶ್ವರ ಮಠದ ನೂತನ ಪೀಠಾಧಿಪತಿಗಳ ಪಟ್ಟಾಧಿಕಾರ ಮಹೋತ್ಸವ ಹಾಗೂ ಧರ್ಮಸಭೆ ಜರುಗಲಿದೆ. ರಂಭಾಪುರಿ ವೀರಸಿಂಹಾಸನಾಧೀಶ್ವರ ಪ್ರಸನ್ ರೇಣುಕ ಡಾ.ವೀರಸೋಮೇಶ್ವರ ಶಿವಾಚಾರ್ಯ ಭಗತ್ಪಾದಂಗಳು ಹಾಗೂ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದಂಗಳು ಸಮಾರಂಭದ ಸಾನ್ನಿಧ್ಯ ವಹಿಸಿಕೊಳ್ಳಲಿದ್ದಾರೆ. ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಡಾ.ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀಮಠವು ಪ್ರಕಟಣೆಯಲ್ಲಿ ತಿಳಿಸಿದೆ.



ಲಕ್ಷ್ಮೇಶ್ವರ: ತಾಲೂಕಿನ ಅಕ್ಕಿಗುಂದ ಗ್ರಾಮದ ಕಾಂಗ್ರೆಸ್ ಯುವ ಮುಖಂಡ ಚಂದ್ರಪ್ಪ ಹೆಗ್ಗಪ್ಪ ದೊಡ್ಡಮನಿ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಉಪಾಧ್ಯಕ್ಷರಾಗಿ ನೇಮಕ ಆಗಿದ್ದು ಕಾಂಗ್ರೆಸ್ ಪಕ್ಷದ ಸಂಘಟನೆ ಮಾಡಲ ಇತ್ತೀಚೆಗೆ ಬೆಂಗಳೂರು ಕೆಪಿಸಿಸಿ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಪ್ರದೇಶ ಕಾಂಗ್ರೆಸ್ ಸಮಿತಿ ಪರಿಶಿಷ್ಟ ವಿಭಾಗದ ಅಧ್ಯಕ್ಷ ಆರ್. ಧರ್ಮಸೇನ ಅವರು ಆದೇಶ ಪತ್ರ ನೀಡಿ ಸನ್ಮಾನಿಸಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸುಜಾತಾ ದೊಡ್ಡಮನಿ ಇದ್ದರು.

ವಿವಿಧ ಕಾಮಗಾರಿಗೆ ಭೂಮಿಪೂಜೆ | ಜಿ.ಎಸ್.ಪಾಟೀಲ ಹೇಳಿಕೆ

19 ಕೆರೆಗಳ ಭರ್ತಿಗೆ ಕ್ರಿಯಾಯೋಜನೆ

ರೋಣ: ಹಿಂದಿನ ಬಿಜೆಪಿ ಸರಕಾರ ಚುನಾವಣೆ ಸಂದರ್ಭದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುವುದು ಎಂದು ಘೋಷಿಷಿ ಮಾಡಿಟ್ಟಿರುವ 73 ಸಾವಿರ ಕೋಟಿ ರೂ.ಗಳ ಸಾಲವನ್ನು ಈಗಿನ ಕಾಂಗ್ರೆಸ್ ಸರ್ಕಾರ ಭರ್ತಿ ಮಾಡಬೇಕಿದೆ ಎಂದು ರಾಜ್ಯ ಖನಿಜ ಅಭಿವವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ಅವರು ಸೋಮವಾರ ತಾಲೂಕಿನ ಹೊಸಳ್ಳಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಜರುಗಿದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಭೂಮಿಪೂಜೆಯನ್ನು ನೆರವೇರಿಸಿ ಮಾತನಾಡಿದರು. ಗುರುಪಾದ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಶೆಟ್ಟರ, ನ್ಯಾಯವಾದಿ ವಿ.ಆರ್.ಗುಡಿಸಾಗರ, ಎಪಿಎಂಸಿ ಮಾಜಿ ಅಧ್ಯಕ್ಷ ಪಿ.ಬಿ.ಅಳಗವಾಡಿ, ತಾಪಂ ಮಾಜಿ ಉಪಾಧ್ಯಕ್ಷ ಅಧ್ಯಕ್ಷ ಪ್ರಭು ಮೇಟಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಂಗಪ್ಪ ಮೇಣಸಿನಕಾಯಿ, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಯಚ್ಚರಗೌಡ ಗೋವಿಂದಗೌಡ, ಪಿಎಲ್‌ಡಿ ಬ್ಯಾಂಕ್ ಸದಸ್ಯ ಬಸವರಾಜ ನವಲಗುಂದ, ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಯೂಸುಪ್ ಇಟಗಿ, ವಿ.ಬಿ.ಸೋಮನಕಟ್ಟಿಮಠ, ವಿ.ಬಿ.ಪಸಾರದ, ಕಾಶೀಮಸಾಬ ಪಿಂಜಾರ, ಬಿ.ಎಸ್.ರೆಡ್ಡೆರ ಸೇರಿದಂತೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿಗಳು ಉಪಸ್ಥಿತರಿದ್ದರು.

- 8 ಲಕ್ಷ ರೂ.ಗಳ ನಮ್ಮೂರು ನಮ್ಮ ಕೆರೆ ಹೂಳೆತ್ತುವ
- ಸಿಎಂ ಯೋಜನೆಯಲ್ಲಿ 70 ಲಕ್ಷದ ಸಿಸಿ ರಸ್ತೆ
- 15 ಲಕ್ಷ ರೂ.ಗಳ ಗ್ರಂಥಾಲಯ ಕಟ್ಟಡ ನಿರ್ಮಾಣ
- 11.17 ಲಕ್ಷದ ಹೊಸಳ್ಳಿ ರಸ್ತೆ ಸುಧಾರಣೆ
- 10 ಲಕ್ಷ ರೂ. ವೆಚ್ಚದಲ್ಲಿ ರೈತರು ಸಂಪರ್ಕಿಸುವ ರಸ್ತೆ ಸುಧಾರಣೆಗೆ ಚಾಲನೆ

"ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಜಿಲ್ಲೆಯಲ್ಲಿ 26 ಶುದ್ಧಗಂಗಾ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ 26 ಕೆರೆಗಳ ಹೂಳು ತೆಗೆಯುವ ಕಾರ್ಯವನ್ನು ಮಾಡಲಾಗಿದ್ದು, ಸಾರ್ವಜನಿಕರಿಗೆ ಉಪಯುಕ್ತವಾಗುವಂತಹ ಕೆಲಸಗಳಿದ್ದಲ್ಲಿ ಅವುಗಳಿಗೆ ಸಹಕಾರ ನೀಡಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಸದಾಕಾಲ ಇರಲಿದೆ.

■ **ಕೇಶವ ದೇವಾಂಗ,** ಗ್ರಾಮಾಭಿವೃದ್ಧಿ ಯೋಜನಾಧಿಕಾರಿ, ಗದಗ



ಅಪಪ್ರಚಾರಕ್ಕೆ ಕಿವಿ ಕೊಡದಿರಿ

ಸರ್ಕಾರದ ಬಳಿ ಹಣವಿಲ್ಲದಿದ್ದರೆ ಹೊಸಪೇಟೆಯಲ್ಲಿ 1 ಲಕ್ಷ 30, ಹಾವೇರಿ ಜಿಲ್ಲೆಯಲ್ಲಿ 1 ಲಕ್ಷ ಜನರಿಗೆ ಹಕ್ಕು ಪತ್ರ ನೀಡಲಾಗುತ್ತಿತ್ತೆ. ಹೊಸಳ್ಳಿ ಗ್ರಾಮಕ್ಕೆ 1 ಕೋಟಿಗೂ ಅಧಿಕ ಅನುದಾನವನ್ನು ನೀಡಲು ಸಾಧ್ಯವಿತ್ತೆ ಎನ್ನುವುದನ್ನು ಜನರು ಅರಿಯಬೇಕು. ಮತಕ್ಷೇತ್ರದಲ್ಲಿ 200 ಕೋಟಿ ರೂ.ಗಳಿಗೂ ಅಧಿಕ ವೆಚ್ಚದ ಅಭಿವೃದ್ಧಿ ಕಾರ್ಯಗಳಿಗೆ ಮುಖ್ಯಮಂತ್ರಿಗಳು ಬಂದು ಚಾಲನೆ ನೀಡಿದ್ದಾರೆ. ಸರ್ಕಾರದ ಖಜಾನೆಯಲ್ಲಿ ಹಣವಿಲ್ಲದಿದ್ದರೆ ರೋಣ ಮತಕ್ಷೇತ್ರದ 200 ಕೋಟಿ ಅನುದಾನವನ್ನು ತರಲಾಗುತ್ತಿತ್ತೆ ಎಂದು ಪ್ರಶ್ನಿಸಿದ ಶಾಸಕ ಜಿ.ಎಸ್.ಪಾಟೀಲ ಅವರು, ಬಿಜೆಪಿಯವರ ಅಪಪ್ರಚಾರಕ್ಕೆ ಕಿವಿ ಕೊಡಬಾರದು ಎಂದರು.

ಅಂತರ್ಜಲ ಹೆಚ್ಚಳಕ್ಕೆ ಕೆರೆ ರಕ್ಷಿಸಿ

ಕೃಷ್ಣಾ ಬಿ ಸ್ಕೀಂ ಮೂಲಕ ಗಜೇಂದ್ರಗಡ ತಾಲೂಕಿನ 19 ಕೆರೆಗಳನ್ನು ಭರ್ತಿ ಮಾಡಲು ಈಗಾಗಲೇ ಕ್ರಿಯಾಯೋಜನೆಯನ್ನು ರೂಪಿಸಲಾಗಿದ್ದು, ಈ ಬಜೆಟ್‌ನಲ್ಲಿ ಘೋಷಣೆಯಾಗಿ ಅನುದಾನ ಕೂಡಾ ಬರಲಿದೆ. ಈ ಯೋಜನೆಯಲ್ಲಿ ಹೊಸಳ್ಳಿ ಗ್ರಾಮದ ಕೆರೆಯನ್ನು ಸೇರಿಸಿಕೊಂಡು ಕೃಷ್ಣಾ ನದಿಯ ನೀರಿನಿಂದ ಭರ್ತಿ ಮಾಡಲಾಗುವುದು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯವರು 8 ಲಕ್ಷ ರೂ.ಗಳ ವೆಚ್ಚದಲ್ಲಿ ಕೆರೆಯನ್ನು ಹೂಳೆತ್ತುವ ಕಾರ್ಯವನ್ನು ಮಾಡುತ್ತಿರುವುದು ಹೆಮ್ಮೆಯ ವಿಚಾರ. ಹಿಗಾಗಿ ಗ್ರಾಮಸ್ಥರು ಸಹ ಸಾಮೂಹಿಕವಾಗಿ ಪಾಲ್ಗೊಂಡು ಅವರಿಗೆ ಸಹಕಾರ ನಿಡಬೇಕು ಮತ್ತು ಅಂತರ್ಜಲ ಹೆಚ್ಚಿಸಲು ಕೆರೆಯನ್ನು ರಕ್ಷಿಸಬೇಕು ಎಂದು ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ನೇಕಾರರು ನೂತನ ಕೌಶಲ್ಯ ಬಳಸಿಕೊಳ್ಳಲಿ

ಗಜೇಂದ್ರಗಡ: ಅಭಿವೃದ್ಧಿ ಆಯುಕ್ತರು (ಕೈಮಗ್ಗ)ಜವಳಿ ಮಂತ್ರಾಲಯ ಭಾರತ ಸರ್ಕಾರ ನವದೆಹಲಿ ಮತ್ತು ಜವಳಿ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ ಕರ್ನಾಟಕ ಸರ್ಕಾರ ಬೆಂಗಳೂರು ಹಾಗೂ ಎನ್ ಎಚ್ ಡಿ ಪಿ ಅಡಿಯಲ್ಲಿ ಗಜೇಂದ್ರಗಡ ಬ್ಲಾಕ್ ಹ್ಯಾಂಡ್ ಲೂಮ್ ಕ್ಲಸ್ಟರ್ ಯೋಜನೆಯ ಮಾರಾಟದಾರ - ಖರೀದಿದಾರರ ಸಭೆಯನ್ನು ಸೋಮವಾರ ಕರೆಯಲಾಗಿತ್ತು.

ನಗರದ ವಾಣಿಪೇಟೆಯ ಕುರುಹಿನಶೆಟ್ಟಿ ಸಮುದಾಯ ಭವನದಲ್ಲಿ ಜರುಗಿದ ಕಾರ್ಯಕ್ರಮವನ್ನು ಪಶ್ಚಿಮ ಬೆಳಗಾವಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ ನಿರ್ದೇಶಕ ಶಿವರಾಜ ಕುಲಕರ್ಣಿ ಉದ್ಘಾಟಿಸಿ ಮಾತನಾಡಿ, ನೇಕಾರರು ನೂತನ ಕೌಶಲ್ಯಗಳನ್ನು ಬಳಸಿಕೊಂಡು ಗ್ರಾಹಕರಿಗೆ ಪ್ರಿಯವಾದ ಬಟ್ಟೆಗಳ ತಯಾರಿಕೆಯಲ್ಲಿ ತೊಡಗಿಕೊಳ್ಳಬೇಕು. ಇದರಿಂದ ನಿಮ್ಮ ಆದಾಯ ಹೆಚ್ಚುತ್ತದೆ ಹಾಗೂ ಸರ್ಕಾರ ಕೈಮಗ್ಗಗಳ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ನೀಡುತ್ತಿದೆ. ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಾಲರಾಮಸಾ ಬಸವಾ ಮಾತನಾಡಿ, ಕೈಮಗ್ಗ ನೇಕಾರಿಕೆ ಬಹಳಷ್ಟು ಕಡಿಮೆಯಾಗುತ್ತಿದೆ. ಯುವಕರು ನೇಕಾರಿಕೆ ಬಗ್ಗೆ ಒಲವು ತೋರುತ್ತಿಲ್ಲ. ಸರ್ಕಾರ ನೇಕಾರಿಕೆ ಕ್ಷೇತ್ರಕ್ಕೆ ಉತ್ತೇಜನ ನೀಡುವ ಅವಶ್ಯಕತೆ ಇದೆ ಎಂದರು.

ಜಗದೀಶ ಡಾಗಾ ಮಾತನಾಡಿ, ಗಜೇಂದ್ರಗಡದ ಪಟ್ಟೇದ ಅಂಚಿನ ಸೀರೆ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದೆ. ಇದರ ಹಿಂದೆ ನೇಕಾರರ ಶ್ರಮ ಅದ್ಭುತವಾಗಿದೆ. ಶ್ರಮದ ಹಿಂದೆ ಫಲ ಸಿಕ್ಕೆ ಸಿಗುತ್ತದೆ. ಆಧುನಿಕ ಯುಗ ಬಹಳಷ್ಟು ಪೈಪೋಟಿಯಿಂದ ಕೂಡಿದೆ. ನೇಕಾರರು ಕೌಶಲ್ಯ ಜೊತೆಗೆ ಗುಣಮಟ್ಟದ ಬಟ್ಟೆಗಳನ್ನು ತಯಾರು ಮಾಡುವ ಮೂಲಕ ಪ್ರಗತಿ ಸಾಧಿಸಿ ಎಂದರು.

ಅಶೋಕ ವನ್ನಾಲ, ರವೀಂದ್ರ ಶಿಂಗ್ರಿ, ಹನಮಂತ ಕೆಂಚಿ, ಅಂಬರೀಶ ಮೂದೇನೂರ, ತಿಮ್ಮಣ್ಣ ವನ್ನಾಲ, ಮಾರುತಿ ಶಾಬಾದಿ, ಬಸವರಾಜ ಸೂಡಿ, ಕೊಟ್ರೇಶ್ ಚಿಲಕಾ, ಬಾಬಣ್ಣ ರಾಯಬಾಗಿ,ತೇಜಪ್ಪ ಚಿನ್ನೂರ, ಶ್ರೀನಿವಾಸ ಲಾಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಗಮನ ಸೆಳೆದ ಗಂಗಾ ಆರತಿ ವಿಶೇಷ ಕಾರ್ಯಕ್ರಮ

ಲಕ್ಷ್ಮೇಶ್ವರ: ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಉತ್ಸವದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು. ಅದರಲ್ಲೂ ಹುಬ್ಬಳ್ಳಿಯ ಶಿವಾ ತಂಡದವರು ಗಂಗಾ ಆರತಿ ವಿಶೇಷ ಕಾರ್ಯಕ್ರಮ ಜನಮನ್ನಣೆಗೆ ಕಾರಣವಾಯಿತು.

ಸಾನ್ನಿಧ್ಯ ವಹಿಸಿದ್ದ ಹೂವಿನಶಿಗ್ಲಿ ವಿರಕ್ತಮಠದ ಚನ್ನವೀರ ಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡಿ, ವರ್ಷದಲ್ಲಿ ಶಿವರಾತ್ರಿ ಮತ್ತು ನವರಾತ್ರಿಗಳು ವಿಶೇಷ ದಿನಗಳಾಗಿದ್ದು, ವರ್ಷವಿಡೀ ನಮ್ಮ ದುಗುಡ ದುಮ್ಮಾನಗಳನ್ನು ಮರೆತು ಒಂದು ದಿನ ಶಿವನ ಸ್ಮರಣೆಗಾಗಿ ಮೀಸಲಿಡಬೇಕು. ಶಿವಜ್ಞಾನದ ಅರಿವು ಸಂಪಾದಿಸಿಕೊಳ್ಳಬೇಕು. ದೇವಸ್ಥಾನಗಳಲ್ಲಿ ನಿತ್ಯ ಪೂಜೆ ಪುನಸ್ಕಾರಗಳ ಜೊತೆ ಇಂತಹ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಯಬೇಕು ಎಂದರು.

ಪಿಎಸ್‌ಐ ನಾಗರಾಜ ಗಡದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದೇವಸ್ಥಾನಗಳು ನಮ್ಮ ಹೆಮ್ಮೆಯ ಪ್ರತೀಕವಾಗಿವೆ. ಅಲ್ಲಿ ನಿರಂತರವಾಗಿ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿರಬೇಕು. ಪ್ರಾಚೀನ ದೇವಸ್ಥಾನಗಳಲ್ಲಿ ಸಂಗೀತ, ಸಾಹಿತ್ಯ, ಸಾಂಸ್ಕೃತಿಕ, ಕಲಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸುವುದರಿಂದ ನಮ್ಮ ಸಾಂಸ್ಕೃತಿಕ ಕ್ಷೇತ್ರವನ್ನು ಮತ್ತಷ್ಟು ಶ್ರೀಮಂತಗೊಳಿಸಲು ಸಾಧ್ಯವಾಗುತ್ತದೆ ಎಂದರು.

ಯುವ ಮುಖಂಡರಾದ ಆನಂದ ಗಡ್ಡದೇವರಮಠ ಹಾಗೂ ಸುನೀಲ ಮಹಾಂತಶೆಟ್ಟರ ಮಾತನಾಡಿ, ಡಾ.ಸುಧಾಮೂರ್ತಿಯವರು ದೇವಸ್ಥಾನ ಜೀರ್ಣೋದ್ಧಾರಗೊಳಿಸಿದ ನಂತರ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದೆ ಎಂದರು.

ಸೋಮೇಶ್ವರ ದೇವಸ್ಥಾನದ ಅರ್ಚಕರ ಸಮಿತಿಗೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ದಿಗಂಬರ ಪೂಜಾರ, ಉಪಾಧ್ಯಕ್ಷರಾಗಿ ರಾಘವೇಂದ್ರ ಪೂಜಾರ, ಕಾರ್ಯದರ್ಶಿಯಾಗಿ ಸಮೀರ ಪೂಜಾರ ಹಾಗೂ ಖಜಾಂಚಿಯಾಗಿ ಕೃಷ್ಣ ಪೂಜಾರ ಅವರ ಅಧಿಕಾರ ಪದಗ್ರಹಣ ನೆರವೇರಿತು. ಅರ್ಚಕರ ಸಮಿತಿ ಬಹುತೇಕ ಸದಸ್ಯರು ಸಭೆಯಲ್ಲಿದ್ದರು. ಡಾ.ನಿಂಗನಗೌಡ ಚ.ಪಾಟೀಲ ಅವರು ಪಟ್ಟಣದ ಸೋಮೇಶ್ವರ ದೇವರ ಕುರಿತು ರಚಿಸಿದ ತಿರುಳ್‌ಗನ್ನಡನಾಡು ಪುಲಗೆರೆಯ ಶ್ರೀ ಸೋಮೇಶ್ವರ ಮಹಿಮೆ ಕೃತಿಯನ್ನು ಶ್ರೀಗಳು ಬಿಡುಗಡೆಗೊಳಿಸಿದರು. ಅಧ್ಯಕ್ಷತೆಯನ್ನು ಶ್ರೀ ಸೋಮೇಶ್ವರ ದೇವಸ್ಥಾನ ಅರ್ಚಕರ ಸಮಿತಿ ನೂತನ ಅಧ್ಯಕ್ಷ ದಿಗಂಬರ ಪೂಜಾರ ವಹಿಸಿದ್ದರು. ಸೋಮೇಶ್ವರ ಜಾತ್ರಾ ಕಮೀಟಿ ಅಧ್ಯಕ್ಷ ಕುಬೇರಪ್ಪ ಮಹಾಂತಶೆಟ್ಟರ, ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮೀಟಿ ಅಧ್ಯಕ್ಷ ಗುರುರಾಜ ಪಾಟೀಲ ಕುಲಕರ್ಣಿ ಅರ್ಚಕರಾದ ಸೋಮನಾಥ ಪೂಜಾರ, ರಾಘವೇಂದ್ರ ಪೂಜಾರ, ನಾಗರಾಜ ಪೂಜಾರ, ಚಿಕ್ಕರಸಯ್ಯ ಪೂಜಾರ, ಕೃಷ್ಣ ಪೂಜಾರ, ಗುರುರಾಜ ಪೂಜಾರ ಮುಂತಾದವರಿದ್ದರು. ಶ್ವೇತಾ ಪೂಜಾರ, ಅಲಕನಂದಾ ಕುಲಕರ್ಣಿ, ದರ್ಶಿನಿ ಪೂಜಾರ ನಿರೂಪಿಸಿದರು. ನಂತರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು.



ದುಷ್ಕರ್ಮಿಗಳ ಬಂಧನಕ್ಕೆ ಡಾ.ಚಂದ್ರು ಲಮಾಣಿ ಆಗ್ರಹ

ಮುಂಡರಗಿ: ತಾಲೂಕಿನ ಸಿಂಗಟಾಲೂರ ಗ್ರಾಮದ ತುಂಗಭದ್ರಾ ನದಿ ತೀರದಲ್ಲಿರುವ ಐತಿಹಾಸಿಕ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ದುಷ್ಕರ್ಮಿಗಳು ಭಾನುವಾರ ಬೆಳಗಿನ ಸಮಯದಲ್ಲಿ ಶಿವಲಿಂಗ ಹಾಗೂ ನಂದಿ ಮೂರ್ತಿಗಳನ್ನು ಮತ್ತು ಹೊನ್ನತ್ತೆಮ್ಮನ ಮೂರ್ತಿಯನ್ನು ಭಗ್ನಗೊಳಿಸಿರುವ ಘಟನಾ ಸ್ಥಳಕ್ಕೆ ಶಾಸಕ ಡಾ.ಚಂದ್ರು ಲಮಾಣಿ ಭೇಟಿ ನೀಡಿ ದುಷ್ಕರ್ಮಿಗಳನ್ನು ಶಿಕ್ಷೆಗೆ ಗುರಿ ಮಾಡಬೇಕೆಂದು ಆಗ್ರಹಿದರು.

ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಮಹಾ ಶಿವರಾತ್ರಿಯ ಸಂದರ್ಭದಲ್ಲಿ ಶಿವಲಿಂಗ ಹಾಗೂ ನಂದಿ ಮೂರ್ತಿಗಳನ್ನು ದುಷ್ಕರ್ಮಿಗಳು ಒಡೆದು ಹಾಕಿರುವುದು ಈ ಕ್ಷೇತ್ರದಲ್ಲಿ ಇದು ಪ್ರಥಮವಾದ ಪ್ರಕರಣ. ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ರಾಮಲಿಂಗೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸುವುದಕ್ಕಾಗಿ ಸಿಂಗಟಾಲೂರು ಗ್ರಾಮಸ್ಥರು ಶನಿವಾರ ದೇವಸ್ಥಾನಕ್ಕೆ ತೆರಳಿ ಸುಣ್ಣ ಬಳಿದು ಸಿದ್ಧತೆ ಮಾಡಿಕೊಂಡಿದ್ದರು. ಬೆಳಗ್ಗೆ ಪೂಜೆಗಾಗಿ ತೆರಳಿದಾಗ ಮೂರ್ತಿಗಳು ಭಗ್ನಗೊಂಡಿರುವುದು ಭಕ್ತರ ಭಾವನೆಗಳಿಗೆ ಧಕ್ಕೆ ತಂದಿದೆ. ಭಾವನೆಗಳನ್ನು ಕೆಣಕುವ ಕೆಲಸ ನಡೆಯಬಾರದು. ಪೊಲೀಸ್ ಇಲಾಖೆ ತನಿಖೆಯನ್ನು ತೀವ್ರಗತಿಯಲ್ಲಿ ನಡೆಸಿ ತಪ್ಪಿಸ್ಥರಿಗೆ ಶಿಕ್ಷೆ ನೀಡಬೇಕು ಎಂದರು.ಗದಗ ಜಿಲ್ಲೆ ಐತಿಹಾಸಿಕ ದೇವಾಲಯಗಳ ತವರುಮನೆ ಆಗಿದೆ. ಲಕ್ಕುಂಡಿ , ಕಪ್ಪತಗುಡ್ಡ ಸೇರಿದಂತೆ ಅಲವಾರು ಕಡೆಗಳಲ್ಲಿ ಪುರಾತನ ದೇವಾಲಯಗಳು ಕಾಣಸಿಗುತ್ತವೆ. ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಸಿಂಗಟಾಲೂರಿನ ಈ ದೇವಸ್ಥಾನಕ್ಕೆ ಭೇಟಿ ನೀಡಿ, ಇವುಗಳ ಜೀರ್ಣೋದ್ಧಾರ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಈ ವೇಳೆ ಬಸವರಾಜ ಬಿಳಿಮಗ್ಗದ, ಆನಂದಗೌಡ ಪಾಟೀಲ, ಕುಮಾರಸ್ವಾಮಿ ಹಿರೇಮಠ, ಪ್ರದೀಪ ಗುಡದಪ್ಪನವರ ಮುಂತಾದವರಿದ್ದರು.



ನಂದಿ ಮೂರ್ತಿಗಳನ್ನು ದುಷ್ಕರ್ಮಿಗಳು

ಕಲಾವಿದನ ಅಂತರಂಗದ ಭಾವನೆ ಅಭಿವ್ಯಕ್ತಿಯಲ್ಲಿ ಅರಳಿದ ಚಿತ್ರಕಲೆ ಶ್ರೇಷ್ಠ

ಲಕ್ಷ್ಮೇಶ್ವರ: ಚಿತ್ರಕಲೆ ಎಂಬುದು ವಿಶೇಷ ವಾದ ಕಲೆ ಕಲಾವಿದನ ಅಂತರಂಗದ ಭಾವನೆಗಳ ಅಭಿವ್ಯಕ್ತಿಯಲ್ಲಿ ಅರಳಿದ ಚಿತ್ರಕಲೆಗೆ ಅಪಾರ ಮಹತ್ವವಿದೆ ಎಂದು ಮಾಜಿ ಶಾಸಕ ಗಂಗಣ್ಣ ಎಂ. ಮಹಾಂತಶೆಟ್ಟರ ಹೇಳಿದರು.

ಅವರು ಲಜಾವರ್ ಆರ್ಟ್ ಫೌಂಡೇಶನ್ ಲಕ್ಷ್ಮೇಶ್ವರ, ಸೋಮೇಶ್ವರ ಸ್ಟೋನ್ಸ್ ಮತ್ತು ಟೈಲ್ಸ್ ಇವರ ಸಹಯೋಗದಲ್ಲಿ ಮಹಾಶಿವರಾತ್ರಿ ಅಂಗವಾಗಿ ಸೋಮೇಶ್ವರ ದೇವಸ್ಥಾನ, ಚಿತ್ರಧ್ಯಾನ ಮಾಡೋಣ ಬನ್ನಿರಿ ಚಿತ್ರಕಲಾ ಶಿಬಿರ ಉದ್ಘಾಟನೆ ಮಾತನಾಡಿ, ಚಿತ್ರಕಲೆಗೆ ಅಧಿಕ ಪ್ರಚಾರ ಮಾಡಿ ಚಿತ್ರಕಲೆ ಕಲಾವಿದರನ್ನು ಪ್ರೋತ್ಸಾಹಿಸಬೇಕು. ಮುಂಬರುವ ದಿನಗಳಲ್ಲಿ ಚಿತ್ರಕಲಾವಿದರಿಗೆ ದೊಡ್ಡ ವೇದಿಕೆ ಕೊಟ್ಟು ಪ್ರೋತ್ಸಾಹ ನೀಡಲಾಗುವುದು ಎಂದರು.

ಹಿರಿಯ ಬಂಡಾಯ ಸಾಹಿತಿ ಸಿ.ಜಿ. ಹಿರೇಮಠ ಮಾತನಾಡಿ, ಕಲಾವಿದರು ತಮ್ಮ ಕಲೆಗಳ ಮೂಲಕ, ಕುಶಲಕರ್ಮಿಗಳು ಕರಕುಶಲ ವಸ್ತುಗಳ ಮೂಲಕ, ಕೃಷಿಕರು ಕಾಯಕ ಮೂಲಕ ಧ್ಯಾನವನ್ನು ಪಡೆದುಕೊಳ್ಳುತ್ತಾರೆ. ಅದರಂತೆಯೇ ಚಿತ್ರಕಲಾವಿದರು ಮಾಡುವ ಧ್ಯಾನವೇ ಚಿತ್ರದ್ಯಾನ ಎಂದರು.

ವಿಜಯಕುಮಾರ ಹತ್ತಿಕಾಳ, ದಿಗಂಬರ ಪೂಜಾರ, ಶಿವಯೋಗಿ ಅಂಕಲಕೋಟಿ, ಅಶ್ವಿನಿ ಅಂಕಲಕೋಟಿ, ಸೋಮಣ್ಣ ಪೂಜಾರ, ರಾಹುಲ ಅಂಕಲಕೋಟಿ ಗಂಗಾಧರ.



ಮೆಣಸಿನಕಾಯಿ, ಸಿದ್ದನಗೌಡ ಬಳ್ಳೊಳ್ಳಿ, ನಾಗರಾಜ ಕಳಸಾಪುರ ಹಾಗೂ ಚಿತ್ರದ್ಯಾನದಲ್ಲಿ ಚಿತ್ರಕಲಾವಿದರಾದ ಗಂಗಾಧರ ಕೊಪ್ಪಳ, ರಮೇಶ ಗಾರವಾಡ, ಸಂತೋಷ ಕ್ಯಾದಿಗೇರಿ, ತಿಪ್ಪಣ್ಣ ಜಾಲಿಹಾಳ, ಅಶ್ವಿನಿ ಹಿರೇಮಠ, ಚಿದಾನಂದ ಕಡೆ ಮನಿ, ರಾಜೇಶ ಉಮಚಗಿ, ಗಣೇಶ ಬಡಿಗೇರ, ಅಮೃತ ಮೊರಬದ, ಮಲ್ಲಿಕಾರ್ಜುನ ಮುಂಡರಗಿ, ಗ್ಯಾನಪ್ಪ ವಾಲಿ ಕಾರ, ಅನ್ನಪೂರ್ಣ ಲಿಂಬಿ ಕಾಯಿ, ಶರಣು ಶಿವಶಿಂಪಿಗೇರ, ಅಶ್ವಿನಿ ಹಡಗಲಿ, ವರ್ಷ ವಡೋನಿ, ಎಸ್.ಬಿ. ತೆಳಗಿನಮನಿ ಇದ್ದರು. ಪ್ರವೀಣ ಗಾಯಕರ ಸ್ವಾಗತಿಸಿದರು. ಶ್ವೇತಾ ಹೊಸಪೇಟೆ ಪ್ರಾರ್ಥಿಸಿದರು. ಅರ್ಜುನ ವಟಾರ ವಂದಿಸಿದರು.

ಪೌಷ್ಟಿಕ ಆಹಾರ ಕಿಟ್ ವಿತರಣೆ



ನರಗುಂದ: ಪಟ್ಟಣದ ಸರ್ಕಾರಿ ತಾಲೂಕಾಸ್ಪತ್ರೆಯಲ್ಲಿ ಜನನಿ ವಿವಿಧೋದ್ದೇಶಗಳ ಸಂಘದ ವತಿಯಿಂದ ಕಡುಬಡತನದಲ್ಲಿನ ಎಚ್ ಐವಿ ಸೋಂಕಿತರು, ಕ್ಷಯರೋಗಿಗಳು ಕ್ಯಾನ್ಸರ್ ರೋಗಿಗಳು ಹಾಗೂ ಕುಷ್ಠರೋಗಿಗಳಿಗೆ ಸಂಘದ ಸದಸ್ಯರ ಸಮ್ಮುಖದಲ್ಲಿ ಪೌಷ್ಟಿಕ ಆಹಾರದ ಕಿಟ್ ವಿತರಿಸಲಾಯಿತು.

ನೀಲಕಂಠ ಮಡಿವಾಳರ ಮಾತನಾಡಿ, ಇದು ಪ್ರತಿ ತಿಂಗಳು ನಡೆಯುವ ಕಾರ್ಯಕ್ರಮವಾಗಿದೆ. ಸಂಘದ ಸದಸ್ಯರು ತಾಲೂಕಿನಲ್ಲಿರುವ ದಾನಿಗಳನ್ನು ಹುಡುಕಿ ಆ ದಾನಿಗಳಿಂದ ಇಂತಹ ಮಾರಣಾಂತಿಕ ಖಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಕೈಲಾದಷ್ಟು ಸಹಾಯ ಮಾಡೋಣ ಎಂದು ತಿಳಿಸಿದರು.

ನೇತ್ರ ತಜ್ಞೆ ಡಾ. ರೂಪಾ ಯರಗುಪ್ಪಿ ಅವರು ಭಾಗವಹಿಸಿ ಕಿಟ್‌ಗಳ ವಿತರಣೆಗೆ ಚಾಲನೆ ನೀಡಿದರು. ಬಳ್ಳಾರಿ ಕೆಎಎಸ್ ಅಧಿಕಾರಿ ಮಧುಮತಿ ಹಿರೇಮಠ ಅವರು ಫೆಬ್ರವರಿ ತಿಂಗಳ ದಾನಿಗಳಾಗಿದ್ದಾರೆ. ಈ ಕಾರ್ಯಕ್ರಮದಲ್ಲಿ ಶಿವಾನಂದ ಕುರಹಟ್ಟಿ, ಹನುಮಂತ ಗುಂಡಳ್ಳಿ, ಪ್ರದೀಪ ಕುರುಗೋವಿನಕೊಪ್ಪ, ಪ್ರತಿಭಾ ಎ.ಕೆ., ವಿ.ಕೆ ಪಾಟೀಲ ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

ಯೋಜನೆಗಳು ಅರ್ಹರಿಗೆ ತಲುಪಲಿ

ಲಕ್ಷ್ಮೇಶ್ವರ: ಪಂಚ ಗ್ಯಾರಂಟಿ ಯೋಜನೆಗಳು ಬಡವರು, ಮಹಿಳೆಯರು ಸೇರಿ ಸಾಮಾನ್ಯ ಜನರ ಜೀವನ ಮಟ್ಟ ಸುಧಾರಣೆಗೆ ಸಂಜೀವಿನಿಯಾಗಿವೆ. ಯೋಜನೆಗಳನ್ನು ಅರ್ಹ ಎಲ್ಲರಿಗೂ ತಲುಪಿಸುವ ಪ್ರಾಮಾಣಿಕ ಪ್ರಯತ್ನವನ್ನು ಅಧಿಕಾರಿಗಳು ಮಾಡಬೇಕು ಎಂದು ತಾಲೂಕು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಾಗರಾಜ ಮಡಿವಾಳರ ಹೇಳಿದರು. ಅವರು ಸೋಮವಾರ ಪಟ್ಟಣದ ತಾಪಂ ಸಭಾಭವನದಲ್ಲಿ ತಾಲೂಕು ಪಂಚ ಗ್ಯಾರಂಟಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಫೆ.18ರಂದು ಗದಗನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಪಂಚ ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಮಾವೇಶ ನಡೆಯಲಿದೆ ಎಂದರು. ಪರೀಕ್ಷಾ ಸಮಯ ಹತ್ತಿರವಾಗುತ್ತಿದೆ. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಬಸ್‌ನ ಸೌಲಭ್ಯ ಕಲ್ಪಿಸಲು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಲಕ್ಷ್ಮೇಶ್ವರ ಡಿಪೋದಲ್ಲಿ ದೀರ್ಘ ಕಾಲೀನ ರಜೆಯಲ್ಲಿರುವ ಚಾಲಕ-ನಿರ್ವಾಹಕರ ಮೇಲೆ ಕ್ರಮಕ್ಕೆ ಹಿರಿಯ ಅಧಿಕಾರಿಗಳಿಗೆ ಬರೆಯಿರಿ. ಸರ್ಕಾರದ ಆದೇಶದಂತೆ ಪಡಿತರ ವಿತರಣೆ ಅಂಗಡಿಗಳು ನಿಗದಿತ ಅವಧಿಯಲ್ಲಿ ಕಾರ್ಯ ನಿರ್ವಹಿಸಬೇಕು ಮತ್ತು 75 ವರ್ಷ ಮೀರಿದ ವಯೋವೃದ್ಧರ ಮನೆ ಬಾಗಿಲಿಗೆ ಪಡಿತರ ತಲುಪಿಸುವ ಕೆಲಸವಾಗಬೇಕು. ರೈತರು ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಪಾವತಿಸಬೇಕಾದ ನಿಗದಿತ ಠೇವಣಿ ಮತ್ತು ಪಾಲಿಸಬೇಕಾದ ಕ್ರಮಗಳ ಮಾಹಿತಿ ನೀಡಬೇಕು. ಗೃಹಲಕ್ಷ್ಮೀ ಯೋಜನೆಯ 3 ತಿಂಗಳ ಹಣ ಪಾವತಿಯಾಗದ ಬಗ್ಗೆ ಅಧಿಕಾರಿಯಿಂದ ಮಾಹಿತಿ ಪಡೆದು ಅಕ್ಟೋಬರ್ ತಿಂಗಳ ಹಣ ಸಧ್ಯದಲ್ಲಿಯೇ ಫಲಾನುಭವಿಗಳ ಖಾತೆಗೆ ಜಮೆಯಾಗಲಿದೆ ಎಂದರು.



ಗ್ಯಾರಂಟಿ ಸಮಿತಿ ಸದಸ್ಯರಾದ ಶಿವರಾಜಗೌಡ ಪಾಟೀಲ, ರಮಾಜಾನಸಾಬ್ ನದಾಫ, ಖಾದರಭಾಷಾ ರಿತ್ತಿ, ರಮೇಶ ಬಾರಕೇರ, ಕಲ್ಲಪ್ಪ ಗಂಗಣ್ಣವರ, ಶಶಿಕಲಾ ಬಡಿಗೇರ ಮುಂತಾದವರಿದ್ದರು.

ಜ್ಞಾನ, ಕೌಶಲ್ಯ ವೃದ್ಧಿಸಿಕೊಳ್ಳಿ

ಗದಗ: 2030ರ ವೇಳೆಗೆ ತಂತ್ರಜ್ಞಾನ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆಗಳು ಆಗಲಿವೆ. ಮುಂದೆ ಎಐ, ಕ್ವಾಂಟಮ್ ಕಂಪ್ಯೂಟಿಂಗ್, ಸೆಮಿಕಂಡಕ್ಟರ್, ಸ್ಪೇಸ್ ಮತ್ತು ಬಯೋಟೆಕ್ನಾಲಜಿ ತಂತ್ರಜ್ಞಾನ ಜಗತ್ತನ್ನು ಆಳಲಿವೆ ಎಂದು ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ತಿಳಿಸಿದರು.

ನಗರದ ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜಿನ ಹೊಸ ಅಕಾಡೆಮಿಕ್ ಬ್ಲಾಕ್ ಶಿಲಾನ್ಯಾಸ ಸಮಾರಂಭ ಹಾಗೂ ಎಐಸಿಟಿಇ ಐಡಿಯಾ ಲ್ಯಾಬ್ ಉದ್ಘಾಟಿಸಿ ಮಾತನಾಡಿದರು. ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಈಗ ಇರುವ ಉದ್ಯೋಗಗಳು 2030ರ ವೇಳೆ ಇರುವುದಿಲ್ಲ, ಈಗ ಕಂಪ್ಯೂಟರ್ ಸೈನ್ಸ್ ಕಲಿತ ಶೇ.85 ವಿದ್ಯಾರ್ಥಿಗಳು ಕೆಲಸ ಗಿಟ್ಟಿಸುತ್ತಿದ್ದಾರೆ. ಆದರೆ ಮುಂದೆ ಆ ಉದ್ಯೋಗಗಳೇ ಇರುವುದಿಲ್ಲ. ಹಾಗಾಗಿ ವಿದ್ಯಾರ್ಥಿಗಳು ತಂತ್ರಜ್ಞಾನ ಕ್ಷೇತ್ರದಲ್ಲಿ ಆಗುವ ಪಲ್ಲಟಗಳನ್ನು ಈಗಿನಿಂದಲೇ ತಿಳಿದುಕೊಂಡು, ಅದಕ್ಕೆ ತಕ್ಕಂತೆ ಜ್ಞಾನ ಮತ್ತು ಕೌಶಲ್ಯ ವೃದ್ಧಿಸಿಕೊಳ್ಳಬೇಕು ಎಂದರು.

ತೋಂಟದಾರ್ಯ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಪ್ರೊ. ಎಸ್.ಎಸ್. ಪಟ್ಟಣಶೆಟ್ಟರ ಪ್ರಾಸ್ತಾವಿಸಿದರು. ಶಿರೋಳದ ಶಾಂತಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಸಚಿವ ಎಸ್.ಎಸ್.ಪಾಟೀಲ ಉಪಸ್ಥಿತರಿದ್ದರು. ಪ್ರಾಚಾರ್ಯ ಪ್ರೊ. ಎಂ.ಎಂ.ಅವಟಿ ಸ್ವಾಗತಿಸಿದರು.



ಸಾಹಿತಿಗಳ ಕೃತಿ ಪರಿಚಯಾತ್ಮಕ ಕಾರ್ಯಕ್ರಮ

ಮುಂಡರಗಿ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಮುಂಬರುವ ದಿನಗಳಲ್ಲಿ ನೂತನ ಶ್ರೀ ಜಗದ್ಗುರು ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ಪಾಕ್ಷಿಕವಾಗಿ (15 ದಿನಗಳಿಗೊಮ್ಮೆ) ಮುಂಡರಗಿ ತಾಲೂಕಿನ ಸಾಹಿತಿಗಳ ಕೃತಿಗಳ ಪರಿಚಯ ಕಾರ್ಯಕ್ರಮ ನಡೆಸಲಿದೆ ಎಂದು ತಾಲೂಕು ಕಸಾಪ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಅವರು ಮಾತನಾಡಿ, ನಾಡೋಜ ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಮುಂಡರಗಿ ತಾಲೂಕಿನಲ್ಲಿ ಸಾಹಿತ್ಯ ಮತ್ತು ಸಾಹಿತಿಗಳ ಬೆಳವಣಿಗೆಗೆ ಪ್ರೇರಣೆಯಾಗಿದೆ. ಇಂದು ಅನೇಕ ಶಿಕ್ಷಕರು ಹಾಗೂ ಯುವಕರು ಎಲೆಯ ಮರೆಯ ಕಾಯಿಯಂತೆ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಅವರಿಗೆ ಸೂಕ್ತ ವೇದಿಕೆಯನ್ನು ಕಲ್ಪಿಸಿ, ಅವರ ಕೃತಿ ಪರಿಚಯಿಸುವುದರೊಂದಿಗೆ ಇತರರಿಗೆ ಪ್ರೇರಣೆಯಾಗಲೆಂದು ಈ ಕಾರ್ಯಕ್ರಮ ರೂಪಿಸಲಾಗಿದೆ. ತಮ್ಮೆಲ್ಲರ ಭಾಗವಹಿಸುವಿಕೆ ಸಾಹಿತ್ಯ ವಲಯದ ಬೆಳವಣಿಗೆಗೆ ಪೂರಕವಾಗಬಲ್ಲದು. ಮುಂಡರಗಿ ತಾಲೂಕಿನ ಸಾಹಿತಿಗಳು ತಮ್ಮ ಸ್ವ-ಪರಿಚಯದೊಂದಿಗೆ ತಾವು ರಚಿಸಿ ಪ್ರಕಟಿಸಿದ ಕವನ ಸಂಕಲನ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಚುಟುಕು ಮುಂತಾದವುಗಳ ವಿವರಗಳೊಂದಿಗೆ ಗ್ರಂಥಗಳನ್ನು ಪ್ರೊ. ಎಂ. ಜಿ. ಗಚ್ಚಣ್ಣವರ ಅಧ್ಯಕ್ಷರು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಶ್ರೀ ಜಗದ್ಗುರು ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನ, ತಾಲೂಕು ಕ್ರೀಡಾಂಗಣದ ಹತ್ತಿರ, ಮುಂಡರಗಿ -582118 ಜಿಲ್ಲಾ ಗದಗ್, ಮೊಬೈಲ್: 9449642650 ಇವರಿಗೆ ತಲುಪಿಸುವಂತೆ ವಿನಂತಿಸಲಾಗಿದೆ. ಕಾರ್ಯಕ್ರಮದ ಪ್ರಾರಂಭದ ದಿನಾಂಕವನ್ನು ನಂತರ ತಿಳಿಸಲಾಗುವುದು. ತಮ್ಮ ಸಹಾಯ ಸಹಕಾರ ಮುಂದಿನ ಯುವ ಪೀಳಿಗೆಗೆ ಮಾರ್ಗದರ್ಶನವಾಗಬಲ್ಲದು ಎಂದಿದ್ದಾರೆ.

ಸಿದ್ಧಾರೂಢ ಸ್ವಾಮೀಜಿ ಮಹಾರಥೋತ್ಸವ ಅದ್ದೂರಿ

ಅಜ್ಜನ ಸ್ಮರಿಸಿದ ಭಕ್ತಗಣ



• **ಹುಬ್ಬಳ್ಳಿ:** ಉತ್ತರ ಕರ್ನಾಟಕದ ಆರಾಧ್ಯ ದೈವವಾದ ನಗರದ ಸದ್ಗುರು ಸಿದ್ಧಾರೂಢ ಸ್ವಾಮೀಜಿಯ ಮಹಾ ರಥೋತ್ಸವ ಭಕ್ತ ಸಾಗರದ ಮಧ್ಯೆ ಸೋಮವಾರ ಅದ್ದೂರಿಯಾಗಿ ನಡೆಯಿತು. 5.30ರ ಹೊತ್ತಿಗೆ ಮಠದ ಆವರಣಕ್ಕೆ ಸಿದ್ಧಾರೂಢರು ಮತ್ತು ಗುರುನಾಥಾರೂಢರ ಪಲ್ಲಕ್ಕಿ ಬರುತ್ತಿದ್ದಂತೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಶ್ರೀಮಠದ ಆಡಳಿತಾಧಿಕಾರಿ ಬಿ.ಎಸ್.ಭಾರತಿ, ಶ್ರೀಮಠದ ಚೇರಮನ್ ಚನ್ನವೀರ ಮುಂಗರವಾಡಿ, ವೈಸ್ ಚೇರಮನ್ ವಿನಾಯಕ ಘೋಡಕೆ, ಕಾರ್ಯದರ್ಶಿ ರಮೇಶ ಬೆಳಗಾವಿ, ಮಂಜುನಾಥ ಮುನವಳ್ಳಿ, ವಿ.ವಿ. ಮಲ್ಲಾಪುರ, ಗೀತಾ ಕಲಬುರಗಿ, ಕೆ.ಎಲ್.ಪಾಟೀಲ, ಶಾಮಾನಂದ ಪೂಜೇರಿ, ಬಸವರಾಜ ಕಲ್ಯಾಣಶೆಟ್ಟರ, ಬಾಳು ಮಗಜಿಕೊಂಡಿ ಸೇರಿದಂತೆ ಅನೇಕರಿದ್ದರು.

ಕಾರವಾರ ರಸೆಗೆ ಹೊಂದಿಕೊಂಡತಿರುವ ಮಠದ ಪ್ರವೇಶ ಗೋಪುರದವರೆಗೆ ಸಾಗಿದ ರಥ ಮರಳಿ ಮಠದ ಆವರಣವನ್ನು ಬಂದು ತಲುಪಿತು. ರಥೋತ್ಸವದ ಹಾದಿಯುದ್ದಕ್ಕೂ ಭಕ್ತರಿಂದ ಸಿದ್ಧಾರೂಢರ ಅಂಗಾರ, ದೇಶಕ್ಕೆಲ್ಲ ಬಂಗಾರ... ಸಿದ್ಧಾರೂಢಸ್ವಾಮಿ ಮಹಾರಾಜ್ ಕೀ ಜೈ... ಸಿದ್ಧಾರೂಢರ ಜೋಳಿಗೆ, ನಾಡಿಗೆಲ್ಲ ಹೋಳಿಗೆ... ಶಿವಾಯ ನಮಃ.. ಓಂ ನಮಃ ಶಿವಾಯ... ಹೀಗೆ ಅಜ್ಜನ ಸ್ಮರಿಸುತ್ತಿದ್ದ ಭಕ್ತರ ಜಯಘೋಷಗಳು ಮುಗಿಲು ಮುಟ್ಟಿದವು.

ತೇರು ಮುಖ್ಯದ್ವಾರದವರೆಗೆ ಬಂದು, ಮರಳಿ ಹೋಗುವಾಗ ತೇರಿಗೆ ಮೇಲಿನಿಂದ ಹೂ ಮಳೆ ಸುರಿದಾಗ ಭಕ್ತರು ಜಯಘೋಷ ಹಾಕಿ ಸಂಭ್ರಮಿಸಿದರು. ರಥಕ್ಕೆ ಉತ್ತುತ್ತಿ, ಬಾಳೆ ಹಣ್ಣು ಹಾಗೂ ನಿಂಬೆ ಹಣ್ಣು ಎಸೆದು ಸಂಭ್ರಮಿಸಿದರು. ರಥದ ಹಾದಿಯುದ್ದಕ್ಕೂ ಹೆಜ್ಜೆಮೇಳ, ಡೊಳ್ಳು ಕುಣಿತ, ಹಲಗಿ ಬಡಿತದ ಜಾನಪದ ಕಲಾತಂಡಗಳು ಜಾತ್ರೆಗೆ ವಿಶೇಷ ಮೆರಗು ತಂದವು. ಎಲ್ಲರ ಬಾಯಲ್ಲೂ ಶಿವಾಯ ನಮಃ ಸ್ಮರಣೆ ಕೇಳಿ ಬರುತ್ತಿತ್ತು.

ಮನರಂಜನಾ ಆಟಗಳು, ಬಗೆ ಬಗೆಯ ಅಂಗಡಿಗಳು, ವಿಶೇಷ ತಿಂಡಿ-ತಿನಿಸುಗಳಯ ಭಕ್ತರನ್ನು ಸೆಳೆದವು. ವಿವಿಧ ಭಾಗಗಳಿಂದ ಎತ್ತಿನ ಬಂಡಿ ಸೇರಿದಂತೆ ವಿವಿಧ ವಾಹನಗಳಲ್ಲಿ ಬಂದಿದ್ದ ಭಕ್ತರು ಜಾತ್ರೆಯನ್ನು ಕಣ್ಣುಂಬಿಕೊಂಡರು.

ರಾಜ್ಯವಷ್ಟೇ ಅಲ್ಲದೆ ಗೋವಾ, ಆಂಧ್ರಪದೇಶ, ತೆಲಂಗಾಣ ಸೇರಿದಂತೆ ವಿವಿಧ ಪ್ರದೇಶದಿಂದ ಆಗಮಿಸಿದ ಜನರು ಜಾತ್ರೆಯನ್ನು ಕಣ್ಣು ತುಂಬಿಕೊಂಡರು. ಜಾತ್ರಾ ಮಹೋತ್ಸವದ ಅಂಗವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ನಿಯೋಜಿಸಲಾಗಿತ್ತು. ಬೆಳಗ್ಗೆಯಿಂದ ಸಂಜೆ ವರೆಗೂ ಉಭಯ ಶ್ರೀಗಳಿಗೆ ವಿಶೇಷ ಪೂಜೆಗಳ ನೆರವೇರಿಸಲಾಯಿತು.

ಭಕ್ತರು ಮಠಕ್ಕೆ ಬರುವುದು ಸಾಮಾನ್ಯವಾಗಿತ್ತು. ಕಾರವಾರ ರಸ್ತೆ, ಗೋಕುಲ ರಸ್ತೆ, ಹೊಸೂರ ಸೇರಿದಂತೆ ವಿವಿಧೆಡೆ ಮಠಕ್ಕೆ ಆಗಮಿಸುವ ಭಕ್ತರಿಗೆ ವಿವಿಧ ಸಂಘಟನೆಗಳು ಹಣ್ಣು, ತಂಪು ಪಾನೀಯ ಹಾಗೂ ಮಧ್ಯಾಹ್ನ ಪ್ರಸಾದ ವಿತರಿಸಿ ಪುಣೀತರಾದರು.

ಶಾಸಕ ಲಕ್ಷ್ಮಣ ಸವದಿ ಅವರ 66ನೇ ಜನ್ಮದಿನ | ನೇತ್ರ ತಪಾಸಣಾ ಉಚಿತ ಶಿಬಿರ

ಕಣ್ಣುಗಳ ಆರೈಕೆ ಬಗ್ಗೆ ಎಚ್ಚರವಿರಲಿ: ಸವದಿ



• **ಅಥಣಿ:** ನಮ್ಮ ದೇಹದ ಸೂಕ್ಷ್ಮ ಅಂಗವಾಗಿರುವ ಕಣ್ಣಿನ ಆರೋಗ್ಯ ಕಾಪಾಡಲು ಮತ್ತು ದೃಷ್ಟಿ ಸಮಸ್ಯೆ ಆರಂಭಿಕ ಹಂತದಲ್ಲಿ ಪತ್ತೆ ಹಚ್ಚಿ, ಅಮೂಲ್ಯವಾದ ಕಣ್ಣುಗಳ ರಕ್ಷಣೆ ಬಗ್ಗೆಯೂ ಸದಾ ಎಚ್ಚರ ವಹಿಸಬೇಕು ಎಂದು ಯುವ ಮುಖಂಡ ಚಿದಾನಂದ ಸವದಿ ಹೇಳಿದರು.

ಅವರು ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ, ತಾಲೂಕು ಆರೋಗ್ಯ ಇಲಾಖೆ , ಲಕ್ಷ್ಮಣ ಸವದಿ ಫೌಂಡೇಶನ್ ಹಾಗೂ ಟೆಕೆ ಐ ಕ್ಲಿನಿಕ್, ಸಾಂಗ್ಲಿ ಇವರ ಆಶ್ರಯದಲ್ಲಿ ಶಾಸಕ ಲಕ್ಷ್ಮಣ ಸವದಿ ಅವರ 66ನೇ ಜನ್ಮದಿನದ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಉಚಿತ ಕಣ್ಣಿನ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕಣ್ಣು ಮಾನವನ ದೇಹದ ಅತೀ ಸೂಕ್ಷ್ಮವಾದ ಅಂಗ. ಇದನ್ನು ಅತೀ ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು. ಕಣ್ಣಿನ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ತೋರಿದ್ದೆ ಆದಲ್ಲಿ ಬದುಕೆಲ್ಲ ಅಂಧಕಾರದಲ್ಲಿ ಕಳೆಯುವ ಅಪಾಯವಿದ್ದು, ಈ ಬಗ್ಗೆ ನಾವೆಲ್ಲರೂ ಜಾಗೃತಿ ವಹಿಸಬೇಕು ಎಂದರು.

ನನ್ನ ಹಾಗೂ ನಮ್ಮ ತಂದೆಯವರ ಜನ್ಮದಿನದ ನಿಮಿತ್ತ ಟೆಕೆ ನೇತ್ರ ಚಿಕಿತ್ಸಾ ಆಸ್ಪತ್ರೆಯ ಸಹಕಾರದಿಂದ ಅನೇಕ ಉಚಿತ ಶಿಬಿರಗಳನ್ನು ನಡೆಸುವ ಮೂಲಕ ಸಾವಿರಾರು ಜನರ ಅಂಧತ್ವ ಸಮಸ್ಯೆಯನ್ನ ನಿವಾರಿಸಲಾಗಿದ್ದು, ಈ ಸಾಮಾಜಿಕ ಸೇವೆ ನಮಗೆ ಬಹಳಷ್ಟು ಖುಷಿ ತಂದಿದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತಾಲೂಕು ವೈದ್ಯಾಧಿಕಾರಿ ಡಾ.ಬಸಗೌಡ ಕಾಗೆ ಮಾತನಾಡಿ, ಅಥಣಿ ಮತ ಕ್ಷೇತ್ರದ ಶಾಸಕರಾಗಿರುವ ಲಕ್ಷ್ಮಣ ಸವದಿ ತಾಲೂಕಿನ ಬಡ ಜನತೆಗೆ ಉಚಿತ ಹಾಗೂ ಉತ್ತಮ ಆರೋಗ್ಯ ಸೇವೆಗಳು ದೊರಕಬೇಕು ಎಂಬ ಉದ್ದೇಶದಿಂದ ಅನೇಕ ಸೌಲಭ್ಯಗಳನ್ನ ಒದಗಿಸಿದ್ದಾರೆ. ಸುಮಾರು 27 ಕೋಟಿ ರೂ. ವೆಚ್ಚದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ನಿರ್ಮಾಣ ಕಾರ್ಯ ಪ್ರಗತಿ ಹಂತದಲ್ಲಿದ್ದು, ಇದರಿಂದ ತಾಲೂಕಿನ ಜನತೆಗೆ ಬಹಳಷ್ಟು ಅನುಕೂಲವಾಗಲಿದೆ.

> **ಅಥಣಿ ಸಾರ್ವಜನಿಕ ಆಸ್ಪತ್ರೆಯೂ ರಾಜ್ಯದ ಅತ್ಯುತ್ತಮ 10 ಆಸ್ಪತ್ರೆಗಳಲ್ಲಿ ಒಂದಾಗಿರುವುದು ನಮ್ಮೆಲ್ಲರಿಗೆ ಹೆಮ್ಮೆ. ಇಲ್ಲಿ ಶಾಸಕರ ಪ್ರಯತ್ನದಿಂದ ಜನರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಇಲ್ಲಿನ ತಜ್ಞ ವೈದ್ಯರು ಮತ್ತು ಸಿಬ್ಬಂದಿ ಒದಗಿಸುತ್ತಿದ್ದಾರೆ.**
> ■ **ಚಿದಾನಂದ ಸವದಿ, ಯುವ ಮುಖಂಡ**

ಶಾಸಕರ ಜನ್ಮದಿನದ ನಿಮಿತ್ತ ಅನೇಕ ವರ್ಷಗಳಿಂದ ನೇತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗುತ್ತಿದ್ದು, ಇದರಿಂದ ಸಾವಿರಾರು ಜನರಿಗೆ ಶಸ್ತ್ರಚಿಕಿತ್ಸೆ ಮೂಲಕ ಅಂಧತ್ವ ನಿವಾರಣೆ ಮಾಡಲಾಗಿದೆ. ಶಾಸಕರ ಈ ಜನಪರ ಕಾಳಜಿಯನ್ನು ಪ್ರಶಂಶಿಸಿದರು.

ನಂತರ 300ಕ್ಕೂ ಅಧಿಕ ಅಂಧತ್ವ ಸಮಸ್ಯೆ ಇರುವ ಜನರಿಗೆ ಚಿಕಿತ್ಸೆ ನೀಡಲಾಯಿತು. 250 ಜನರಿಗೆ ಮೋತಿ ಬಿಂದು ಶಸ್ತ್ರ ಚಿಕಿತ್ಸೆಗಾಗಿ ಸಾಂಗ್ಲಿ ಆಸ್ಪತ್ರೆಗೆ ಕಳುಹಿಸಲಾಯಿತು.

ಈ ಸಂದರ್ಭದಲ್ಲಿ ಯುವ ಮುಖಂಡ ಬೀರಪ್ಪ ಯಕ್ಕಂಚಿ, ಟೆಕೆ ನೇತ್ರ ಚಿಕಿತ್ಸಾಲಯದ ಡಾ.ಆಕಾಶ ಎಂ. ಹಾಗೂ ಅಥಣಿ ಸಾರ್ವಜನಿಕ ಆಸ್ಪತ್ರೆಯ ನೇತ್ರ ತಜ್ಞ ಡಾ.ರಮೇಶ ಹುಲಕುಂದ, ಮಿಲಿಂದ್ ಸಲಗರ, ಮಹಾಂತೇಶ್ ಟಕ್ಕಣ್ಣವರ, ಪ್ರಕಾಶ್ ನರಟ್ಟಿ, ರಮೇಶ್ ಸಜ್ಜನ, ನವೀನ್ ಕಾತ್ರಾಳ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಿರುಸುದ್ದಿ

ನಟಿ ರಚಿತಾ ರಾಮ್ ಬೌನ್ಸರ್ ನಿಂದ ಅಧಿಕಾರಿ ಮೇಲೆ ಹಲ್ಲೆ

• **ವಿಜಯನಗರ:** ಹಂಪಿ ಉತ್ಸವ ಉತ್ಸವಕ್ಕೆ ಆಗಮಿಸಿದ್ದ ಖ್ಯಾತ ನಟಿ ರಚಿತಾ ರಾಮ್ ಅವರ ಬೌನ್ಸರ್ ಕ್ಷುಲ್ಲಕ ಕಾರಣಕ್ಕೆ ಜಿಲ್ಲೆಯ ಅಧಿಕಾರಿಯೊಬ್ಬರ ಮೇಲೆ ಹಲ್ಲೆ ನಡೆಸಿರುವ ಆರೋಪ ಕೇಳಿ ಬಂದಿದೆ. ಹಂಪಿ ಉತ್ಸವದ ಮೂರನೇ ದಿನವಾದ ಭಾನುವಾರ ರಾತ್ರಿ ಗಾಯಿತ್ರಿ ಪೀಠದಲ್ಲಿರುವ ಪ್ರಧಾನ ವೇದಿಕೆಯಲ್ಲಿ ನಟಿ ರಚಿತಾ ರಾಮ್ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ವೇದಿಕೆಯಿಂದ ಇಳಿದ ಬಳಿಕ ಜಿಲ್ಲಾಧಿಕಾರಿ ಕಚೇರಿಯ ಕೆಲ ಸಿಬ್ಬಂದಿ ನಟಿಯೊಂದಿಗೆ ಸೆಲ್ಫೀ, ಫೋಟೋ ತೆಗೆಸಿಕೊಳ್ಳಲು ಮುಗಿಬಿದ್ದರು. ಇದೇ ವೇಳೆ ನಿರ್ಮಿತಿ ಕೇಂದ್ರದ ಅಧಿಕಾರಿ ರವಿ ಕುಮಾರ್ ಕೂಡಾ ರಚಿತಾ ರಾಮ್ ಅವರೊಂದಿಗೆ ಫೋಟೋ ತೆಗೆಸಿಕೊಳ್ಳಲು ಮುಂದಾದರು. ಈ ವೇಳೆ ಏಕಾಏಕಿ ಎಳೆದಾಡಿದ ಬೌನ್ಸರ್, ರವಿ ಕುಮಾರ್ ಮೇಲೆ ಹಲ್ಲೆ ನಡೆಸಿದ್ದಾರೆ. ಕ್ಷಣ ಅಲ್ಲಿದ್ದವರು ರವಿ ಅವರ ನೆರವಿಗೆ ಬಂದು, ಬಿಡಿಸಿದ್ದಾರೆ. ಘಟನೆಯಲ್ಲಿ ರವಿ ಕುಮಾರ್ ಅವರ ಕಣ್ಣಿನ ಬಳಿ ಗಾಯಗಳಾಗಿವೆ ಎಂದು ತಿಳಿದು ಬಂದಿದೆ. ಈ ಕುರಿತು ಯಾವುದೇ ರೀತಿಯ ದೂರು ದಾಖಲಾಗಿಲ್ಲ.

ಕೆಡಿಸಿಸಿ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ

ಶಾಸಕ ಶಿವರಾಮ ಹೆಬ್ಬಾರ್ ಅವಿರೋಧ ಆಯ್ಕೆ



• **ಶಿರಸಿ:** ರಾಜ್ಯದ ಪ್ರತಿಷ್ಠಿತ ಉತ್ತರ ಕನ್ನಡ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನ (ಕೆಡಿಸಿಸಿ) ನೂತನ ಅಧ್ಯಕ್ಷರಾಗಿ ಶಾಸಕ ಶಿವರಾಮ ಹೆಬ್ಬಾರ್ ಸತತ ಎರಡನೇ ಬಾರಿಗೆ ಅವಿರೋಧ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಜೋಯಿಡಾದ ಕೃಷ್ಣ ದೇಸಾಯಿ ಒಮ್ಮತದಿಂದ ಆಯ್ಕೆಯಾದರು. ಆ ಮೂಲಕ ಸಹಕಾರ ಧರ್ಮಯುದ್ಧದಲ್ಲಿ ಹೆಬ್ಬಾರ್ ಗೆದ್ದು ಬೀಗಿದ್ದಾರೆ.

ಶಿರಸಿಯಲ್ಲಿ ಕೆಡಿಸಿಸಿ ಬ್ಯಾಂಕ್ ಮುಖ್ಯ ಕಚೇರಿಯಲ್ಲಿ ಸೋಮವಾರ ನಡೆದ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ಪ್ರಕ್ರಿಯೆಯಲ್ಲಿ ಶಾಸಕ ಹೆಬ್ಬಾರ್ ಹಾಗೂ ಕೃಷ್ಣ ದೇಸಾಯಿ ಕ್ರಮವಾಗಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬೊಬ್ಬರೇ ನಾಮಪತ್ರ ಸಲ್ಲಿಸಿದರು. ಈ ಹಿನ್ನೆಲೆಯಲ್ಲಿ ಮತದಾನ ಪ್ರಕ್ರಿಯೆ ಇಲ್ಲದೇ ಇಬ್ಬರನ್ನೂ ಅವಿರೋಧ ಆಯ್ಕೆಯಾಗಿ ಚುನಾವಣಾಧಿಕಾರಿ ಸಹಾಯಕ ಆಯುಕ್ತ ಚಂದ್ರಶೇಖರ್ ಜಿ.ಆರ್.ಘೋಷಣೆ ಮಾಡಿದರು.

ಶಾಸಕ ಶಿವರಾಮ ಹೆಬ್ಬಾರ್ ಅವರು 2020ರಲ್ಲಿಯೂ ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಈಗ ಪುನಃ ಹಲವು ವಿರೋಧದ ನಡುವೆಯೂ ಅಧ್ಯಕ್ಷರಾಗಿದ್ದಾರೆ. ಕಳೆದ ಅ.25 2025ರಂದು ನಡೆದ ಕೆಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹಾಗೂ ಅಂದಿನ ಹಾಲಿ ಅಧ್ಯಕ್ಷ, ಶಾಸಕ ಶಿವರಾಮ ಹೆಬ್ಬಾರ್ ತಂಡಗಳ ನಡುವೆ ತೀವ್ರ ಹಣಾಹಣಿ ನಡೆದಿತ್ತು. ಫಲತಾಂಶ ಹೆಬ್ಬಾರ್ ಕಡೆಗೆ ಬಂದಿತ್ತು. ಬಳಿಕ ಕೆಲ ನ್ಯಾಯಾಲಯದ ವಿಷಯದ ಕಾರಣ ಅಧ್ಯಕ್ಷರ ಆಯ್ಕೆ ವಿಳಂಬವಾಗಿತ್ತು. ಈಗ 16 ನಿರ್ದೇಶಕರ ಆಯ್ಕೆಯ ಬಳಿಕ ಆಡಳಿತ ಮಂಡಳಿ ಸಂಪೂರ್ಣವಾಗಿ ರಚನೆಯಾಗಿದ್ದು, 11-5 ಬಲದ ನಡುವೆ ಶಾಸಕ ಶಿವರಾಮ ಹೆಬ್ಬಾರ್ ಅವಿರೋಧವಾಗಿ ಅಧ್ಯಕ್ಷರಾದರು.

> **ಬ್ಯಾಂಕಿಗೆ ಅಧ್ಯಕ್ಷ, ಉಪಾಧ್ಯಕ್ಷರು ಅವಿರೋಧ ಆಯ್ಕೆಯಾಗಿದೆ. ನಾವೆಲ್ಲರೂ ಪಕ್ಷ ಬೇಧ ಸಂಘರ್ಷ ಮರೆತು ಜಿಲ್ಲೆಯ ಸಹಕಾರಕ್ಕೆ ಮತ್ತಷ್ಟು ಮೆರಗು ನೀಡುವ ಕೆಲಸ ಮಾಡಲಿದ್ದೇವೆ. ಇಂದಿನಿಂದಲೇ ಬ್ಯಾಂಕಿನ ಅಧಿಕೃತ ಕಾರ್ಯಕ್ರಮ ಆರಂಭವಾಗಲಿದೆ.**
> ■ **ಶಿವರಾಮ ಹೆಬ್ಬಾರ್, ಕೆಡಿಸಿಸಿ ಅಧ್ಯಕ್ಷ**

ನೂತನ ನಿರ್ದೇಶಕರಾದ ಎಸ್.ಎಲ್.ಘೋಟ್ನೇಕರ್, ಪ್ರಕಾಶ ಗುನಗಿ, ಬಾಬು ಸುಂಕೇರಿ, ರಾಜಗೋಪಾಲ ಅಡಿ, ಮೋಹನ ನಾಯಕ್ ಗೋಕರ್ಣ, ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ, ವಿಶಾಲ್ ಭಟ್ ಹೊನ್ನಾವರ, ವಿಶ್ವನಾಥ ಭಟ್, ನಿರಂಜನ ಭಟ್, ರವಿ ಹೆಗಡೆ ಹುಳಗೋಳ, ಎಮ್.ಎ.ಹೆಗಡೆ, ಎಚ್.ಎಮ್.ನಾಯ್ಕ ಮುಂಡಗೋಡ, ರಾಘವೇಂದ್ರ ಶಾಸ್ತ್ರೀ ಇದ್ದರು.

ಅಧ್ಯಕ್ಷ ಸ್ಥಾನ ಸ್ವೀಕರಿಸಿ ಮಾತನಾಡಿದ ಶಾಸಕ ಹೆಬ್ಬಾರ್, ಜಿಲ್ಲೆಯ ಎಲ್ಲಾ ಸಹಕಾರಿಗಳ ಸಹಕಾರದಿಂದ ಮುಂದಿನ ಐದು ವರ್ಷಗಳ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದೇನೆ. ಜಿಲ್ಲೆಯ ಸಹಕಾರಿಗಳಿಂದ ಸಿಕ್ಕ ಗೌರವ ಇದಾಗಿದೆ. ಚುನಾವಣೆ ಬಳಿಕ ಸಂಸ್ಥೆಯನ್ನು ಎಲ್ಲರೂ ಒಂದಾಗಿ ಬೆಳೆಸಿದ್ದೇವೆ. ಬ್ಯಾಂಕಿಗೆ ಮತ್ತಷ್ಟು ಗಟ್ಟಿತನ ತರಲು ಸಾಧ್ಯವಾಗಲಿದೆ. ಈಗಾಗಲೇ ಬ್ಯಾಂಕ್ ರಾಜ್ಯದಲ್ಲಿ ಮೂರನೇ ಸ್ಥಾನದಲ್ಲಿದ್ದು, ಅದನ್ನು ಎರಡನೇ ನಂಬರ್ ಗೆ ತೆಗೆದುಕೊಂಡು ಹೋಗುವ ಉದ್ದೇಶವಿದೆ ಎಂದರು.

ಜನಸಾಮಾನ್ಯರ ಮೇಲೆ ಸಾಲ ಹೊರಸಿದ್ದೇ

ಕೈ ಸರ್ಕಾರದ ದೊಡ್ಡ ಸಾಧನೆ: ನಿಖಿಲ್ ಕುಮಾರಸ್ವಾಮಿ



• **ವಿಜಯಪುರ:** ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಸಾಲದ ಹೊರೆಯನ್ನು ಜನಸಾಮಾನ್ಯರಿಗೆ ಹೊರೆಸುತ್ತಿದ್ದು, ಪ್ರತಿ ವರ್ಷ ಒಂದೂವರೆ ಲಕ್ಷ ಕೋಟಿ ರೂ. ಅಂದರೆ ದಿನಕ್ಕೆ 300 ಕೋಟಿ ರೂ. ಸಾಲ ಮಾಡುತ್ತಿದೆ. ಸಾಲವನ್ನು ಹೊರೆಸಿದ್ದೇ ಸರ್ಕಾರದ ದೊಡ್ಡ ಕೊಡುಗೆ ಹಾಗೂ ಸಾಧನೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಗುಡುಗಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ನಿತ್ಯ ಕುರ್ಚಿ ಕಚ್ಚಾಟ, ಶಾಸಕರ ಬಲದೊಂದಿಗೆ ಶಕ್ತಿ ಪ್ರದರ್ಶನದಲ್ಲಿಯೇ ಸರ್ಕಾರ ಕಾಲಹರಣ ಮಾಡುತ್ತಿದ್ದು, ಜನರ ಬೆವರಿನ ರೂಪದ ತೆರಿಗೆ ಹಣ ಪೋಲಾಗುತ್ತಿದೆ ಎಂದರು.

ನಮ್ಮ ಶಕ್ತಿ ಬಿಜೆಪಿಗೆ ಧಾರೆ ಎರೆದಿದ್ದೇವೆ. ಬಿಜೆಪಿ ಶಕ್ತಿ ನಮಗೆ ಧಾರೆ ಎರೆದಿದ್ದಾರೆ. ಭ್ರಷ್ಟ ಕಾಂಗ್ರೆಸ್ ವಿರುದ್ಧ ಒಗ್ಗಟ್ಟಾಗಿ ಹೋರಾಡುತ್ತಿದ್ದೇವೆ. ಹೀಗಾಗಿ ಮರ್ಜ್ ಆಗುವ ಪ್ರಶ್ನೆಯೇ ಇಲ್ಲ. ನಾವು ಮೈತ್ರಿಯ ಫ್ಲೈಟ್ ಹತ್ತಿದ್ದೇವೆ. ಅದು ಟರ್ಬ್ಯೂಲೆನ್ಸ್ ಆಗುವುದು ಸಹಜ. ಮಧ್ಯದಲ್ಲಿ ಕೆಲವು ಪ್ರಯಾಣಿಕರು ಇಳಿಯುವಂತೆ ಹೇಳಿದರೆ ಅದು ಸಾಧ್ಯವಾಗದು. ಇನ್ನೂ ಜೆಡಿಎಸ್ ಸೈದ್ಧಾಂತಿಕವಾಗಿ ರಾಜಿಯಾಗಿಲ್ಲ, ಸೆಕ್ಯೂಲರಿಸ್ಂ ನಮ್ಮ ಹೃದಯಲ್ಲಿದೆ ಎಂದರು.

ಕೆಲವೊಂದು ಅಸಮಾಧಾನ ಬರಬಹುದು, ಅದನ್ನು ವರಿಷ್ಠರು ಸಮಾಧಾನ ಮಾಡುತ್ತಾರೆ. ಸಣ್ಣ ಪುಟ್ಟ ಭಿನ್ನಾಭಿಪ್ರಾಯ ಇದ್ದರೂ ಸಹ ಅದನ್ನು ಅವರು ಸರಿ ಪಡಿಸುತ್ತಾರೆ. ಸೈದ್ಧಾಂತಿಕವಾಗಿ ನಾವು ಎಂದೂ ಬದಲಾಗಿಲ್ಲ, ಬಿಜೆಪಿ ಜೊತೆ ಕೈ ಜೋಡಿಸಿದ ಮಾತ್ರಕ್ಕೆ ಸೆಕ್ಯೂಲರಿಸಂ ಕೈ ಬಿಟ್ಟಿಲ್ಲ ಎಂದರು.

ಸಿದ್ದರಾಮಯ್ಯ ಅವರನ್ನು ದೇವೇಗೌಡರು ಅಂದು ಉಪ ಮುಖ್ಯಮಂತ್ರಿ ಮಾಡದೇ ಹೋಗಿದ್ದರೆ ಅವರು ಇಂದು ಮುಖ್ಯಮಂತ್ರಿಯಾಗಿರಲು ಸಾಧ್ಯವಾಗುತ್ತಿರಲಿಲ್ಲ, ಸರ್ವ ಜನಾಂಗಕ್ಕೂ ರಾಜಕೀಯ ಶಕ್ತಿ ತುಂಬಿದ್ದು ಜೆಡಿಎಸ್ ಎಂದರು.

ರಾಜ್ಯದಲ್ಲಿರುವ ಹಾಲಿ ಮುಖ್ಯಮಂತ್ರಿ ಸೇರಿದಂತೆ ಸಚಿವ ಸಂಪುಟದಲ್ಲಿರುವ ಶೇ.30ರಷ್ಟು ಸಚಿವರೆಲ್ಲರೂ ಜನತಾ ದಳದ ಪ್ರಾಡೆಕ್ಟ ಗಳೇ, ಜನತಾ ದಳ ನಾಯಕರನ್ನು ರೂಪಿಸುವ ಕಾರ್ಖಾನೆ, ಜೆಡಿಎಸ್ ಇನ್ನೂ ಸಶಕ್ತವಾಗಿದೆ. ಸದೃಢವಾಗಿದೆ. ಕಾರ್ಯಕರ್ತರದಲ್ಲಿಯೂ ಪಕ್ಷದ ಬಗ್ಗೆ ಅಚಲವಾದ ವಿಶ್ವಾಸವಿದೆ ಎಂದರು.

ಹಳೇಮೈಸೂರು ಪ್ರಾಂತ್ಯದಲ್ಲಿ ನಮ್ಮ ಪ್ರಾಬಲ್ಯವಿದೆ. ಮಧ್ಯ ಕರ್ನಾಟಕ, ಕಿತ್ತೂರ ಕರ್ನಾಟಕದಲ್ಲಿಯೂ ಜೆಡಿಎಸ್ ಶಕ್ತಿ ಪ್ರಬಲವಾಗಿದೆ. ಹಳೆ ಮೈಸೂರು ಪ್ರಾಂತ್ಯದ ಪಾರ್ಟಿ ಎಂಬುದು ತಪ್ಪು ಕಲ್ಪನೆ ಎಂದರು.

9 ಸಾವಿರ ಕಿ.ಮೀ. ರಾಜ್ಯ ಪ್ರವಾಸ ಮಾಡಿರುವೆ. 54 ಹೆಚ್ಚು ವಿಧಾನಸಭಾ ಕ್ಷೇತ್ರ ಸಂಚರಿಸಿದ್ದೇನೆ. ಶಾಸಕನಾಗಬೇಕು, ಸಂಸದನಾಗಬೇಕು ಎಂಬ ಯಾವ ಗುರಿ ಇಲ್ಲ, ಪಕ್ಷ ಸಂಘಟನೆಯೇ ನನ್ನ ಗುರಿ ಎಂದರು.

ಮಾಜಿ ಸಚಿವ ವೆಂಕಟರಾವ ನಾಡಗೌಡ, ಶಾಸಕ ರಾಜುಗೌಡ ಪಾಟೀಲ, ಮಾಜಿ ಶಾಸಕ ದೇವಾನಂದ ಚವ್ಹಾಣ, ಜೆಡಿಎಸ್ ಜಿಲ್ಲಾಧ್ಯಕ್ಷ ಬಸನಗೌಡ ಮಾಡಗಿ, ಮುಖಂಡರಾದ ಅಪ್ಪುಗೌಡ ಪಾಟೀಲ ಮನಗೂಳಿ, ಎಸ್.ವಿ.ಪಾಟೀಲ ಸಿಂದಗಿ, ಬಿ.ಡಿ.ಪಾಟೀಲ ಹಂಜಗಿ, ಹನುಮಂತಪ್ಪ ಮಾವಿನಮರದ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಹೈಕೋರ್ಟ್ ಪೀಠಕ್ಕೆ ಬಾಂಬ್ ಬೆದರಿಕೆ



• **ಧಾರವಾಡ:** ಇಲ್ಲಿನ ಹೈಕೋರ್ಟ್ ಪೀಠಕ್ಕೆ ಸೋಮವಾರ ಬಂದ ಇ-ಮೇಲ್ ಬಾಂಬ್ ಬೆದರಿಕೆ ಸಂದೇಶ, ನ್ಯಾಯಾಲಯದ ಆವರಣದಲ್ಲಿ ಭೀತಿ-ಆತಂಕದ ವಾತಾವರಣ ನಿರ್ಮಿಸಿತ್ತು. ಪೊಲೀಸ್ ತಪಾಸಣೆ ನಂತರ ಇದು 'ಹುಸಿ ಬಾಂಬ್ ಬೆದರಿಕೆ' ಎಂದು ತಿಳಿದಿದೆ.

ತಮಿಳುನಾಡಿನಲ್ಲಿ ಇಡಬ್ಲ್ಯೂಎಸ್ ಮೀಸಲು ಅನುಷ್ಠಾನ ನಿಲ್ಲಿಸಿ! ಇಲ್ಲವಾದರೆ, ಇಲ್ಲಿನ ಹೈಕೋರ್ಟ್‌ನಲ್ಲಿ ಆರ್‌ಡಿಎಕ್ಸ್ ಬಾಂಬ್ ಮಧ್ಯಾಹ್ನ 1.15ಕ್ಕೆ ಸ್ಫೋಟಿಸುವುದಾಗಿ ಇ-ಮೇಲ್ ಸಂದೇಶ ಬಂದಿದ್ದು, ಕಳೆದ ಜ.6ರಂದು ಕೂಡ ಇಂತಹದ್ದೇ ಸಂದೇಶ ಬಂದಿತ್ತು.

ಹೈಕೋರ್ಟ್ ಹೆಚ್ಚುವರಿ ರಜಿಸ್ಟಾರ್ ಶಾಂತವೀರ ಶಿವಪ್ಪ ಇ-ಮೇಲ್ ಪರಿಶೀಲಿಸಿದ ತಕ್ಷಣ ಎಸ್ಪಿ ಗುಂಜನ್ ಆರ್ಯಗೆ ಮಾಹಿತಿ ನೀಡಿದ್ದು, ಎಚ್ಚೆತ್ತ ಎಸಿ ತಮ್ಮ ತಂಡದ ಜತೆ ಹೈಕೋರ್ಟ್‌ಗೆ ಆಗಮಿಸಿ, ನ್ಯಾಯಾಧೀಶರು, ನ್ಯಾಯವಾದಿಗಳು ಹೊರಗಡೆ ಕಳುಹಿಸಿದರು.

ಸ್ಥಳಕ್ಕೆ ಅಗ್ನಿಶಾಮಕ ದಳ ಸಹ ಆಗಮಿಸಿತ್ತು. ಗುಂಜನ್ ಆರ್ಯ ನೇತೃತ್ವದ ಬೆರಳಚ್ಚು ತಜ್ಞರು, ಬಾಂಬ್ ನಿಷ್ಕ್ರಿಯ ದಳ ಸುಮಾರು ಒಂದುವರೆ ಗಂಟೆ ಪರಿಶೀಲನೆ ಕೆಲಸ ಮಾಡಿದೆ. ಹೈಕೋರ್ಟ್ ಮೂಲೆ ಮೂಲೆ ಪರಿಶೀಲಿಸಿದರೂ, ಯಾವುದೇ ವಸ್ತುಗಳು ಲಭಿಸಿಲ್ಲ.

ಬಳಿಕ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ, ಕಳೆದ ಬಾರಿಯಂತೆ ಇದು ಕೂಡ ಹುಸಿ ಬಾಂಬ್ ಸಂದೇಶ ಎಂದು ಸ್ಪಷ್ಟಪಡಿಸಿದಾಗ ನ್ಯಾಯಾಧೀಶರು, ವಕೀಲರು ನಿರಾಳರಾದರು. ಆದರೆ, ಹೈಕೋರ್ಟ್‌ನ ಮಹತ್ವದ ಕಲಾಪಗಳಿಗೆ ಸ್ಥಗಿತಗೊಂಡ ಬಗ್ಗೆ ಬೇಸರಿಸಿದರು.

ಎರಡನೇ ಬಾರಿ ಘಟನೆ:

ಕಳೆದ ಜ.6ರಂದು ಇದೇ ರೀತಿ ಧಾರವಾಡ ಹೈಕೋರ್ಟ್ ಪೀಠಕ್ಕೆ ಬಾಂಬ್ ಬೆದರಿಕೆ ಬಂದಿತ್ತು. ಪದೇ ಪದೇ ಇಂತಹ ಘಟನೆಗಳು ನಡೆಯುತ್ತಿರುವುದಕ್ಕೆ ವಕೀಲರ ಸಂಘ ತೀವ್ರ ಆಕ್ರೋಶ ವ್ಯಕ್ತಪಡಿಸಿ, ನ್ಯಾಯಾಲಯಕ್ಕೆ ಬಿಗಿ ಭದ್ರತೆ ಒದಗಿಸಲು ಸರ್ಕಾರಕ್ಕೆ ಆಗ್ರಹಿಸಿದೆ.

ಗರಗ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದ್ದು, ಇ-ಮೇಲ್ ಕಳುಹಿಸಿದ ಕಿಡಿಗೇಡಿಗಳ ಪತ್ತೆಗಾಗಿ ಸೈಬರ್ ಕ್ರೈಂ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ತಪಾಸಣೆಯ ಬಳಿಕ ಮಧ್ಯಾಹ್ನದ ನಂತರ ನ್ಯಾಯಾಲಯದ ಕಲಾಪಗಳು ಪುನಃ ಆರಂಭಗೊಂಡವು.

ಹಾವೇರಿಯಲ್ಲೂ ಹುಸಿ ಬಾಂಬ್ ಭೀತಿ

• **ಹಾವೇರಿ:** ಇಲ್ಲಿನ ಹಳೆಯ ಪಿ.ಬಿ.ರಸ್ತೆಯಲ್ಲಿ ಇರುವ ಜಿಲ್ಲಾ ನ್ಯಾಯಾಲಯಕ್ಕೆ ಸೋಮವಾರ ಹುಸಿ ಬಾಂಬ್ ಬೆದರಿಕೆ ಬಂದ ಹಿನ್ನೆಲೆಯಲ್ಲಿ ಕೊಂಚ ಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಕೋರ್ಟ್ ಕಟ್ಟಡಕ್ಕೆ ಬಾಂಬ್ ಇಡಲಾಗಿದೆ ಎಂದು ಅನಾಮಿಕ ಮೇಲ್ ನಿಂದ ಸಂದೇಶ ಬಂದ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಾಧೀಶರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಅಲ್ಲದೇ ನ್ಯಾಯಾಲಯದ ಸಿಬ್ಬಂದಿಗೆ ಮಾಹಿತಿ ನೀಡಿ, ಎಲ್ಲಾ ವಕೀಲರು ಮತ್ತು ನ್ಯಾಯಾಲಯದ ವಿವಿಧ ಸಿಬ್ಬಂದಿ ಹಾಗೂ ಕೋರ್ಟ್ ಕೆಲಸಕ್ಕೆಂದು ಬಂದಿದ್ದ ಕಕ್ಷಿದಾರರು ಮತ್ತು ಸಾರ್ವಜನಿಕರನ್ನು ದಿಢೀರ್ ಹೊರ ಕಳಿಸಲಾಯಿತು.

ಕೋರ್ಟ್ ಆವರಣಕ್ಕೆ ಧಾವಿಸಿದ ಪೊಲೀಸರು, ಶ್ವಾನದಳ, ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿಗಳು ಕೋರ್ಟ್ ಕಟ್ಟಡದ ಬೇಸ್‌ಮೆಂಟ್, ವಾಹನಗಳ ಪಾರ್ಕಿಂಗ್ ಸೇರಿದಂತೆ ಎಲ್ಲೆಡೆ ತಪಾಸಣೆಗೆ ಮುಂದಾದರು. ಸುಮಾರು ಎರಡು ಗಂಟೆಗಳ ತಪಾಸಣೆ ನಂತರ ಏನೂ ಭಯವಿಲ್ಲ, ಅದು ಹುಸಿಕರೆ ಎಂದು ಸ್ಪಷ್ಟಪಡಿಸಲಾಯಿತು.

ಮಧ್ಯಾಹ್ನದ ನಂತರ ಎಂದಿನಂತೆ ಕೋರ್ಟ್ ಕಲಾಪಗಳು ಮುಂದುವರಿದವು. ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯಗಳಿಗೆ ಇಂಥ ಹುಸಿ ಬಾಂಬ್ ಬೆದರಿಕೆ ಕೇಳಿದ್ದ ಜಿಲ್ಲೆಯ ಜನರು ಇದೇ ಮೊದಲ ಬಾರಿಗೆ ಜಿಲ್ಲಾ ನ್ಯಾಯಾಲಯಕ್ಕೆ ಇಂಥ ಬೆದರಿಕೆ ಕೇಳಿ ಕೊಂಚ ಆತಂಕ ವ್ಯಕ್ತಪಡಿಸಿದರು.

ಉತ್ತರಕನ್ನಡ ನ್ಯಾಯಾಲಯಕ್ಕೂ ಬಾಂಬ್ ಬೆದರಿಕೆ

• **ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಪ್ರಧಾನ ಮತ್ತು ಸತ್ರ ನ್ಯಾಯಾಲಯಕ್ಕೆ ಈ ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿರುವ ಹಿನ್ನೆಲೆಯಲ್ಲಿ ನ್ಯಾಯಾಲಯದ ಎಲ್ಲಾ ಕಲಾಪಗಳನ್ನು ಮುಂದೂಡಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಯಿತು.

ನ್ಯಾಯಾಲಯದ ಕಾರ್ಯಾಲಯದಲ್ಲಿರುವ ಕಂಪ್ಯೂಟರ್ ವಿಭಾಗಕ್ಕೆ ಸೋಮವಾರ ಬೆಳಿಗ್ಗೆ 8.25 ಕ್ಕೆ ಈ ಮೇಲ್ ಸಂದೇಶ ರವಾನಿಸಲಾಗಿದ್ದು ಸುನ್ನಿಯಾ ದಾಸನ್ ಎನ್ನುವವರ ಮೇಲ್ ಐಡಿ sunniya dasan@outlook.com ಮೂಲಕ ಸಂದೇಶ ರವಾನಿಸಲಾಗಿದೆ.

ಎರಡು ಆರ್.ಡಿ.ಎಕ್ಸ್ ಬಾಂಬುಗಳನ್ನು ಕೋರ್ಟ್ ನ್ಯಾಯಾಧೀಶರ ಚೇಂಬರ್‌ನಲ್ಲಿ ಪ್ಲಾಂಟ್ ಮಾಡಲಾಗಿದ್ದು, ಶೀಘ್ರದಲ್ಲೇ ಸ್ಫೋಟವಾಗಲಿದೆ. ನ್ಯಾಯಾಲಯದಲ್ಲಿರುವ ಎಲ್ಲಾ ಜನರನ್ನು 12.15ರ ಒಳಗಾಗಿ ಖಾಲಿ ಮಾಡುವಂತೆ ಮೇಲ್ ಮೂಲಕ ಎಚ್ಚರಿಕೆ ನೀಡಲಾಗಿರುವುದರಿಂದ ನ್ಯಾಯಾಲಯದ ಕಲಾಪಗಳನ್ನು ಮುಂದೂಡಲಾಯಿತು.

ತಮಿಳುನಾಡು ಸರ್ಕಾರ 2021ರಲ್ಲಿ ಪ್ರಶಾಂತ ಕಿಶೋರ ಮತ್ತು ಸುನೀಲ ಕನುಗೋಲು ಎನ್ನುವವರ ಸೂಚನೆಯಂತೆ ಮಾಧ್ಯಮಗಳನ್ನು ಬುಡಮೇಲು ಮಾಡಲು ಪ್ರಯತ್ನಿಸಿದೆ. ಹೆಣ್ಣು ಮಕ್ಕಳನ್ನು ಲೈಂಗಿಕ ಉದ್ದೇಶಗಳಿಗೆ ಬಳಸಲಾಗಿದೆ ಎಂದು ಕೆಲವು ಹೆಣ್ಣು ಮಕ್ಕಳ ಹೆಸರನ್ನು ಸಹ ಈ ಮೇಲ್ ಮೂಲಕ ಕಳುಹಿಸಿರುವ ಸಂದೇಶದಲ್ಲಿ ಉಲ್ಲೇಖ ಮಾಡಲಾಗಿದೆ.

ಬಾಂಬ್ ಬೆದರಿಕೆ ಬಂದಿರುವ ಹಿನ್ನೆಲೆಯಲ್ಲಿ ಪೊಲೀಸರು, ಭದ್ರತಾ ಸಿಬ್ಬಂದಿಗಳು ಆಗಮಿಸಿ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡರು. ಕೆಲವು ತಿಂಗಳುಗಳ ಹಿಂದೆ ಜಿಲ್ಲೆಯ ಕಾರವಾರ ಮತ್ತು ಭಟ್ಕಳ ಸೇರಿದಂತೆ ರಾಜ್ಯದ ಹಲವಡೆ ತಹಶೀಲ್ದಾರರ ಕಛೇರಿಗಳಿಗೆ ಗೈನಾ ರಮೇಶ ಎನ್ನುವ ಮೇಲ್ ಐಡಿಯಿಂದ ಬಾಂಬ್ ಬೆದರಿಕೆ ಈ ಮೇಲ್ ರವಾನೆಯಾಗಿತ್ತು. ಇದೀಗ ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ಕಳುಹಿಸಲಾದ ಮೇಲ್ ಸಂದೇಶದಲ್ಲೂ ಈ ಹಿಂದೆ ಬಂದಿರುವ ಮೇಲ್ ಸಂದೇಶದಲ್ಲಿ ಇರುವ ವಿಷಯಗಳನ್ನೇ ಪುನಃ ಉಲ್ಲೇಖಿಸಲಾಗಿದೆ.

ಇದೊಂದು ಹುಸಿ ಬಾಂಬ್ ಬೆದರಿಕೆಯಂತೆ ಕಂಡು ಬಂದರೂ ಈ ಕುರಿತಂತೆ ಗಂಭೀರವಾಗಿ ತನಿಖೆ ಕೈಗೊಳ್ಳುವ ಸಾಧ್ಯತೆಯಿದೆ.



ಹಂಪಿಯಲ್ಲಿ ಚಿರತೆ ಪ್ರತ್ಯಕ್ಷ: ಆತಂಕ

• **ವಿಜಯನಗರ:** ಐತಿಹಾಸಿಕ ಹಂಪಿ ಉತ್ಸವದ ಮಧ್ಯೆಯೇ ಹಂಪಿಯಲ್ಲಿ ಚಿರತೆಯೊಂದು ನಾಯಿಯನ್ನು ಹೊತ್ತೊಯ್ದ ಘಟನೆ ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಶನಿವಾರ ಮಧ್ಯರಾತ್ರಿ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಸಮೀಪ ಚಿರತೆ ಕಾಣಿಸಿಕೊಂಡಿದೆ. ಓಣಿಯಲ್ಲಿ ಅತ್ತಿತ್ತ ತಿರುಗುತ್ತಿದ್ದ ಬೀದಿ ನಾಯಿ ಮೇಲೆ ಎರಗಿದ್ದು, ಕ್ಷಣ ಮಾತ್ರದಲ್ಲಿ ಹೊತ್ತೊಯ್ದಿದೆ. ಅಲ್ಲಿನ ಸಿಸಿಟಿವಿಯಲ್ಲಿ ಈ ದೃಶ್ಯಗಳು ಸೆರೆಯಾಗಿವೆ. ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಂಡು ತಕ್ಷಣ ಚಿರತೆಯನ್ನು ಸೆರೆಹಿಡಿಯಬೇಕು, ಇಲ್ಲದಿದ್ದರೆ ಪ್ರತಿಭಟನೆ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಲೋಕಾಯುಕ್ತ ವಿಭಾಗಕ್ಕೆ ನಂದಗಾವಿ ವರ್ಗಾವಣೆ



• **ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್‌ನಲ್ಲಿ ಕಾನೂನು ಹಾಗೂ ಸುವ್ಯವಸ್ಥೆ ವಿಭಾಗದ ಡಿಸಿಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮಹಾನಿಂಗ ನಂದಗಾವಿ ಅವರನ್ನು ಲೋಕಾಯುಕ್ತ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾಯಿಸಲಾಗಿದೆ. ತೆರವಾದ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್‌ನಲ್ಲಿ ಕಾನೂನು ಹಾಗೂ ಸುವ್ಯವಸ್ಥೆ ವಿಭಾಗದ ಡಿಸಿಪಿ ಸ್ಥಾನಕ್ಕೆ ಇನ್ನೂ ಯಾರನ್ನು ನಿಯೋಜಿಸಿಲ್ಲ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ



ಮುಂಡಗೋಡ: ತಾಲೂಕಿನ ಕಾವಲಕೊಪ್ಪ ಗ್ರಾಮದಲ್ಲಿ ಶರೀಫ ಶಿವಯೋಗಿ, ವೀರ ಯೋಗೀಂದ್ರ ಸ್ವಾಮಿಗಳ ಜಾತ್ರೆಯಲ್ಲಿ ರಥೋತ್ಸವವು ಸೋಮವಾರ ಸಂಜೆ ವಿಜೃಂಭಣೆಯಿಂದ ನಡೆಯಿತು.

ನಾಳೆ ವಿದ್ಯುತ್ ವ್ಯತ್ಯಯ

ಕುಮಟಾ: ಉಪವಿಭಾಗದ ನಗರ ಶಾಖೆಯ ವ್ಯಾಪ್ತಿಯ 11ಕೆ.ವಿ ಇಂಡಸ್ಟ್ರಿಯಲ್ ಮಾರ್ಗದ ಎಲ್ಲಾ ಭಾಗಗಳಲ್ಲಿ ಮತ್ತು ಕುಮಟಾ ಪಟ್ಟಣ ಮಾರ್ಗದ (ಬಗ್ಗೋಣ, ಮುವತ್ತುಗುಂಡಿ, ಕುಂಬಾರಮಕ್ಕಿ, ಹೊನ್ಮಾಂವ್‌ದಲ್ಲಿ) ತುರ್ತುನಿರ್ವಹಣಾ ಕಾಮಗಾರಿ ಇರುವುದರಿಂದ ಮತ್ತು ಮತ್ತು ಗ್ರಾಮೀಣ ಶಾಖೆಯ ವ್ಯಾಪ್ತಿಯ ಹೆಗಡೆ 11ಕೆ.ವಿ ಮಾರ್ಗದ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಫೆ.18ರಿಂದ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಗ್ರಾಹಕರು ಸಹಕರಿಸ ಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಹೆಸ್ಕಾಂ, ಕುಮಟಾ ಇವರು ಪ್ರಕಟಣೆ ತಿಳಿಸಿದಾರೆ.

ವಿಶ್ವನಾಥಗೆ ಡಾಕ್ಟರೇಟ್ ಪದವಿ

ಹೊನ್ನಾವರ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿರ್ವಹಣಾ ಶಾಸ್ತ್ರ (ಬಿಬಿಎ) ವಿಭಾಗದ ಸಹಾಯಕ ಪ್ರಾಧ್ಯಾಪಕ ವಿಶ್ವನಾಥ ಎಸ್.ನಾಯ್ಕ ಅವರಿಗೆ ಮಂಗಳೂರಿನ ಶ್ರೀನಿವಾಸ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿದೆ. ಇವರು 'ಕಾರ್ಪೊರೇಟ್ ಎಕ್ಸಪೆಕ್ಟೇಶನ್ ಫ್ರಮ್ ಮ್ಯಾನೇಜ್ಮೆಂಟ್ ಗ್ರಾಜುಯೇಟ್ಸ್ ಸ್ಟಡಿಯಿಂಗ್ ಇನ್ ಸ್ಟೇಟ್ ಗವರ್ನಮೆಂಟ್ ಯೂನಿವರ್ಸಿಟೀಸ್ ಇನ್ ಕರ್ನಾಟಕ' ಎನ್ನುವ ವಿಷಯದ ಕುರಿತು ಮ್ಯಾನೇಜ್ಮೆಂಟ್ ವಿಭಾಗದ ಪ್ರಾಧ್ಯಾಪಕಿ ಡಾ. ಶೈಲಶ್ರೀ ವಿ.ಟಿ., ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ಮಹಾಪ್ರಬಂಧವನ್ನು ಮಂಡಿಸಿದ್ದರು. ಇವರು ಮುರುಡೇಶ್ವರ, ಉತ್ತರಕೊಪ್ಪದ ಶಿವರಾಮ ನಾಯ್ಕ ಮತ್ತು ಸುಶೀಲಾ ನಾಯ್ಕ ದಂಪತಿ ಪುತ್ರ.





ಮುಂಡಗೋಡ: ಐತಿಹಾಸಿಕ ತಾಲೂಕಿನ ಬೆಡಸಗಾಂವ ಗ್ರಾಮದ ಶ್ರೀರಾಮಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಅಂಗವಾಗಿ ಭಾನುವಾರ ವಿಶೇಷ ಪೂಜೆ ಸಲ್ಲಿಸಲಾಯಿತು. ಶ್ರೀರಾಮಲಿಂಗೇಶ್ವರ ದೇವಸ್ಥಾನದಲ್ಲಿ ಭಕ್ತರು ತಂಡೋಪತಂಡವಾಗಿ ಆಗಮಿಸಿ ಪೂಜೆ ಸಲ್ಲಿಸಿದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62699	71269
ಬಿಳಿಗೋಟು	23700	43509
ಕೆಂಪುಗೋಟು	25900	38199
ಬೆಟ್ಟೆ	42250	54299
ರಾಶಿ	48809	57699
ಚಾಲಿ	44350	49119
ಬಿ.ಕಾಳುಮೆಣಸು	90069	90069

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	64699	64699
ರಾಶಿ	50599	63975
ಬೆಟ್ಟೆ	40506	52859
ಕೆಂಪುಗೋಟು	21651	39806
ಬಿಳಿಗೋಟು	24899	41101
ಚಾಲಿ	42500	50278
ಕೋಕಾ	16109	32899
ಕಾಳುಮೆಣಸು	61899	68011



ಕುಮಟಾ:ಮಹಾನ್ ಶಿಕ್ಷಣ ಸಾಧಕರಾದ ಡಾ. ಪ್ರಭಾಕರ ಕೋರೆ ಅವರು ಸೋಮವಾರ ಗೋರೆ ಗುಡ್ಡದ ಸುಂದರ ಪರಿಸರದಲ್ಲಿ ನಿರ್ಮಾಣಗೊಂಡಿರುವ ಕೆನರಾ ಎಕ್ಸಲೆನ್ಸ್ ಪದವಿ ಪೂರ್ವ ಕಾಲೇಜುಗೆ ಅನಿರೀಕ್ಷಿತವಾಗಿ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾ.ನಾಗರಾಜ್ ಹೆಗಡೆ, ಆಡಳಿತಾಧಿಕಾರಿ ಶಶಾಂಕ್ ಶಾಸ್ತ್ರಿ ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ರಾಮಲಿಂಗೇಶ್ವರ ದೇವಸ್ಥಾನ: ತುಲಾಭಾರ ಸೇವೆ

ಮುಂಡಗೋಡ: ತಾಲೂಕಿನಬೆಡಸಗಾಂವಶ್ರೀರಾಮಲಿಂಗೇಶ್ವರದೇವಸ್ಥಾನದಲ್ಲಿಭಕ್ತಾದಿಗಳು ತಮ್ಮ ಹರಕೆ ಪೂರ್ಣಗೊಂಡ ಹಿನ್ನೆಲೆ ಸೋಮವಾರ ಭಕ್ತರು ದೇವಸ್ಥಾನಕ್ಕೆ ತೆರಳಿ ತುಲಾಭಾರ ಸೇವೆ ಸಲ್ಲಿಸಿದರು.ಸುತ್ತು ಮುತ್ತಲಿನ ಗ್ರಾಮಸ್ಥರು ಅನಾರೋಗ್ಯದಿಂದ ಬಳಲುತ್ತಿದ್ದವರು, ಮಕ್ಕಳ ಇಲ್ಲದ್ದವರು, ಮತ್ತು ಸುರಕ್ಷಿತ ಹೆರಿಗೆಗಾಗುವಂತೆ ಇನ್ನಿತರ ಹರಕೆಯನ್ನು ಹೊತ್ತಿದ್ದ ಭಕ್ತರು ಹರಕೆ ಪೂರ್ಣಗೊಂಡ ಹರಕೆ ತಿರಿಸಲು ಅಕ್ಕಿ ಮೂಟೆಯ ಬಾಳೆಕಾಯಿ, ತೆಂಗಿನಕಾಯಿ, ಸಕ್ಕರೆ ಮತ್ತು ಅಡಿಕೆ ತುಲಾಭಾರ ಸೇವೆ ಸಲ್ಲಿಸಿದರು, ಕೆಲವು ಭಕ್ತರು ತಮ್ಮ ಹರಕೆಯಂತೆ ವಿವಿಧ ರೀತಿಯ ತುಲಾಭಾರ ಸೇವೆ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಸಲ್ಲಿಸಿದರು. ಈ ವರ್ಷ 49ಕ್ಕೂ ಹೆಚ್ಚು ಭಕ್ತರು ತುಲಭಾರ ಸೇವೆಯ ಹರಿಕೆ ತಿರಿಸಿದರು. ತೋಗರಳ್ಳಿ ಗ್ರಾಮದ ಗಂಗಾಧರ ನಾಯ್ಕ ಎಂಬುವರು ಸುಮಾರು 10 ವರ್ಷಗಳಿಂದ ಅನಾರೋಗ್ಯದಿಂದ ತುತ್ತಾಗಿ ಹುಬ್ಬಳ್ಳಿ ಶಿರಶಿ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಲ್ಲಿ ಲಕ್ಷಾಂತ ಖರ್ಚು ಮಾಡಿ ಚಿಕಿತ್ಸೆ ಪಡೆದರು ಗುಣಮುಖರಾಗಿರಲ್ಲಿಲ್ಲ, ನಂತರ ರಾಮಲಿಂಗರ್ಶವರನಿಗೆ ಸಂಕಲ್ಪ ಮಾಡಿಕೊಂಡು ಹೋಗಿದ್ದರು ನಂತರ ಪೂರ್ಣ ಪ್ರಮಾಣದಲ್ಲಿ ಗುಣಮುಖರಾಗಿದ್ದರಿಂದ ಈ ಕುಟುಂಬ ಶಿವರಾತ್ರಿಗೆ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಈ ಬಾರಿ ತುಲಾಬಾರ ಸೇವೆ ಸಲ್ಲಿಸಿದ್ದಾರೆ ಎಂದು ಸ್ಥಳೀಯ ಮುಖಂಡ ದೇವೇಂದ್ರ ನಾಯ್ಕ ಹೇಳಿದರು. ತುಲಾಭಾರಕ್ಕೂ ಮುನ್ನ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಸೋಮವಾರ ಬೆಳಗ್ಗೆ ಪಲ್ಲಕ್ಕಿ ಉತ್ಸವ ಹಾಗೂ ಅನ್ನಸಂತರ್ಪಣೆ ನಡೆಯಿತು. ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.



ಮುಂಡಗೋಡ: ತಾಲೂಕಿನ ಬೆಡಸಗಾಂವ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಭಕ್ತಾದಿಗಳು ತಮ್ಮ ಹರಕೆ ಪೂರ್ಣಗೊಂಡ ಹಿನ್ನೆಲೆ ಸೋಮವಾರ ಭಕ್ತರು ದೇವಸ್ಥಾನಕ್ಕೆ ತೆರಳಿ ತುಲಾಭಾರ ಸೇವೆ ಸಲ್ಲಿಸಿದರು.

ಅಘನಾಶಿನಿ-ಸುರನದಿ ಸಂಗಮದಲ್ಲಿ ಗಂಗಾರತಿ

ನದಿ ತಿರುವು ಯೋಜನೆ ನಿಲ್ಲಸಲು ಆಗ್ರಹ

ಸಿದ್ದಾಪುರ: ಆಣೆಕಟ್ಟು ಇಲ್ಲದ ಏಕೈಕ ನದಿ ಅಘನಾಶಿನಿ. ಅದನ್ನು ರಕ್ಷಿಸಿ ಉಳಿಸಿಕೊಳ್ಳುವುದು ನಮ್ಮೆಲ್ಲರಕರ್ತವ್ಯ. ಪವಿತ್ರವಾದನದಿ ಹರಿವಿಗೆಯಾವುದೇ ಯೋಜನೆ ಅಡ್ಡಬರದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ನಾವೆಲ್ಲರೂ ಪೂಜನೀಯ ಸ್ಥಾನದಲ್ಲಿ ಕಾಣುವ ನದಿಗಳು ತಾಯಿಯ ಸಮಾನ ಎಂದು ನೆಲೆಮಾವುಮಠದ ಶ್ರೀ ಮಾಧವಾನಂದ ಭಾರತೀ ಸ್ವಾಮೀಜಿ ಹೇಳಿದರು.

ಅವರು ಮಹಾಶಿವರಾತ್ರಿ ಪ್ರಯುಕ್ತ ಸಿದ್ದಾಪುರ ತಾಲೂಕಿನ ಬಾಳೂರಿನ ಅಘನಾಶಿನಿ-ಸುರನದಿ ಸಂಗಮ ಸ್ಥಳದಲ್ಲಿ ನದಿಗೆ ಆರತಿ ಬೆಳಗಿಸಿ ಆಶೀರ್ವಚನ ನೀಡಿ, ನೀರು ಎನ್ನುವುದನ್ನು ನಾವು ಗಂಗಾಮಾತೆಯಾಗಿ ಕಂಡಿದ್ದೇವೆ. ಪಂಚಭೂತಗಳನ್ನು ನಾವು ಪೂಜ್ಯ ಭಾವನೆಯಿಂದ ಕಾಣುತ್ತೇವೆ. ನದಿಗಳಿಗೆ ಆಣೆಕಟ್ಟು ನಿರ್ಮಿಸಿ ಧಕ್ಕೆ ಉಂಟುಮಾಡುವುದನ್ನು ವಿರೋಽಸಬೇಕು. ಪ್ರಸ್ತಾಪಿತ ನದಿ ತಿರುವು ಯೋಜನೆ ನಿಲ್ಲಬೇಕು ಎಂದು ಆಗ್ರಹಿಸಿದ ಅವರು, ಬೇಡ್ತಿ-ಅಘನಾಶಿನಿ ನದಿಗಳನ್ನು ಅವಲಂಬಿಸಿ ಹಲವರ ಜೀವನ ಸಾಗುತ್ತಿದೆ. ಎಲ್ಲರೂ ಸಂಘಟಿತರಾಗಿ ನದಿಗಳ ಉಳಿವಿಗಾಗಿ ಹೋರಾಟ ಮಾಡುವುದು ಅತ್ಯವಶ್ಯವಾಗಿದೆ. ಆರಂಭಗೊಂಡ ಅಘನಾಶಿನಿ ಆರತಿ ಕಾರ್ಯಕ್ರಮ ಮುಂದುವರಿಸಿಕೊಂಡು ಹೋಗಬೇಕಿದೆ ಎಂದರು.

ಬೇಡ್ತಿ-ಅಘನಾಶಿನಿ ನದಿಗಳ ಸಿಹಿ ನೀರು ಸಮುದ್ರ ಸೇರುವುದು ವ್ಯರ್ಥವಲ್ಲ, ಸಮುದ್ರಕ್ಕೆ ಸಿಹಿ ನೀರು ಸೇರುವುದರಿಂದ ಜಲಚರಗಳು ಅಭಿವೃದ್ಧಿಯಾಗುತ್ತವೆ. ಮಲೆನಾಡು ಹಾಗೂ ಕರಾವಳಿ ಭಾಗದ ಜನರು ನದಿ ಉಳಿವಿಗಾಗಿ ಹೋರಾಟ ಮಾಡಬೇಕಿದೆ ಎಂದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ದೇಶ ಮಟ್ಟದಲ್ಲಿ ಜಿಲ್ಲೆಯ ಪಶ್ಚಿಮಘಟ್ಟವು ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ನದಿಯ ಪಾವಿತ್ರ್ಯವನ್ನು ಪುಣ್ಯ ಭಾವನೆಯಿಂದ ಸ್ವೀಕರಿಸಿ, ನದಿಗಳ ರಕ್ಷಣೆಗೆ ಕಟಿಬದ್ಧರಾಗಬೇಕು. ನದಿ ತಿರುವು ಯೋಜನೆಗಳು ನಮಗೆ ಬೇಡ, ನದಿ ಪೂಜೆ ಬೇಕು ಎಂಬುದು ನಮ್ಮೆಲ್ಲರ ಉದ್ದೇಶವಾಗಿದೆ. ಸವಾಲು ಉದ್ಭವವಾಗಿದ್ದು, ಬೇಡ್ತಿ, ಅಘನಾಶಿನಿ ಹಾಗೂ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗಳ ವಿರುದ್ಧ ಸಂಘಟಿತರಾಗಬೇಕಿದೆ. ನದಿ ತಿರುವು ಯೋಜನೆಗೆ ಡಿಪಿಆರ್ ಒಪ್ಪಿಗೆ ಸೂಚಿಸಬೇಡಿ ಎಂದು ವಿನಂತಿಸಿದರೂ ರಾಜ್ಯ ಸರ್ಕಾರ ಇದನ್ನು ತಯಾರಿಸಿ ಕೇಂದ್ರಕ್ಕೆ ಸಲ್ಲಿಸಿದೆ.

ಪತ್ರಿಕಾ ಸಂಪಾದಕ ಪ್ರವೀಣ ಹೆಗಡೆ ಕರ್ಜಗಿ ಪ್ರಾಸ್ತಾವಿಕವಾಗಿ ಮಾತನಾಡಿ, ನದಿಗಳನ್ನು ಉಳಿಸಿಕೊಳ್ಳುವುದು ನಮ್ಮ ಹಕ್ಕು ಮಾತ್ರವಲ್ಲ, ಕರ್ತವ್ಯವೂ ಆಗಿದೆ. ಜಿಲ್ಲೆಯಲ್ಲಿ ಬೃಹತ್ ಯೋಜನೆ ಜಾರಿಗೊಳಿಸಿ ಜನರನ್ನು ಪರದೇಶಿಗಳನ್ನಾಗಿಸುವ ಹುನ್ನಾರ ಅಡಗಿದೆ. ನದಿ ರಕ್ಷಣೆಯಲ್ಲಿ ಎಲ್ಲರೂ ಭೇದ-ಭಾವ ಮರೆತು ಒಂದಾಗಬೇಕು ಎಂದರು. ಶಿವರಾತ್ರಿಯ ಪರ್ವದಿನದಂದು ಬಾಳೂರಿನ ಸಂಗಮ ಸ್ಥಳದಲ್ಲಿ ಆರಂಭಗೊಂಡ ಅಘನಾಶಿನಿ ಆರತಿ ಮುಂದಿನ ದಿನಗಳಲ್ಲಿ ಪ್ರತಿ ವರ್ಷ ಶಿವರಾತ್ರಿ ದಿನ ನಡೆಯಲಿದೆ. ಎಲ್ಲರೂ ಸಹಕರಿಸಬೇಕು ಎಂದರು.

ಸಂಘಟಕ ಉಪೇಂದ್ರ ಪೈ ಮಾತನಾಡಿ, ನದಿಗಳನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಸ್ವರ್ಣವಲ್ಲೀ ಶ್ರೀಗಳ ಮಾರ್ಗದರ್ಶನದಲ್ಲಿ ನಡೆದ ಪರಿಸರ ರಕ್ಷಣಾ ಹೋರಾಟ ಯಶಸ್ವಿಯಾಗಿದೆ. ಪ್ರಸ್ತಾಪಿತ ನದಿ ಜೋಡಣೆ ಯೋಜನೆಗಳು ಸ್ಥಗಿತಗೊಳ್ಳಲಿವೆ ಎಂಬ ವಿಶ್ವಾಸವಿದೆ ಎಂದರು.ಸಂಗಮೇಶ್ವರ ದೇವಸ್ಥಾನದ ರಾಮಚಂದ್ರ ಹೆಗಡೆ, ರಾಮಚಂದ್ರ ಪೈ, ಮನು ವಿಕಾಸ ಸಂಸ್ಥೆಯ ಗಣಪತಿ ಭಟ್ಟ, ಶ್ರೀಮಲ್ಲಿಕಾರ್ಜುನ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸಿ.ಎನ್. ಹೆಗಡೆ ಮತ್ತಿತರರು ಉಪಸ್ಥಿತರಿದ್ದರು. ಅಘನಾಶಿನಿ ಆರತಿಗೆ ಗಣಪತಿ ಭಟ್ಟ ಸಂಕಲ್ಪ ನೆರವೇರಿಸಿದರು. ಮಹಿಳೆಯರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು.



> **ಬೇಡ್ತಿ-ಅಘನಾಶಿನಿ ಯೋಜನೆಯನ್ನು ನಿಲ್ಲಿಸಲು ಸ್ವರ್ಣವಲ್ಲೀ ಶ್ರೀಗಳ ಸೂಚನೆ ಹಾಗೂ ಮಾರ್ಗದರ್ಶನದಂತೆ ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ನೇತೃತ್ವದಲ್ಲಿ ನಿಯೋಗವು ಕೇಂದ್ರದ ಜಲಶಕ್ತಿ, ಅರಣ್ಯ ಸಚಿವರು ಸೇರಿದಂತೆ ಇನ್ನಿತರ ಸಚಿವರನ್ನು ಭೇಟಿ ಮಾಡಿ ಯೋಜನೆ ವಿರೋಧದ ಕುರಿತು ತಿಳಿಸಲಾಗಿದೆ. ಅವರೆಲ್ಲ ಸಕಾರಾತ್ಮಕವಾಗಿ ಸ್ಪಂದಿಸಿದ್ದು ರಾಜ್ಯ ಸರ್ಕಾರವು ಯೋಜನೆಗಳನ್ನು ಕೈಬಿಡಬೇಕು.**
> ■ ವಿಶ್ವೇಶ್ವರ ಹೆಗಡೆ ಕಾಗೇರಿ,ಸಂಸದ

ನದಿ ತಿರುವು ವಿರೋಧಿಸಿ ಗಂಗಾಪೂಜೆ, ಗಂಗಾರತಿ

ಯಲ್ಲಾಪುರ: ಯಲ್ಲಾಪುರ ಹಾಗೂ ಅಂಕೋಲಾ ತಾಲೂಕು ಗಡಿ ಭಾಗ ಹೆಗ್ಗಾರ ಗುಳ್ಳಾಪುರ ಸೇತುವೆ ಹತ್ತಿರ ಗಂಗಾವಳಿ ನದಿಯಲ್ಲಿ ಶ್ರೀಗಳ ಸೂಚನೆಯಂತೆ ಭಾನುವಾರ ಸಂಜೆ ಗಂಗಾಪೂಜೆ, ಗಂಗಾ ಆರತಿ ನಡೆಸಲಾಯಿತು.

ಶ್ರೀಮಠದ ಸುಪರ್ಧಿಯ ಕುಳಿನಾಡು ಹಾಗೂ ಚೆನ್ನಾಪುರ ಸೀಮೆಯ ಗಂಗಾವಳಿ ನದಿ ತಟದ, ಆಸು ಪಾಸಿನ ಸಮಸ್ತ ನಾಗರಿಕರು ಗಂಗಾ ಆರತಿ ಹಾಗೂ ಗಂಗಾಪೂಜೆಯಲ್ಲಿ ಭಾಗವಹಿಸಿದ್ದರು.

ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ ರವರು ಗಂಗಾಪೂಜೆಯಲ್ಲಿ ಭಾಗವಹಿಸಿ ನಮ್ಮ ನದಿ- ನಮ್ಮ ನೀರನ್ನು ನಾವು ರಕ್ಷಿಸಿಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.


ವೇದಮೂರ್ತಿ ಗಣಪತಿ ಭಟ್ಟ ಆರಬೈಲ್ ರವರು ನದೀ ಪೂಜೆ ನೆರವೇರಿಸಿಕೊಟ್ಟು ನಮ್ಮ ನದಿ, ನಮ್ಮ ನೀರು ನಮ್ಮದಾಗಿಯೆ ಉಳಿಯಲಿ, ಗಂಗಾವಳಿ- ಬೇಡ್ತಿ ನದಿಗೆ, ನದಿ ಹರಿವಿಗೆ ಯಾವುದೇ ಕಂಟಕ ಬಾರದೇ ಇರಲಿ ಎಂದು ಗಂಗಾ ಮಾತೆಯಲ್ಲಿ ಪ್ರಾರ್ಥಿಸಿಕೊಂಡರು.

ನೆರೆದಿದ್ದ ನೂರಾರು ಮಾತೆಯರು ಭಗವದ್ಗೀತೆ ಪಠಣ ಮಾಡಿದರು.

ಶಾಸಕ ಹೆಬ್ಬಾರ ರವರು ಪತ್ನಿ ವನಜಾಕ್ಷಿ ಸಮೇತ ಗಂಗಾ ಆರತಿ ನೆರವೇರಿಸಿದರು. ನೆರೆದಿದ್ದ ನೂರಾರು ನಾಗರಿಕರು ಗಂಗಾವಳಿ ತಟದಲ್ಲಿ ನಿಂತು ಗಂಗಾ ಮಾತೆಗೆ ಆರತಿ ಬೆಳಗಿ ಪುನೀತರಾದರು.

ಗಂಗಾ ಆರತಿಯ ಸಂದರ್ಭದಲ್ಲಿ ಮಾತೆಯರೆಲ್ಲ ಸೇರಿ ಭಗವದ್ಗೀತಾ ಆರತಿ ಪಠಿಸುತ್ತ ಆರತಿ ಮಾಡಿದರು.

ಶಾಸಕ ಹೆಬ್ಬಾರರು ದಂಪತಿ ಸಮೇತರಾಗಿ ಗಂಗಾವಳಿ ನದಿಗೆ ಬಾಗಿನ ಅರ್ಪಿಸಿದರು. ನಾಗರಿಕರು ಗಂಗಾವಳಿ ನದಿಗೆ ಪುಷ್ಪಾರ್ಚನೆ, ಕ್ಷೀರಾಭಿಷೇಕ, ಆರತಿ ನಡೆಸಿದ ದೃಶ್ಯ, ದೀಪಗಳನ್ನು ಬೆಳಗಿಸಿ ನದಿಯಲ್ಲಿ ಬಿಟ್ಟ ಪರಿ ಮನ ಮೋಹಕವಾಗಿತ್ತು. ಸ್ಥಳೀಯ ಪ್ರಮುಖರಾದ ನಾಗಪತಿ ಹೆಗಡೆ ಕಾಗೇರಿ, ಶ್ರೀಕಾಂತ ಶೆಟ್ಟಿ, ಆರ್.ಸಿ.ಹೆಗಡೆ, ಮಾಚಣ್ಣ ಗುಳ್ಳಾಪುರ ನಾರಾಯಣ ಭಟ್ಟ ಬಟ್ಲಗುಂಡಿ, ಗಿರೀಶ ಭಟ್ಟ ಕೋನಾಳ, ಸದಾನಂದ ಭಟ್ಟ ಹಲವಳ್ಳಿ, ವಿ.ಎನ್.ಭಟ್ಟ ಹೆಗ್ಗಾರ್, ನಾರಾಯಣ ಜಾಯಿಕಾಯಿಮನೆ, ಸುಧಾಕರ ಗುಡ್ಡೆ, ಆನಂದ್ ನಾಯ್ಕ, ಸತೀಶ್ ನಾಯ್ಕ, ದತ್ತಾತ್ರಯ ಹೆಗಡೆ, ಕಣ್ಣಿಪಾಲ್ ರಾಜೇಶ್ ಹೆಗಡೆ, ಕೈಗಡಿ ರಾಘವೇಂದ್ರ ಶೆಟ್ಟಿ, ಪ್ರಶಾಂತ ಗುಡ್ಡೆ ಹೆಗ್ಗಾರ್, ಶಿವರಾಮ ಗುಡ್ಡೆ, ಜಿ.ಆರ್.ಭಟ್ಟ ಗುಳ್ಳಾಪುರ, ಪುಟ್ಟು ಕನಕನಹಳ್ಳಿ, ಪ್ರಶಾಂತ ಗುಡ್ಡೆ, ಶಿವರಾಮ ಗುಡ್ಡೆಮನೆ, ಶಿವರಾಮ ಗಾಂವ್ಕಾರ್ ಕನಕನಹಳ್ಳಿ, ಉಪಸ್ಥಿತರಿದ್ದರು. ಆರಬೈಲ್, ಗುಳ್ಳಾಪುರ, ಕೊಡ್ಲಗದ್ದೆ, ಹೆಗ್ಗಾರ, ಹಳವಳ್ಳಿ, ಶೇವಕಾರ, ಕೈಗಡಿ, ಕಲ್ಲೇಶ್ವರ ಭಾಗದ ಎರಡನೂರರಷ್ಟು ಜನ ಭಾಗವಹಿಸಿದ್ದರು.



ಉಷ್ಣ ಅಲೆ ಬಗ್ಗೆ ಎಚ್ಚರ ವಹಿಸಿ: ಜಿಲ್ಲಾಧಿಕಾರಿ

ಕಾರವಾರ: ಭಾರತೀಯ ಹವಾಮಾನ ಇಲಾಖೆ ನೀಡಿದ ಹವಾಮಾನ ಮುನ್ಸೂಚನೆಯ ಪ್ರಕಾರ ಫೆ.17 ಮತ್ತು 18ರಂದು ಗರಿಷ್ಠ ಉಷ್ಣಾಂಶವು ಸುಮಾರು 34 ಡಿಗ್ರಿ ಸೆಲ್ಸಿಯಸ್ ರಿಂದ 38.9 ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗುವ ಸಾಧ್ಯತೆ ಇದೆ.



ಇದರ ಪರಿಣಾಮವಾಗಿ ಸಾರ್ವಜನಿಕರು ಪ್ರಸ್ತುತ ಸಾಮಾನ್ಯ ಉಷ್ಣತೆಗಿಂತ ಸುಮಾರು 3ರಿಂದ 4 ಡಿಗ್ರಿ ಸೆಲ್ಸಿಯಸ್ ಹೆಚ್ಚುವರಿ ಉಷ್ಣತೆಯನ್ನು ಅನುಭವಿಸುವ ಸಾಧ್ಯತೆಯಿದೆ. ಈ ರೀತಿಯ ಉಷ್ಣಾಂಶದ ಏರಿಕೆ ದೇಹದ ಉಷ್ಣ ನಿಯಂತ್ರಣ ವ್ಯವಸ್ಥೆಗೆ ಒತ್ತಡ ಉಂಟುಮಾಡಿ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಹೆಚ್ಚಿದ ಬಿಸಿಲಿನ ಪರಿಣಾಮವಾಗಿ ದೇಹದಲ್ಲಿ ನೀರಿನ ಕೊರತೆ (Dehydration), ತಲೆ ಸುತ್ತುವುದು, ದೌರ್ಬಲ್ಯ, ಅತಿಯಾದ ದಣಿವು, ತಲೆನೋವು, ಚರ್ಮದ ಒಣತನ ಹಾಗೂ ಉಷ್ಣಾಘಾತ (Heat Stroke) ಸೇರಿದಂತೆ ಉಷ್ಣತೆಯ ಸಂಬಂಧಿತ ಆರೋಗ್ಯ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಇದೆ.ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಆರೋಗ್ಯ ಮತ್ತು ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಉಕ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಉಷ್ಣಾಂಶದ ಪರಿಣಾಮಗಳನ್ನು ತಗ್ಗಿಸುವ ಉದ್ದೇಶದಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮ ಪಾಲಿಸುವಂತೆ ಸಾರ್ವಜನಿಕರ ಗಮನಕ್ಕೆ ತಂದಿದೆ. ಹೆಚ್ಚಿನ ಉಷ್ಣಾಂಶದಿಂದ ಉಂಟಾಗುವ ಆರೋಗ್ಯ ಅಪಾಯಗಳನ್ನು ತಪ್ಪಿಸಲು ಹಾಗೂ ಸುರಕ್ಷಿತವಾಗಿರಲು ಸಂಬಂಧಿತ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸಾರ್ವಜನಿಕರು ಸಹಕರಿಸಬೇಕಾಗಿ ತಿಳಿಸಿಸಲಾಗಿದೆ.ದಿನಪೂರ್ತಿ ಸಾಕಷ್ಟು ನೀರು ಕುಡಿಯಿರಿ. ದಾಹವಾಗದಿದ್ದರೂ ನೀರನ್ನು ನಿಯಮಿತವಾಗಿ ಸೇವಿಸಿ.ಒಆರ್ ಎಸ್, ನಿಂಬೆ ನೀರು, ಮಜ್ಜಿಗೆ, ತೆಂಗಿನ ನೀರು ಮುಂತಾದ ದ್ರವ ಹೆಚ್ಚಾಗಿ ಸೇವಿಸಿ.

ಹಗುರವಾದ, ತೆಳುವಾದ ಬಣ್ಣದ ಹಾಗೂ ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸಿ.

ತಲೆ ಮತ್ತು ಮುಖವನ್ನು ಟೋಪಿ, ಛತ್ರಿ, ಗಮುಚಾ ಅಥವಾ ರುಮಾಲಿನಿಂದ ಮುಚ್ಚಿಕೊಳ್ಳಿ.ಸಾಧ್ಯವಾದಷ್ಟು ತೀವ್ರ ಬಿಸಿಲಿನ ಸಮಯದಲ್ಲಿ (ಮಧ್ಯಾಹ್ನ 12ರಿಂದ ಸಂಜೆ 4 ಗಂಟೆಯವರೆಗೆ) ಹೊರಗೆ ಹೋಗುವುದನ್ನು ತಪ್ಪಿಸಿ.ಹೊರಗೆ ಕೆಲಸ ಮಾಡುವಾಗ ಮಧ್ಯಂತರವಾಗಿ ನೆರಳಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳಿ, ಮಕ್ಕಳು, ವೃದ್ಧರು, ಗರ್ಭಿಣಿಯರು ಹಾಗೂ ಅಸ್ವಸ್ಥರಿಗೆ ವಿಶೇಷ ಕಾಳಜಿ ವಹಿಸಿ. ತಲೆಸುತ್ತು, ಅತಿಯಾದ ದೌರ್ಬಲ್ಯ, ವಾಂತಿ, ಜ್ವರ ಅಥವಾ ಅಸ್ವಸ್ಥತೆಯ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ. ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಸಾರ್ವಜನಿಕರ ಸಹಕಾರವನ್ನು ಕೋರುತ್ತದೆ ಮತ್ತು ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಸಹಾಯವಾಣಿ ಸಂಖ್ಯೆ 1077 ಅಥವಾ ವಾಟ್ಸಾಪ್ 9483511015 ಗೆ ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಮದೇವಿ ಜಾತ್ರೆ: ಪೌರಕಾರ್ಮಿಕರ ಶ್ರಮ ಅನನ್ಯ

▸ ಪ್ರಭಾವತಿ ಗೋವಿ

ಯಲ್ಲಾಪುರ: 9ದಿನಗಳ ಕಾಲ ಜರುಗುವ ಗ್ರಾಮದೇವಿ ಜಾತ್ರೆಯ ಸಂಭ್ರಮವನ್ನು ಎಲ್ಲರೂ ಕಣ್ತುಂಬಿಕೊಳ್ಳಲು ಸಾಧ್ಯವಾಗಲು ಸ್ವಚ್ಛತೆ ಕಾಪಾಡುವ ಪೌರಕಾರ್ಮಿಕರ ಶ್ರಮವೂ ಅನನ್ಯವಾದದ್ದು. ಜಾತ್ರೆಗೆ ರಾಜ್ಯದ ವಿವಿಧೆಡೆಯಿಂದ ಜನಸಾಗರವೇ ಹರಿದುಬರುತ್ತಿದೆ. ಜಾತ್ರೆ ಆರಂಭದದಿನದಿಂದಲೂ ನಸುಗತ್ತಲಿನಲ್ಲಿಯೇ ಸುಮಾರು 3 ಗಂಟೆಯಿಂದಲೇ ಪಪಂ ಪೌರಕಾರ್ಮಿಕರು ಜಾತ್ರಾ ಮಂಟಪ, ಪಟ್ಟಣದಲ್ಲೆಲ್ಲಾ ಸ್ವಚ್ಛತಾಕಾರ್ಯ ಕೈಗೊಂಡು ಪ್ರಶಂಸೆಗೆ ಪಾತ್ರವಾಗಿದೆ. ಭಕ್ತರು ನಸುಕಿನ 5 ಗಂಟೆಯಿಂದಲೆ ಸರತಿ ಸಾಲಿನಲ್ಲಿ ದೇವರ ದರ್ಶನಕ್ಕೆ ಬರುತ್ತಿದ್ದರೂ ಅಷ್ಟರೊಳಗೆ ಪೌರಕಾರ್ಮಿಕರು ರಸ್ತೆಯಲ್ಲಿ ಬಿದ್ದ ರಾಶಿ ರಾಶಿ ಕಸ ಹೆಕ್ಕಿ ಊರನ್ನು ಸ್ವಚ್ಛವಾಗಿಗೂಡಿಸಿ ಕಸವನ್ನು ಒಟ್ಟುಗೂಡಿಸಿ ಕಸದಗಾಡಿಗೆ ಪೇರಿಸುವ ಕಾರ್ಯ ಮಾಡುವ ಮೂಲಕ ಜಾತ್ರೆಯ ಸೊಬಗನ್ನು ಹೆಚ್ಚಿಸಿದ್ದಾರೆ.



ನಂತರ ಟ್ಯಾಂಕರ ನಿಂದ ರಸ್ತೆಗೆ ನೀರನ್ನು ಹಾಕಿ ದೂಳೆಳದಂತೆ ಮಾಡುತ್ತಿದ್ದರು. ತಡರಾತ್ರಿ 2ಗಂಟೆಯವರೆಗೂ ಜನಸಂದಣಿಯಿರುತ್ತಿತ್ತು ಆದರ ನಂತರ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಿ ರಸ್ತೆಯನ್ನು ಹೊಳೆಯುವಂತೆ ಮಾಡಿದ ಪೌರ ಕಾರ್ಮಿಕರ ಶ್ರಮಕ್ಕೆ ಸಾಟಿಯಿಲ್ಲ.

ವಿಡಿಐಟಿಯಲ್ಲಿ ಅರಿವು ಕಾರ್ಯಕ್ರಮ ಯಶಸ್ವಿ

ಹಳಿಯಾಳ: ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಎಂಎಸ್‌ಎಂಇ ನಿರ್ದೇಶನಾಲಯ, ಕೆಸಿಟಿಯು, ಟೆಕ್ಸಾಕ್ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ, ಕಾರವಾರ ಇವರ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಒಂದು ದಿನದ ಇನ್ಕ್ಯುಬೇಶನ್ ಅರಿವು ಕಾರ್ಯಕ್ರಮವು ಜರುಗಿತು.

ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನಿವೃತ್ತ ಜಿಲ್ಲಾ ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕರಾದ ಆರ್.ಕೆ.ಬಾಲಚಂದ್ರ, ಉದ್ಯಮ ಕ್ಷೇತ್ರ ಬಯಸುವ ಕೌಶಲ್ಯಗಳ ಕುರಿತಾಗಿ ವಿವರಿಸಿದರು.

ಉದ್ಯಮ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಏಕಾಗ್ರತೆ ಹಾಗೂ ಪೂರ್ವತಯಾರಿ ಅತ್ಯಗತ್ಯ ಎಂದರು.

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ (ಎಂಎಸ್‌ಎಂಇ) ಹುಬ್ಬಳ್ಳಿ ವಿಭಾಗದ ಉಪ ನಿರ್ದೇಶಕರಾದ ಕಾರ್ತಿಕ ಅವರು ಎಂಎಸ್‌ಎಂಇ ಕೈಗಾರಿಕೆಗಳನ್ನು ಪ್ರಾರಂಭಿಸಲು ನೀಡುವ ಧನ ಸಹಾಯ ಕುರಿತಾಗಿ ಸವಿಸ್ತಾರ ಮಾಹಿತಿ ನೀಡಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಾ. ಡಾ.ವಿ.ಎ ಕುಲಕರ್ಣಿ ಇಂತಹ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಉದ್ಯಮ ಕ್ಷೇತ್ರದ ಕಡೆಗೆ ಸೆಳೆದು, ಉದ್ಯಮಿಯಾಗಲು ಸಹಕರಿಸುತ್ತದೆ. ಸ್ವಉದ್ಯೋಗವು ನಿರುದ್ಯೋಗ ಸಮಸ್ಯೆಗೆ ಪರಿಹಾರ ಎಂದು ತಿಳಿಸಿದರು. ಇನ್ಕ್ಯುಬೇಶನ್‌ಗಾಗಿ ಬೇಕಾಗಿರುವ ಸೌಲಭ್ಯ ಒದಗಿಸಲು ಮಹಾವಿದ್ಯಾಲಯ ಸಿದ್ಧವಾಗಿದೆ ಎಂದು ಹೇಳಿದರು.ಅಧ್ಯಕ್ಷತೆ ವಹಿಸಿದ್ದ ಡಿಐಸಿ ಜಿಲ್ಲಾ ಜಂಟಿ ನಿರ್ದೇಶಕರಾದ ನಾಗರಾಜ್ ನಾಯಕ್, ಸರ್ಕಾರದ ವಿವಿಧ ಉಪಕ್ರಮಗಳ ವಿವರ ನೀಡಿದರು.ಕೌಶಲ್ಯ ಅಭಿವೃದ್ಧಿ ವಿಭಾಗದ ನಿವೃತ್ತ ಜಂಟಿ ನಿರ್ದೇಶಕರಾದ ಅರವಿಂದ ಬಾಳೇರಿಯವರು ಉಪಸ್ಥಿತರಿದ್ದರು. ಉಡುಪಿಯ ಸಿಡಾಕ್‌ನ ಶ್ರುತಿ ಕಾರ್ಯಕ್ರಮ ನಿರೂಪಿಸಿದರು. ಪ್ರೊ.ಗುರುನಾಥ ಎಂ ಹಾಗೂ ಪ್ರೊ.ನವೀನ್ ಹಿರೇಮಠ್ ಕಾರ್ಯಕ್ರಮ ಸಂಯೋಜಿಸಿದ್ದರು. 150ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಮುರುಡೇಶ್ವರ ಸಮಗ್ರ ಅಭಿವೃದ್ಧಿಗೆ ಯೋಜನೆ: ಸಚಿವ ವೈದ್ಯ

ಕಾರವಾರ: ಮುರುಡೇಶ್ವರದ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುತ್ತಿದ್ದು, ಪ್ರವಾಸಿಗರ ಅನುಕೂಲಕ್ಕಾಗಿ ವ್ಯವಸ್ಥಿತ ರೀತಿಯಲ್ಲಿ ಪಾರ್ಕಿಂಗ್, ಡ್ರೈನೇಜ್ ಮಾಡಲಾಗುವುದು ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಾಂಕಾಳ.ಎಸ್.ವೈದ್ಯ ತಿಳಿಸಿದರು.

ಅವರು ಭಾನುವಾರ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಮುರುಡೇಶ್ವರದಲ್ಲಿ ಆಯೋಜಿಸಿದ್ದ ಮಹಾಶಿವರಾತ್ರಿ ಜಾಗರಣೆ ಉತ್ಸವ ಉದ್ಘಾಟಿಸಿ ಮಾತನಾಡಿದರು.

ಮುರುಡೇಶ್ವರದಲ್ಲಿ ಈ ವರ್ಷ ಭಸ್ಮಾರ್ಚನೆ, ಗೋಮಾತೆಪೂಜೆ,ಸಮುದ್ರ ಆರತಿ,ಲಕ್ಷಬಿಲ್ವಾರ್ಚನೆ ಮತ್ತು ಶಿವರಾತ್ರಿ ಜಾಗರಣೆ ಕಾರ್ಯಕ್ರಮ ಆಯೋಜಿಸಿದ್ದು, ಎಲ್ಲಾ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯ ಭಕ್ತಾದಿಗಳು ಭಾಗವಹಿಸಿದ್ದಾರೆ, ಜಿಲ್ಲೆಯಲ್ಲಿ ಶಿಕ್ಷಣದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು.

ಜಿಲ್ಲಾಧಿಕಾರಿ ಕೆ. ಲಕ್ಷ್ಮಿಪ್ರಿಯಾ ಮಾತನಾಡಿ, ಪ್ರತಿ ವರ್ಷ ಜಿಲ್ಲೆಯ 5 ಸ್ಥಳದಲ್ಲಿ ಶಿವರಾತ್ರಿ ಆಚರಣೆ ಮಾಡುತ್ತಿದ್ದೇವೆ, ಈ ಎಲ್ಲಾ ಕಡೆಗಳಲ್ಲಿ ಜನ ಸಂದಣಿ ನಿಯಂತ್ರಣ, ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಭಕ್ತರಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯದ ವ್ಯವಸ್ಥೆ ಮಾಡಿದೆ. ಬಂದೋಬಸ್ತು ಕೂಡಾ ಉತ್ತಮವಾಗಿದ್ದು, ಉತ್ತಮ ರೀತಿಯಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ, ಮಾವಳ್ಳಿ 1 ಮತ್ತು 2 ಗ್ರಾಪಂಗಳನ್ನು ಮುರುಡೇಶ್ವರ ಪಟ್ಟಣ ಪಂಚಾಯತ್‌ಯಾಗಿ ಮೇಲ್ದರ್ಜೆಗೇರಿಸಿದ ಸಚಿವರನ್ನು ಸನ್ಮಾನಿಸಲಾಯಿತು.

ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಸತೀಶ್ ನಾಯ್ಕ, ಜಿಪಂ ಸಿಇಒ ಡಾ. ದಿಲೀಷ್ ಶಶಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಉಪಅರಣ್ಯಸಂರಕ್ಷಣಾಧಿಕಾರಿ ಯೋಗೇಶ್, ಉಪ ವಿಭಾಗಾಧಿಕಾರಿ ಪ್ರವೀಣ್ ಕರಾಂಡೆ, ತಹಶೀಲ್ದಾರ್ ನಾಗೇಂದ್ರ ಕೊಳಶೆಟ್ಟಿ, ಡಿವೈಎಸ್ಪಿ ಗಿರೀಶ್, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ರಾಜು ನಾಯ್ಕ, ಮುರುಡೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಜಯರಾಮ ಅಡಿಗ, ದೇವಸ್ಥಾನದ ವ್ಯವಸ್ಥಾಪಕ ಮಂಜುನಾಥ ಶೆಟ್ಟಿ, ಮುರುಡೇಶ್ವರ ಗ್ರಾಮೀಣ ಪ್ರತಿಷ್ಠಾನದ ಅಧ್ಯಕ್ಷ ಎಸ್.ಎಸ್.ಕಾಮತ್, ಡಾ.ಪುಷ್ಪಲತಾ ವೈದ್ಯ, ಮಾವಳ್ಳಿ-1 ಗ್ರಾಪಂ ಮಾಜಿ ಅಧ್ಯಕ್ಷೆ ನಯನಾ ನಾಯ್ಕ, ಮಾವಳ್ಳಿ-2 ಗ್ರಾಪಂ ಮಾಜಿ ಅಧ್ಯಕ್ಷೆ ನಾಗರತ್ನ ಪಡಿಯರ ಸ್ಥಳೀಯ ಮುಖಂಡ ಆರ್.ವಿ ಕಾಮತ ಮತ್ತಿತರರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮಗಳು, ಭಜನಾ ಕಾರ್ಯಕ್ರಮ, ಹರಿಕಥೆ, ಖ್ಯಾತ ಗಾಯಕ ಹೇಮಂತ ಅವರ ತಂಡದಿಂದ ಕಾರ್ಯಕ್ರಮ, ಬಿಗ್ ಬಾಸ್ ಖ್ಯಾತಿಯ ರಕ್ಷಿತಾ ಶೆಟ್ಟಿ ಅವರಿಂದ ಮನರಂಜನಾ ಕಾರ್ಯಕ್ರಮ, ನಟಿ ರಾಗಿಣಿ ದ್ವಿವೇದಿ ಅವರಿಂದ ಕಾರ್ಯಕ್ರಮ, ಖ್ಯಾತ ಜೋಗಿ ಸುನೀತಾ ಇವರಿಂದ ಸಂಗೀತಾ ಕಾರ್ಯಕ್ರಮ, ಖ್ಯಾತ ಗಾಯಕಿ ಮಾನಸಾ ಹೊಳ್ಳ ಇವರಿಂದ ಕಾರ್ಯಕ್ರಮ, ಶಿವಧ್ಯಾನ ಕಾರ್ಯಕ್ರಮ ಹಾಗೂ ಸ್ಥಳೀಯ ಪ್ರತಿಭೆಗಳಾದ ಧನಲಕ್ಷ್ಮೀ ಮೊಗೇರ ಅವರಿಂದ ಭರತನಾಟ್ಯ, ಮಂಕಿಯ ಶಿವಮ್ಮ ದುರ್ಗಮ್ಮ ಭಜನಾ ತಂಡ ಮತ್ತು ಅಳ್ವೆಕೋಡಿಯ ದುರ್ಗಾ ಪರಮೇಶ್ವರಿ ಭಜನಾ ತಂಡದಿಂದ ಭಜನಾ ಕುಣಿತ, ಗಣೇಶ ಆಚಾರ್ಯ ಅವರಿಂದ ಗಾಯನ ಕಾರ್ಯಕ್ರಮ, ಆದರ್ಶ ದಂಪತಿ ಕಾರ್ಯಕ್ರಮ ಮತ್ತು ವಿವಿಧ ಕ್ರೀಡಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.



> **ಜಿಲ್ಲೆಯ ಮುರುಡೇಶ್ವರ, ಗೋಕರ್ಣ, ಗುಣವಂತೇಶ್ವರ, ಧಾರೇಶ್ವರ ಮತ್ತು ಶೇಜೇಶ್ವರದಲ್ಲಿನ ಶಿವನ ದೇವಾಲಯಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ.**
> ■ ಮಾಂಕಾಳ.ಎಸ್.ವೈದ್ಯ,ಸಚಿವ

ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣ: ಆರ್.ವಿ.ಡಿ

ಹಳಿಯಾಳ: ಬಹುಗ್ರಾಮ ಕುಡಿಯುವ ನೀರು ಯೋಜನೆಯ ಕಾಮಗಾರಿ ಪ್ರಸ್ತುತ ಪ್ರಗತಿಯಲ್ಲಿದ್ದು, ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಸದರಿ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಮೇಲ್ಮಟ್ಟದ ಜಲಾಗಾರ (OHT) ನಿರ್ಮಿಸಲಾಗಿದೆ. ಈ ಟ್ಯಾಂಕ್‌ನಿಂದ ಸಂಬಂಧಿತ ಎಲ್ಲಾ ಗ್ರಾಮಗಳಿಗೆ ಸಮರ್ಪಕ ಪ್ರಮಾಣದಲ್ಲಿ ಕುಡಿಯುವ ನೀರು ಪೂರೈಸುವ ವ್ಯವಸ್ಥೆ ಕಲ್ಪಿಸಲಾಗಿದೆ.

ಸದರಿ ಟ್ಯಾಂಕ್‌ನಿಂದ ಗ್ರಾಮಕ್ಕೆ ಮತ್ತು ಅಲ್ಲಿಂದ ಪ್ರತಿ ಮನೆಗೆ ನೀರು ಪೂರೈಸುವ ಜವಾಬ್ದಾರಿ ಜಲಜೀವನ ಮಿಷನ್ ಯೋಜನೆಯಡಿಯಲ್ಲಿ ಆಯಾ ಗ್ರಾಪಂತನಿಂದ ನಿರ್ವಹಿಸಲಾಗುತ್ತಿದೆ ಎಂದು ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು.



ಹಳಿಯಾಳ ಪಟ್ಟಣದ ತಮ್ಮ ಸ್ವಗೃಹ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಹಿರಿಯ ಶಾಸಕರು ಮಾತನಾಡಿದರು.

ಜಲಜೀವನ ಮಿಶನ್ ಯೋಜನೆಯಡಿ ಈಗಾಗಲೇ ಪ್ರತೀ ಮನೆಮನೆಗೆ ನಳ (ಟ್ಯಾಪ್) ಅಳವಡಿಸಿ, ಬೋರವೆಲ್ ಮೂಲಕ ನೀರು ಸರಬುರಾಜು ಮಾಡಲಾಗುತ್ತಿದೆ. ಈಗ ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿಯಲ್ಲಿ ಹಾಲಿ ಬೋರವೆಲ್ ಸಂಪರ್ಕವನ್ನು ಬದಲಾಯಿಸಿ, OHT ಟ್ಯಾಂಕ್‌ಗೆ ಸಂಪರ್ಕ ಕಲ್ಪಿಸಲಾಗುತ್ತಿದೆ. ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ ಹಂತ ಹಂತವಾಗಿ ಪ್ರತಿ ಗ್ರಾಮಗಳಿಗೆ ನೀರು ಪೂರೈಸುವ ವ್ಯವಸ್ಥೆ ಕೈಗೊಳ್ಳಲಾಗುತ್ತಿದೆ ಎಂದರು. ಈ ವೇಳೆ ಹಾಜರಿದ್ದ ಸಣ್ಣ ನೀರಾವರಿ ಇಲಾಖೆಯ ಎಇಇ ವಿರೇಶ ಬಿಜಾಪುರ ಹಾಗೂ ಎಇ ತಳವಾರ ರವರ ಮೂಲಕ ಒಟ್ಟೂ 56 ಕಾಮಗಾರಿಗಳಿಗಾಗಿ 36.50 ಕೋಟಿ ರೂ.ಗಳ ವೆಚ್ಚದಲ್ಲಿ 2547.90 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರಕುತ್ತಿರುವ ಕುರಿತು ವಿವರವಾಗಿ ಮಾಹಿತಿ ನೀಡಲಾಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಪಾಟೀಲ, ಯುವ ಮುಖಂಡ ರವಿ ತೋರಣಗಟ್ಟಿ, ವಿಆರ್‌ಡಿಎಮ್ ಟ್ರಸ್ಟ್ ಆಡಳಿತಾಧಿಕಾರಿ ಪ್ರಕಾಶ ಪ್ರಭು ಉಪಸ್ಥಿತರಿದ್ದರು.

ಕಿರುಸುದ್ದಿ

90 ಸಾವಿರ ಗಡಿ ತಲುಪಿದ ಡಬ್ಬಿ ತಳಿ

◆ **ಬ್ಯಾಡಗಿ:** ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸೋಮವಾರ ಡಬ್ಬಿ ಒಣ ಮೆಣಸಿನಕಾಯಿ ಬೆಲೆ ಪ್ರತಿ ಕ್ವಿಂಟಲ್‌ಗೆ 90 ಸಾವಿರ ಗಡಿ ತಲುಪಿದ್ದು ಇದೇ ಮೊದಲನೇ ಬಾರಿ. ಕಳೆದ ಗುರುವಾರ 87 ಸಾವಿರ ಇದ್ದು ಮೆಣಸಿನಕಾಯಿ ಬೆಲೆ ದಿಢೀರ್ 90 ಸಾವಿರ ಬೆಲೆ ತಲುಪಿದ್ದು ರೈತನ ಮೊಗದಲ್ಲಿ ಮಂದಹಾಸ ಮೂಡಿದೆ.



ಸೋಮವಾರ 1.47.893 ಅತಿ ಹೆಚ್ಚು ಮೆಣಸಿನಕಾಯಿ ಚೀಲಗಳ ಆವಕ ಆಗಿದ್ದು, ಬ್ಯಾಡಗಿ ಕಡ್ಡಿ ಮೆಣಸಿನಕಾಯಿ ಕಳೆದ ವಾರಕ್ಕೆ ಹೋಲಿಸಿದರೆ ದರದಲ್ಲಿ ಏರಿಕೆ, ಕಡಿಮೆ 4.859ರೂ. 100ಕೆಜಿ ಸರಾಸರಿ ದರ 100 ಕೆಜಿಗೆ 48.259 ರೂ. ಅತಿ ಹೆಚ್ಚು 100ಕೆಜಿಗೆ 69.999ರೂ. ಬ್ಯಾಡಗಿ ಡಬ್ಬಿ ಕಳೆದ ವಾರಕ್ಕೆ ಹೋಲಿಸಿದರೆ ಈ ವಾರ ಅತಿ ಹೆಚ್ಚು ದರ ಬಂದಿದೆ. ಕಡಿಮೆ ಪ್ರತಿ 100 ಕೆಜಿಗೆ 5.809ರೂ. ಸರಾಸರಿ ದರ ಪ್ರತಿ 100 ಕೆಜಿಗೆ 51.569ರೂ. ಹೆಚ್ಚು ದರ ಪ್ರತಿ 100 ಕೆಜಿಗೆ 89.999ರೂ.ಗುಂಟೂರು ಒಣಮೆಣಸಿಕಾಯಿ ಕಡಿಮೆ ಬಿಳಿಕಾಯಿ ದರ ಪ್ರತಿ 100 ಕೆಜಿಗೆ 1869 ರೂ. ಸರಾಸರಿ ದರ ಪ್ರತಿ 100 ಕೆಜಿಗೆ 14.809ರೂ. ಅತಿ ಹೆಚ್ಚು ದರ ಪ್ರತಿ 100 ಕೆಜಿಗೆ 18.909 ರೂ.ಗಳು.

ಅಧ್ಯಕ್ಷರಾಗಿ ಅಬ್ದುಲ್ ನೇಮಕ

◆ **ಶಿಗ್ಗಾವಿ:** ತಾಲೂಕಿನ ತಡಸ ಗ್ರಾಮದ ನ್ಯಾಯವಾದಿ ಅಬ್ದುಲ್ ಮಜೀದ ಕೊಲ್ಲಾಪೂರ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಅವರ ಅನುಮೋದನೆ ಮೇರೆಗೆ ಕೆಪಿಸಿಸಿ ಪದವೀಧರರ ವಿಭಾಗದ ಅಧ್ಯಕ್ಷ ಎ.ಎನ್. ನಟರಾಜ್‌ಗೌಡ ಅವರು ಕೆಪಿಸಿಸಿ ಪದವೀಧರರ ವಿಭಾಗದ ರಾಜ್ಯ ಕಾರ್ಯದರ್ಶಿಯನ್ನಾಗಿ ನೇಮಕಗೊಳಿಸಿ ಆದೇಶ ಹೊರಡಿಸಿದ್ದಾರೆ.



ಬೈಕ್ ಡಿಕ್ಕಿ : ಇಬ್ಬರಿಗೆ ಗಾಯ

◆ **ಹಾವೇರಿ:** ಎರಡು ಬೈಕ್‌ಗಳ ಮಧ್ಯೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದರಿಂದ ಬೈಕ್ ಸವಾರರಿಬ್ಬರು ಗಾಯಗೊಂಡಿರುವ ಘಟನೆ ತಾಲೂಕಿನ ಕಬ್ಬೂರ ಗ್ರಾಮದಲ್ಲಿ ನಡೆದಿದೆ. ತಾಲೂಕಿನ ನಜೀಕಲಕಮಾಪುರ (ಹೊಸೂರು) ಗ್ರಾಮದ ವಿರೇಶ ಮಲ್ಲಪ್ಪ ಚಪ್ಪರಮನಿ ಎಂಬುವವರ ವಿರುದ್ಧ ದೂರು ದಾಖಲಾಗಿದೆ. ಆರೋಪಿತ ತನ್ನ ಬೈಕ್‌ನಲ್ಲಿ ಕಬ್ಬೂರಿನಿಂದ ಹಾವೇರಿ ಕಡೆಗೆ ಅತಿ ವೇಗವಾಗಿ ಹೋಗುವಾಗ ಕಬ್ಬೂರ ಹೈಸ್ಕೂಲ್ ಹತ್ತಿರ ಎದುರಿಗೆ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದಾನೆ. ಇಬ್ಬರು ಬೈಕ್ ಸವಾರರಿಗೆ ಗಾಯಗಳಾಗಿವೆ ಎಂದು ವಿನಾಯಕ ಶೇಟ್ ಎಂಬುವವರು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

15ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳ್ಳತನ

◆ **ಹಾವೇರಿ:** ಮನೆಯಲ್ಲಿ ಯಾರೂ ಇಲ್ಲದಿರುವಾಗ ಅಡುಗೆ ಮನೆಯ ಮೇಲ್ಛಾವಣಿ ಹಂಚನ್ನು ತೆಗೆದು ಒಳ ನುಗ್ಗಿರುವ ಕಳ್ಳರು ಸುಮಾರು 15ಲಕ್ಷಕ್ಕೂ ಹೆಚ್ಚು ಬೆಲೆಬಾಳುವ ಚಿನ್ನಾಭರಣ ಹಾಗೂ ನಗದು ಹಣವನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ಹಾನಗಲ್ ತಾಲೂಕು ಹಿರೂರ ಗ್ರಾಮದಲ್ಲಿ ನಡೆದಿದೆ.

ಹಿರೂರ ಗ್ರಾಮದ ಮಹ್ಮದ್‌ಗೌಸ್ ಹಂಚಿನಮನಿ ಎಂಬುವವರಿಗೆ ಸೇರಿದ ಮನೆಯಲ್ಲಿ ಕಳ್ಳತನ ನಡೆದಿದೆ. 4.56ಲಕ್ಷ ರೂ.ಮೌಲ್ಯದ ಮಾಂಗಲ್ಯಸರ, 2.76 ಲಕ್ಷ ಮೌಲ್ಯದ ಬಂಗಾರದ ನಕ್ಲೇಸ್, 96 ಸಾವಿರ ಕಿಮ್ಮತ್ತಿನ ಚೈನ್ ಸರ, 1.80 ಲಕ್ಷ ಮೌಲ್ಯದ ಜುಮಕಿ, 1.80ಲಕ್ಷ ಕಿಮ್ಮತ್ತಿನ ಪದಕದ ಸರ, 2.50 ಲಕ್ಷ ಮೌಲ್ಯದ 9 ಉಂಗುರ, 35 ಸಾವಿರ ರೂ.ಮೌಲ್ಯದ ಬೆಳ್ಳಿಯ ಕಾಲುಚೈನು, 24 ಸಾವಿರ ಮೌಲ್ಯದ ಕಿವಿಯೋಲೆ, 30 ಸಾವಿರ ನಗದು ಹಣ ಸೇರಿದಂತೆ ಒಟ್ಟು 15,42,000 ರೂ.ಮೌಲ್ಯದ ಸ್ವತ್ತನ್ನು ಕಳ್ಳರು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದಾರೆ. ಹಾನಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಕಸ್ಮಿಕ ಬೆಂಕಿ: ಗೋವಿನ ಜೋಳ ರಾಶಿ ಭಸ್ಮ

◆ **ಕುಂದಗೋಳ:** ತಾಲೂಕಿನ ಗುಡಗೇರಿ ಪಶುಪತಿಹಾಳ ರಸ್ತೆಯಲ್ಲಿರುವ ಚಂದ್ರಶೇಖರ ಬಸವರಾಜ ಮಳಲಿ ಅವರ ಹೊಲದಲ್ಲಿ ಒಕ್ಕಲು ಮಾಡಲು ಸಂಗ್ರಹಿಸಿದ ಗೋವಿನ ಜೋಳಕ್ಕೆ ಆಕಸ್ಮಿಕ ಬೆಂಕಿ ತಗಲಿದ ಪರಿಣಾಮ ರಾಶಿ ಬೆಂಕಿಗೆ ಆಹುತಿಯಾದ ಘಟನೆ ಜರುಗಿದೆ. 5 ಎಕರೆಯಲ್ಲಿ ಬೆಳೆದ ಗೋವಿನ ಜೋಳ ಬೆಳೆಯನ್ನು ಒಕ್ಕಲು ಮಾಡಲು ಹೊಲದಲ್ಲಿ ಸಂಗ್ರಹಿಸಿದ್ದು, ಆಕಸ್ಮಿಕ ತಗುಲಿದ ಬೆಂಕಿಯನ್ನು ಅಗ್ನಿಶಾಮಕ ದಳದವರು ನಂದಿಸುವುದರೊಳಗೆ ರಾಶಿ ಬಹುತೇಕವಾಗಿ ಬೆಂಕಿಗೆ ಭಸ್ಮವಾಗಿದ್ದು ಸುಮಾರು ಮೂರು ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ರೈತ ಚಂದ್ರಶೇಖರ ಮಳಲಿ ಗುಡಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.



ಹುಬ್ಬಳ್ಳಿ: ಮಹಾಶಿವರಾತ್ರಿ ಅಂಗವಾಗಿ ಇಲ್ಲಿಯ ಸ್ಟೇಶನ್ ರಸ್ತೆ ಈಶ್ವರ ದೇವಸ್ಥಾನದಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಅವರು ಶಿವಲಿಂಗಕ್ಕೆ ಬೆಳಗ್ಗೆ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದರು.

ಬಸವೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ

ಮಹಾ ಶಿವರಾತ್ರಿ

◆ **ತಡಸ:** ಮಹಾಶಿವರಾತ್ರಿ ಹಬ್ಬದ ಅಂಗವಾಗಿ ತಡಸ ಗ್ರಾಮದ ಪುರಾತನ ಹಾಗೂ ಪ್ರಸಿದ್ಧ ಶ್ರೀ ಹೊಂಡದ ಕಟ್ಟಿ ಬಸವೇಶ್ವರ ದೇವಸ್ಥಾನದಲ್ಲಿ ಸೋಮವಾರ ವಿಶೇಷ ಪೂಜಾ ಕಾರ್ಯಕ್ರಮ ಜರುಗಿದವು. ದೇವಸ್ಥಾನದಲ್ಲಿ ಬೆಳಗ್ಗೆಯಿಂದಲೇ ಬಸವಣ್ಣನಿಗೆ ಹಾಗೂ ಶಿವಲಿಂಗಕ್ಕೆ ವಿವಿಧ ಫಲಾಮೃತಗಳಿಂದ ಅಭಿಷೇಕ, ರುದ್ರಾಭಿಷೇಕ ಮತ್ತು ಬಿಲ್ವಾರ್ಚನೆಯನ್ನು ನೆರವೇರಿಸಲಾಯಿತು. ಹಬ್ಬದ ಪ್ರಯುಕ್ತ ದೇವಸ್ಥಾನವನ್ನು ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಭಕ್ತಾದಿಗಳು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಗ್ರಾಮದ ಸುತ್ತಮುತ್ತಲ ನೂರಾರು ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಉಪವಾಸ ವ್ರತ ಕೈಗೊಂಡಿದ್ದ ಮಹಿಳೆಯರು ದೀಪೋತ್ಸವದಲ್ಲಿ ಪಾಲ್ಗೊಂಡು ಭಕ್ತಿ ಸಮರ್ಪಿಸಿದರು. ದೇವಸ್ಥಾನದ ಆವರಣದಲ್ಲಿ ಭಜನಾ ಮಂಡಳಿಗಳಿಂದ ಶಿವನಾಮ ಸ್ಮರಣೆ ಮತ್ತು ಭಜನಾ ಕಾರ್ಯಕ್ರಮ ನಡೆದವು. ಪ್ರಸಾದ ವಿನಿಯೋಗ: ಮಧ್ಯಾಹ್ನ ಭಕ್ತಾದಿಗಳಿಗೆ ಲಘು ಉಪಹಾರ ಹಾಗೂ ಹಣ್ಣು-ಹಂಪಲುಗಳ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಮತ್ತು ಗ್ರಾಮದ ಪ್ರಮುಖರು ಈ ಧಾರ್ಮಿಕ ಕಾರ್ಯಕ್ರಮದ ನೇತೃತ್ವ ವೈದಿಕ ನೇತೃತ್ವ ರುದ್ರಯ್ಯ ಸ್ವಾಮಿಗಳು ವಹಿಸಿದ್ದರು. ಸಂಜೆ ನಡೆದ ಮಹಾಮಂಗಳಾರತಿಯಲ್ಲಿ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು.



ಹುಬ್ಬಳ್ಳಿ: ನಗರದ ರೈಲ್ವೆ ಡೌನ್ ಚಾಳ ಕಾಲೋನಿಯಲ್ಲಿ ನೈಋತ್ಯ ರೈಲ್ವೆ ಬಂಜಾರ ನೌಕರರ ವತಿಯಿಂದ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಸಂತ ಸೇವಾಲಾಲ್ ಮಹಾರಾಜರ 287ನೇ ಜಯಂತ್ಯುತ್ಸವವು ಭಕ್ತಿ ಮತ್ತು ಸಡಗರದಿಂದ ನಡೆಯಿತು.

ಸಕ್ಕರೆ ಬಾಕಿ ಬಿಲ್ ಪಾವತಿಗೆ ರೈತರ ಆಗ್ರಹ

◆ **ಹಾವೇರಿ:** ಕಬ್ಬು ಕಾರ್ಖಾನೆಗೆ ನುರಿಸಿ ಸಕ್ಕರೆ ಉತ್ಪಾದಿಸಲೆಂದು ಕಬ್ಬನ್ನು ಸಾಗಿಸಿ ಮೂರು ತಿಂಗಳಾದರೂ ಅದರ ಮೊತ್ತ ಪಾವತಿಸದ ಹಿನ್ನೆಲೆಯಲ್ಲಿ ಶಿಗ್ಗಾಂವ ತಾಲೂಕಿನ ಕೋಣನಕೇರಿಯಲ್ಲಿರುವ ವಿಐಎನ್‌ಪಿ ಸಕ್ಕರೆ ಕಾರ್ಖಾನೆಗೆ ಕಬ್ಬು ಬೆಳೆಗಾರರು ತೆರಳಿ ಬಾಕಿ ಮೊತ್ತ ಪಾವತಿಸುವಂತೆ ಕೋರಿದರು.



ಈಗಾಗಲೇ ಕಬ್ಬು ಪೂರೈಸಿ ಮೂರು ತಿಂಗಳು ಗತಿಸಿದರೂ ರೈತರ ಹಣ ಪಾವತಿಸಿಲ್ಲ, ಈ ಕುರಿತು ಹಲವು ಬಾರಿ ಮನವಿ ಮಾಡಿಕೊಂಡಾಗಲೂ ಪಾವತಿಸುವುದಾಗಿ ಹೇಳಿ ದಿನ ದೂಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಭುವನೇಶ್ವರ ಶಿಡ್ಲಾಪುರ ಮಾತನಾಡಿ, ಕೋಣಕೇರಿ ವಿಐಎನ್‌ಬಿ ಸಕ್ಕರೆ ಕಾರ್ಖಾನೆಯ ಸುಮಾರು 1500 ರೈತರ ಹಾಗೂ ಸಂಗೂರ ಜಿಎಂ ಶುಗರ್‌ನವರ ಸುಮಾರು 3000ಕ್ಕೂ ಹೆಚ್ಚು ರೈತರ ಬಿಲ್ ಬಾಕಿ ಇದೆ. ರೈತರು ಸಾಲ ಸೂಲ ಮಾಡಿ ಬೆಳೆದ ಕಬ್ಬು ಸಾಗಿಸಿದ್ದಾರೆ.

ಈ ಕುರಿತು ಸಕ್ಕರೆ ಕಾರ್ಖಾನೆಯ ಆಡಳಿತ ಕಚೇರಿಯಲ್ಲಿ ಸಭೆ ನಡೆಸಿದಾಗ ಕಾರ್ಖಾನೆ ಸಿಬ್ಬಂದಿ ಸಿಡಿಓ (ಕೇನ್ ಡೆವೆಲಪ್‌ಮೆಂಟ್ ಆಫೀಸರ್) ಲಕ್ಷ್ಮಣ ಎಮ್ಮಿಯವರ, ಎಚ್.ಆರ್ .ವಿಭಾಗದ ಮಂಜುನಾಥ ಶೀಪ್ರವೇ ಬಾಕಿ ಹಣ ಪಾವತಿಸುವುದಾಗಿ ತಿಳಿಸಿದರು.

ಆದಾಗ್ಯೂ ವಿಐಎನ್‌ಪಿ ಸಕ್ಕರೆ ಕಾರ್ಖಾನೆಯ ಎಂಡಿ ವಿವೇಕ ಹೆಬ್ಬಾರ ದೂರವಾಣಿ ಮೂಲಕ ಮಾತನಾಡಿದ್ದು, ಎಥೆನಾಲ್ ಹೊರಹೋಗಿಲ್ಲ, ಸಕ್ಕರೆ ದರ ಕಡಿಮೆ ಆಗಿದೆ ಈ ಕಾರಣದಿಂದ ಈ ಬಾರಿ ಹಣ ಪಾವತಿ ವ್ಯತ್ಯಯವಾಗಿದ್ದು, ಫೆಬ್ರವರಿ ತಿಂಗಳ ಅಂತ್ಯದೊಳಗಾಗಿ ಹಣ ಪಾವತಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು.

> ಕಾರ್ಖಾನೆಗಳಿಗೆ ಕಬ್ಬು ಸಾಗಿಸಿ 14 ದಿನಗಳ ಒಳಗಾಗಿ ಹಣ ಪಾವತಿಸಬೇಕೆಂ ಆದೇಶವಿದೆ. ತಪ್ಪಿದಲ್ಲಿ ಬಡ್ಡಿ ನೀಡಬೇಕೆಂಬ ನಿರ್ದೇಶನವಿದೆ. ಆದಾಗ್ಯೂ ಸಹ ಕಾರ್ಖಾನೆಯವರು ರೈತರ ಹಣ ಪಾವತಿಗೆ ಮುಂದಾಗುತ್ತಿಲ್ಲ.
> ■ ಭುವನೇಶ್ವರ ಶಿಡ್ಲಾಪುರ, ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ

ಸಕ್ಕರೆ ಕಾರ್ಖಾನೆಗಳು ಸರ್ಕಾರಕ್ಕೆ ತಪ್ಪು ಮಾಹಿತಿ ಕೊಟ್ಟಿವೆ, ರೈತರಿಗೆ ಹಣ ಹಾಕಿದ್ದೇವೆ ಎಂದು ಸುಳ್ಳುಲೆಕ್ಕಪತ್ರವನ್ನು ಕೊಟ್ಟಿದ್ದಾರೆ, ಈ ಬಗ್ಗೆ ಎಲ್ಲಾ ಹಂತದ ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಕ್ರಮಕ್ಕೆ ಮುಂದಾಗಿಲ್ಲ. ಇದೀಗ ವಿಐಎನ್‌ಪಿ ಕಾರ್ಖಾನೆಯವರು 15 ದಿನ ಕಾಲಾವಕಾಶ ಕೇಳಿದ್ದು, ಫೆಬ್ರವರಿ ಅಂತ್ಯದೊಳಗೆ ಹಂತ ಹಂತವಾಗಿ ಎಲ್ಲಾ ಬಿಲ್ಲುಗಳನ್ನು ಹಾಕುವ ಭರವಸೆ ನೀಡಿದ್ದಾರೆ.

ಸರಿಯಾದ ಸಮಯಕ್ಕೆ ಹಣ ಹಾಕದೆ ಇದ್ದಲ್ಲಿ ಕಾರ್ಖಾನೆಯಿಂದ ಹೊರ ಹೋಗುವ ಸಕ್ಕರೆ, ಮೊಲಾಸಿಸ್, ಎಥೆನಾಲ್, ಸಿಎನ್‌ಜಿ ಬಯೋಗ್ಯಾಸ್, ಪ್ರೆಸ್ ಮಡ್ಡ ಇವೆಲ್ಲವುಗಳನ್ನು ಹೊರಗೆ ಹೋಗದ ಹಾಗೆ ಗೇಟ್‌ಗೆ ಬೀಗ ಹಾಕಿ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿ ಸಮಯಾವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಈ ವೇಳೆ ರೈತ ಸಂಘ ಹಾಗೂ ಕಬ್ಬು ಬೆಳೆಗಾರ ಸಂಘದ ತಾಲೂಕ ಅಧ್ಯಕ್ಷರಾದ ಬಸಲಿಂಗಪ್ಪ ನರಗುಂದ, ಈರಣ್ಣ ಸಮಗೊಂಡರ, ಬಾಹುಬಲಿ ಸೊಗಲಿ, ಮುತ್ತಪ್ಪ ವೀರಾಪುರ, ಶಂಬಣ್ಣ ತರೂರ, ಕಿರಣ್ ಗಾಣಿಗೇರ ಸೇರಿದಂತೆ ಪೊಲೀಸ್ ಸಿಬ್ಬಂದಿ ಇದ್ದರು.

ಬ್ಯಾಡಗಿ: ಪಟ್ಟಣದ ಅಗ್ನಿಶಾಮಕ ಠಾಣೆಯ ಅಧಿಕಾರಿ ಎಸ್. ಎಂ.ಕುಮಾರಸ್ವಾಮಿ ಅವರು 31 ವರ್ಷ ನಾಲ್ಕು ತಿಂಗಳು 26 ದಿನಗಳ ನಿಸ್ವಾರ್ಥ ಸೇವೆಗೆ ಸೋಮವಾರ ಸನ್ಮಾನಿಸಿ ವಾಯು ನಿವೃತ್ತಿ ಬೀಳ್ಕೊಡುಗೆ ನೀಡಲಾಯಿತು. ಈ ವೇಳೆ ಠಾಣೆಯ ಸಿಬ್ಬಂದಿ, ಠಾಣೆ ಅಧಿಕಾರಿಗಳು, ಅಗ್ನಿಶಾಮಕ ದಳದ ಸಿಬ್ಬಂದಿ ಉಪಸ್ಥಿತರಿದ್ದರು.



ಸಂತ ಸೇವಾಲಾಲರ ವಿಚಾರಧಾರೆ ಅಳವಡಿಸಿಕೊಳ್ಳಿ: ಎಸ್.ಎಸ್.ಮಲ್ಲಾಡದ

◆ **ಬ್ಯಾಡಗಿ:** ತಾಲೂಕು ಆಡಳಿತ ವತಿಯಿಂದ ಭಾನುವಾರ ಸಂತ ಸೇವಾಲಾಲರ 287ನೇ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಆವರಣ ದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮ ದಲ್ಲಿ ಉಪತಹಶೀಲ್ದಾರ್ ಎಸ್.ಎಸ್.ಮಲ್ಲಾಡದ ಅವರು ಸೇವಾಲಾಲರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ದರು.

ಸಂತ ಸೇವಾಲಾಲ್ ಮಹಾರಾಜರ ವಿಚಾರಧಾರೆಗಳು ಯುವ ಪೀಳಿಗೆಗೆ ದಿಕ್ಕು ತೋರಿಸುವ ದೀಪವಾಗಿದೆ. ಅನ್ಯಾಯ, ಅಂಧ ಶ್ರದ್ದೆಗಳ ವಿರುದ್ಧ ಹೋರಾಡಿ ಸಮಾನತೆ, ಶಿಕ್ಷಣ ಹಾಗೂ ಆತ್ಮಗೌರವದ ಸಂದೇಶ ನೀಡಿದ ಸಂತ ಸೇವಾಲಾಲ್ ಮಹಾರಾಜರ ಆದರ್ಶಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿವೆ ಎಂದರು.

ಸಮಾಜದ ಮುಖಂಡ ನ್ಯಾಯವಾದಿ ಎಚ್‌ಆರ್ ಲಮಾಣಿ ಮಾತನಾಡಿ, ಸಂತ ಸೇವಾಲಾಲ್ ಮಹಾರಾಜರು ಮಹಾನ್ ಪವಾಡ ಪುರುಷರಾಗಿದ್ದರು. ಅವರು ಜನರ ಸಮಸ್ಯೆಗಳನ್ನು ಆಲಿಸುತ್ತಿದ್ದರು. ಮೂಢನಂಬಿಕೆ, ಕೆಟ್ಟ ಆಚರಣೆಗಳ ವಿರುದ್ಧ ಧ್ವನಿ ಎತ್ತಿದರು ಮತ್ತು ಜನರಿಗೆ ತಿಳಿವಳಿಕೆ ಮೂಡಿಸಿದರು. ಸಮಾಜದ ಐಕ್ಯತೆಮತ್ತುಸಹಬಾಳ್ವೆಗೆಪ್ರೇರೇಪಿಸಿದರು. ಬ್ರಿಟಿಷರು ತೆರಿಗೆ ಹೆಚ್ಚಳ ಮಾಡಿದಾಗ ವೀರ ಸೇನಾನಿಯಾಗಿ ಹೋರಾಡಿದರು. ಯಾವುದೇ ಮಹಾನ್ ಪುರುಷರು ಒಂದೇ ಜಾತಿಗೆ ಸೀಮಿತವಿಲ್ಲ. ಅವರು ಮಾನವ ಕುಲಕ್ಕೆ ಸುಧಾರಣೆಗೆ ಪ್ರಯತ್ನಿಸಿದವರು ನಮ್ಮ ಸಮಾಜದ ಯುವ ಪೀಳಿಗೆಯರು ಪ್ರತಿಯೊಂದು ಕ್ಷೇತ್ರದಲ್ಲಿ ಮುಂದೆ ಬರಬೇಕು ಎಂದು ತಿಳಿಸಿದರು.

ಅರ್ಜುನಪ್ಪ ಲಮಾಣಿ, ಎಂ ಎಂ ಕಬ್ಬೂರ್, ಲಕ್ಷ್ಮಣ್ ಚತ್ರದ, ಸಿರಸಪ್ಪ ಲಮಾಣಿ, ರಾಮಪ್ಪ ಲಮಾಣಿ ,ಸೋಮಪ್ಪ ಲಮಾಣಿ, ಮಂಜಪ್ಪ ಲಮಾಣಿ, ಕೃಷ್ಣಪ್ಪ ಲಮಾಣಿ, ಪುಟ್ಟಪ್ಪ ಲಮಾಣಿ, ಫಕೀರಪ್ಪ ಲಮಾಣಿ, ರಾಜು ನಾಯಕ್. ತಿರಕಪ್ಪ ನಾಯಕ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಶಿಕ್ಷಣದಿಂದ ಗ್ರಾಮಗಳ ಅಭಿವೃದ್ಧಿ ಸಾಧ್ಯ: ಶ್ಯಾಮಸುಂದರ ಅಡಿಗ

◆ **ರಾಣೇಬೆನ್ನೂರ:** ಎಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ಇರುತ್ತದೆಯೋ ಅಂತಹ ಗ್ರಾಮಗಳು ಸುಶಿಕ್ಷಿತವಾಗಿರುತ್ತವೆ. ಶಿಕ್ಷಣದಿಂದ ಮಾತ್ರ ಗ್ರಾಮಗಳು ಅಭಿವೃದ್ಧಿಯಾಗಲು ಸಾಧ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಶ್ಯಾಮಸುಂದರ ಅಡಿಗ ಹೇಳಿದರು.

ಸೋಮವಾರದಂದು ತಾಲೂಕಿನ ಹೆಡಿಯಾಲ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಉರ್ದು ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಹಾಗೂ ಹಳೆ ವಿದ್ಯಾರ್ಥಿಗಳ ಉದ್ಘಾಟನಾ ಸಮಾರಂಭ ಮತ್ತು ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ಮಾಡದಂತಹ ಕೆಲ ಕಾರ್ಯಗಳನ್ನು ಇತ್ತೀಚೆಗೆ ಹಳೆಯ ವಿದ್ಯಾರ್ಥಿಗಳು ಶಾಲೆಯ ಬಗ್ಗೆ ಅಭಿಮಾನ ಮೂಡಿಸಿಕೊಂಡು ಶಾಲೆಯ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಾಮಗ್ರಿಗಳನ್ನು ನೀಡುತ್ತಿರುವುದು ಹಾಗೂ ಗುರುಗಳನ್ನು ಗೌರವಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ಮುಖ್ಯ ಶಿಕ್ಷಕ ಸಿ.ಎಫ್.ಹುಲ್ಮನಿ ಮಾತನಾಡಿ, ಹಳೆ ವಿದ್ಯಾರ್ಥಿಗಳು ನಮ್ಮ ಶಾಲೆಗೆ ಕಂಪ್ಯೂಟರ್ ಮತ್ತು ಪ್ರಿಂಟರ್ ದೇಣಿಗೆಯಾಗಿ ಕೊಟ್ಟಿರುವುದು ನಿಜಕ್ಕೂ ಅವರಲ್ಲಿನ ಶಿಕ್ಷಣ ಆಸಕ್ತಿ ಸರ್ವರಿಗೂ ದಾರಿದೀಪವಾಗಬೇಕಿದೆ ಎಂದರು.

ಲಕ್ಷ್ಮಣ ಕುರುಬರ, ಮಹೇಶಪ್ಪ ಮಾಸಣಗಿ, ಹಸನಸಾಬ ಕೊಪ್ಪದ, ಎ.ಎ.ಹೊನ್ನಾಳಿ, ಎಸ್. ಎ.ಆರಾಧ್ಯಮಠ, ವೀರಪ್ಪ ಬೈರಣ್ಣನವರ, ಮುಬಾರಕ್ ಮಾಳಗಿಮನಿ, ಆಶಿಕ್ ಉಕ್ಕುಂದ, ಎಸ್ ಅಹ್ಮದ್ ಸೇರಿದಂತೆ ಗ್ರಾಮದ ಗಣ್ಯರು, ಶಿಕ್ಷಣ ಪ್ರೇಮಿಗಳು ಮತ್ತಿತರರು ಇದ್ದರು.

ನಂತರ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಅದ್ದೂರಿಯಾಗಿ ನಡೆದವು.



ಸಂಸ್ಕೃತಿ ಉಳಿವಿಗೆ ಶ್ರಮಿಸಿ: ರಾಜಶೇಖರಗೌಡ ಕಟ್ಟೇಗೌಡರ

◆ **ಹಾನಗಲ್ಲ:** ಹಳ್ಳಿಗಳು ಸಾಂಸ್ಕೃತಿಕ ಸಂಪತ್ತನ್ನು ಉಳಿಸಿಕೊಳ್ಳುವ ಶ್ರದ್ಧಾ ಕೇಂದ್ರಗಳಂತೆ ಬೆಳೆದು ಭವಿಷ್ಯದಲ್ಲಿ ಸಾಂಸ್ಕೃತಿಕ ಭಾರತವಾಗಿ ಹೆಮ್ಮೆಯಿಂದ ಹೇಳಿಕೊಳ್ಳುವಂತಾಗಲು ಹಿರಿಯರ ನಿರಂತರ ಮಾರ್ಗದರ್ಶನ ಅತ್ಯವಶ್ಯ ಎಂದು ಹೃದಯವಂತರು ಸಂಘಟನೆಯ ನಾಯಕ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ರಾಜಶೇಖರಗೌಡ ಕಟ್ಟೇಗೌಡರು ತಿಳಿಸಿದರು.



ಹಾನಗಲ್ಲ ತಾಲೂಕಿನ ಇನಾಂಯಲ್ಲಾಪುರ ಗ್ರಾಮದಲ್ಲಿ ಮಾಯಮ್ಮದೇವಿ ಹಾಗೂ ಮರಿಯಮ್ಮದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ ಗ್ರಾಮದ ಹಿರಿಯರಿಗೆ ಗೌರವಾರ್ಪಣೆ ಹಾಗೂ ಕ್ರಿಕೆಟ್ ಪಂದ್ಯಾವಳಿಯ ಬಹುಮಾನ ವಿತರಣಾ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿ, ನಮ್ಮ ದೇಶ ಧರ್ಮ ಸಂಸ್ಕೃತಿಯನ್ನು ಆಧರಿಸಿ ಇಡೀ ಜಗತ್ತಿಗೆ ಉತ್ತಮ ಸಂದೇಶಗಳನ್ನು ನೀಡಿದ ದೇಶ. ಈಗ ಭಾರತದ ಯೋಗ, ಧರ್ಮ, ಸಂಸ್ಕೃತಿಯ ವಿಚಾರಗಳನ್ನು ಇಡೀ ಜಗತ್ತೇ ಅನುಸರಿಸುವ ಅವಸರದಲ್ಲಿದೆ. ಇಂತಹ ಸಂದರ್ಭದಲ್ಲಿ ಭಾರತೀಯರಾದ ನಾವು ನಮ್ಮ ದೇಶದ ಸಂಸ್ಕೃತಿಯನ್ನು ಯಥಾವತ್ತಾಗಿ ಉಳಿಸಿಕೊಳ್ಳುವ ಸಂಕಲ್ಪ ಮಾಡಬೇಕಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಬಿಜೆಪಿ ಮುಖಂಡ ಉದಯ ವಿರುಪಣ್ಣನವರ ಮಾತನಾಡಿದರು. ಗ್ರಾಮದ ಹಿರಿಯರಾದ ರಾಮಪ್ಪ ಬಡೆಮ್ಮನವರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಗಣ್ಯರಾದ ಮನೋಜ ದೇಸಾಯಿ, ವಿದ್ಯಾಶಂಕರ ದೇಶಪಾಂಡೆ, ಷಣ್ಮುಖಪ್ಪ ಅಂದಲಗಿ, ಲೋಕೇಶ ಕೂಲಿ, ವಿಜೇಂದ್ರ ಮಡಿವಾಳರ, ರಾಘವೇಂದ್ರ ಗುಡ್ಡೇರ ಅತಿಥಿಗಳಾಗಿದ್ದರು.ಜಾತ್ರಾ ಮಹೋತ್ಸವದ ಅಂಗವಾಗಿ ಇಮ್ಮಡಿ ಪುಲಕೇಶಿ ಕ್ರಿಕೆಟ್ ಕ್ಲಬ್ ಆಯೋಜಿಸಿದ ಮುಕ್ತ ಕ್ರಿಕೆಟ್ ಪಂದ್ಯಾವಳಿಯಲ್ಲಿ ಹಾನಗಲ್ಲಿನ ಮುಸ್ಕಾನ ಕ್ರಿಕೆಟ್ ಕ್ಲಬ್ ಪ್ರಥಮ, ಅಕ್ಕಿಆಲೂರಿನ ಆದಿಶಕ್ತಿ ಕ್ರಿಕೆಟ್ ಕ್ಲಬ್ ದ್ವಿತೀಯ, ಅಕ್ಕಿಆಲೂರಿನ ವಾಯ್‌ಜಿಎಸ್ ಕ್ರಿಕೆಟ್ ಕ್ಲಬ್ ತೃತೀಯ ಸ್ಥಾನ, ಇನಾಂ ಯಲ್ಲಾಪುರದ ಸೆವನ್ ಸ್ಟಾರ್ ಕ್ರಿಕೆಟ್ ಕ್ಲಬ್ ಸಮಾಧಾನಕರ ಬಹುಮಾನಗಳಿಸಿದರು. ಪಂದ್ಯಾವಳಿಯ ಅತ್ಯುತ್ತಮ ಬ್ಯಾಟ್ಸಮನ್‌ಆಗಿ ಬ್ರಹ್ಮಾನಂದ ಪೂಜಾರ, ಅತ್ಯುತ್ತಮ ಬಾಲರ ಆಗಿ ಸರ್ಫಾಜ, ಆಲ್‌ರೌಂಡರ್ ಆಗಿ ನಿಖಿಲ ಆಯ್ಕೆಯಾಗಿ ಗಣ್ಯರಿಂದ ಬಹುಮಾನ ಸ್ವೀಕರಿಸಿದರು. ದೀಕ್ಷಾ ಹಣ್ಣಿ ಪ್ರಾರ್ಥಿಸಿದರು, ಶ್ರೀಧರ ಸೋಮಸಾಗರ ಸ್ವಾಗತಿಸಿದರು.ಷಣ್ಮುಖಪ್ಪ ಮುರಡಣ್ಣನವರ ನಿರೂಪಿಸಿದರು.

ಸಂಭ್ರಮದ ಈಶ್ವರ ದೇವರ ಜಾತ್ರಾ ಮಹೋತ್ಸವ

◆ **ಬ್ಯಾಡಗಿ:** ತಾಲೂಕಿನ ಕೊಲ್ಲಾಪುರ ಗ್ರಾಮದಲ್ಲಿ ಶ್ರೀ ಈಶ್ವರ ದೇವರ ಜಾತ್ರಾ ಮಹೋತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು. ಬೆಳಗ್ಗೆ 9 ಗಂಟೆಯಿಂದ ಭಜನೆ. ಡೊಳ್ಳು ಹಾಗೂ ವೀರಗಾಸೆಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗುಗ್ಗಳು ಸಾಗಿ ದೇವಸ್ಥಾನವನ್ನು ತಲುಪಿತು.

ಶ್ರೀ ಈಶ್ವರನ ದೊಡ್ಡ ರಥೋತ್ಸವ ಸಕಲ ವಾದ್ಯ-ವೈಭವಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ರಥೋತ್ಸವ ನಡೆಯಿತು. ನಂತರ ಮಧ್ಯಾಹ್ನ ಸಕಲ ಭಕ್ತರಿಗೆ ಅನ್ನ ಸಂತರ್ಪಣೆ ನಡೆಸಲಾಯಿತು.

ಜಾತ್ರಾ ಮಹೋತ್ಸವದಲ್ಲಿ ದೇವಸ್ಥಾನದ ಕಮಿಟಿಯವರು ಹಾಗೂ ಗುರು ಪುಟ್ಟರಾಜ ಕಮಿಟಿಯವರು ಹಾಗೂ ಗ್ರಾಮದ ಸಕಲ ಸದ್ಭಕ್ತರು ಸುತ್ತಮುತ್ತಲಿನ ಗ್ರಾಮದ ಭಕ್ತರು ಭಾಗವಹಿಸಿದ್ದರು.



ಯುವ ಜನಾಂಗದ ಮನಪರಿವರ್ತನೆ ಅಗತ್ಯ: ಶ್ರೀಗಳು

◆ **ಹಾವೇರಿ:** ಇತ್ತಿಚೆಗೆ ಯುವಕರು ದುಶ್ಚಟಗಳ ದಾಸರಾಗಿ ವ್ಯಸನಿಗಳಾಗುತ್ತಿರುವುದು ಅಪಾಯಕಾರಿ, ಸಾಮಾಜಿಕ ದುರಂತ. ಹಳಿ ತಪ್ಪುತ್ತಿರುವ ಯುವ ಜನಾಂಗಕ್ಕೆ ದುರಭ್ಯಾಸಗಳಿಂದ ದೂರವಿರಿಸಲು ಕಠಿಣ ನಿಯಮಗಳಿಗಿಂತ ಮನಃಪರಿವರ್ತನೆಯೇ ಮದ್ದು ಎಂದು ಪ್ರಭುಸ್ವಾಮಿ ಮಠದ ಗುರುಶಿದ್ಧ ಸ್ವಾಮೀಜಿ ಹೇಳಿದರು.



ತಾಲೂಕಿನ ಅಗಡಿ ಗ್ರಾಮದಲ್ಲಿ ಹಕ್ಕಲ ದುರ್ಗಾದೇವಿ ಜಾತ್ರಾ ಮಹೋತ್ಸವದಲ್ಲಿ ಧಾರ್ಮಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಗ್ರಾಮದ ಮೂರೂ ಮಠಗಳ ಧರ್ಮಗುರುಗಳು ಯುವಕರ ಮನಃಪರಿವರ್ತನೆಗಾಗಿ ಜನಜಾಗೃತಿ ಪಾದಯಾತ್ರೆ ಗ್ರಾಮದಲ್ಲಿ ಹಮ್ಮಿಕೊಳ್ಳಬೇಕಿದೆ. ನಾಡಿನ ಅಮೂಲ್ಯ ಯುವಶಕ್ತಿ ಸದ್ಬಳಕೆಯಾಗಬೇಕಿದೆ ಎಂದೂ ಸ್ವಾಮೀಜಿ ತಿಳಿಸಿದರು.

ಅಕ್ಕಿಮಠದ ಗುರುಲಿಂಗ ಸ್ವಾಮೀಜಿ ಮಾತನಾಡಿ, ವಿದ್ಯಾವಂತ ಯುವಕರು ನಗರಗಳಿಗೆ ವಲಸೆ ಹೋಗುವುದನ್ನು ತಡೆಯಬೇಕಿದೆ. ಕುಸ್ತಿ, ಮಲ್ಲಕಂಬ ಆಟೋಟಗಳಿಗೆ ಹೆಸರಾಗಿದ್ದ ಗ್ರಾಮವೀಗ ಪುಟಿದೇಳಬೇಕಿದೆ. ನಮ್ಮ ಮಠದಿಂದ ಮಲ್ಲಕಂಬ ವ್ಯವಸ್ಥೆ ಮಾಡಲು 25000ರೂ ನೀಡುವುದಾಗಿ ತಿಳಿಸಿ ಯುವಕರಿಗೆ ಮಾರ್ಗದರ್ಶನದ ಅವಶ್ಯಕತೆ ಇದೆ ಎಂದರು.

ಯುವ ಉದ್ದಿಮೆದಾರ ಪವನಕುಮಾರ ಬಹದ್ದೂರದೇಸಾಯಿ, ಸಾಹಿತಿ ಹನುಮಂತಗೌಡ ಗೊಲ್ಲರ ಮಾತನಾಡಿದರು. ಗ್ರಾಮದ ಹೊಳಲಮ್ಮ ಮಠಪತಿ, ಲೇಖಕ ಆಂಜನೇಯ ಈಳಿಗೇರ, ಸೇವಾರ್ಥಿಗಳು, ದಾನಿಗಳಾದ ಹೇಮಂತ ಬಸೇಗಣ್ಣಿ, ನಾಗರಾಜ ಬಸೇಗಣ್ಣಿ, ಚನ್ನವೀರಪ್ಪ ಬಸೇಗಣ್ಣಿ, ಬಸಪ್ಪ ಬಳಲಕೊಪ್ಪ, ಪ್ರವೀಣ ಹರಿಜನ, ಶಂಕ್ರಪ್ಪ ದೇಮಳ್ಳಿ, ಮಲ್ಲಿಕಾರ್ಜುನ ಮಣ್ಣೂರ, ಲವಣ ಬಹದ್ದೂರದೇಸಾಯಿ, ಪಂಡಿತಪ್ಪ ಮಣೇಗಾರ, ಶಿವಬಸಪ್ಪ, ನಾಗರತ್ನಾ ಮಣೇಗಾರ, ಗಿಡ್ಡಪ್ಪ ಕುಲಕರ್ಣಿ, ಈಶಪ್ಪ, ಬಸವರಾಜ, ದ್ಯಾಮಣ್ಣ ಮತ್ತಿತರ ಗಣ್ಯರನ್ನು ಸಮಿತಿಯವರು ಗೌರವಿಸಿದರು.

ರೇಣುಕಾದೇವಿ ದೇವಸ್ಥಾನದ ಅಧ್ಯಕ್ಷೆ ಎಲ್ಲಮ್ಮ ಪೂಜಾರ, ಪುಟ್ಟಯ್ಯ ಮಾಗೋಡ, ನಿಂಗಪ್ಪ ಹೊಂಬಳ, ನಿವೃತ್ತ ಶಿಕ್ಷಕ ಐ.ಡಿ.ನದಾಫ ವೇದಿಕೆಯಲ್ಲಿದ್ದರು.

ಸಮಿತಿಯ ಅಧ್ಯಕ್ಷ ಹನುಮಂತ ದಾಸರ ಅಧ್ಯಕ್ಷತೆ ವಹಿಸಿದ್ದರು. ಹುಚ್ಚಪ್ಪ ಮಲ್ಲೂರ ಸ್ವಾಗತಿಸಿದರು. ಗುಡ್ಡಪ್ಪ ಚಟ್ರಮ್ಮನವರ ನಿರೂಪಿಸಿದರು. ಬ್ರಹ್ಮಾನಂದ ಚಕ್ರವರ್ತಿ ವಂದಿಸಿದರು.

ಕಾಂಗ್ರೆಸ್ ವಿರುದ್ಧ ಇಲ್ಲ ಸಲ್ಲದ ಆರೋಪ ಸಹಿಸಲ್ಲ

◆ **ಹಾನಗಲ್ಲ:** ಬಿಜೆಪಿಯವರು ಹಾನಗಲ್ಲ ತಾಲೂಕಿನಲ್ಲಿನ ಅಭಿವೃದ್ಧಿ ಕಾರ್ಯಗಳನ್ನು ಸಹಿಸಲಾರದೆ ಕಾಂಗ್ರೆಸ್ ವಿರುದ್ಧ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿದ್ದು, ಹಕ್ಕು ಪತ್ರಕ್ಕಾಗಿ ಯಾವುದೇ ಫಲಾನುಭವಿಯಿಂದ ಹಣ ಪಡೆದಿಲ್ಲ, ಅದು ಬಿಜೆಪಿಯವರ ಸೃಷ್ಟಿ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ ಹಾಗೂ ಮಂಜುನಾಥ ಗೋರಣ್ಣನವರ ಜಂಟಿ ಹೇಳಿಕೆ ನೀಡಿದರು.

» ಹನುಮಂತಪ್ಪ ಮರಗಡಿ, ಮಂಜುನಾಥ ಗೋರಣ್ಣನವರ ಹೇಳಿಕೆ

ಸೋಮವಾರ ಹಾನಗಲ್ಲಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷ ಬಿಜೆಪಿಯವರು ದಿ.ಸಿ.ಎಂ.ಉದಾಸಿ ಹಾಗೂ ದಿ.ಮನೋಹರ ತಹಶೀಲ್ದಾರರ ಹೆಸರನ್ನು ಬಳಸಿಕೊಳ್ಳುತ್ತಿರುವುದು ಸರಿ ಅಲ್ಲ. 40 ವರ್ಷಗಳಲ್ಲಿ ಆಗದ ಸ್ಮಶಾನ ಸಮಸ್ಯೆ, ರಸ್ತೆ ಸಮಸ್ಯೆಗಳನ್ನು ಈಗಿರುವ ಕಾಂಗ್ರೆಸ್ ಶಾಸಕರು ಮಾಡಿಲ್ಲ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ. ತಾಲೂಕಿನಲ್ಲಿ ಹುಲ್ಲುಗಾವಲನ್ನು ಖಾಸಗಿಯವರಿಗೆ ನೀಡಿಲ್ಲ, ಅಂತಹ ಪ್ರಕರಣಗಳಿದ್ದರೆ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರಲಿ. ಮಾಧ್ಯಮಗಳಿಗೆ ಹೇಳಿಕೆ ಕೊಡುವ ಅಗತ್ಯವಿಲ್ಲ, ಇದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ ಎಂದರು.



ತಾಲೂಕಿನಲ್ಲಿ ಅಕ್ರಮ ಚಟುವಟಿಕೆ ನಡೆದಿದ್ದರೆ, ಕಚೇರಿಗಳಲ್ಲಿ ಏಜಂಟರ ಹಾವಳಿ ಇದ್ದರೆ ಅದನ್ನು ಸಂಬಂಧಿಸಿದ ಇಲಾಖೆಗೆ ದೂರು ನೀಡಲಿ. ಅದರ ಬದಲಾಗಿ ಮಾಧ್ಯಮ ಮೂಲಕ ಹೇಳಿಕೆ ಕೊಡುವ ಅಗತ್ಯವಿಲ್ಲ. ಬಿಜೆಪಿ ಸರ್ಕಾರದಲ್ಲಿ ಅನುಮೋದನೆಯಾದ ಯಳವಟ್ಟಿ ಗ್ರಾಮದಲ್ಲಿ ಅಸ್ತಿತ್ವಕ್ಕೆ ಬರಬೇಕಾದ ಮಾವು ಸಂಸ್ಕರಣ ಘಟಕ ಸಹಕಾರಿ ಸಹಭಾಗಿತ್ವದಲ್ಲಿ ನಡೆಯಬೇಕಾಗಿದೆ. ಇನ್ನೂ ಅದಕ್ಕೆ ಯಾರೂ ಮುಂದೆ ಬಂದಿಲ್ಲ. ಹಾನಗಲ್ಲ ಶಾಸಕರ ವಿಶೇಷ ಪ್ರಯತ್ನದಲ್ಲಿ ಪ್ರತಿ ಗ್ರಾಮಗಳಲ್ಲಿ ಕೋಟ್ಯಾಂತರ ರೂಗಳ ಕಾಮಗಾರಿ ನಡೆದಿವೆ. ಇವರ ಅವಧಿಯಲ್ಲಿ ಅಭಿವೃದ್ಧಿ ಕೆಲಸಗಳಾಗಿಲ್ಲ ಎಂಬುದು ಸತ್ಯಕ್ಕೆ ದೂರವಾದ ಸಂಗತಿ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ ಹಾಗೂ ಮಂಜುನಾಥ ಗೋರಣ್ಣನವರ ತಿಳಿಸಿದರು.

ಫೆ.17ಕ್ಕೆ ಜಿಲ್ಲೆಗೆ ಸಭಾಪತಿ ಬಸವರಾಜ ಹೊರಟ್ಟಿ

◆ **ಹಾವೇರಿ:** ಕರ್ನಾಟಕ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರು ಫೆ.17ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು, ಅಂದು ಬೆಳಿಗ್ಗೆ 10 ಗಂಟೆಗೆ ಹುಬ್ಬಳ್ಳಿಯಿಂದ ಹೊರಟು, ಬೆಳಗ್ಗೆ 11 ಗಂಟೆಗೆ ಹಾವೇರಿಗೆ ಆಗಮಿಸಿ, ನಗರದ ಜಿಲ್ಲಾ ಗುರುಭವನದಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಯ ಕುರಿತು ಜಿಲ್ಲೆಯ ಶಿಕ್ಷಕರೊಂದಿಗೆ ಸಭೆ ಹಾಗೂ ಸಂವಾದ ನಡೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಹುಬ್ಬಳ್ಳಿಗೆ ಪ್ರಯಾಣ ಬೆಳೆಸಲಿದ್ದಾರೆ.

ಕಿರುಸುದ್ದಿ

53 ನದಿಗಳ ನೀರಿನ ಅಭಿಷೇಕ ಪೂಜೆಯಿಂದ ಆಧ್ಯಾತ್ಮಿಕ ಸ್ಪಂದನೆ

ಬೆಳಗಾವಿ: ಜಿಲ್ಲೆಯಲ್ಲಿ ಕಳೆದ ಐದು ದಿನಗಳ ಮಹಾ ಶಿವರಾತ್ರಿಯ ಅಂಗವಾಗಿ ಎಲ್ಲ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಮಹಾಅಭಿಷೇಕ ಮಾಡಲಾಗುತ್ತಿದೆ. ಫೆ.11ರಿಂದ 15ರವರೆಗೆ ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ ಧಾರ್ಮಿಕ ಪ್ರವಾಸ ನಗರದೆಲ್ಲೆಡೆ ಆಧ್ಯಾತ್ಮಿಕ ಸ್ಪಂದನೆ ಮೂಡಿಸಿತು. ವೇದಘೋಷ, ಮಂಗಳವಾದ್ಯ, ಆರತಿ ಬೆಳಕು ಎಲ್ಲವೂ ಒಂದೇ ಸ್ವರದಲ್ಲಿ ಭಕ್ತಿ ಭಾವದ ಮಹೋತ್ಸವಕ್ಕೆ ಸಾಕ್ಷಿಯಾದವು.ಇಲ್ಲಿನ ರಾಣಿ ಚನ್ನಮ್ಮನಗರದ ಸತ್ಯಪ್ರಮೋದ ಸಭಾಗೃಹದಲ್ಲಿ ಭಕ್ತರು 53 ಶೇಷವಸ್ತ್ರಗಳನ್ನು ಸಮರ್ಪಿಸಿ ಅಪೂರ್ವ ಗೌರವ ಸಲ್ಲಿಸಿದರು. ಅದೇ ಕ್ಷಣದಲ್ಲಿ ದೇಶದ ಪವಿತ್ರ ತೀರ್ಥಕ್ಷೇತ್ರಗಳನ್ನು ಪ್ರತಿನಿಧಿಸುವ 53 ನದಿಗಳ ನೀರಿನಿಂದ ಅಭಿಷೇಕ ನೆರವೇರಿತು.ಆ ಕ್ಷಣಗಳಲ್ಲಿ ಸಭಾಂಗಣವೇ ಜಯ ಜಯ ಮಂತ್ರ ಘೋಷದಿಂದ ಮೆರಗುಗೊಂಡಿತ್ತು. ರಾಯರಮಠದಲ್ಲಿ ದೈವಿಕ ಸ್ಪಂದನೆ ಮಾಳಮಾರುತಿಯ ರಾಯರಮಠದಲ್ಲಿ ಶ್ರೀಗಳು ವಿಶೇಷ ಪೂಜೆ ಸಲ್ಲಿಸಿದರು. ಮಠದ ಅಧ್ಯಕ್ಷ ವಿ.ಎನ್.ಪಾಟೀಲರು ಕುಟುಂಬ ಸಮೇತ ಪೂಜೆಯಲ್ಲಿ ಭಾಗಿಯಾಗಿ ಆಶೀರ್ವಾದ ಪಡೆದರು. ಪೂಜಾ ವಿಧಾನದ ವೇಳೆ ವೇದ ಪಾರಾಯಣದ ಘೋಷ ಮಠದ ವಾತಾವರಣ ಇನ್ನಷ್ಟು ಪಾವನಗೊಳಿಸಿತು. ಬಿ.ಕೆ.ಮಾಡಲ್‌ನಲ್ಲಿ ಶ್ರೀಗಳ ಹೆಸರಿನಲ್ಲಿ ಆರಂಭವಾದ ಸತ್ಯಾತ್ಮತೀರ್ಥ ಶಿಕ್ಷಣ ಸಂಸ್ಥೆಯ ಪಿಯು ಕಾಲೇಜಿನ ನೂತನ ಪ್ರಯೋಗಾಲಯವನ್ನು ಶ್ರೀಗಳು ಉದ್ಘಾಟಿಸಿದರು.ಸಂಸ್ಥೆಯ ಅಧ್ಯಕ್ಷ ವಿಲಾಸ ಜೋಶಿ, ಕಾರ್ಯದರ್ಶಿ ಶ್ರೀಧರ ಹುಕ್ಕೇರಿ, ಪ್ರಜ್ವಲ ಕುಲಕರ್ಣಿ, ಪಂಡಿತ ವಿದ್ಯಾಧೀಶಾಚಾರ್ಯ ಗುತ್ತಲ, ಸಂಜೀವ ಮೋರಪ್ಪನವರ, ಪಾಲಿಕೆ ಉಪಮೇಯರ್ ವಾಣಿ ಜೋಶಿ, ರಾಜೇಂದ್ರ ಕುಲಕರ್ಣಿ ಅವಿನಾಶ ಪೋತದಾರ, ಶಿವಣಗಿ, ಅರವಿಂದ ಹುನಗುಂದ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಸಂಸ್ಕಾರವಿಲ್ಲದ ಶಿಕ್ಷಣ ಸಮಾಜಕ್ಕೆ ಅಪೂರ್ಣ: ಸಂಸ್ಕಾರವಿಲ್ಲದ ಶಿಕ್ಷಣ ಸಮಾಜಕ್ಕೆ ಅಪೂರ್ಣ. ಜ್ಞಾನ ಮತ್ತು ಧರ್ಮ ಜೊತೆಯಾದಾಗ ರಾಷ್ಟ್ರದ ಭವಿಷ್ಯ ಉಜ್ವಲವಾಗುತ್ತದೆ. ಎಂಬ ಶ್ರೀಗಳ ಸಂದೇಶ ವಿದ್ಯಾರ್ಥಿಗಳು ಪೋಷಕರಲ್ಲಿ ಹೊಸ ಪ್ರೇರಣೆ ಮೂಡಿಸಿತು. ಬೆಳಗಾವಿ ಎಸ್‌ಇಎಸ್ ಸೊಸೈಟಿಯ ನೂತನ ಆಡಳಿತ ಮಂಡಳಿ ಸದಸ್ಯರಿಗೆ ಶ್ರೀ ಸತ್ಯಾತ್ಮತೀರ್ಥರು ನೇಮಕಾತಿ ಪತ್ರಗಳನ್ನು ವಿತರಿಸಿದರು. ಸಂಸ್ಥೆ ಸೇವಾಭಾವದಿಂದ ಬೆಳೆಯಬೇಕು, ಅಧಿಕಾರ ಜವಾಬ್ದಾರಿಯೊಂದಿಗೆ ಸಾಗಬೇಕು ಎಂದು ಮಾರ್ಗದರ್ಶನ ನೀಡಿದರು.

ವಿವಿಧೆಡೆ ಮಹಾಪ್ರಸಾದ ವಿತರಿಸಿದ ಸಚಿವೆ ಹೆಬ್ಬಾಳ್ಕರ್



ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸೋಮವಾರ ವಿವಿಧೆಡೆ ಮಹಾಶಿವರಾತ್ರಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಭಕ್ತರಿಗೆ ಮಹಾಪ್ರಸಾದ ವಿತರಿಸಿದರು.

ಹಿಂಡಲಗಾ ಜಯನಗರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ಪಲ್ಲಕ್ಕಿ ಪೂಜೆಯಲ್ಲಿ ಪಾಲ್ಗೊಂಡು, ಮಹಾ ಪ್ರಸಾದ ಸೇವೆಗೆ ಸಚಿವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಭಕ್ತರಿಗೆ ಪ್ರಸಾದವನ್ನು ಉಣಬಡಿಸಿ, ಬಳಿಕ ಅವರೊಂದಿಗೆ ಕುಳಿತು ಪ್ರಸಾದ ಸ್ವೀಕರಿಸಿದರು. ನಂತರ ಸಹ್ಯಾದ್ರಿ ನಗರದ ಶಿವಲಿಂಗೇಶ್ವರ ಕಾಲೋನಿಯ ಶ್ರೀ ಆದಿ ಶಿವಲಿಂಗೇಶ್ವರ ದೇವಸ್ಥಾನದಲ್ಲಿ ಶಿವಾಲಯ ಹಮ್ಮಿಕೊಳ್ಳಲಾಗಿದ್ದ ಮಹಾಪ್ರಸಾದ ಸೇವೆಗೆ ಸಹ ಚಾಲನೆ ನೀಡಿ, ಭಕ್ತಾಧಿಗಳಿಗೆ ಪ್ರಸಾದ ಬಡಿಸಿದರು.

ಅತ್ಯಾಚಾರ ಪ್ರಕರಣ: ಆರೋಪಿಗೆ 30ವರ್ಷ ಸಜೆ

ಬೆಳಗಾವಿ: ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ ಯುವಕನಿಗೆ ನಗರದ ಪೋಕ್ಸೋ ನ್ಯಾಯಾಲಯ 30 ವರ್ಷಗಳ ಕಠಿಣ ಕಾರಾಗ್ರಹ ಶಿಕ್ಷೆ ಸೋಮವಾರ ಪ್ರಕಟಿಸಿದೆ.2024ರಲ್ಲಿ ನಗರದ ಮಾರುಕಟ್ಟೆ ಠಾಣೆಯಲ್ಲಿ ದಾಖಲಾಗಿದ್ದ ಪೋಕ್ಸೋ ಪ್ರಕರಣದಲ್ಲಿ ತ್ವರಿತ ತನಿಖೆ ನಡೆಸಿ ಪೊಲೀಸರು ದೋಷಾರೋಪ ಸಲ್ಲಿಸಲಾಗಿತ್ತು. ಕೃಷ್ಣಾ ಮಲ್ಲೇಶಿ ಗಾಡಿವಡ್ಡರ (20) ಎಂಬಾತ 14 ವರ್ಷದ ಬಾಲಕಿಯನ್ನು ಪುಸಲಾಯಿಸಿ ನೆರೆಯ ಗೋವಾಕ್ಕೆ ಕರೆದೊಯ್ದು ಕೊಠಡಿಯಲ್ಲಿ ಅತ್ಯಾಚಾರವೆಸಗಿದ್ದ. ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪಿಗೆ 30 ವರ್ಷ ಕಠಿಣ ಶಿಕ್ಷೆ ಜೊತೆಗೆ 1ಲಕ್ಷ ದಂಡ ನ್ಯಾಯಾಲಯ ವಿಧಿಸಿದೆ. ನೊಂದ ಬಾಲಕಿಗೆ ಸರ್ಕಾರದಿಂದ 4ಲಕ್ಷ ಪರಿಹಾರ ಧನ ಪರಿಹಾರ ಸಿಗಲಿದೆ. ಅಂದಿನ ಮಾರ್ಕೆಟ್ ಠಾಣೆ ಇನ್ಸಪೆಕ್ಟರ್ ಮಾಹಾಂತೇಶ ದಾಮನ್ನವರ ತನಿಖೆ ನಡೆಸಿ ದೋಷಾರೋಪ ಸಲ್ಲಿಸಿದ್ದರು.



ಬೆಳಗಾವಿ: ಇಲ್ಲಿನ ರಾಣಿ ಚನ್ನಮ್ಮನಗರದ ಸತ್ಯಪ್ರಮೋದ ಸಭಾಗೃಹದಲ್ಲಿ ಭಕ್ತರು 53 ಶೇಷವಸ್ತ್ರಗಳನ್ನು ಸಮರ್ಪಿಸಿ ಅಪೂರ್ವ ಗೌರವ ಸಲ್ಲಿಸಿದರು. ಜಿಲ್ಲೆಯಲ್ಲಿ ಕಳೆದ ಐದು ದಿನಗಳ ಮಹಾ ಶಿವರಾತ್ರಿಯ ಅಂಗವಾಗಿ ಎಲ್ಲ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಮಹಾಅಭಿಷೇಕ ಮಾಡಲಾಗುತ್ತಿದೆ. ಫೆ.11ರಿಂದ 15ರವರೆಗೆ ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ ಧಾರ್ಮಿಕ ಪ್ರವಾಸ ನಗರದೆಲ್ಲೆಡೆ ಆಧ್ಯಾತ್ಮಿಕ ಸ್ಪಂದನೆ ಮೂಡಿಸಿತು.

ರಾಯಬಾಗ ಕಾಂಗ್ರೆಸ್ ಘಟಕದಿಂದ ಬೃಹತ್ ಪಾದಯಾತ್ರೆ

ರಾಯಬಾಗ: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ-ಜಿ-ರಾಮ್-ಜಿ ಯೋಜನೆ ರದ್ದುಗೊಳಿಸಿ ಹಳೆಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮುಂದುವರೆಸುವಂತೆ ಆಗ್ರಹಿಸಿ ಸೋಮವಾರ ರಾಯಬಾಗ ಕಾಂಗ್ರೆಸ್ ಘಟಕದ ವತಿಯಿಂದ ಬೃಹತ್ ಪಾದಯಾತ್ರೆ ಮೂಲಕ ಜನಜಾಗೃತಿ ಹಮ್ಮಿಕೊಳ್ಳಲಾಯಿತು.

ತಾಲೂಕಿನ ನಸಲಾಪುರ ಗ್ರಾಮದಲ್ಲಿ ಕೆಪಿಸಿಸಿ ಪ್ರಧಾನಕಾರ್ಯದರ್ಶಿ ಮಹಾವೀರ ಮೊಹಿತೆ ಅವರ ನೇತೃತ್ವದಲ್ಲಿ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ನಂತರ ನೂರಾರು ಕಾರ್ಯಕರ್ತರ ಜೊತೆ ನಸಲಾಪುರ, ಬಾವನಸೌಂದತ್ತಿ, ದಿಗ್ಗೇವಾಡಿ, ಜಲಾಲಪುರ ಮಾರ್ಗವಾಗಿ ರಾಯಬಾಗ ಪಟ್ಟಣದ ತಾಪಂ ವರೆಗೆ ಪಾದಯಾತ್ರೆ ನಡೆಯಿತು.

ಕೇಂದ್ರ ಸರ್ಕಾರ ಏಕ ಪಕ್ಷೀಯವಾಗಿ ಜಾರಿಗೆ ತಂದಿರುವ ವಿಬಿ-ಜಿ-ರಾಮ್-ಜಿ ಯೋಜನೆಯನ್ನು ರದ್ದುಪಡಿಸಿ ಮೊದಲಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮುಂದುವರೆಸಬೇಕು ಎಂದು ಪಾದಯಾತ್ರೆ ಮೂಲಕ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು. ಈ ವೇಳೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರ ಆಪ್ತಸಹಾಯಕ ಶಿವನಗೌಡ ಪಾಟೀಲ, ಡಿ.ಎಸ್. ನಾಯಕ, ಸಿದ್ದಾರೂಢ ಬಂಡಗರ, ನಿರ್ಮಲ ಪಾಟೀಲ, ಡಾ. ಎನ್. ಎ. ಮಗದುಮ, ಅಣ್ಣಾಸಾಹೇಬ ಸಮಾಜೆ, ವೀರಪ್ಪ ನಿಂಗನೂರೆ, ಹಾಜಿ ಮುಲ್ಲಾ, ಅಪ್ಪಾಸಾಹೇಬ ಕುಲಗೋಡೆ, ದಿಲೀಪ ಜಮಾದಾರ, ಅರ್ಜುನ ನಾಯಕವಾಡಿ, ಬಹುಸಾಹೇಬ ಪಾಟೀಲ, ವಸಂತ ಕರಿಗಾರ, ಶಿವು ಮರಾಯಿ, ಶಂಕರಗೌಡ ಪಾಟೀಲ, ರಾಜು ಕೋಟಗಿ, ಪಾಂಡುರಂಗ ಮಾಣೆ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.



ರಾಯಬಾಗ: ರಾಯಬಾಗ: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ-ಜಿ-ರಾಮ್-ಜಿ ಯೋಜನೆ ರದ್ದುಗೊಳಿಸಿ ಹಳೆಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮುಂದುವರೆಸುವಂತೆ ಆಗ್ರಹಿಸಿ ಸೋಮವಾರ ರಾಯಬಾಗ ಕಾಂಗ್ರೆಸ್ ಘಟಕದ ವತಿಯಿಂದ ಬೃಹತ್ ಪಾದಯಾತ್ರೆ ಮೂಲಕ ಜನಜಾಗೃತಿ ಹಮ್ಮಿಕೊಳ್ಳಲಾಯಿತು.

23 ಕೋಟಿ ರೂ. ವೆಚ್ಚದ ಕಾಮಗಾರಿಗೆ ಸಚಿವ ಗುಂಡೂರಾವ್ ಶಂಕುಸ್ಥಾಪನೆ

50 ಹಾಸಿಗೆಗಳ ಕ್ರಿಟಿಕಲ್ ಕೇರ್ ಯೂನಿಟ್

ಬೈಲಹೊಂಗಲ: ರಾಜ್ಯದಲ್ಲೇ ಉತ್ತಮ ನಿರ್ವಹಣೆಯ ಆಸ್ಪತ್ರೆಗಳ ಪೈಕಿ ಬೈಲಹೊಂಗಲ ತಾಲೂಕು ಸಾರ್ವಜನಿಕ ಆಸ್ಪತ್ರೆ ಮುಂಚೂಣಿಯಲ್ಲಿದ್ದು, ಅದನ್ನು ಮತ್ತಷ್ಟು ಮೇಲ್ದರ್ಜೆಗೇರಿಸುವ ಉದ್ದೇಶದಿಂದ 50 ಹಾಸಿಗೆಗಳ ತೀವ್ರ ನಿಗಾ ಘಟಕ (ಕ್ರಿಟಿಕಲ್ ಕೇರ್ ಯೂನಿಟ್) ಮಂಜೂರು ಮಾಡಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಜಿಲ್ಲಾಡಳಿತ, ಜಿಪಂ ಹಾಗೂ ಆರೋಗ್ಯ ಇಲಾಖೆಯ ಸಂಯುಕ್ತಾಶ್ರಯದಲ್ಲಿ ತಾಲೂಕು ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಸೋಮವಾರ ನಡೆದ 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಯೂನಿಟ್ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಜೊತೆಗೆ ಆರೋಗ್ಯ ಸೇರಿದಂತೆ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗೆ ಒತ್ತು ನೀಡುತ್ತಿದೆ. ಬೆಳಗಾವಿ ಜಿಲ್ಲೆಗೆ ಆರೋಗ್ಯ ಇಲಾಖೆಯ ವಿವಿಧ ಕಾಮಗಾರಿಗಳಿಗೆ ಈಗಾಗಲೇ ಸುಮಾರು 300 ಕೋಟಿ ರೂ. ಅನುದಾನ ಒದಗಿಸಲಾಗಿದೆ. ತಾಲೂಕು ಮಟ್ಟದಲ್ಲೇ ಉತ್ತಮ ಚಿಕಿತ್ಸೆ ಸಿಗುವಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಬೈಲಹೊಂಗಲ ಆಸ್ಪತ್ರೆಯಲ್ಲಿ ತಿಂಗಳಿಗೆ ಸರಾಸರಿ 200 ಹೆರಿಗೆಗಳು ನಡೆಯುತ್ತಿವೆ. ಸಾರ್ವಜನಿಕರಿಂದ ಆಸ್ಪತ್ರೆಯ ಸೇವೆಗಳ ಕುರಿತು ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಹೊಸ ಕ್ರಿಟಿಕಲ್ ಕೇರ್ ಯೂನಿಟ್ ನಿರ್ಮಾಣದಿಂದ ತುರ್ತು ಹಾಗೂ ಗಂಭೀರ ರೋಗಿಗಳಿಗೆ ತಕ್ಷಣದ ಚಿಕಿತ್ಸೆ ಸೌಲಭ್ಯ ಲಭ್ಯವಾಗಲಿದೆ ಎಂದು ಹೇಳಿದರು.

ಪುನೀತ್ ರಾಜಕುಮಾರ ಹೃದಯ ಜ್ಯೋತಿ, ಟೆಲಿ ಐಸಿಯು ಹಾಗೂ ಗೃಹ ಆರೋಗ್ಯ ಯೋಜನೆಗಳು ಯಶಸ್ವಿಯಾಗಿ ಜಾರಿಯಲ್ಲಿವೆ. ಸ್ಥಳೀಯ ಶಾಸಕರ ಮನವಿಯಂತೆ ಆಸ್ಪತ್ರೆ ಭದ್ರತೆಗೆ 2 ಕೋಟಿ ರೂ. ವೆಚ್ಚದಲ್ಲಿ ಕಾಂಪೌಂಡ್ ನಿರ್ಮಾಣಕ್ಕೂ ಅನುದಾನ ಬಿಡುಗಡೆ ಮಾಡುವುದಾಗಿ ಘೋಷಿಸಿದರು.

ವಿರೋಧ ಪಕ್ಷಗಳ ಟೀಕೆಗಳ ನಡುವೆಯೂ ಸರ್ಕಾರ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡುತ್ತಿದೆ. ಕರ್ನಾಟಕ ಪರ್ ಕ್ಯಾಪಿಟಾ ಜಿಡಿಪಿಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಧರ್ಮ, ಜಾತಿ, ಭಾಷೆ ಬೇಧವಿಲ್ಲದೆ ಸಮಾನ ಆಡಳಿತ ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ವಿನಯ ನವಲಗಟ್ಟಿ, ವಾಯವ್ಯ ಸಾರಿಗೆ ನಿಗಮ ಉಪಾಧ್ಯಕ್ಷ ಸುನೀಲ ಹನುಮನ್ನವರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಪುಷ್ಪ, ಉಪವಿಭಾಗಾಧಿಕಾರಿ ಪ್ರವೀಣ ಜೈನ್, ತಹಶೀಲ್ದಾರ್ ಎಚ್.ಎನ್. ಶಿರಹಟ್ಟಿ ಸೇರಿದಂತೆ ಗಣ್ಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.



> 23 ಕೋಟಿ ರೂ. ವೆಚ್ಚದಲ್ಲಿ ಕ್ರಿಟಿಕಲ್ ಕೇರ್ ಯೂನಿಟ್ ಕಟ್ಟಡ ನಿರ್ಮಾಣವಾಗಲಿದೆ. ಕಳೆದ ಏಳು ವರ್ಷಗಳಲ್ಲಿ ಆಸ್ಪತ್ರೆಯ ಒಪಿಡಿ ನೋಂದಣಿ 110ರಿಂದ 800ಕ್ಕೂ ಅಧಿಕಕ್ಕೆ ಏರಿಕೆಯಾಗಿದೆ. ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಉಪಕರಣಗಳ ಕೊರತೆ ಇಲ್ಲ. ಆಂಬ್ಯುಲೆನ್ಸ್ ಸೇವೆಯ ಇಂಧನ ವೆಚ್ಚ ಮಿತಿ ಹೆಚ್ಚಿಸುವುದು ಹಾಗೂ ಕಟ್ಟಡ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.
> ■ ಮಹಾಂತೇಶ ಕೌಜಲಗಿ. ಶಾಸಕ

ಪರಿಶ್ರಮಕ್ಕೆ ಮತ್ತೊಂದು ಹೆಸರೇ ಬಂಜಾರ್ ಸಮಾಜ: ಹೆಬ್ಬಾಳ್ಕರ್

ಬೆಳಗಾವಿ: ಉರಿಬಿಸಿಲನ್ನು ಲೆಕ್ಕಿಸದೇ ಕೆಲಸ ಮಾಡುವ ಬಂಜಾರ್ ಸಮುದಾಯದವರು ಸ್ವಾಭಿಮಾನಿಗಳು. ನಿಷ್ಠೆ, ಪ್ರಾಮಾಣಿಕತೆ, ಪರಿಶ್ರಮಕ್ಕೆ ಮತ್ತೊಂದು ಹೆಸರೇ ಬಂಜಾರ್ ಸಮಾಜ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಬೆಳಗಾವಿಯ ಕಲ್ಮೇಶ್ವರ ನಗರದ ಲಮಾಣಿ ತಾಂಡಾದಲ್ಲಿ ಆಯೋಜಿಸಲಾಗಿದ್ದ ಸಂತ ಶ್ರೀ ಸೇವಾಲಾಲ್ ಮಹಾರಾಜರ ಜಯಂತಿ ಮಹೋತ್ಸವದಲ್ಲಿ ಭಾಗವಹಿಸಿ, ಮಾತನಾಡಿದ ಅವರು, ಬಂಜಾರ್ ಸಮಾಜದ ಯುವಕರು ಮುಂದಿನ ದಿನಗಳಲ್ಲಿ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ಮುಂದೆ ಬರಬೇಕು ಎಂಬುದೇ ನನ್ನ ಅಭಿಲಾಷೆ. ಇಂತ ಅದ್ದೂರಿ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಸಮಾಜದ ಮುಂದೆ ಬಂದಿದೆ ಎಂದು ನೀವೆಲ್ಲಾ ತೋರಿಸಿಕೊಟ್ಟಿದ್ದೀರಿ ಎಂದರು.

ಒಂದು ಸಮಾಜವನ್ನು ಸುಧಾರಣೆ ಮಾಡಬೇಕೆಂದರೆ, ಆ ಸಮಾಜದಿಂದ ಒಬ್ಬ ಯುಗ ಪುರುಷರ ಹುಟ್ಟಿ ಬರಬೇಕು. ದೀನದಲಿತರ ಉದ್ಧಾರಕ್ಕಾಗಿ ಅಂಬೇಡ್ಕರ್ ಬಂದರೆ, ವೀರಶೈವ ಲಿಂಗಾಯತಸಮಾಜದ ಸುಧಾರಣೆಗಾಗಿ ಬಸವಣ್ಣ ತನ್ನದೇ ಕೊಡುಗೆ ನೀಡಿದ್ದಾರೆ. 1739ರಲ್ಲಿ ಸಂತ ಸೇವಾಲಾಲ್ ಅವರು ಬಂಜಾರ ಸಮುದಾಯ ಸುಧಾರಣೆಗಾಗಿ ಹೋರಾಡಿದ್ದರು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸ್ಮರಿಸಿದರು.

ಬಂಜಾರ ಸಮುದಾಯದ ದೇವಸ್ಥಾನ ಕಟ್ಟಲು 30 ಲಕ್ಷ ರೂಪಾಯಿ ದೇಣಿಗೆ ನೀಡದ್ದೇನೆ. ಸಮಾಜಕ್ಕೆ ಶಾಂತಿ ಮತ್ತು ಸನ್ಮಾರ್ಗವನ್ನು ತೋರಿದ ಮಹಾತ್ಮರ ವಿಚಾರಧಾರೆಗಳು ನಮಗೆಲ್ಲರಿಗೂ ಸದಾ ಸ್ಫೂರ್ತಿದಾಯಕ ಎಂದು ಹೇಳಿದರು.

ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ಸುರೇಶ ರಾಠೋಡ, ಆನಂದ ಪಮ್ಮಾರ, ಪ್ರಕಾಶ ರಾಠೋಡ, ಹಣಮಂತ ರಾಠೋಡ, ರಾಜು ರಾಠೋಡ, ರಾಮು ಪೂಜೇರಿ, ಬಸು ಪಮ್ಮಾರ, ಲಚ್ಚಪ್ಪ ಪಮ್ಮಾರ, ಅಪ್ಪು ಪಾಟೀಲ, ಮಂಜುನಾಥ ರಾಠೋಡ, ಮಾರುತಿ ಚೌಹಾಣ್ ಇದ್ದರು.



ಬೇಸಿಗೆಯಲಿ ಕುಡಿಯುವ ನೀರು ಪೂರೈಕೆ ಸಮರ್ಥವಾಗಿ ನಿಭಾಯಿಸಿ

ಚಿಕ್ಕೋಡಿ: ಪಟ್ಟಣದ ಮಿನಿವಿಧಾನಸೌಧದ ತಾಲೂಕು ಕಚೇರಿಯ ಸಭಾಭವನದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯ ಕುರಿತು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ 2 ಪ್ರಕಾಶ ಹುಕ್ಕೇರಿ ನೇತೃತ್ವದಲ್ಲಿ ಸಂಬಂಧಿಸಿದ ಅಧಿಕಾರಿಗಳ ಸೋಮವಾರ ಸಭೆ ಕರೆಯಲಾಗಿತ್ತು.

ತಾಲೂಕಿನ ಯಕ್ಸಂಬಾ, ಸದಲಗಾ, ಚಿಕ್ಕೋಡಿ ಪಟ್ಟಣ ಸೇರಿದಂತೆ ಪ್ರತಿಯೊಂದು ಗ್ರಾಮಗಳಲ್ಲಿ ಕುಡಿಯುವ ನೀರು ಪೂರೈಕೆಗೆ ಯಾವೆಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಸಭೆ ಉದ್ದೇಶಿಸಿ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ 2 ಪ್ರಕಾಶ ಹುಕ್ಕೇರಿ ಮಾತನಾಡಿ, ಬೇಸಿಗೆ ಸಂದರ್ಭದಲ್ಲಿ ಎದುರಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಮುಖ್ಯವಾಗಿ ತಾಲ್ಲೂಕಿನ ಮಾಂಜರಿ ಗ್ರಾಮದ ಬಳಿ ಕೃಷ್ಣಾ ನದಿಯಿಂದ ಚಿಕ್ಕೋಡಿ ಪಟ್ಟಣಕ್ಕೆ ನೀರು ಪೂರೈಕೆ ಮಾಡುವ ಪೈಪಲೈನ್ ಕಾಮಗಾರಿಯನ್ನು ಮಾ. 31ರೊಳಗೆ ಪೂರ್ಣಗೊಳಿಸಬೇಕು. ಕಾಮಗಾರಿ ವಿಳಂಬವಾದರೆ ಸಹಿಸುವುದಿಲ್ಲ ಎಂದು ಹೇಳಿದರು.

ಕುಡಿಯುವ ನೀರು ಪೂರೈಕೆಗೆ ಅಗತ್ಯವಾದ ವಿದ್ಯುತ್ ಪೂರೈಕೆಯಲ್ಲಿ ತಾಂತ್ರಿಕ ವ್ಯತ್ಯಯ ಉಂಟಾಗದಂತೆ ಹೆಸ್ಕಾಂ ಅಧಿಕಾರಿಗಳು ನೋಡಿಕೊಳ್ಳಬೇಕು. ಜನರಿಗೆ ಯಾವುದೇ ತೊಂದರೆಯಾಗದಂತೆ ಟ್ಯಾಂಕರ್ ವ್ಯವಸ್ಥೆ ಸೇರಿದಂತೆ ಇನ್ನಿತರೆ ಪರ್ಯಾಯ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳಬೇಕು. ಎಲ್ಲಾ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಚಿಕ್ಕೋಡಿ ಉಪವಿಭಾಗಾಧಿಕಾರಿ ಸುಭಾಷ ಸಂಪಗಾವಿ, ತಹಶೀಲ್ದಾರ್ ರಾಜೇಶ ಬುರ್ಲಿ, ಚಿಕ್ಕೋಡಿ ಪುರಸಭೆ ಮುಖ್ಯಾಧಿಕಾರಿ ಜಗದೀಶ ಈಟಿ, ಯಕ್ಸಂಬಾ ಪಪಂ ಮುಖ್ಯಾಧಿಕಾರಿ ಮಹಾಂತೇಶ ನಿಡವಣಿ, ಎಸ್.ಆರ್. ರೂಗಿ, ಹೆಸ್ಕಾಂ ಅಧಿಕಾರಿ ಸುಖಸಾರೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.



ಪಾರಂಪರಿಕ ವೈದ್ಯ ಹಿರೇಮಠಗೆ ಸನ್ಮಾನ

ಮುಗಳಖೋಡ: ಪಟ್ಟಣದ ಪಾರಂಪರಿಕ ವೈದ್ಯ ಅಲ್ಲಯ್ಯಾ ಸಿ. ಹಿರೇಮಠ ಅವರ ಆಯುರ್ವೇದ ಪಾರಂಪರಿಕ ವೈದ್ಯಕೀಯ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ಬೆಳಗಾವಿ ಜಿಲಾಡಳಿತ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಮತ್ತು 2025ರ ಬೀದರನಲ್ಲಿ ನಡೆದ ಪಾರಂಪರಿಕ ವೈದ್ಯರ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಕರ್ನಾಟಕ ಸರ್ಕಾರ ಕೊಡಮಾಡುವ 'ವೈದ್ಯ ರತ್ನ' ಪ್ರಶಸ್ತಿ ನೀಡಿ ಗೌರವಿಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಖ್ಯಾತ ನ್ಯಾಯವಾದಿಗಳು ಹಾಗೂ ಬೇಡ ಜಂಗಮ ಸಮಾಜದ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಹೇಮಲತಾ ಹಿರೇಮಠ ಅವರು ಮುಗಳಖೋಡ ಪಟ್ಟಣಕ್ಕೆ ಆಗಮಿಸಿ ಶಾಲು ಹೊದಿಸಿ ಫಲಪುಷ್ಪ ನೀಡಿ ಸತ್ಕರಿಸಿ ಶುಭ ಹಾರೈಸಿದರು.

ನಂತರ ಮಾತನಾಡಿದ ಹೇಮಲತಾ ಹಿರೇಮಠ, ರಾಜ್ಯೋತ್ಸವ ಪ್ರಶಸ್ತಿ ಎಲ್ಲರಿಗೂ ಸಿಗುವುದಿಲ್ಲ, ಶ್ರದ್ದೆ ಭಕ್ತಿಯಿಂದ ನಿಷ್ಠಾವಂತರಾಗಿ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರಿಗೆ ಮಾತ್ರ ಸಿಗುತ್ತದೆ. ಅಂತಹ ಶ್ರೇಷ್ಠವಾದ ಪ್ರಶಸ್ತಿಗಳು ರಾಯಬಾಗ ತಾಲೂಕಿನ ಜಂಗಮ ಸಮಾಜದ ಮುಖಂಡ ಅಲ್ಲಯ್ಯಾ ಅವರ ಆಯುರ್ವೇದ ನಾಟಿ ಔಷಧ ವಿತರಣೆ ಹಾಗೂ ಸಾಮಾಜಿಕ ಸೇವೆಗೆ ವೈದ್ಯ ರತ್ನ ಮತ್ತು ರಾಜ್ಯೋತ್ಸವ ಪ್ರಶಸ್ತಿ ದೊರೆತಿದ್ದು ತುಂಬಾ ಸಂತೋಷ ತಂದಿದೆ. ಬರುವ ದಿನಗಳಲ್ಲಿ ಇವರ ಕಾರ್ಯವನ್ನು ರಾಜ್ಯ, ರಾಷ್ಟ್ರ ಮಟ್ಟದವರೆಗೆ ಗುರುತಿಸಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಹಾರೂಗೇರಿ ಜಂಗಮ ಸಮಾಜ ಮುಖಂಡರಾದ ಮಲ್ಲಿಕಾರ್ಜುನ ಮಠಪತಿ, ವಿರುಪಾಕ್ಷ ಮಠಪತಿ, ಸೋಮಯ್ಯಾ ಮಠಪತಿ ಸೇರಿದಂತೆ ಇತರರು ಇದ್ದರು.



ಬಾಲ್ಯವಿವಾಹ, ಪೋಕ್ಸೋ ಕಾಯ್ದೆಯ ಬಗ್ಗೆ ಜನಜಾಗೃತಿ ಕಾರ್ಯಾಗಾರ

ಖಾನಾಪುರ: ಪಟ್ಟಣದ ಶಿವಸ್ಮಾರಕ ಸಭಾಗೃಹದಲ್ಲಿ ಸೋಮವಾರ ತಾಲೂಕು ಮಟ್ಟದ ಬಾಲ್ಯವಿವಾಹ ಮತ್ತು ಪೋಕ್ಸೋ ಕಾಯ್ದೆಯ ಬಗ್ಗೆ ಜನಜಾಗೃತಿ ಕಾರ್ಯಾಗಾರ ಜರುಗಿತು.

ಕಾರ್ಯಾಗಾರವನ್ನು ಉದ್ಘಾಟಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿಕ್ರಮ ಕೆ.ಬಿ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನೆ, ಆರೋಗ್ಯ ಮತ್ತು ಶಿಕ್ಷಣ ಇಲಾಖೆ ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ಬೇಟಿ ಬಚಾವೋ, ಬೇಟಿ ಪಢಾವೋ ಯೋಜನೆಯಡಿ ಈ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಶಿಕ್ಷಕರು, ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಮತ್ತು ಪಿಡಿಓಗಳಿಗೆ ಬಾಲ್ಯವಿವಾಹ ಮತ್ತು ಪೋಕ್ಸೋ ಕಾಯ್ದೆಯ ಬಗ್ಗೆ ವಿವರಿಸಿ ಅವರ ಮೂಲಕ ಜನಜಾಗೃತಿ ಮೂಡಿಸುವುದೇ ಈ ಕಾರ್ಯಾಗಾರದ ಉದ್ದೇಶ'' ಎಂದು ವಿವರಿಸಿದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಸಾಮಾಜಿಕ ಕಾರ್ಯಕರ್ತೆ ಶಿಲ್ಪಾ ಕಲ್ಯಾಣಿ, ಹಿರಿಯ ನ್ಯಾಯವಾದಿ ಆರ್.ಎಂ ಹಿರೇಮಠ ಮತ್ತು ನ್ಯಾಯವಾದಿ ಮಂಜುಷಾ ಮಾನೆ ಬಾಲ್ಯವಿವಾಹ ನಿಷೇಧ, ಕೌಟುಂಬಿಕ ದೌರ್ಜನ್ಯ ಮತ್ತು ಪೋಕ್ಸೋ ಕಾಯ್ದೆಯ ಬಗ್ಗೆ ವಿವರವಾದ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಾಲೂಕಿನ ವಿವಿಧ ಗ್ರಾಪಂಗಳ ಪಿಡಿಓಗಳು, ವಿವಿಧ ಶಾಲೆಗಳ ಶಿಕ್ಷಕರು, ಪೊಲೀಸ್ ಸಿಬ್ಬಂದಿ, ಆರೋಗ್ಯ ಇಲಾಖೆಯ ಸಿಬ್ಬಂದಿ, ಅಂಗನವಾಡಿ ಮೇಲ್ವಿಚಾರಕಿಯರು, ಆಶಾ ಕಾರ್ಯಕರ್ತೆಯರು ಹಾಗೂ ಇತರರು ಇದ್ದರು. ಎಸಿಡಿಪಿಓ ಶಾರದಾ ಮರಾಠೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂದೀಪ ದೇಶಮುಖ ಕಾರ್ಯಕ್ರಮ ನಿರ್ವಹಿಸಿದರು.



ತಾಲೂಕಿನ ಅಭಿವೃದ್ಧಿಗೆ ಒತ್ತು ಕೊಟ್ಟ ಶಾಸಕ ವೈದ್ಯ: ಸಚಿವ ಗುಂಡೂರಾವ್

ಸವದತ್ತಿ: ತಾಲೂಕಿನ ಜನಪ್ರತಿನಿಧಿಗಳಾಗಿ ಶಾಸಕರಾಗಿ ಆಯ್ಕೆಯಾದವರು ಮಾಡುವ ಕಾರ್ಯವೇನೆಂದರೆ ತಾಲೂಕಿನ ಜನರ ಆಶಯಗಳನ್ನು ಈಡೇರಿಸುವ ಕಾರ್ಯವನ್ನು ಮಾಡಬೇಕು ಆ ಒಂದು ನಿಟ್ಟಿನಲ್ಲಿ ಶಾಸಕ ವಿಶ್ವಾಸ ವೈದ್ಯ ರವರು ತಾಲೂಕಿನ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮವಹಿಸಿಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು

ಅವರು ಸ್ಥಳೀಯ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ಬೆಳಗಾವಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಳಗಾವಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕ ಇವರ ಸಂಯುಕ್ತ ಆಶಯದಲ್ಲಿ ಜಿಲ್ಲೆಯ ಸೌದತ್ತಿಯ 100 ಹಾಸಿಗೆಗಳ ಹಾಸಿಗೆಗಳ ತಾಲೂಕ ಸಾರ್ವಜನಿಕ ಆಸ್ಪತ್ರೆಯ ವಿಸ್ತರಣೆ ಹಾಗೂ ನವೀಕರಣ ಕಾಮಗಾರಿಗೆ ಚಾಲನೆ ನೀಡಿದ ಅವರು 3000.00 ಲಕ್ಷಗಳ ರೂ. ವೆಚ್ಚದಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲಾಗುವುದು ಈ ದಿನ ಐತಿಹಾಸಿಕ ದಿನವಾಗಿದ್ದು ಬೆಳಗಾವಿ ಜಿಲ್ಲೆಯಲ್ಲಿ ಮೂರು ತಾಲೂಕುಗಳಲ್ಲಿ ಸಾರ್ವಜನಿಕ ಆಸ್ಪತ್ರೆಗಳ ನವೀಕರಣ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ ಅಥಣಿಯಲ್ಲಿ ಎಂಸಿಎಚ್ ಆಸ್ಪತ್ರೆಯನ್ನು ಮತ್ತು ಖಾನಾಪುರ ಕಿತ್ತೂರು ತಾಲೂಕುಗಳಲ್ಲಿಯೂ ಕೂಡ ನೂತನ ಕನ್ನಡ ನಿರ್ಮಿಸಲಾಗುತ್ತಿದೆ.

ಶಾಸಕ ವಿಶ್ವಾಸ ವೈದ್ಯರವರು ಸವದತ್ತಿ ಸಾರ್ವಜನಿಕ ಆಸ್ಪತ್ರೆಗೆ ಬೇಡಿಕೆ ಇಟ್ಟಾಗ ರಾಜ್ಯದ ಎಂಟು ಸಾರ್ವಜನಿಕ ಆಸ್ಪತ್ರೆಗಳ ಲಿಸ್ಟ್ ನಲ್ಲಿ ಸೌದತ್ತಿ ಯ ಸಾರ್ವಜನಿಕ ಆಸ್ಪತ್ರೆಯನ್ನು ಸೇರಿಸಲು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದಾಗ ಅವರು ಕೂಡಲೇ ಒಪ್ಪಿಕೊಂಡು ಅಭಿವೃದ್ಧಿಗೆ ಸಹಕಾರ ನೀಡಿದರು ಎಂದರು.

ಶಾಸಕ ವಿಶ್ವಾಸ ವೈದ್ಯ ಮಾತನಾಡಿ, ಸಚಿವ ದಿನೇಶ್ ಗುಂಡೂರಾವ್ ರವರು ನಮ್ಮ ಬೇಡಿಕೆಗಳಿಗೆ ಸ್ಪಂದಿಸಿ ನಮ್ಮ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ಅಭಿವೃದ್ಧಿಪಡಿಸಲು ಅನುದಾನ ನೀಡಿ ನೀಡಿದ್ದಕ್ಕಾಗಿ ಅಭಿನಂದಿಸುವೆ ಮತ್ತು ಮುನವಳ್ಳಿ ನಗರದಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತಿ ಕರಿಸಬೇಕು. ಯರಗಟ್ಟಿ ತಾಲೂಕ ಆಸ್ಪತ್ರೆಯನ್ನಾಗಿ ಮಾಡಬೇಕು ಮತ್ತು ಸಮೀಪದ ಸತ್ತಿಗೆರಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬೇಕು ಎಂದು ಸಚಿವರಿಗೆ ಆಗ್ರಹಿಸಿದರು

ತಾಲೂಕ ಮುಖ್ಯ ವೈದ್ಯಾಧಿಕಾರಿಗಳಾದ ಡಾ. ಎಂ.ವಿ. ಮಲ್ಲನಗೌಡರ್ ಮಾತನಾಡಿದರು . ನಂತರ ತಾಲೂಕ ಸಾರ್ವಜನಿಕ ಆಸ್ಪತ್ರೆ ವತಿಯಿಂದ ಶಾಸಕ ವಿಶ್ವಾಸ ವೈದ್ಯ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಮತ್ತು ಕಾರ್ಯಕ್ರಮಕ್ಕೆ ಆಗಮಿಸಿದ ಆರೋಗ್ಯ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ಸನ್ಮಾನಿಸಿ ಗೌರವಿಸಿದರು. ಮಾಜಿ ಶಾಸಕರಾದ ಆರ್.ವಿ. ಪಾಟೀಲ್, ಜಿಲ್ಲಾ ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕ ಡಾ. ಪುಷ್ಪಾ ಎಚ್., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳಾದ ಐ.ಪಿ. ಗಡಾದ, ತಹಶೀಲ್ದಾರ್ ಮಲ್ಲಿಕಾರ್ಜುನ ಹೆಗ್ಗಣ್ಣವರ, ಸ್ಥಳೀಯ ಗಣ್ಯರಾದ ಸದಾಶಿವ ಎಸ್, ಕೌಜಲಗಿ, ಮಹಾಬಲೇಶ್ವರ ಪುರದಗುಡಿ, ಬಿ.ಎನ್. ಪ್ರಭುನವರ, ಸೇರಿದಂತೆ ಸ್ಥಳೀಯ ಗಣ್ಯರು ತಾಲೂಕ ವೈದ್ಯಾಧಿಕಾರಿಗಳಾದ ಡಾ. ಶ್ರೀಪಾದ್ ಸಬನಿಸ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.



ವಿಬಿ-ಜಿ-ರಾಮ್-ಜಿ ಯೋಜನೆ ರದ್ದುಪಡಿಸಲು ಒತ್ತಾಯ

ರಾಯಬಾಗ: ಕೇಂದ್ರ ಸರ್ಕಾರ ಏಕ ಪಕ್ಷೀಯವಾಗಿ ಜಾರಿಗೆ ತಂದಿರುವ ವಿಬಿ-ಜಿ-ರಾಮ್-ಜಿ ಯೋಜನೆಯನ್ನು ರದ್ದುಪಡಿಸಿ ಮೊದಲಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮುಂದುವರೆಸಲೇಬೇಕು ಎಂದು ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ರಾಯಬಾಗ ಪಟ್ಟಣದಲ್ಲಿ ಇಂದು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ-ಜಿ-ರಾಮ್-ಜಿ ಯೋಜನೆಯನ್ನು ರದ್ದುಗೊಳಿಸಿ, ಹಳೆಯ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮುಂದುವರೆಸುವಂತೆ ಆಗ್ರಹಿಸಿ ಇಂದು ಕಾಂಗ್ರೆಸ್ ಘಟಕದ ವತಿಯಿಂದ ಬೃಹತ್ ಪಾದಯಾತ್ರೆ ಮೂಲಕ ಜನಜಾಗೃತಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಹಲವು ಜನಪರ ಯೋಜನೆಗಳನ್ನು ಬಿಜೆಪಿ ಕೇಂದ್ರ ಸರ್ಕಾರ ನಾಮಕರಣ ಬದಲಿ ಮಾಡುವ ಕಾರ್ಯ ಮಾಡುತಲಿದ್ದು, ಎಲರೂ ಒಗ್ಗಟ್ಟಾಗಿ ಕಾರ್ಯ ವಿರೋಧಿಸಬೇಕು. ಕಾಂಗ್ರೆಸ್ ಸರ್ಕಾರದಲ್ಲಿ ಇದ್ದ ಯೋಜನೆಗಳು ಮುಂದುವರಿಸಬೇಕು ಎಂದು ಆಗ್ರಹಿಸಿದರು.

ಕೆಪಿಸಿಸಿ ಪ್ರಧಾನಕಾರ್ಯದರ್ಶಿ ಮಹಾವೀರ ಮೊಹಿತೆ ಮಾತನಾಡಿ, ರಾಯಬಾಗ ಮತಕ್ಷೇತ್ರದಲ್ಲಿ ನಿಷ್ಠಾವಂತ ಕಾರ್ಯಕರ್ತರು ಇದ್ದಾರೆ. ಪಾದಯಾತ್ರೆಯಲ್ಲಿ ಇಂದಿನ ಜನರ ಉತ್ಸಾಹ ನೋಡಿ ಸಂತೋಷವಾಗಿದೆ. ಕೂಲಿಕಾರ್ಮಿಕರಿಗೆ ಅನುಕೂಲವಾಗಿದ್ದು ಬಿಜೆಪಿ ಅದನ್ನು ಕಡಿತಗಿಸಿದೆ. ಹೆಸರು ಬದಲಿಸಿದ್ದರೆ ತೊಂದರೆ ಇರಲಿಲ್ಲ, ಅದರಲ್ಲಿರುವ ಕಾನೂನುಗಳನ್ನು ತಿದ್ದುಪಡಿ ಮಾಡುತ್ತಿರುವುದಕ್ಕೆ ತೀವ್ರ ವಿರೋಧ ಇದೆ. ನರೇಂದ್ರ ಮೋದಿ ಇರುವವರೆಗೆ ದೇಶ ಅಮೇರಿಕಾ ದೇಶದವರಿಗೆ ನೀಡುತ್ತಾರೋ ಆತಂಕದಲ್ಲಿದ್ದೇವೆ. ಹಾಗಾಗಿ ಜನರು ಎಚ್ಚರಿಕೆ ಇರಬೇಕು. ಬಿಜೆಪಿ, ಆರ್ ಎಸ್ಎಸ್ ನವರು ದೇಶದ ಹೆಸರಲ್ಲಿ ಸಂವಿಧಾನಕ್ಕೆ ಧಕ್ಕೆ ಮಾಡಿದರೆ ತಕ್ಕ ಪಾಠ ಕಲಿಸಬೇಕು ಎಂದರು.

ಚಿಕ್ಕೋಡಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ ಮಾತನಾಡಿ, ಬಿಜೆಪಿ ಜನಸಾಮಾನ್ಯರ ಮೂರಾಬಟ್ಟೆ ಮಾಡಿದ ಸರ್ಕಾರ ಬಿಜೆಪಿ, ಜಾತಿ ಜಾತಿಗಳಲ್ಲಿ, ಭಾಷೆ ಭಾಷೆಗಳಲ್ಲಿ ಜಗಳ ಹಚ್ಚುವುದು ಬಿಜೆಪಿ ಕಾರ್ಯ ಮಾಡುತ್ತಿದೆ. ಮಹಾತ್ಮಗಾಂಧಿ ಅವರು ಸ್ವಾತಂತ್ರ್ಯ ತಂದು ಕೊಟ್ಟು ರಾಷ್ಟ್ರ ಪಿತಾಮಹ ಎಂದು ಕರೆಸಿಕೊಂಡರು. ಇಂತಹ ಹೆಸರನ್ನು ಬಿಜೆಪಿ ಬದಲಿಸಿದ್ದು ಬೇಸರದ ಸಂಗತಿ ಎಂದು ಹೇಳಿದರು.

ಈ ವೇಳೆ ಶಿವನಗೌಡ ಪಾಟೀಲ, ಸಿದ್ದಾರೂಢ ಬಂಡಗರ, ನಿರ್ಮಲ ಪಾಟೀಲ, ಅಬ್ದುಲ್ ಸುತಾರಮುಲ್ಲಾ, ಹಾಜಿ ಮುಲ್ಲಾ, ಅಪ್ಪಾಸಾಹೇಬ ಕುಲಗೋಡೆ, ದಿಲೀಪ ಜಮಾದಾರ, ಅರ್ಜುನ ನಾಯಕವಾಡಿ, ಶಿವು ಮರಾಯಿ, ಶಂಕರಗೌಡ ಪಾಟೀಲ, ರಾಜು ಕೋಟಗಿ, ಗಣೇಶ ಮೊಹಿತೆ, ಸಿದ್ರಾಮ ಪೂಜೇರಿ, ವಸಂತ ಕರಿಗಾರ, ರುದ್ರಪ್ಪ ಸಂಗಪ್ಪಗೋಳ, ಅಕ್ಷಯ ವಿರಮುಖ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.



ಕಿರುಸುದ್ದಿ



ಹಿರೇಬಾಗೇವಾಡಿ: ಬೆಳಗಾವಿಯ ಪ್ರಣವಂ ಫೌಂಡೇಶನ್ ವತಿಯಿಂದ ಶ್ರೀ ನಿಶ್ಚಲ ಸ್ವರೂಪ ಗುರೂಜಿ ಅವರು ಭಾನುವಾರ ಏರ್ಪಡಿಸಿದ ಮಹಾಶಿವರಾತ್ರಿ ಪೂಜಾ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಸಂಜಯ ಪಾಟೀಲ ಭಾಗಿಯಾಗಿ ಆಶೀರ್ವಾದ ಪಡೆದರು.



ಹಿರೇಬಾಗೇವಾಡಿ: ಸಮೀಪದ ಬಡೆಕೊಳ್ಳ ಮಠದಲ್ಲಿ ಶಿವರಾತ್ರಿ ನಿಮಿತ್ತ ಶ್ರೀ ನಾಗೇಂದ್ರ ಸ್ವಾಮೀಜಿ ಅವರ ರಥೋತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು. ರಥೋತ್ಸವದ ನಂತರ ಮಹಾಪ್ರಸಾದ ವಿತರಿಸಲಾಯಿತು.

ಶ್ರೀಶೈಲಕ್ಕೆ ರೈಲು ಸೌಲಭ್ಯಕ್ಕಾಗಿ ಮನವಿ

ಸಾವಳಗಿ: ಯುಗಾದಿ ಹಬ್ಬದ ಪ್ರಯುಕ್ತ ಆಂಧ್ರ ಪ್ರದೇಶದಲ್ಲಿರುವ ಪ್ರಸಿದ್ಧ ಪವಿತ್ರ ಕ್ಷೇತ್ರವಾದ ಶ್ರೀಶೈಲ್ ಮಲ್ಲಿಕಾರ್ಜುನ ದರ್ಶನಕ್ಕೆ ಪ್ರತಿ ವರ್ಷ ಬೆಳಗಾವಿ ಜಿಲ್ಲೆಯ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಭೇಟಿ ನೀಡುತ್ತಾರೆ. ಆದರೆ, ನೇರ ರೈಲು ಸೌಲಭ್ಯ ಇಲ್ಲದ ಕಾರಣ ಭಕ್ತರು ಸಾಕಷ್ಟು ತೊಂದರೆ



ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಳಗಾವಿ ಅಥವಾ ಘಟಪ್ರಭಾ ರೈಲು ನಿಲ್ದಾಣದಿಂದ, ಇಲ್ಲವಾದರೆ ಮಿರಜ್ ರೈಲು ನಿಲ್ದಾಣದಿಂದ ವಿಜಯವಾಡವರೆಗೆ ವಿಶೇಷ ರೈಲು ಸೇವೆಯನ್ನು ಪ್ರಾರಂಭಿಸುವಂತೆ ಭಕ್ತರು ಹಾಗೂ ಸಾರ್ವಜನಿಕರು ಬೆಳಗಾವಿ ಹಾಗೂ ಚಿಕ್ಕೋಡಿ ಸಂಸದರು ಮತ್ತು ರಾಜ್ಯ ಸಭಾ ಸದಸ್ಯರು. ರೈಲ್ವೆ ಇಲಾಖೆಗೆ ಮನವಿ ಮಾಡಿದ್ದಾರೆ.ಯುಗಾದಿ ಹಬ್ಬದ ಸಮಯದಲ್ಲಿ ವಿಶೇಷ ರೈಲು ವ್ಯವಸ್ಥೆ ಕಲ್ಪಿಸಿದರೆ ಭಕ್ತರಿಗೆ ಅನುಕೂಲವಾಗುವುದರ ಜೊತೆಗೆ ಸುರಕ್ಷಿತ ಹಾಗೂ ಸುಲಭ ಪ್ರಯಾಣ ಸಾಧ್ಯವಾಗುತ್ತದೆ. ವಿಶೇಷವಾಗಿ ಹಿರಿಯ ನಾಗರಿಕರು, ಮಹಿಳೆಯರು ಮತ್ತು ಕುಟುಂಬ ಸಮೇತ ಪ್ರಯಾಣಿಸುವವರಿಗೆ ಇದು ಬಹಳ ಸಹಾಯಕವಾಗಲಿದೆ ಎಂದು ಭಕ್ತರು ತಿಳಿಸಿದ್ದಾರೆ.

ಆದ್ದರಿಂದ ಸಂಬಂಧಪಟ್ಟ ಜನಪ್ರತಿನಿಧಿಗಳು ಹಾಗೂ ರೈಲ್ವೆ ಇಲಾಖೆ ಈ ಕುರಿತು ಗಮನ ಹರಿಸಿ ಯುಗಾದಿ ಹಬ್ಬದ ಸಂದರ್ಭದಲ್ಲಿ ವಿಶೇಷ ರೈಲು ಸೇವೆ ಪ್ರಾರಂಭಿಸುವಂತೆ ಸಾರ್ವಜನಿಕರು ಹಾಗೂ ಪತ್ರಕರ್ತ ಉಮೇಶ್ ನಂದಗಾಂವ ಆಗ್ರಹಿಸಿದ್ದಾರೆ.

ನಿಧನ ಸುದ್ದಿ

ಸೋಮನಿಂಗ ಪಾಟೀಲ

ಖಾನಾಪುರ: ತಾಲೂಕಿನ ಹಿಂಡಲಗಿ ಗ್ರಾಮದ ನಿವಾಸಿ ಸೋಮನಿಂಗ ರಾಮನಿಂಗ ಪಾಟೀಲ (88) ಇತ್ತೀಚೆಗೆ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವಿದೆ.





ಬೆಳಗಾವಿ : ಇಲ್ಲಿನ ರಾಮತೀರ್ಥ ನಗರದಲ್ಲಿ ರಸ್ತೆ ಚರಂಡಿ ಸೇರಿದಂತೆ ಹಲವು ಕಾಮಗಾರಿಗಳಿಗೆ ಸುಮಾರು 22 ಕೋಟಿ ರೂ.ಅಭಿವೃದ್ಧಿ ಯೋಜನೆಯ 4 ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಆಸೀಪ್ ಸೇಠ್ ಭೂಮಿಪೂಜೆ ಸಲ್ಲಿಸಿದರು. ಈ ವೇಳೆ ಎನ್.ಬಿ. ನಿರವಾಣಿ, ಸುರೇಶ್ ಯಾದವ್, ಸುರೇಶ್ ಉರ್ಬಿನಟ್ಟಿ,ಎಂ.ಎಂ. ಕಿತ್ತೂರು, ದಿಲಾವರ್ ಕಂಬಾರಗಾನವಿ, ಪುಷ್ಪಾ ಪರವತ್ರಾವ್, ರಾಮತೀರ್ಥ ನಗರದ ನಿವಾಸಿಗಳು ಸೇರಿದಂತೆ ಮತ್ತಿತರರು ಇದ್ದರು.

ಪ್ರೊ. ಹೊನ್ನರಾಜುಗೆ ಪಿಎಚ್‌ಡಿ ಪದವಿ ಪ್ರದಾನ

ಚನ್ನಮ್ಮನ ಕಿತ್ತೂರು: ಕಿತ್ತೂರು ನಾಡ ವಿದ್ಯಾವರ್ಧಕ ಸಂಘದ ಪದವಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರೊ. ಹೊನ್ನರಾಜು ಎಸ್.ವ್ಹಿ. ಅವರು ಸಾದರ ಪಡಿಸಿದ ಕನ್ನಡ ಸಾಹಿತ್ಯಕ್ಕೆ ರಾಜಕಾರಣಿಗಳ ಕೊಡುಗೆ ಎಂಬ ಮಹಾಪ್ರಬಂಧಕ್ಕೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ.

ಮೈಸೂರಿನಲ್ಲಿ ಇತ್ತೀಚಿಗೆ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ರಾಜ್ಯಪಾಲ ಹಾಗೂ ಕುಲಾಧಿಪತಿ ಥಾವರ್ ಚಂದ ಗೆಹ್ಲೋಟ್ ಅವರು ಪಿಎಚ್‌ಡಿ ಪದವಿ ಪ್ರದಾನ ಮಾಡಿದರು. ಪ್ರೊ. ಹೊನ್ನರಾಜು ಎಸ್.ವ್ಹಿ. ಇವರು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಪ್ರಾಧ್ಯಾಪಕ ಡಾ. ಪಿ. ಮಣಿ ಇವರ ಮಾರ್ಗದರ್ಶನದಲ್ಲಿ ಮಹಾಪ್ರಬಂಧವನ್ನು ಸಾದರಪಡಿಸಿದ್ದಾರೆ.

ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳರಾಜಯೋಗಿಂದ್ರ ಸ್ವಾಮೀಜಿ, ಸಂಘದ ಚೇರಮನ್ ಶಂಕರ ವಳಸಂಗ,ವೈಸ್ ಚೇರಮನ್ ಜಗದೀಶ ಫಟ್ನಟ್ಟಿ, ಗೌರವ ಕಾರ್ಯದರ್ಶಿ ಜಗದೀಶ ಬಿಕ್ಕಣ್ಣವರ, ಆಡಳಿತ ಮಂಡಳಿ ಸದಸ್ಯರಾದ ಎನ್. ವ್ಹಿ. ತಡಕೋಡ, ಎಂ.ಬಿ. ದಳವಾಯಿ, ವ್ಹಿ.ಆರ್. ಶೆಟ್ಟರ, ಯು.ಡಿ. ಭಾರತಿ, ಜೆ.ವ್ಹಿ.ವಸ್ತ್ರದ, ಎನ್.ಎಸ್.ಹಿರೇಮಠ, ಡಿ.ಎಲ್.ಪಾಟೀಲ, ವ್ಹಿ. ಆರ್. ಪಾಟೀಲ, ಪ್ರಾಚಾರ್ಯ ನಾಗರಾಜ ಎಚ್. ಕೆ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.



ಚನ್ನಮ್ಮನ ಕಿತ್ತೂರು: ಚನ್ನಮ್ಮನ ಕಿತ್ತೂರು: ಕಿತ್ತೂರು ನಾಡ ವಿದ್ಯಾವರ್ಧಕ ಸಂಘದ ಪದವಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರೊ. ಹೊನ್ನರಾಜು ಎಸ್.ವ್ಹಿ. ಅವರು ಸಾದರ ಪಡಿಸಿದ ಕನ್ನಡ ಸಾಹಿತ್ಯಕ್ಕೆ ರಾಜಕಾರಣಿಗಳ ಕೊಡುಗೆ ಎಂಬ ಮಹಾಪ್ರಬಂಧಕ್ಕೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ.

ಮೂಕ ಪ್ರೇಕ್ಷಕರಾದ ಅಧಿಕಾರಿಗಳು | ಆಧಾರ್ ಕೇಂದ್ರ ದುರಸ್ತಿಗೆ ಆಗ್ರಹ

ತಹಶೀಲ್ದಾರ್ ಕಚೇರಿಯಲ್ಲಿ ಆಧಾರ್ ಕೇಂದ್ರ ಸ್ಥಗಿತ

ಉಳವಯ್ಯ ಹಿರೇಮಠ

ಚನ್ನಮ್ಮನ ಕಿತ್ತೂರು: ಕಿತ್ತೂರಿನ ತಹಶೀಲ್ದಾರ್ ಕಚೇರಿಯಲ್ಲಿರುವ ಆಧಾರ್ ಕೇಂದ್ರ ಸ್ಥಗಿತಗೊಂಡು ಹಲವಾರು ತಿಂಗಳುಗಳು ಕಳೆದರೂ ಜನರಿಗೆ ಸಮಸ್ಯೆಯಾಗುತ್ತಿರುವುದನ್ನು ಕಂಡು ಕಾಣದಂತೆ ಮೂಕ ಪ್ರೇಕ್ಷಕರಾಗಿದ್ದಾರೆ ಅಧಿಕಾರಿಗಳು.

AADHAR

ತಾಲೂಕಿನ ಆಡಳಿತ ನಡೆಸುವ ಕಚೇರಿಯಲ್ಲಿಯೇ ಆಧಾರ ಕೇಂದ್ರವಿರುವುದಿಲ್ಲವೆಂದರೆ ಸಾರ್ವಜನಿಕರ ಗತೀ ಏನು? ಸ್ಥಗಿತಗೊಂಡು ಹಲವಾರು ತಿಂಗಳು ಕಳೆದರೂ ಪಟ್ಟಣದಲ್ಲಿ ಎಲ್ಲಿಯೂ ಆಧಾರ್ ಕೇಂದ್ರವು ಚಾಲ್ತಿಯಲ್ಲಿರುವುದಿಲ್ಲ ತಿದ್ದುಪಡಿ ಮಾಡಿಸಲು ದೂರದ ಸ್ಥಳಗಳಿಗೆ ಹೋಗಿ ಹಣ ಖರ್ಚುಮಾಡಿ ಹೈರಾಣಾಗಿದೇವ್ರಿ, ಇಲ್ಲಿರುವ ಬಿಎಸ್ ಎನ್‌ಎಲ್ ಕಚೇರಿ, ಕೆವಿಜಿ ಬ್ಯಾಂಕಿನಲ್ಲಿರುವ ಆಧಾರ್ ಕೇಂದ್ರಗಳು, ಸಂಪೂರ್ಣವಾಗಿ ಸ್ಥಗಿತಗೊಂಡಿವೆ ಪೋಸ್ಟ್ ಆಫೀಸಿನಲ್ಲಿನ ಕೇಂದ್ರ ದುರಸ್ತಿಯಲ್ಲಿದ್ದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ ಹೀಗಾದ್ರೆ ಏನೂಮಾಡೋದ್ರಿ ಎಂದು ಸಾರ್ವಜನಿಕರು ತಮ್ಮ ಅಳಲನ್ನು ತೊಡಿಕೊಳ್ಳುತ್ತಿದ್ದಾರೆ.

> ಇಲ್ಲಿನ ತಹಶೀಲ್ದಾರ್ ಕಚೇರಿಯಲ್ಲಿರುವ ಆಧಾರ್ ಕೇಂದ್ರವು ಕಾರಣಾಂತರಗಳಿಂದ ಸ್ಥಗಿತಗೊಂಡಿದ್ದು ತುರ್ತಾಗಿ ಪ್ರಾರಂಭಿಸಲಾಗುವುದು.
>
> ■ ವಿಜಯಕುಮಾರ ಹೊನಕೇರಿ. ಅಪರ ಜಿಲ್ಲಾಧಿಕಾರಿ. ಬೆಳಗಾವಿ

ಆಧಾಡ್ ಕಾರ್ಡ್ ಈಗ ಸಾಮಾನ್ಯವಾಗಿ ಗುರುತಿಗಷ್ಟೇ ಅಲ್ಲ.ಅದು ಅನೇಕ ಸರ್ಕಾರದ ಉಚಿತ ಯೋಜನೆಗಳು, ಸಬ್ಸಿಡಿ, ಬ್ಯಾಂಕ್ ವ್ಯವಹಾರಗಳು, ವಿದ್ಯಾರ್ಥಿವೇತನಗಳು, ಪಿಂಚಣಿಗಳು ಸೇರಿದಂತೆ ಮಕ್ಕಳ ಶಾಲಾ ಪ್ರವೇಶಕ್ಕೆ ಎಲ್ಲದಕ್ಕೂ ಆಧಾರ ಸಂಖ್ಯೆ ಅಗತ್ಯ ಎಲ್ಲ ರೀತಿಯಿಂದಲೂ ಆಧಾರ್ ಕಾರ್ಡು ಪ್ರಮುಖ ದಾಖಲೆಯಾಗಿದೆ.

ವ್ಯಕ್ತಿಯ ಹೆಸರು, ವಿಳಾಸ, ಹುಟ್ಟಿದ ದಿನಾಂಕ, ಮೊಬೈಲ್ ಸಂಖ್ಯೆ, ಫಿಂಗರ್ ಪ್ರಿಂಟ್ ಸೇರಿ ಹಲವು ಹತ್ತು ಮಾಹಿತಿಗಳೊಂದಿಗೆ ಇರುವ ಆಧಾರ್ ಕಾರ್ಡ್ ಅವಶ್ಯಕವಾಗಿದೆ. ಚಿಕ್ಕ ಮಕ್ಕಳ ಹಾಗೂ ಎಲ್ಲ ವಯಸ್ಕರರ ಆಧಾರ್ ಕಾಡ್ ‌ನ್ನು ಬಯೋಮೆಟ್ರಿಕ್ ಅಪ್‌ಡೇಟ್ ಸಮಯಕ್ಕೆ ಮಾಡಿಸದಿದ್ರೆ, ಆಧಾರ್ ಕಾರ್ಡ್ ನಿಷ್ಕ್ರೀಯಗೊಂಡು ವಿವಿಧ ಯೋಜನೆಗಳಿಂದ ವಂಚಿತರಾಗುತ್ತಾರೆ.

ಇದು ಸ್ಥಗಿತಗೊಂಡಾಗಿನಿಂದ 10ನೇ ತರಗತಿಯ

> ಸಾರ್ವಜನಿಕರ ಅನುಕೂಲಕ್ಕಾಗಿ ಸರ್ಕಾರವು ವಿವಿಧ ಯೋಜನೆಗಳನ್ನು ರೂಪಿಸುತ್ತದೆ. ಅವುಗಳನ್ನು ಕಾರ್ಯರೂಪಕ್ಕೆ ತರುವ ಅಧಿಕಾರಿಗಳು ವಿಳಂಬನೀತಿ ಅನುಸರಿಸಿ ಜನರಿಗೆ ತೊಂದರೆ ಕೊಡುವ ಕೆಲಸವನ್ನು ಮಾಡಬಾರದು. ಸ್ಥಗಿತವಾಗಿದ್ದ ಆಧಾರ ಕೇಂದ್ರವನ್ನು ಬೇಗನೆ ಪ್ರಾರಂಭಿಸಬೇಕು ಇಲ್ಲದಿದ್ದರೆ ಹೋರಾಟಕ್ಕಿಳಿಯಬೇಕಾಗುತ್ತದೆ.
>
> ■ ಕಿರಣ ವಾಳದ. ಅಧ್ಯಕ್ಷರು ಕರ್ನಾಟಕ ಯುವರಕ್ಷಣಾ ವೇದಿಕೆ ತಾಲೂಕು ಘಟಕ ಕಿತ್ತೂರು.

ಹಾಗೂ ಪಿಯುಸಿ ವಿದ್ಯಾರ್ಥಿಗಳು ಆಧಾರ್ ಕಾರ್ಡಿನಲ್ಲಿರುವ ಲೋಪಗಳನ್ನು ದೋಷಗಳನ್ನು ತಿದ್ದುಪಡಿ ಮಾಡಿಸಲು ದೂರದ ಧಾರವಾಡಕ್ಕೋ, ಬೆಳಗಾವಿಗೋ, ಇನ್ನೆಲ್ಲೋ ಹೋಗಿ ಆಧಾರ್ ಕಾರ್ಡುಗಳನ್ನು ತಿದ್ದುಪಡಿ ಮಾಡಿಸಿದ್ದಾರೆ. ಇವರ ಗೋಳು ಹೇಳ ತೀರದು. ಈಗ ತುರ್ತಾಗಿ ಸಿಇಟಿ ಪರೀಕ್ಷೆಗೆ ಅರ್ಜಿ ತುಂಬುವ ವಿದ್ಯಾರ್ಥಿಗಳ ಆಧಾರ್ ತಿದ್ದುಪಡಿ ಮಾಡಿಸಲು ಹರಸಾಹಸ ಪಡುತ್ತಿದ್ದಾರೆ. ಆದ್ದರಿಂದ ಸಾರ್ವಜನಿಕರು ಉಗ್ರ ಸ್ವರೂಪ ತಾಳುವ ಮುನ್ನ ಅಧಿಕಾರಿಗಳು ಎಚ್ಚತ್ತು ಆಧಾರ್ ಕೇಂದ್ರ ಸ್ಥಾಪಿಸುವುದು ಅಗತ್ಯವಾಗಿದೆ.

ಸೋಲನ್ನು ಸವಾಲಾಗಿ ಸ್ವೀಕರಿಸಿದ್ದೇವೆ: ಜಾರಕಿಹೊಳಿ

ರಾಮದುರ್ಗ: ರಾಮದುರ್ಗ ಮತ್ತು ಹುಕ್ಕೇರಿಗಳಲ್ಲಿ ಜಾರಕಿಹೊಳಿ ಕುಟುಂಬದವರು ಕಾಲಿಟ್ಟರೆ ಹೊರಗಿನಿಂದ ಬಂದವರು, ಹೊರಗಿನಿಂದ ಬಂದವರು ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ನಾವು ಇಲ್ಲಿಯವರಿದ್ದೇವೆ. ನಾವೇನು ಪಾಕಿಸ್ತಾನದಿಂದ ಬಂದಿಲ್ಲ. 2018ರಲ್ಲಿ ಚುನಾವಣೆಗೆ ಟಿಕೇಟು ಕೊಡಿಸುವಾಗ ನಾವು ಹೊರಗಿನವರಾಗಿರಲಿಲ್ಲವೇ ಎಂದು ಬೆಳಗಾವಿ ಹಾಲು ಒಕ್ಕೂಟ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಪ್ರಶ್ನಿಸಿದರು.

ರಾಮದುರ್ಗದ ಪ್ರಗತಿ ಕಲ್ಯಾಣ ಮಂಟಪದಲ್ಲಿಸೋಮವಾರಡಿಸಿಸಿಬ್ಯಾಂಕಿನ ಅಧ್ಯಕ್ಷರು, ಹಾಲು ಒಕ್ಕೂಟದ ಅಧ್ಯಕ್ಷರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 'ಕಳೆದ ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ರಾಮದುರ್ಗದಲ್ಲಿ ಸಭೆ ಮಾಡಿ ನಾವು ಒಬ್ಬರನ್ನು ಕಣಕ್ಕಿಳಿಸಿದ್ದೇವು. ನಮ್ಮ ವಿರುದ್ಧ ಇನ್ನೊಬ್ಬರು ಕಣದಲ್ಲಿದ್ದರು. ಆದರೆ ಕೊನೆ ಗಳಿಗೆಯಲ್ಲಿ ಹಾಲಿ, ಮಾಜಿ ಶಾಸಕರು ಒಂದಾಗಿದ್ದರಿಂದ ನಮ್ಮ ಬೆಂಬಲಿಗರಿಗೆ ಸೋಲಾಗಿದೆ. ಇದನ್ನೇ ನಾವು ಸವಾಲಾಗಿ ಸ್ವೀಕರಿಸಿ ಗಟ್ಟಿಯಾಗಿ ರಾಮದುರ್ಗಕ್ಕೆ ಬಂದಿದ್ದೇವೆ

ಮುಂಬರುವ2028ರಚುನಾವಣೆಯಲ್ಲಿ ನಿವೇಲ್ಲ ಒಂದಾಗಿದ್ದರೆ ನಿಮ್ಮೊಂದಿಗೆ ನಾವಿದ್ದೇವೆ ಎಂದು ಹೇಳಿ ಹೋಗಲು ಬಂದಿದ್ದೇವೆ. ನೀವು ಗಟ್ಟಿಯಾಗಿ ನಿಂತು ನಮ್ಮನ್ನು ಬೆಂಬಲಿಸಬೇಕು ಎಂದರು.

ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಮಾತನಾಡಿ, ಸರಿಯಾದ ಕಾಗದ ಪತ್ರಗಳು ಬ್ಯಾಂಕಿಗೆ ತಲುಪಿದ ಒಂದು ವಾರದೊಳಗಾಗಿ ಸಾಲ ನೀಡಲು ಬ್ಯಾಂಕ್ ಸಿದ್ಧವಿದೆ. ರಾಮದುರ್ಗ ತಾಲ್ಲೂಕಿನ ಕೇವಲ 37 ಸೊಸೈಟಿಗಳಿವೆ. ಹೆಚ್ಚಿನ ಸೊಸೈಟಿ ಮಾಡಿದರೆ ಹೆಚ್ಚಿನ ಸಾಲ ಲಭ್ಯವಾಗಲಿದೆ ಎಂದು ಹೇಳಿದರು.

ಪಿಕೆಪಿಎಸ್ ಇಲ್ಲಿವರೆಗೆ ಕೇವಲ ಶೂನ್ಯ ಮತ್ತು ಶೇ. 3ರ ಬಡ್ಡಿದರದಲ್ಲಿ ಕೃಷಿಗೆ ಹಾಗೂ ಪಂಪಸೆಟ್‌ಗಳಿಗೆ ಸಾಲ ನೀಡಲಾಗುತ್ತಿತ್ತು ಆದರೆ ಇನ್ನೂ ಮುಂದೆ ರೈತರು ಬೈಕ್, ಕಾರು ಮನೆ ಸಾಲ ಸೇರಿದಂತೆ ವಿವಿಧ ಸಾಲಗಳನ್ನು ಪಿಕೆಪಿಎಸ್‌ನಲ್ಲಿ ಪಡೆಯಲು ಅವಕಾಶ ಕಲ್ಪಿಸುವ ಯೋಜನೆಗೆ ಇದೇ ತಿಂಗಳು 18 ರಂದು ಚಾಲನೆ ನೀಡಲಾಗುವದು ಎಂದು ತಿಳಿಸಿದರು. ಹಿರಿಯ ಸಹಕಾರಿ ಪಿ.ಎಂ. ಜಗತಾಪ ಅಧ್ಯಕ್ಷತೆ ವಹಿಸಿದ್ದರು. ಗಂಗಾಧರ ಭೋಸಲೆ ಕಾರ್ಯಕ್ರಮ ನಿರೂಪಿಸಿದರು. ಕೆ.ವಿ. ಪಾಟೀಲ ಸ್ವಾಗತಿಸಿದರು. ಎಸ್.ಎಸ್. ಡವಣ ಪ್ರಾಸ್ತಾವಿಕ ಮಾತನಾಡಿದರು.



ಶ್ರೀ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವ

ಮುರಗೋಡ: ಸ್ಥಳೀಯ ಮಲ್ಲಿಕಾರ್ಜುನ ಓಣಿಯ ಐತಿಹಾಸಿಕ ಆಂಧ್ರ ಪ್ರದೇಶದ ಸುಕ್ಷೇತ್ರ ಶ್ರೀಶೈಲ ಮಲ್ಲಿಕಾರ್ಜುನ ಮಾದರಿ ದೇವಸ್ಥಾನ ಜಾತ್ರೆ, ಶಿವರಾತ್ರಿ ಜಾಗರಣೆ ಮಹಾರಥೋತ್ಸವ ಸಂಭ್ರಮದಿಂದ ನಡೆಯಿತು.

ಮಲ್ಲಿಕಾರ್ಜುನ ದೇವಸ್ಥಾನ ಜಾತ್ರಾ ಮಹೋತ್ಸವ ಹಾಗೂ ಮಹಾ ಶಿವರಾತ್ರಿ ಜಾಗರಣೆ ಮತ್ತು ಮಹಾರಥೋತ್ಸವ ನಿಮಿತ್ಯ ಮಲ್ಲಿಕಾರ್ಜುನ ಸ್ವಾಮಿಗೆ ಮಹಾರುದ್ರಾಭಿಷೇಕ ಸಂಜೆ ಶಿವರಾತ್ರಿ ಜಾಗರಣೆ ವಿವಿಧ ಭಜನಾ ತಂಡಗಳು ಭಾಗವಹಿಸಿ ಶಿವನಾಮ ಜಪಗೈದರು.

ಸೋಮವಾರ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಮತ್ತು ಮಹಾ ಮಂಗಳಾರತಿ, ಮಧ್ಯಾಹ್ನ ಮಹಾಪ್ರಸಾದ, ಸಂಜೆ ರಥಕ್ಕೆ ಬಾಳೆಗಿಡ, ಬೃಹತ್ ಹೂ ಮಾಲೆ, ರುದ್ರಾಕ್ಷಿ ಮಾಲೆಯಿಂದ ಅಲಂಕೃತ ರಥದಲ್ಲಿ ಮಲ್ಲಿಕಾರ್ಜುನ ಸ್ವಾಮಿ ಮೂರ್ತಿ ಪೂಜಿಸಿ, ನಂದಿಕೋಲ ಮೆರವಣಿಗೆ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ಭಕ್ತರು ಹರಹರ ಮಹಾದೇವ ಶ್ರೀ ಶೈಲ ಮಲ್ಲಿಕಾರ್ಜುನ ದೇವರಿಗೆ ಜೈಕಾರ ಹಾಕಿ ಕಾರಿಖು, ಬಾಳೆಹಣ್ಣು, ಊತ್ತೋತಿ. ಟೆಂಗಿನಕಾಯಿ ರಥಕ್ಕೆ ಹಾರಿಸಿ ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಂಡರು.

ಈ ಸಂದರ್ಭದಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿವಿಧ ವಾದ್ಯ ಮೇಳಗಳೊಂದಿಗೆ ಮಹಾ ರಥೋತ್ಸವ. ದೇವಸ್ಥಾನ ದ್ವಾರ ಬಾಗಿಲದಿಂದ ಹಳೆ ಬಸ್ ನಿಲ್ದಾಣದ ಬಸವೇಶ್ವರ ದೇವಸ್ಥಾನ ಸುತ್ತುವರಿದು ಮರಳಿ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ತಲುಪಿತು.

ಜಾತ್ರಾ ಸಮಿತಿಯ ಬಾಪುಗೌಡ ಪಾಟೀಲ, ಆನಂದ ಸ್ವಾಮಿ ಹಿರೇಮಠ, ಮಲ್ಲಯ್ಯ ಮಾಸಮರಡಿ, ಪ್ರಭು ಹೂಗಾರ, ಅಜಯ ಹೂಗಾರ, ಸಿದ್ದುಗೌಡ ಪಾಟೀಲ, ಮಹಾಂತೇಶ ಬಡಿಗೇರ, ಸೋಮನಗೌಡ ಪಾಟೀಲ, ಬಸವರಾಜ ನಾಗನೂರ, ಸದಾಶಿವಗೌಡ ಪಾಟೀಲ, ಪಕ್ಕೀರಗೌಡ ಮುದಿಗೌಡರ, ಬಸವರಾಜ ಹೂಗಾರ, ವಿನಾಯಕ ಮಾಸ್ತಮರಡಿ, ಸೋಮನಿಂಗ ಹೂಗಾರ, ಬೀಮು ಹೂಗಾರ ವಿವಿಧ ಗಣ್ಯರು ಭಾಗವಹಿಸಿದ್ದರು.



ಗ್ರಾಮೀಣ ಕ್ರೀಡಾ ಪ್ರತಿಭೆ ರಾಷ್ಟ್ರಮಟ್ಟದಲ್ಲಿ ಬೆಳೆಯಲಿ: ಸರ್ವೋತ್ತಮ

ಮೂಡಲಗಿ: ಗ್ರಾಮೀಣ ಮಟ್ಟದಲ್ಲಿ ಯುವಕ ಸಂಘಗಳು ಆಯೋಜಿಸುವ ಕ್ರೀಡಾಕೂಟದಲ್ಲಿ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸುವುದಲ್ಲದೆ, ಗ್ರಾಮೀಣ ಜನರಿಗೆ ಉಲ್ಲಾಸದಾಯಕ ವಾತಾವರಣ ಕಲ್ಪಿಸಿಕೊಡುತ್ತವೆ ಎಂದು ಕರ್ನಾಟಕ ರಾಜ್ಯ ವಾಲಿಬಾಲ್ ಅಸೋಸಿಯೇಷನ್ ಉಪಾಧ್ಯಕ್ಷ ಸರ್ವೋತ್ತಮ ಜಾರಕಿಹೊಳಿ ಹೇಳಿದರು.



ಅವರು ಮೂಡಲಗಿ ನಗರದ ಎಲ್.ವೈ. ಅಡಿಹುಡಿ ಶಾಲಾ ಮೈದಾನದಲ್ಲಿ ಭಾರತ ಸರ್ಕಾರದ ಮೈ ಭಾರತ ಕೇಂದ್ರ ಬೆಳಗಾವಿ, ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ಬೆಳಗಾವಿ, ಜೈ ಕರ್ನಾಟಕ ಅಂಗವಿಕಲರ ಗ್ರಾಮೀಣಾಭಿವೃದ್ಧಿ ಸಂಘ ವಿವಿಧ ಸಂಘಗಳ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಯುವ ಸಂಘಗಳ ಒಕ್ಕೂಟದ ಬೆಳಗಾವಿ ಜಿಲ್ಲಾಧ್ಯಕ್ಷ ಸಿದ್ದಣ್ಣ ದುರದುಂಡಿ ಮಾತನಾಡಿ, ಕ್ರೀಡಾ ಪಟುಗಳಿಗೆ ಸೋಲು ಗೆಲುವು ಒಂದು ನಾಣ್ಯದ ಮುಖಗಳಿದಂತೆ ಸೋತವರು ಕುಗ್ಗದೆ ಗೆದ್ದವರು ಹಿಗ್ಗದೆ ಆಟದಲ್ಲಿ ಕ್ರೀಡಾ ಮನೋಭಾವದಿಂದ ಆಟವಾಡಬೇಕು ಎಂದು ಹೇಳಿದರು.

ಸಂಸ್ಥೆಯ ಎಲ್.ವೈ. ಅಡಿಹುಡಿ, ಯುವ ಕೇಂದ್ರದ ಎಂಟಿಎಸ್ ಮಲ್ಲಯ್ಯ ಕರಡಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ದೈಹಿಕ ಶಿಕ್ಷಣ ಪರಿಕ್ಷಕ ಎಸ್.ಬಿ. ಹಳಿಗೌಡ್ರ, ಆರ್.ವಿ. ಯರಗಟ್ಟಿ, ಎಚ್ .ಡಿ. ಪಂಚಾಳ್, ಮಹಾದೇವ ಶೇಕ್ಕಿ, ಕೇದಾರಿ ಬಸ್ಸೆ, ಕೃಷ್ಣಪ್ಪ ಗಿರೆನ್ನವರ, ಗೋಪಾಲ ಗಡ್ಡೆಕಾರ, ರಾಘು ಕೇದಾರಿ, ಮಾಂತೇಶ್ ಕೊಟಬಾಗಿ, ಸುಭಾಸ ಗೊಡ್ಯಾಗೋಳ, ಕ್ರೀಡಾಪಟುಗಳು ಉಪಸ್ಥಿತರಿದ್ದರು. ಶಿಕ್ಷಕ ರವಿ ಕಟ್ಟಿಕಾರ್ ನಿರೂಪಿಸಿದರು. ಸಚಿನ್ ಕಾಂಬಳೆ ಸ್ವಾಗತಿಸಿದರು. ಹಣಮಂತ ಅಂಗಡಿ ವಂದಿಸಿದರು.

ಕಾಂಗ್ರೆಸ್‌ನಿಂದ ಸಹಕಾರಿ ಕ್ಷೇತ್ರ ನಿರ್ಲಕ್ಷ್ಯ: ಸಂಸದ ಈರಣ್ಣ ಕಡಾಡಿ

ಮೂಡಲಗಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಹಕಾರಿ ಕ್ಷೇತ್ರ ಸಂಪೂರ್ಣವಾಗಿ ನಿರ್ಲಕ್ಷಕ್ಕೆ ಒಳಗಾದ ಪರಿಣಾಮ ಇಡಿ ಸಹಕಾರ ವ್ಯವಸ್ಥೆಗೆ ಗರ ಬಡಿದಂತಾಗಿದೆ. ಕಳೆದ 7 ತಿಂಗಳಿನಿಂದ ಇಲಾಖೆಗೆ ಸಚಿವರೆ ಇಲ್ಲದೇ ಇರುವಂತಹದು ಕೂಡ ಒಂದು ವಿಪರ್ಯಾಸದ ಸಂಗತಿಯಾಗಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಆಕ್ರೋಶ ವ್ಯಕ್ತಪಡಿಸಿದರು.



ನವದೆಹಲಿಯಲ್ಲಿ ಪತ್ರಿಕಾ ಹೇಳಿಕೆ ನೀಡಿದ ಅವರು ರಾಜ್ಯದಲ್ಲಿ ಒಟ್ಟು 47,736 ಸಹಕಾರ ಸಂಘಗಳಿದ್ದು, ಈ ಪೈಕಿ 41,680 ಮಾತ್ರ ಸಕ್ರಿಯವಾಗಿವೆ. ಭೌಗೋಳಿಕವಾಗಿ ರಾಜ್ಯದಲ್ಲಿ ಅತಿದೊಡ್ಡ ಜಿಲ್ಲೆಯಾಗಿರುವ ಬೆಳಗಾವಿ ಒಂದರಲ್ಲೇ ಅತಿ ಹೆಚ್ಚು ಅಂದರೆ 2,661 ಸಹಕಾರ ಸಂಘಗಳು ನಷ್ಟಕ್ಕೆ ಸಿಲುಕಿವೆ. ಸಹಕಾರ ಚಳವಳಿಯ ಜನ್ಮಭೂಮಿ ಧಾರವಾಡದಲ್ಲೂ 1,640 ಸಂಘಗಳು ನಷ್ಟದಿಂದ ಬಳಲುತ್ತಿವೆ. ಜನರ ದುಡಿಮೆಗೆ ಪೂರಕವಾಗಿ ಆರ್ಥಿಕ ನೆರವು ನೀಡಬೇಕಾದ ಸಹಕಾರ ಸಂಘ-ಸಂಸ್ಥೆಗಳು ಸದ್ದಿಲ್ಲದೇ ಬಾಗಿಲು ಮುಚ್ಚುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಳೆದ 7 ತಿಂಗಳಿಂದ ಸಹಕಾರ ಇಲಾಖೆಗೆ ಪೂರ್ಣಾವಧಿ ಸಚಿವರೇ ಇಲ್ಲದಿರುವುದು ಪ್ರಜಾಪ್ರಭುತ್ವದ ದೊಡ್ಡ ವಿಪರ್ಯಾಸ. ಸಿಎಂ ಸಿದ್ದರಾಮಯ್ಯನವರು ತಮ್ಮ ಕುರ್ಚಿ ಉಳಿಸಿಕೊಳ್ಳಲು ತೋರುವ ಆಸಕ್ತಿಯನ್ನು ಸಚಿವ ಸಂಪುಟ ವಿಸ್ತರಣೆ ಮಾಡಿ ಒಬ್ಬ ಸಚಿವರನ್ನು ನೇಮಿಸಲು ಏಕೆ ತೋರುತ್ತಿಲ್ಲ? ಎಂದು ಪ್ರಶ್ನಿಸಿದ್ದಾರೆ.

ಕೂಡಲೇ ರಾಜ್ಯ ಸರ್ಕಾರವು ಎಚ್ಚೆತ್ತುಕೊಂಡು ಸಹಕಾರ ಇಲಾಖೆಗೆ ಪೂರ್ಣಾವಧಿ ಸಚಿವರನ್ನು ನೇಮಿಸಬೇಕು ಮತ್ತು ನಷ್ಟದಲ್ಲಿರುವ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಲು ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಸಂಸದ ಈರಣ್ಣ ಕಡಾಡಿ ಒತ್ತಾಯಿಸಿದ್ದಾರೆ.

24 ಗಂಟೆ ಕಾರ್ಯನಿರ್ವಹಿಸುವ ಅಗತ್ಯ ಸೌಕರ್ಯ, ತಾಂತ್ರಿಕತೆಗೆ ಸಿದ್ಧತೆ

ರಾಮದುರ್ಗ: ಜಿಲ್ಲಾ ಮಟ್ಟದ ಆಸ್ಪತ್ರೆಯಂತೆ ತಾಲೂಕು ಆಸ್ಪತ್ರೆಗಳು 24 ಗಂಟೆ ಕಾರ್ಯನಿರ್ವಹಿಸಲು ಅಗತ್ಯ ಮೂಲಭೂತ ಸೌಲಭ್ಯದ ಜೊತೆಗೆ ತಾಂತ್ರಿಕತೆ ಅಳವಡಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಿದ್ಧತೆ ಮಾಡಿಕೊಂಡಿದೆ ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ಸೋಮವಾರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ 100 ಹಾಸಿಗೆ ಆಸ್ಪತ್ರೆಗೆ ಮೇಲ್ದರ್ಜೆಗೆರಿಸಿ ಮಂಜೂರಾದ ರೂ. 33 ಕೋಟಿ ವೆಚ್ಚದ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ವೈದ್ಯರು ರೋಗಿಗಳೊಂದಿಗೆ ಉತ್ತಮ ಸೌಹಾರ್ದಯುತ ಸಂಬಂಧ ಹೊಂದುವುದರೊಂದಿಗೆ ಹೊಣೆಗಾರಿಕೆ ಯಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಕಳೆದ ಮೂರು ತಿಂಗಳ ಹಿಂದೆ ಆರಂಭಿಸಿರುವ ಗೃಹ ಆರೋಗ್ಯ ಯೋಜನೆಯಡಿ ಕೋಟಿ ಜನರು ತಪಾಸಣೆಗೆ ಒಳಗಾಗಿದ್ದು ಇನ್ನು



ಪರಿಣಾಮಕಾರಿಯಾಗಿ 14 ರೋಗಗಳಿಗೆ ಮನೆ ಮನೆಗೆ ತೆರಳಿ ಆರೋಗ್ಯ ಭಾಗ್ಯ ಒದಗಿಸಲಾಗುವುದು ಎಂದು ಹೇಳಿದರು.

ಆರೋಗ್ಯ ಇಲಾಖೆಗೆ ಸವಾಲಾಗಿದ್ದ ಬಾಣಂತಿ ಸಾವು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಶೇ. 25 ರಷ್ಟು ಕಡಿಮೆಯಾಗಿದೆ. ಶೂನ್ಯಕ್ಕೆ ಇಳಿಸಲು ಪ್ರಯತ್ನ ಮುಂದುವರೆದಿದೆ ಮತ್ತು ಆಶಾಕಿರಣ ಡಯಾಲೀಸಸ್ ಸೇರಿದಂತೆ ತಾಲೂಕು ಆಸ್ಪತ್ರೆಯಲ್ಲಿ ಹಲವು ಹೊಸ ಹೊಸ ಯೋಜನೆಗಳು ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಆರೋಗ್ಯ ಸಚಿವರು ತಿಳಿಸಿದರು.

ವಿರೋಧ ಪಕ್ಷಗಳು ಸರ್ಕಾರದಲ್ಲಿ ದುಡ್ಡಿಲ್ಲ ಗ್ಯಾರಂಟಿಗಳಿಗೆ ಅನುದಾನ ವ್ಯರ್ಥವಾಗುತ್ತದೆ ಎಂದು ಟೀಕಿಸುತ್ತಿವೆ. ಆದರೆ, ರಾಜ್ಯ ಸರ್ಕಾರದ ಗ್ಯಾರಂಟಿ ಅನುಷ್ಠಾನದ ಫಲವಾಗಿ ಬಡ ಕುಟುಂಬಗಳ ಆರ್ಥಿಕ ವ್ಯವಸ್ಥೆ ಸುಧಾರಣೆಗೊಂಡು ಬದುಕಿನಲ್ಲಿ ಬದಲಾವಣೆ ಕಂಡರೆ ರಾಜ್ಯದ ಜಿಡಿಪಿ ದೇಶದಲ್ಲಿ ಮೊದಲನೇ ಸ್ಥಾನದಲ್ಲಿದ್ದರೆ ತೆರಿಗೆಯಲ್ಲಿ ದೇಶದಲ್ಲಿ 2ನೇ ಸ್ಥಾನದಲ್ಲಿರುವದನ್ನು ಪ್ರತಿಪಕ್ಷಗಳು ಗಮನಿಸಬೇಕು ಎಂದರು.

ಆರೋಗ್ಯ ಇಲಾಖೆಗೆಸಂಬಂಧಿಸಿದಂತೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ತೀವ್ರ ನಿಗಾ ಘಟಕ, ಸವದತ್ತಿ, ಕಿತ್ತೂರ, ಖಾನಾಪೂರ ಮತ್ತು ರಾಮದುರ್ಗದಲ್ಲಿ ನೂರು ಹಾಸಿಗೆ ಆಸ್ಪತ್ರೆ ಮತ್ತು ಅಥಣಿಯಲ್ಲಿ ಎಂಸಿಎಚ್ ಆಸ್ಪತ್ರೆ ಸೇರಿ ರೂ.330 ಕೋಟಿಯ ಕಾಮಗಾರಿ ಕೈಗೊಂಡಿದ್ದು ಗ್ಯಾರಂಟಿ ಅನುಷ್ಠಾನದ ಜೊತೆಗೆ ಸರ್ಕಾರ ಅಭಿವೃದ್ಧಿಗೂ ಆದ್ಯತೆ ನೀಡಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಮಾತನಾಡಿ, ತಾಲೂಕಿನ ಬಹುದಿನದ ಬೇಡಿಕೆಯಾಗಿದ್ದ ನೂರು ಹಾಸಿಗೆ ಆಸ್ಪತ್ರೆಗೆ ಮಂಜೂರಿ ನೀಡಿದ್ದಲ್ಲದೆ ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ನಿರ್ಮಾಣಕ್ಕೆ ಒಪ್ಪಿಗೆ ನೀಡಿದ್ದು ತಾಲೂಕಿಗೆ ತಾಯ ಮತ್ತು ಮಕ್ಕಳ ಆಸ್ಪತ್ರೆ ಮಂಜೂರು ಮಾಡಬೇಕು ಎಂದು ಆರೋಗ್ಯ ಸಚಿವರಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಾಯುವ್ಯ ಕರ್ನಾಟಕ ಸಾರಿಗೆ ನಿಗಮದ ಉಪಾಧ್ಯಕ್ಷ ಸುನೀಲ ಹನಮನ್ನವರ, ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ವಿನಯ ನಾವಲಗಟ್ಟಿ, ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಜಿ.ಬಿ.ರಂಗನಗೌಡ್ರ, ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕಿ ಪುಷ್ಪಾ ಎಚ್. ಆರ್., ಡಿಎಚ್‌ಓ ಐ.ಪಿ.ಗಡಾದ, ಟಿಎಚ್‌ಓ ನವೀನ ನಿಜಗುಲಿ, ಪ್ರದೀಪ ಪಟ್ಟಣ ಇದ್ದರು.

ಮನಸ್ಸಿನಿಂದ ಜಾಗ್ರತರಾಗಿದ್ದರೆ ಪ್ರತಿದಿನವು ಶಿವರಾತ್ರಿ: ಪಿ.ರಾಜೀವ

ಕುಡಚಿ: ಯಾವ ಧರ್ಮವು ಕೂಡ ನೀನು ದ್ವೇಷ ಮಾಡು, ಹಲ್ಲೆ, ಅನ್ಯಾಯ ಮಾಡು ಅಂತ ಹೇಳುವುದಿಲ್ಲ, ಯಾರೇಲ್ಲ ಈಶ್ವರೀಯ ವಿಶ್ವವಿದ್ಯಾಲಯದ ಸಂಪರ್ಕದಲ್ಲಿ ಇದ್ದೀರಿ ಅವರು ಯಾವತ್ತು ಸೋಲುವುದಿಲ್ಲ, ಅವರು ಮೋಕ್ಷದ ದಾರಿಯಲ್ಲಿ ಬದುಕನ್ನು ಸಾಗಿಸುತ್ತಾರೆ. ಅವರಿಗೆ ನಮ್ಮ ಗುರಿ ಏನು? ನಾವು ಹೋಗುವ ದಾರಿ ಯಾವುದು ಎಂದು ಸ್ಪಷ್ಟವಾಗಿರುತ್ತದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ ಹೇಳಿದರು.

ರಾಯಬಾಗ ತಾಲೂಕಿನ ಕುಡಚಿ ಪಟ್ಟಣದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹಮ್ಮಿಕೊಂಡ ಶಿವನ ಡಂಗೂರ ಮಹಾಶಿವರಾತ್ರಿ 2026ರ ನಾಲ್ಕನೇಯ ದಿನದ ಮಹಾಶಿವರಾತ್ರಿ ಮತ್ತು ದೀಪೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ದೀಪ ಪ್ರಜ್ವಲನೆ ಹಾಗೂ ಶಿವ ಧ್ವಜ ಹಾರಿಸುವ ಮೂಲಕ ಮಾತನಾಡಿದರು.

ಮೋಕ್ಷದ ಮಾರ್ಗವನ್ನು



ಬಹಳ ಸ್ಪಷ್ಟವಾಗಿ ಹೇಳಿಕೊಡುವ ಮಹಿಳೆಯರಿಂದ ತಾಯಂದಿರಿಂದ ನಡೆಸಲ್ಪಡುವ ಜಗತ್ತಿನ ಅತಿದೊಡ್ಡ ಸಂಸ್ಥೆ ಇದ್ದರೆ ಅದು ಈಶ್ವರೀಯ ಸಂಸ್ಥೆಯಾಗಿದೆ. ಅದು ಅಧ್ಯಾತ್ಮದ ಸಂಶೋಧನೆ ನಡೆಸುತ್ತಿದೆ ಅದರಲ್ಲಿ ನೂರಾರು ಕೋಟಿ ಆಸ್ತಿ ಅಂತಸ್ತನ್ನು ಸಮರ್ಪಣೆ ಮಾಡಿ ಬಂದವರು ಇದ್ದಾರೆ. ನಮ್ಮ ಮನಸ್ಸಿನಲ್ಲಿ ಇರುವ ಅಂಧಕಾರ ಅದು ರಾತ್ರಿ. ಶಿವರಾತ್ರಿ ದಿನ ಜಾಗರಣೆ ಮಾಡುತ್ತೇವೆ ನಮ್ಮ ಮನಸ್ಸಿನಲ್ಲಿರುವ ಅಂಧಕಾರವನ್ನು ಹೊಡೆದೋಡಿಸಿ ಜಾಗ್ರೃತವಾಗಿರಬೇಕು ಅನ್ನುವಂತಹ ಸಂದೇಶವಾಗಿದೆ. ಎಲ್ಲರೂ ಕೂಡ ಮನಸ್ಸಿನಿಂದ ಜಾಗ್ರತರಾಗಿದ್ದರೆ ನಮಗೆ ಪ್ರತಿದಿನವು ಶಿವರಾತ್ರಿನೆ ಎಂದು ಹೇಳಿದರು.

ರಾಜಯೋಗಿನಿ ಬಿ.ಕೆ. ಪ್ರತಿಭಾ ಅಕ್ಕನವರು ಉಪನ್ಯಾಸಕರಾಗಿ ಮಹಾ ಶಿವರಾತ್ರಿ ಶಿವ ಸಂದೇಶ ನೀಡಿದರು. ಮೊದಲಿಗೆ ಪಟ್ಟಣದ ಕರ್ನಾಟಕ ವೃತ್ತದಲ್ಲಿ ಈಶ್ವರೀಯ ವಿಶ್ವವಿದ್ಯಾಲಯ ಮಾಹಿತಿ ಫಲಕವನ್ನು ಮಾಜಿ ಶಾಸಕ ಪಿ.ರಾಜೀವ, ಯುವಮುಖಂಡ ಅಮಿತ ಘಾಟಗೆ ರಿಬ್ಬಿನ ಎಳೆಯುವ ಮೂಲಕ ಉದ್ಘಾಟಿಸಿದರು. ನಂತರ ಆಕರ್ಷಣೆಯ ಕೇಂದ್ರವಾದ 21 ಅಡಿ ಎತ್ತರದ ಟೆಂಗಿನ ಕಾಯಿ ಶಿವಲಿಂಗಕ್ಕೆ ಪೂಜೆ ಸಲ್ಲಿಸಿ, ಭವ್ಯ ಮಂಟಪಗಳಲ್ಲಿ ನಿರ್ಮಿಸಿರುವ ಹನ್ನೆರಡು ಜ್ಯೋತಿರ್ಲಿಂಗಗಳ ದರ್ಶನ ಪಡೆದು ಅಕ್ಕಂದಿರ ಉಪಸ್ಥಿತಿ ಯಲ್ಲಿ ದೀಪೋತ್ಸವಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ 90ನೇ ಶಿವಮೂರ್ತಿ ಶಿವ ಜಯಂತಿ ಹಾಗೂ ಪುಟ್ಟ ಬಾಲಕ ಸರ್ವೇಶ ಚಿಂಚಲೆ ಜನ್ಮದಿನದ ನಿಮಿತ್ತ ಕೇಕ್ ಕತ್ತರಿಸಿ ಆಚರಿಸಿದರು.

ನಂತರ ಡಿ.ಬಿ.ದರೂರೆ ಹಿಪ್ಪೋ ಕ್ಯಾಂಪಸ್ ಶಾಲೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಕೊನೆಯದಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕಾರ್ನಿಕರ್ತರಾದ ಸರ್ವರನ್ನು ಸತ್ಕರಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಕುಡಚಿ ಸೇವಾಕೇಂದ್ರದ ರಾಜಯೋಗಿನಿ ವಿದ್ಯಾ ಅಕ್ಕನವರು, ಮಾಜಿ ಶಾಸಕ ಪಿ.ರಾಜೀವ, ಯುವ ಮುಖಂಡ ಅಮಿತ ಘಾಟಗೆ, ಐಎಎಸ್ ಅಧಿಕಾರಿ ಗಜಾನನ ಬಾಲೆ, ಪಿ.ಎಸ್.ಐ ಪ್ರೀತಮ್ ನಾಯಿಕ, ಶ್ರೀಶೈಲ ದರೂರೆ, ಸಿದ್ದಾನಿ ಸಣ್ಣಕ್ಕಿ, ಶಿವರಾಜ ಬುಸಗುಂಡೆ, ಶ್ರೀಮಾನ್ ನಾಯಿಕ, ಶ್ರೀಧರ ಮೂಡಲಗಿ, ಗೋಮಟೇಶ ಪಾಟೀಲ, ಶಿವಪ್ಪಾ ಗಸ್ತಿ, ಮೋಹನ್ ಲೋಹಾರ, ಶೇಖರ್ ದಳವಾಯಿ, ಪ್ರೇಮ ಗುಪ್ತೆ, ಶೀತಲ ಲೋಹಾರ ಇತರರು ಉಪಸ್ಥಿತರಿದ್ದರು.

ಬಿ.ಕೆ.ದತ್ತಾ ಸಣ್ಣಕ್ಕಿ ಸ್ವಾಗತಿಸಿದರೆ, ಯಲ್ಲಪ್ಪ ಯಲ್ಲಟ್ಟಿ ನಿರೂಪಿಸಿದರು.

ಕಿರುಸುದ್ದಿ



ಬೀಳಗಿ: ತಾಲೂಕಿನ ಚಿಕ್ಕ ಸಂಗಮದಲ್ಲಿ ಮಹಾಶಿವರಾತ್ರಿ ಶಿವಯೋಗದ ನಿಮಿತ್ತ ಶ್ರೀ ಸಂಗಮನಾಥ ದೇವರ ಮೂರ್ತಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಸಂಗಮನಾಥ ದರ್ಶನಕ್ಕೆ ನೂರಾರು ಸದ್ಭಕ್ತರು ಆಗಮಿಸಿ ಪುನೀತರಾದರು.

ಹೋಳಿ ಹಬ್ಬ: ಪೂರ್ವಭಾವಿ ಸಭೆ ನಾಳೆ

ಬಾಗಲಕೋಟೆ: ಹೋಳಿ ಹಬ್ಬದ ನಿಮಿತ್ತ ಫೆ.18ರಂದು ನಗರದ ರೈಲ್ವೇ ಸ್ಟೇಷನ್ ರಸ್ತೆಯಲ್ಲಿರುವ ಅಂಬಾಭವಾನಿ ದೇವಸ್ಥಾನದ ಸಮುದಾಯ ಭವನದಲ್ಲಿ ಸಂಜೆ 6.30ಕ್ಕೆ ಹೋಳಿ ಹಬ್ಬದ ಆಚರಣಾ ಸಮಿತಿ ವತಿಯಿಂದ ಪೂರ್ವಭಾವಿಯಾಗಿ ಸಭೆ ಕರೆಯಲಾಗಿದೆ. ನಗರದ ಐದು ಓಣಿಯ ಬಾಬುದಾರರು, ಹೋಳಿ ಆಚರಣಾ ಸಮಿತಿ ಪದಾಧಿಕಾರಿಗಳು, ಹಳೆ ಬಾಗಲಕೋಟೆ, ನವನಗರ, ವಿದ್ಯಾಗಿರಿ ಭಾಗದ ಹಿರಿಯರು, ಯುವಕರು ಸಭೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಬೇಕು ಎಂದು ಹೋಳಿ ಹಬ್ಬದ ಆಚರಣಾ ಸಮಿತಿ ಅಧ್ಯಕ್ಷ ಕಳಕಪ್ಪ ಬಾದವಾಡಗಿ ಹಾಗೂ ಪ್ರಧಾನ ಕಾರ್ಯದರ್ಶಿ ಮಹಾಬಲೇಶ್ವರ ಗುಡಗುಂಟಿ ತಿಳಿಸಿದ್ದಾರೆ.

ಹಗಲಿನಲ್ಲಿಯೇ ಎರಡು ಮನೆ ಕಳ್ಳತನ

ಜಮಖಂಡಿ: ಸಮೀಪದ ಹುನ್ನೂರು ಗ್ರಾಮ ಗಣೇಶ ನಗರ ಬಡಾವಣೆಯಲ್ಲಿ ಹಗಲು ಹೊತ್ತು ಎರಡು ದರೋಡೆ ಪ್ರಕರಣಗಳು ಇಂದು ನಡೆದಿವೆ. ಫೆ. 16ರಂದು ಮಧ್ಯಾಹ್ನ ಸುಮಾರು 11 ರ ನಂತರ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಇಬ್ಬರು ಯುವಕರು ಈ ಕಳ್ಳತನ ನಡೆಸಿದ್ದಾರೆಂದು ಶಂಕಿಸಲಾಗಿದೆ. ನಗರ ಮತ್ತು ಗ್ರಾಮೀಣ ಠಾಣೆಗಳಲ್ಲಿನ ದಿಟ್ಟಂದಿಗಳು ಬಂದೋಬಸ್ತಗೆ ಬೇರೆ ಬೇರೆ ಸ್ಥಳಗಳಿಗೆ ತೆರಳಿದ್ದಾರೆ ಅದರಿಂದ ಸ್ಥಳೀಯವಾಗಿ ಸಿಬ್ಬಂದಿಗಳು ಇಲ್ಲದೇ ಇದ್ದುದರಿಂದ ತತ್ಕ್ಷಣದಲ್ಲಿ ಸ್ಥಳಕ್ಕೆ ಆಗಮಿಸುವುದು ವಿಳಂಬವಾಗಿದೆ. ಪೊಲೀಸ್ ಸಿಬ್ಬಂದಿ ಸಿದ್ದು ಮೇಟಿ, ಎಸ್.ಬಿ.ಹನಗಂಡಿ ಕಳವು ಆದ ಮನೆಗೆ ತೆರಳಿ ತನಿಖೆ ಮಾಡಿದ್ದಾರೆ.

ಆತ್ಮಹತ್ಯೆಗೆ ಯತ್ನ: ಶಾಸಕ ಗುಡಗುಂಟಿ ಸಾಂತ್ವನ

ಜಮಖಂಡಿ: ಇತ್ತೀಚಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಆಧಾರದ ನೌಕರರನ್ನು ತೆಗೆದ ಹಿನ್ನೆಲೆಯಲ್ಲಿ ಆತ್ಮ ಹತ್ಯೆಗೆ ಯತ್ನಿಸಿದ ಕಾರ್ಮಿಕರಿಗೆ ಶಾಸಕ ಜಗದೀಶ ಗುಡಗುಂಟಿ ಸಾಂತ್ವಾನ ಹೇಳಿದರು.

ಮಾಜಿ ನಗರ ಸಭೆ ಸದಸ್ಯ ಕುಷಾಲ ವಾಗಮಾರೆ ಮತ್ತು ಬಾಜಪ ಮಾರ್ಧ್ಯಮ ಸಂಚಾಲಕ ಶ್ರೀಧರ ಕಂಬಿ ಆತ್ಮ ಹತ್ಯೆಗೆ ಯತ್ನಿಸಿದ ಕಾರ್ಮಿಕರನ್ನು ಭೇಟಿಯಾಗಿ ಕಾರ್ಯನಿಮಿತ್ಯ ಬೆಂಗಳೂರಿಗೆ ತೆರಳಿದ ಶಾಸಕರೊಂದಿಗೆ ದೂರವಾಣಿ ಮೂಲಕ ಮಾತನಾಡಿಸಿದ್ದಾರೆ.

ಯಾವತ್ತೂ ನಾವು ನಿಮ್ಮೊಂದಿಗಿದ್ದೇವೆ ನಾವು ಜಮಖಂಡಿಗೆ ಬಂದಕ್ಷಣದಲ್ಲಿ ನಿಮ್ಮನ್ನು ಭೇಟಿಯಾಗಿ ನಿಮ್ಮ ಸಮಸ್ಯೆಯನ್ನು ಇತ್ಯರ್ಥ ಮಾಡುತ್ತೇವೆ ಎಂದು ತಿಳಿಸಿದ್ದಾರೆ ಎಂದು ಶ್ರೀಧರ ಕಂಬಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಬು ಅರಕೇರಿ ನಿಧನ



ಮುಧೋಳ: ಬಸವಲಿಂಗ ನಗರದ ನಿವಾಸಿ, ಹೆಸ್ಕಾಂ ನಿವೃತ್ತ ಲೈನಮನ್ ಸಾಬು ಕರೆಪ್ಪ ಅರಕೇರಿ(79) ನಿಧನರಾದರು. ಮೃತರು ಪತ್ನಿ, ಪುತ್ರಿ, ಮೂವರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.



ಕಲಾದಗಿ: ಗ್ರಾಮದ ಸೂಫಿಸಂತರಾದ ನೂರ ಅಲಿಷಾ ಬಾಬಾ ಅವರ 84ನೇ ಉರುಸಿನ ನಿಮಿತ್ಯ ದರ್ಗಾಕೆ ಶಾಸಕ ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ ಜೆ.ಟಿ.ಪಾಟೀಲ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಉಪಾದ್ಯಕ್ಷ ಎಂಬಿ ಸೌದಾಗರ, ನಾರಾಯಣ ಹಾದಿಮನಿ, ಬಂದೇನವಾಜ ಸೌದಾಗರ, ಫಕೀರಪ್ಪ ಮಾದರ, ಎಂ.ಎ.ತೇಲಿ, ಮಲ್ಲಪ್ಪ ಜಮಖಂಡಿ, ಅಕ್ರಂ ಸೌದಾಗರ, ಸಮಿವುಲ್ಲಾ ಕಲಾದಗಿ ಸೇರಿದಂತೆ ಇತರರಿದ್ದರು.

ಖೋತ ಕಾಲೇಜಿಗೆ ಅತ್ಯುತ್ತಮ ಫಲಿತಾಂಶ



ಬೀಳಗಿ: ತಾಲೂಕಿನ ಅನಗವಾಡಿಯ ಶ್ರೀ ಬನಶಂಕರಿದೇವಿ ವಿದ್ಯಾ ಸಂಸ್ಥೆಯ ಬಿ. ಎನ್. ಖೋತ ಪದವಿ(ಬಿಸಿಎ) ಕಾಲೇಜಿನ ವಿದ್ಯಾರ್ಥಿಗಳು ಬಾಗಲಕೋಟ ವಿಶ್ವವಿದ್ಯಾಲಯದಿಂದ ಡಿಸೆಂಬರ್-ಜನೇವರಿಯಲ್ಲಿ ಜರುಗಿದ ಬಿ.ಸಿ.ಎ. ಪ್ರಥಮ ಸೆಮಿಸ್ಟರ್ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದು, ಒಟ್ಟು ಪರೀಕ್ಷೆಗೆ ಕುಳಿತ 36 ವಿದ್ಯಾರ್ಥಿಗಳಲ್ಲಿ 18 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ. ರೇಖಾ ಯಡಹಳ್ಳಿ ಶೇ. 93.84 ಅಂಕಗಳನ್ನು ಪಡೆಯುವುದರ ಮೂಲಕ ಕಾಲೇಜಿಗೆ ಮೊದಲನೇ ರ್‍ಯಾಂಕ್ ಪಡೆದಿರುತ್ತಾರೆ. ಆಲಿಷಾ ಮುಲ್ಲಾ ಶೆ. 91.84 ಅಂಕ ಪಡೆದು ದ್ವಿತೀಯ ಹಾಗೂ ಕಾವೇರಿ ಲಮಾಣಿ ಶೇ. 89.38 ಅಂಕ ಗಳಿಸಿ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ. ರುಬಿನ ನದಾಫ್ ಶೆ.89.23, ಪ್ರೀತಿ ಮುದಕನ್ನವರ ಶೇ.87.53, ಸಾಕ್ಷಿ ಕೋಲಕಾರ ಶೇ.85.69, ಶಾಂತಾ ಲಿಂಗಣ್ಣವರ ಶೇ. 85.53, ಸಾಕ್ಷತಾ ಬಾಟಿ ಶೇ.85.07 ಪ್ರತಿಶತ ಫಲಿತಾಂಶಕ್ಕೆ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಖೋತ, ಆಡಳಿತ ಮಂಡಳಿಯ ಸದಸ್ಯರು, ಶಾಲೆ ಮತ್ತು ಕಾಲೇಜಿನ ಪ್ರಾಂಶುಪಾಲ ಸುರೇಶ ಹವಾಲ್ದಾರ ಅವರು ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತ ಪಡಿಸಿರುತ್ತಾರೆ.



ಬಾಗಲಕೋಟೆ: ಹುಬ್ಬಳ್ಳಿಯಿಂದ ವಿಜಯಪುರವರೆಗೆ ಇರುವ ಎನ್ ಹೆಚ್-52 ರಸ್ತೆ ವಿಭಾಗವನ್ನು NHAI ಗೆ ವರ್ಗಾವಣೆ ಮಾಡುವ ಮಹತ್ವದ ನಿರ್ಧಾರ ಕೈಗೊಂಡ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ರಾಜ್ಯ ಸಭೆ ಸಂಸದ ನಾರಾಯಣಸಾ ಭಾಂಡಗೆಯವರು ಭೇಟಿಯಾಗಿ ಅಭಿನಂದಿಸಿದರು.

ಲೋಕೇಶ್ವರನ ರಥೋತ್ಸವ ಸಂಪನ್ನ

ಲೋಕಾಪುರ : ಪಟ್ಟಣದ ಪವಾಡದ ಪುರುಷ ಶ್ರೀ ಲೋಕೇಶ್ವರ ಜಾತ್ರೆಯ ನಿಮಿತ್ತ ಸೋಮವಾರ ಅಪಾರ ಭಕ್ತಾದಿಗಳ ಮಧ್ಯೆ ರಥೋತ್ಸವ ಸಡಗರ, ಶ್ರದ್ಧಾ ಭಕ್ತಿ, ಸಂಭ್ರಮದಿಂದ ನೇರವೇರಿತು.

ಬೆಳಗಿನ ಜಾವದಿಂದಲೇ ದೇವಸ್ಥಾನದಲ್ಲಿಕ್ರಿಯಾ ಮೂರ್ತಿಗಳ ನೇತೃತ್ವದಲ್ಲಿ ಅರ್ಚಕರ ಬಳಗವು ಪೂಜಾ ಕೈಂಕರ್ಯಗಳನ್ನು ನೇರವೇರಿಸುತ್ತಿದ್ದಂತೆ ಸರತಿ ಸಾಲಿನಲ್ಲಿ ಭಕ್ತರು ಲೋಕನಾಥ ದರ್ಶನ ಪಡೆದು ಧನ್ಯರಾದರು. ರಥವನ್ನು ವಿವಿಧ ಬಣ್ಣ ಬಣ್ಣದ ಬಟ್ಟೆಗಳಿಂದ, ರುದ್ರಾಕ್ಷಿ ಮಾಲೆ ಮತ್ತು ಹೂವಿನಿಂದ ಅಲಂಕರಿಸಲಾಗಿತ್ತು. ಈ ವರ್ಷ ರಥಕ್ಕೆ ಹೊಸ ಗಾಲಿಯನ್ನು ಜೋಡಿಸಲಾಗಿತ್ತು.

ರಥಕ್ಕೆ ಕಳಾಸರೋಹಣ ತುದಿಯಲ್ಲಿ ವರ್ಣಾಲಂಕಾರ ಧ್ವಜವನ್ನು ಕಟ್ಟಲಾಗುತ್ತದೆ. ಬಳಿಕ ನವರತ್ನ ಹಾಗೂ ಫಲ ಪುಷ್ಪಾಲಂಕಾರ, ಹೂವಿನಿಂದ ಕಂಗೊಳಿಸುವ ಲೋಕನಾಥ ವಿಗ್ರಹವನ್ನು ರಥದಲ್ಲಿರಿಸಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ರಥಕ್ಕೆ ಭಕ್ತರು ಬಾಳೆಹಣ್ಣು, ಉತ್ತತ್ತಿ, ಹೂಗಳನ್ನು ಎಸೆದು ಭಕ್ತಿ ಸಮರ್ಪಿಸಿದರು. ವಿವಿಧ ಹಣ್ಣು, ನಾಣ್ಯಗಳನ್ನು ರಥದತ್ತ ಎಸೆದು ಭಕ್ತಿಸೇವೆ ಸಲ್ಲಿಸಿದರು. ರಥೋತ್ಸವ ರಾಮಲಿಂಗೇಶ್ವರ ದೇವಸ್ಥಾನಕ್ಕೆ ತಲುಪಿ ಮರಳಿ ದೇವಸ್ಥಾನಕ್ಕೆ ಬಂದು ಸೇರಿತು.

ರಥೋತ್ಸವದಲ್ಲಿ ಲೋಕಾಪುರ, ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು. ರಥೋತ್ಸವದ ಕಳಸ ದೇಸಾಯಿ ವಾಡೆಯಿಂದ ವಿವಿಧ ಕಲಾ ಮೇಳದೊಂದಿಗೆ ನಂದಿಕೋಲ, ಜಾಂಜ್‌ದೊಂದಿಗೆ ಅಂಬಾರಿ ಹಲವು ಮೇಳಗಳೊಂದಿಗೆ ಮೆರವಣಿಗೆಯ ಮುಖಾಂತರ ದೇವಸ್ಥಾನ ಬಂದು ತಲುಪಿ ನಂತರ ರಥೋತ್ಸವಕ್ಕೆ



ಚಾಲನೆ ದೊರೆಯಿತು. ದೇವಸ್ಥಾನವನ್ನು ದೀಪಗಳಿಂದ ಅಲಂಕರಿಸಲಾಗಿತ್ತು. ಜ್ಞಾನೇಶ್ವರ ಮಠದ ಪೀಠಾಧಿಕಾರಿ ಬ್ರಹ್ಮಾನಂದ ಶ್ರೀಗಳ ನೇತೃತ್ವ ವಹಿಸಿದ್ದರು. ಸ್ಥಳೀಯ ಗಣ್ಯರಾದ ಡಾ. ಕೆ.ಎಲ್.ಉದಪುಡಿ ಸಹಕಾರದೊಂದಿಗೆ ಜಾತ್ರಾ ಕಮಿಟಿಯ ಅಧ್ಯಕ್ಷ ಕಿರಣರಾವ ದೇಸಾಯಿ ಇವರ ನೇತೃತ್ವದಲ್ಲಿ ರಥೋತ್ಸವ ನೆರವೇರಿತು. ಸಿಪಿಐ ಮಹಾದೇವ ಸಿರಹಟ್ಟಿ ಹಾಗೂ ಠಾಣಾಧಿಕಾರಿ ಕೆ.ಬಿ.ಜಕ್ಕನ್ನವರ ಹಾಗೂ ಪೋಲಿಸ್ ಸಿಬ್ಬಂದಿ ಬಿಗಿ ಪೋಲಿಸ್ ಬಂದುಬಸ್ತ್ ಮಾಡಲಾಗಿತ್ತು. ಪಟ್ಟಣದ ವಿವಿಧಡೆ ಗಣ್ಯರ ಕಟೌಟಗಳ ಭರಾಟ ಎದ್ದು ಕಾಣುತ್ತಿತ್ತು. ಜಾತ್ರೆಯಲ್ಲಿ ವಿವಿಧ ಕಲಾತಂಡಗಳಲ್ಲಿ ನೃತ್ಯ ಮಾಡುತ್ತಿರುವ ಮಂಗಳಮುಖಿಯರ ನೃತ್ಯ ಜನಮನಸೂರೆಗೊಂಡಿತು.

ಗಣ್ಯರಿಂದ ವಿಶೇಷ ಪೂಜೆ : ಜಾತ್ರೆಯ ನಿಮಿತ್ತ ಬಿಜೆಪಿ ಮುಖಂಡ ಅರುಣ ಕಾರಜೋಳ ಹಾಗೂ ಯುಥ್ ಕಾಂಗ್ರೇಸ್ ಪ್ರಧಾನ ಕಾರ್ಯದರ್ಶಿ ವಿನಯ ತಿಮ್ಮಾಪುರ ಲೋಕೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಕ್ಯಾಮರ್ ಕಣ್ಗಾವಲು : ಜಾತ್ರಾ ನಿಮಿತ್ತ ಜನಸಂದಣಿ ದೇವಸ್ಥಾನದ ಸುತ್ತಮುತ್ತ, ಮಹಿಳೆಯರು, ಮಕ್ಕಳು ಇದ್ದ ಕಡೆ ಪೊಲೀಸ್ ಇಲಾಖೆ ಕ್ಯಾಮರ್ ಕಣ್ಗಾವಲು ಇಟ್ಟಿದ್ದರು. ಸಿಪಿಐ ಮಹಾದೇವ ಸಿರಹಟ್ಟಿ, ಪಿಎಸ್‌ಐ ಕೆ.ಬಿ.ಜಕ್ಕನ್ನವರ ಹಾಗೂ ಪೋಲಿಸ್ ಸಿಬ್ಬಂದಿ ಲೋಕಾಪುರ ಸುತ್ತಮುತ್ತಲಿನ ಲೋಕೇಶ್ವರ ಅಪಾರ ಭಕ್ತರು ಇದ್ದರು.

ಜಾತ್ರೆಯಲ್ಲಿ ಮುಖಂಡರಾದ ಡಾ. ಕೆ.ಎಲ್. ಉದಪುಡಿ, ಲೋಕಣ್ಣ ಕತ್ತಿ, ಶಿವಾನಂದ ಉದಪುಡಿ, ಪ್ರಕಾಶ ಚುಳಕಿ, ವ್ಹಿ.ಎಂ.ತೆಗ್ಗಿ, ಎಂ.ಎಂ.ವಿರಕ್ತಮಠ, ಲೋಕಣ್ಣ ಕೊಪ್ಪದ, ಷಣ್ಮುಖಪ್ಪ ಕೋಲ್ಹಾರ, ಗುರುರಾಜ ಉದಪುಡಿ, ಬಸವರಾಜ ಕಾತರಕಿ, ಕಾಶಿನಾಥ ಹುಡೇದ, ರಮೇಶ ಪಂಚಕಟ್ಟಿಮಠ, ಈಶ್ವರ ಹವಳಖೋಡ, ಸದಾಶಿವ ಉದಪುಡಿ, ರಫೀಕ ಬೈರಕದಾರ, ಪವನ ಉದಪುಡಿ, ಮಾನಿಂಗಪ್ಪ ಹುಂಡೇಕಾರ, ಹೊಳಬಸು ಕಾಜಗಾರ, ಅರ್ಜುನ ಕೊಪ್ಪದ, ಗುಲಾಬಸಾಬ ಅತ್ತಾರ, ಲೋಕಾಪುರ, ಲಕ್ಷಾನಟ್ಟಿ, ಅರಳಿಕಟ್ಟಿ, ನಾಗನಾಪುರ, ವೆಂಕಟಾಪುರ, ಜಾಲಿಕಟ್ಟಿ, ಚೌಡಾಪುರ, ವರ್ಚಗಲ್ ಹಾಗೂ ಸುತ್ತಮುತ್ತಲಿನ ಗ್ರಾಮದ ಅಪಾರ ಸಂಖ್ಯೆ ಭಕ್ತರು ಇದ್ದರು.

ಭಕ್ತರ ಸಮ್ಮುಖದಲ್ಲಿ ಸಡಗರ ಸಂಭ್ರಮದ ಮಹಾರಥೋತ್ಸವ

ಬಾದಾಮಿ: ಧಾರ್ಮಿಕ ಶ್ರದ್ಧಾಕೇಂದ್ರ ಸುಕ್ಷೇತ್ರ ಮದ್ವೀರಶೈವ ಶಿವಯೋಗ ಮಂದಿರದ116ನೇಕಾರಣಿಕಯುಗಪುರುಷ ಹಾನಗಲ್ ಕುಮಾರ ಶ್ರೀಗಳ 65 ಅಡಿ ಎತ್ತರದ ಮಾಹಾರಥೋತ್ಸವ ಸೋಮವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸಡಗರ ಸಂಭ್ರಮದೊಂದಿಗೆ ಜರುಗಿತು.

ಏಷ್ಯಾ ಖಂಡದಲ್ಲಿಯೇ ಅತಿ ಎತ್ತರದ (65ಅಡಿ) ಮಹಾರಥೋತ್ಸವಕ್ಕೆ ಸಾಂಪ್ರದಾಯಕವಾಗಿ ಪೂಜೆ ಪುನಸ್ಕಾರ ನೆರವೇರಿಸಿದ ಸಂಸ್ಥೆಯ ಅಧ್ಯಕ್ಷ, ಮೂರು ಸಾವಿರಮಠದ ಗುರುಸಿದ್ಧ ರಾಜಯೋಗೇಂದ್ರ ಶ್ರೀಗಳು ರಥೋತ್ಸವಕ್ಕೆ ಚಾಲನೆ ನೀಡಿದರು. ಶಿರಬಡಗಿ ಗ್ರಾಮದ ಭಕ್ತಾಧಿಗಳು ತಂದ ಹಗ್ಗದಿಂದ ಭಕ್ತಗಣ ರಥ ಎಳೆಯಲಾಯಿತು. ಮಹಾರಥೋತ್ಸವಕ್ಕೆ ಭಕ್ತರು ಹೂವು ಸಮರ್ಪಿಸುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು. ಅಪಾರ ಭಕ್ತ ಸಮೂಹ ಶಿವನ ಹಾಗೂ ಶಿವಯೋಗಿಗಳ ಸ್ಮರಣೆ ಮೂಲಕ ರಥ ಎಳೆದರು. ಸಂಸ್ಥೆಯ ಅಧ್ಯಕ್ಷರೂ ಆಗಿರುವ ಮೂರು ಸಾವಿರಮಠದ ಗುರುಸಿದ್ಧ ರಾಜಯೋಗೇಂದ್ರ ಶ್ರೀಗಳ ಉಪಾಧ್ಯಕ್ಷ ಹಾವೇರಿ ಹುಕ್ಕೇರಿ ಮಠದ ಸದಾಶಿವ ಶ್ರೀಗಳ ನೇತೃತ್ವದಲ್ಲಿ ಪೂಜೆ ಕೈಂಕರ್ಯಗಳು ಜರುಗಿದವು.

ಮಾಹಾರಥೋತ್ಸವದಲ್ಲಿ ನಾಡಿನ ಮಹಾಸ್ವಾಮಿಗಳಾದ ಹೊಳೆಹುಚ್ಚೇಶ್ವರ ಫಕೀರ ದಿಂಗಾಲೇಶ್ವರ ಸ್ವಾಮಿಜಿ ನೂರಾರು ಮಠಾಧೀಶರು, ಶ್ರೀಗಳು,



ವಟುಸಾಧಕರು ಹಾಜರಿದ್ದರು. ಶಾಸಕ ಭೀಮಸೇನ ಚಿಮ್ಮನಕಟ್ಟಿ, ಮಾಜಿ ಶಾಸಕ ಎಂ.ಕೆ.,ಪಟ್ಟಣಶೆಟ್ಟಿ ಧರ್ಮದರ್ಶಿ ಎಂ.ಬಿ.ಹಂಗರಗಿ, ಶರಣಪ್ಪಗೌಡ ಪಾಟೀಲ, ಕುಮಾರಗೌಡ ಜನಾಲಿ, ಮಹಾಂತೇಶ ಮಮದಾಪೂರ, ಶಾಂತಗೌಡ ಪಾಟೀಲ, ಬಸವರಾಜ ಪಾಟೀಲ, ಸಿದ್ದನಗೌಡ ಪಾಟೀಲ, ಆರ್.ಬಿ.ಪಾಟೀಲ, ಮುಕ್ಕಣಗೌಡ ಜನಾಲಿ, ನಾಗರಾಜ ಕಾಚೆಟ್ಟಿ, ಡಾ.ಆರ್.ಸಿ.ಭಂಡಾರಿ, ಪಂಪಣ್ಣ ಕಾಚೆಟ್ಟಿ, ಸಿಪಿಐ. ಕರೆಪ್ಪ ಬನ್ನೆ, ಪಿ.ಎಸ್.ಐ ಹನಮಂತ ನರಳೆ, ಜಿಲ್ಲೆಯ ವಿವಿಧ ಭಾಗಗಳ ಸಹಸ್ರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸಿದ್ದರು.ತಾಲೂಕಿನಮಂಗಳೂರು ಗ್ರಾಮದ ಭಜನಾ ಮಂಡಳಿಯವರು ನಂದಿಕೋಲು ಮೆರವಣಿಗೆಯೊಂದಿಗೆ ಮಹಾರಥೋತ್ಸವದಲ್ಲಿ ಗಮನಾರ್ಹವಾಗಿತ್ತು.

ಜಾತಿ ಭೇದವಿಲ್ಲದ ಸೌಹಾರ್ದ ಬದುಕು ಸಾಗಿಸಿ: ಶ್ರೀಗಳು

ಮಹಾಲಿಂಗಪುರ: ಜಾತಿ ಭೇದ ಎನ್ನದೆ ಎಲ್ಲರೂ ಸೇರಿ ಸೌಹಾರ್ದ ರೀತಿಯಿಂದ ಬದುಕುವ ಪಟ್ಟಣ ಮಹಾಲಿಂಗಪುರ ಎಂದು ಶ್ರೀ ಗುರು ಮಹಾಲಿಂಗೇಶ್ವರ ಮಠದ ಅಧಿಪತಿ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಶ್ರೀಗಳು ಹೇಳಿದರು.

ಭಾನುವಾರ ಬೆಳಗ್ಗೆ ಮಾದಿಗ ಸಮುದಾಯದ ರುದ್ರಭೂಮಿಯಲ್ಲಿ ಬೃಹತ್ ಶಿವನ ಮೂರ್ತಿ ಉದ್ಘಾಟನೆ ಮಾಡಿ ಮಾತನಾಡಿ, ದೇವರು ಭೂಮಿ ಮೇಲಿನಸಕಲ ಚರಾಚರ ವಸ್ತುಗಳಿಗೆ ಒಡೆಯನಾಗಿದ್ದು, ಎಲ್ಲರನ್ನು ಆತ ಸಮನಾಗಿ ನೋಡುತ್ತಾನೆ. ಆದ್ದರಿಂದ ನಾವು ಸಹಿತ ಆ ಶಿವನನ್ನು ಭಕ್ತಿ ಪೂರ್ವಕವಾಗಿ ಆರಾಧನೆ ಮಾಡುತ್ತ ನಮ್ಮ ಬದುಕನ್ನು ಸಾರ್ಥಕ ಗೊಳಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಸಮಾಜದ ಭೀಮಸಿ ಗೌಂಡಿ, ಶಿವಬಸು ಗೌಂಡಿ, ನಾಗಪ್ಪ ಗೌಂಡಿ, ಅರ್ಜುನ್ ಆನೆಪ್ಪಗೋಳ, ಕಲಾವಿದರಾದ ಡಿ.ಕೆ. ರಂಗನಾಥ್, ಪರಶುರಾಮ ಮೇತ್ರಿ,ಮಾಲಿಂಗಪ್ಪ ಅಮಲಜೇರಿ, ಪ್ರಶಾಂತ ಮುಖ್ಯೆನವರ,ಪ್ರಹ್ಲಾದ್ ಉತ್ತೂರ, ಸುಭಾಸ ಜಮಖಂಡಿ, ದಶರಥ ಮಾಂಗ್, ಭೀಮಶಿ ಕಿರಿಕಿರಿ, ಪುಂಡಲೀಕ ಮಾಂಗ, ಸಂತಪ್ಪ ದೊಡ್ಡಮನಿ, ಸಂಜು ಹಲಸಪ್ಪಗೋಳ, ಸಾಗರ ಹಲಸಪ್ಪಗೋಳ, ರಾಘು ಭಾವಿಕಟ್ಟಿ, ಉಮೇಶ್ ಕಿರಿಕಿರಿ, ಚೆನ್ನಪ್ಪ ಮೇತ್ರಿ, ರಾಜು ಮೇತ್ರಿ, ಮಹಾಲಿಂಗಪ್ಪ ಗೌಂಡಿ, ಯಮನಪ್ಪ ಮಾಂಗ, ಬಸವರಾಜ ಹಲಸಪ್ಪಗೋಳ ಮತ್ತು ಇನ್ನೂ ಅನೇಕರಿದ್ದರು.

ಹಿಂದೂ ರುದ್ರಭೂಮಿಯಲ್ಲಿ ಶಿವರಾತ್ರಿ

ಬೇಸಿಗೆಯ ಆರಂಭದಲ್ಲಿ ಆಗಮಿಸುವ ಮಹಾಶಿವರಾತ್ರಿ ಆಚರಣೆಯನ್ನು ಸ್ಥಳೀಯ ಹಿಂದೂ ರುದ್ರ ಭೂಮಿಯಲ್ಲಿ ಸದ್ಭಕ್ತರು ಬಹಳ ವಿಜೃಂಭಣೆಯಿಂದ ಆಚರಣೆ ಮಾಡಿದರು. ಬಸವ ಬಳಗದ ಸಿ.ಎಂ.ಕಟಗಿ ಮಾತನಾಡಿದರು. ಟೊನಪಿನಾಥ ಭಜನಾ ಮಂಡಳಿಯ ಮಲ್ಲಪ್ಪ ನುಚ್ಚಿ ಬಳಗದ ವತಿಯಿಂದ ಶಿವ ಭಜನೆ ನಡೆಯಿತು. ಇವರಿಗೆ ಅರ್ಜುನ್ ಸಣ್ಣಕ್ಕಿ, ಸುಭಾಸ ಸೋರಗಾವಿ, ರವಿ ಮುಗಳ್ಯಾಳ ಮತ್ತು ಯಮನಪ್ಪ ಟೊನಪಿ ಸಾಥ ನೀಡಿದರು.

ಬಸವ ಬಳಗದ ಹೊಳಬಸು ಹಡಪದ ವಚನ ಸಾಹಿತ್ಯ ಪದಗಳನ್ನು ಹಾಡಿದರು. ಹಿರಿಯರಾದ ಸಂಗಪ್ಪ ಹಲ್ಲಿ, ಈಶ್ವರ್ ಮುರಗೋಡ, ರುದ್ರಭೂಮಿಯ ಕರೆಸೇವಕ ಸಿದ್ದು ಶಿರೋಳ, ಶಿವಾನಂದ ಟಿರಕಿ,ಲಕ್ಷ್ಮಣ ಕಿಶೋರಿ ಮಾತನಾಡಿದರು ಹನುಮಂತ ಜಮಾದಾರ, ಎಂ. ಐ. ಡಾಂಗೆ, ಪ್ರಕಾಶ ಹಣಗಂಡಿ, ರಾಜು ಮಿರ್ಜಿ ಇದ್ದರು.



ಬಸವ ಮಂಟಪದಲ್ಲಿ ಶಿವರಾತ್ರಿ ಆಚರಣೆ: ಇಷ್ಟಲಿಂಗಧಾರಣೆ

ಹುನಗುಂದ: ಹಸಿದ ಹೊಟ್ಟೆಯಲ್ಲಿ ಶಿವರಾತ್ರಿಯನ್ನು ಆಚರಿಸದೇ ಇಷ್ಟಲಿಂಗ ಪೂಜೆ ಮಾಡುವ ಮೂಲಕ ಹಣ್ಣು ಪ್ರಸಾದ ಸೇವಿಸಿ ಶಿವರಾತ್ರಿ ಆಚರಿಸಬೇಕು ಎಂದು ಚಿತ್ತರಗಿ ಸಂಸ್ಥಾನ ಮಠ ಹುನಗುಂದದ ಗುರುಮಹಾಂತ ಶ್ರೀಗಳು ಹೇಳಿದರು.

ಭಾನುವಾರಪಟ್ಟಣದಬಸವಮಂಟಪದಲ್ಲಿಬಸವ ಕೇಂದ್ರ, ಅಕ್ಕನ ಬಳಗ ಮತ್ತು ವಿಜಯ ಮಹಾಂತೇಶ ತರುಣ ಸಂಘ ಹಾಗೂ ಶ್ರೀಶೈಲ ಪಾದಯಾತ್ರಾ ಸೇವಾ ಸಮಿತಿ ಸಹಯೋಗದಲ್ಲಿ ಶಿವರಾತ್ರಿ ನಿಮಿತ್ಯ ಸಾಮೂಹಿಕ ವಚನ ಪಠಣ,ಇಷ್ಟಲಿಂಗ ಪೂಜೆ, ಪ್ರಸಾದ ಕಾರ್ಯಕ್ರಮದಲ್ಲಿ ಬಸವ ಭಕ್ತರಿಗೆ ಇಷ್ಟಲಿಂಗ ಧಾರಣೆ ಮಾಡಿ ಮಾತನಾಡಿದ ಅವರು, ಇಷ್ಟಲಿಂಗನವನ್ನು ಪೂಜಿಸಿ ನಮ್ಮೊಳಗಿರುವ ಆತ್ಮವೇ



ನಮಗೆ ಪರಮಾತ್ಮ ಎಂದರು.

ಪಟ್ಟಣದ ಪ್ರತಿಷ್ಠಿತ ವ್ಯಾಪಾರಿ ದೇವಶಟ್ಟಿ(ತುಪ್ಪದ ಶಟ್ರು) ಮನೆತನದ ಅವಿಭಕ್ತ ಕುಟುಂಬವು ಕಳೆದ 48ವರ್ಷಗಳಿಂದ ಶಿವರಾತ್ರಿ ನಿಮಿತ್ಯ ಪ್ರತಿವರ್ಷದಂತೆ ಈ ವರ್ಷವೂ ಬಸವ ಮಂಟಪದಲ್ಲಿ ಶ್ರೀ ವಿಜಯ ಮಹಾಂತೇಶ ಸಂಸ್ಥಾನಮಠ ಚಿತ್ತರಗಿ ಪೂಜ್ಯರ ನೇತೃತ್ವದಲ್ಲಿ ಪ್ರಸಾದ, ಹಣ್ಣು ಹಂಫಲ ಸೇವೆ ನೆರವೇರಿಸಿದರು.

ಶಿರೂರದ ಮಹಾಂತ ತೀರ್ಥದ ಡಾ. ಬಸವಲಿಂಗ ಶ್ರೀಗಳು ಸಾನಿಧ್ಯವಹಿಸಿದ್ದರು. ಸಂಗಣ್ಣ ಕೊಟ್ರಪ್ಪ ದೇವಶಟ್ಟಿ, ಬಸವರಾಜ ದೇವಶಟ್ಟಿ, ಫಜಕುಮಾರ ದೇವಶಟ್ಟಿ, ಬಸಮ್ಮ ದೇವಶಟ್ಟಿ, ದೀಪಾ ದೇವಶಟ್ಟಿ, ಶೈಲಾ ದೇವಶಟ್ಟಿ ಹಾಗೂ ಕುಟುಂಬದ ಸದಸ್ಯರು, ಕಿಡಿಯಪ್ಪ ಹೂಲಗೇರಿ, ಶಿವಪ್ಪ ನಾಗೂರ, ಪರಸಪ್ಪ ಪಲ್ಲೇದ, ಮಹಾಂತೇಶ ಹೊದ್ಲೂರ, ಸಂಗಣ್ಣ ಚಿನಿವಾಲರ, ಬಸವರಾಜ ಕಡಪಟ್ಟಿ, ಮುತ್ತಕ್ಕ ಬಾವಿಕಟ್ಟಿ, ವೀರೇಶ ಕುರ್ತಕೋಟಿ, ವೀರಣ್ಣ ಬಳೂಟಗಿ, ಬಸವರಾಜ ದರಗಾದ, ಮಲ್ಲಿಕಾರ್ಜುನ ದರಗಾದ, ಬಸವರಾಜ ಗದ್ದಿ, ಮಹಾಂತೇಶ ಅವಾರಿ, ಪ್ರಭು ನಾಗೂರ ಸೇರಿದಂತೆ ಅನೇಕರು ಇದ್ದರು.

ಸ್ಮಶಾನ ಪರಶಿವನ ವಾಸಸ್ಥಾನ: ಶಾಸಕ ಚಿಮ್ಮನಕಟ್ಟಿ

ಗುಳೇದಗುಡ್ಡ: ಸ್ಮಶಾನ ಎಂದರೆ ಭಯ ಪಡುವ ತಾಣವಲ್ಲ, ಸ್ಮಶಾನ ಶಿವನ ವಾಸಸ್ಥಾನವಾಗಿದೆ. ಶಿವನ ವಾಸಸ್ಥಾನವಾದ ಸ್ಮಶಾನದಲ್ಲಿ ಸ್ವಚ್ಚತೆಯನ್ನು ಕಾಪಾಡುವುದು ಅವಶ್ಯಕವಾಗಿದೆ. ರುದ್ರಭೂಮಿಯಲ್ಲಿ ಶಿವನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದ್ದು ಶ್ಲಾಘನೀಯ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಭಾನುವಾರ ಮಹಾಶಿವರಾತ್ರಿಯಂದು ಸ್ಥಳೀಯ ಸಾರ್ವಜನಿಕ ಮುಕ್ತಿಧಾಮ ಅಭಿವೃದ್ಧಿ ಸಂಸ್ಥೆ, ಗುಳೇದಗುಡ್ಡ ಸೋಶಿಯಲ್ ವರ್ಕ್ ಹಾಗೂ ಪುರಸಭೆಯ ಸಹಕಾರದೊಂದಿಗೆ ಪಟ್ಟಣದ ಬಸವೇಶ್ವರ ನಗರದಲ್ಲಿನ ಸಾರ್ವಜನಿಕ ಮುಕ್ತಿಧಾಮದಲ್ಲಿ ನಿರ್ಮಿಸಿದ ಬೃಹತ್ ಪರಶಿವನ ಪ್ರತಿಮೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ,



ಇಲ್ಲಿನ ರುದ್ರಭೂಮಿಗೆ ಇನ್ನೂ ಹೆಚ್ಚಿನ ಅನುದಾನ ನೀಡಿ, ಅವಶ್ಯಕ ಸೌಕರ್ಯಗಳನ್ನು ನೀಡಿ ಅಭಿವೃದ್ಧಿ ಪಡಿಸಲಾಗುವುದು ಎಂದರು.


ವ್ಯಕ್ತಿ ಎಷ್ಟೇ ದೊಡ್ಡವನಾದರೂ, ಎಷ್ಟೇ ಹಣ, ಅಂತಸ್ತು ಗಳಿಸಿದರೂ ಒಂದಿಲ್ಲಾ ಒಂದು ಇಲ್ಲಿಗೆ ಬರಬೇಕು. ಇಲ್ಲಿನ ಎಲ್ಲರೂ ಒಂದೇ. ಅದೇ ರೀತಿ ಜೀವನದಲ್ಲೂ ಕೂಡಾ ಎಲ್ಲರೂ ಒಂದು ಎಂಬಂತೆ ಬದುಕಬೇಕು ಎಂದರು.ಸ್ಥಳೀಯ ಗುರುಸಿದ್ದೇಶ್ವರ ಮಠದ ಗುರುಸಿದ್ದ ಪಟ್ಟದಾರ್ಯ ಶ್ರೀಗಳು ಮಾತನಾಡಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಜು ಬರಗುಂಡಿ, ಪುರಸಭೆ ಮಾಜಿ ಅಧ್ಯಕ್ಷ ವೈ.ಆರ್.ಹೆಬ್ಬಳ್ಳಿ, ರಾಜು ತಾಪಡಿಯಾ, ಶಿವನಯ್ಯ ಮಳಿಮಠ, ರಾಜು ಹೆಬ್ಬಳ್ಳಿ, ಫಕೀರಪ್ಪ ತಳವಾರ, ಅಮಾತೆಪ್ಪ ಕೊಪ್ಪಳ, ವಿಷ್ಣು ಬಳಗೇರಿ, ಆರ್,ಎನ್, ಕಾಟವಾ, ಶ್ರೀಕಾಂತ ಧಾರವಾಡ, ಹನಮಂತಪ್ಪ ಕಟಗೇರಿ, ಮೂಕಪ್ಪ ಹೂನೂರ, ಯಲ್ಲಪ್ಪ ಮನ್ನಿಕಟ್ಟಿ, ರಾಜು ಸಂಗಮ, ಉಮೇಶ ಶಿವನಗೌಡರ, ದಾವಲಸಾಬ ಬಾಗವಾನ, ಮುಬಾರಕ ಮಂಗಳೂರ, ಪುರಸಭೆ ಮುಖ್ಯಾಧಿಕಾರಿ ಎ.ಎಚ್. ಮುಜಾವರ, ಮ್ಯಾನೇಜರ ಮುದ್ದೇಬಿಹಾಳ ಮತ್ತಿತರರು ಇದ್ದರು.

ಕರ್ನಾಟಕ ದರ್ಶನ ಪ್ರವಾಸಕ್ಕೆ ಡಿಸಿ ಚಾಲನೆ

ಬಾಗಲಕೋಟೆ: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಕರ್ನಾಟಕ ದರ್ಶನ ಪ್ರವಾಸಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಚಾಲನೆ ನೀಡಿದರು.

ಜಿಲ್ಲಾಡಳಿತ ಭವನದ ಮುಖ್ಯ ಆವರಣದಲ್ಲಿ ಪ್ರಸಕ್ತ ಸಾಲಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಹಮ್ಮಿಕೊಂಡ ಕರ್ನಾಟಕ ದರ್ಶನ ಪ್ರವಾಸಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜಿಲ್ಲೆಯ ವಿವಿಧ ಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ರಾಜ್ಯದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ತಾಣಗಳ ಪರಿಚಯಿಸುವ ಉದ್ದೇಶದಿಂದ ಈ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಪಠ್ಯದಲ್ಲಿರುವ ಇತಿಹಾಸವನ್ನು ನೇರವಾಗಿ ನೋಡಿದಾಗ ಅದರ ಅರಿವು ಮತ್ತಷ್ಟು ಗಾಡವಾಗುತ್ತದೆ. ಕರ್ನಾಟಕದ



ವೈಭವಶಾಲಿ, ಸಂಸ್ಕೃತಿ, ಕಲೆ ಮತ್ತು ಪರಂಪರೆ ಅರಿಯಲು ಈ ಪ್ರವಾಸ ಸಹಕಾರಿಯಾಗಿಲಿದೆ ಎಂದರು.

ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಜಿ.ಎಸ್.ಹಿತ್ತಲಮನಿ ಮಾತನಾಡಿ, ಕರ್ನಾಟಕ ದರ್ಶನ ಪ್ರವಾಸ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದು, ಜಿಲ್ಲೆಯ ಎಲ್ಲ ತಾಲ್ಲೂಕಿನ ಪ್ರೌಢಶಾಲೆಯ ಪರಿಶಿಷ್ಟ ಜಾತಿಯ 266, ಪರಿಶಿಷ್ಟ ಪಂಗಡದ 168 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಅದರಲ್ಲಿ ಬಾಗಲಕೋಟೆ ತಾಲೂಕಿನ 74 ಮತ್ತು ಬೀಳಗಿ ತಾಲೂಕಿನ 72 ಸೇರಿ ಒಟ್ಟು 146 ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕಳುಹಿಸಲಾಗುತ್ತಿದೆ. ಬಾದಾಮಿ ಮತ್ತು ಹುನಗುಂದ ತಾಲೂಕಿನ ಕರ್ನಾಟಕ ದರ್ಶನ ಪ್ರವಾಸ ಕೈಗೊಳ್ಳಲಾಗಿದೆ ಎಂದರು. ಪ್ರವಾಸದ ವೇಳೆಯಲ್ಲಿ ಶಿರಸಿ, ಬನವಾಸಿ, ಗೋಕರ್ಣ, ಮುರುಡೇಶ್ವರ, ಆನೆಗುಂದಿ, ಉಡುಪಿ, ಶ್ರವಣಬೆಳಗೊಳ, ಬೇಲೂರ, ಯಡೆಯೂರು ತಾಣಗಳ ದರ್ಶನ ಮಾಡಲಿದ್ದಾರೆಂದು ತಿಳಿಸಿದರು. ಜಮಖಂಡಿ ಮುಧೋಳ ತಾಲೂಕಿನ ವಿದ್ಯಾರ್ಥಿಗಳಿಗೆ ಫೆಬ್ರವರಿ 16 ರಿಂದ ಪ್ರವಾಸ ಕೈಗೊಳ್ಳಲಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಇದ್ದರು.

ತೆರಿಗೆ ಪಾವತಿ ಅಭಿಯಾನ

ಕಲಾದಗಿ: ಗ್ರಾಮೀಣ ಭಾಗದ ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯವಿರುವ ಆರ್ಥಿಕ ಸಂಪನ್ಮೂಲ ಕ್ರೂಢೀಕರಿಸುವ ಉದ್ದೇಶದಿಂದ ಫೆ.16ರಿಂದ ಗ್ರಾಪಂ ವ್ಯಾಪ್ತಿಯಲ್ಲಿ ವಿಶೇಷ ಕರ ವಸೂಲಾತಿ ಅಭಿಯಾನ ಹಮ್ಮಿಕೊಳ್ಳಲಾಗಿದ್ದು ಮೊದಲ ದಿನವೇ ಕಲಾದಗಿ ಗ್ರಾಮದಲ್ಲಿ ಒಟ್ಟು 2,25,522ರೂ.ಗಳು ತೆರಿಗೆ ಹಣ ಸಂಗ್ರಹವಾಗಿದ್ದು ಅದರಲ್ಲಿ ಗ್ರಾಮದ ಪ್ರತಿಷ್ಠಿತ ಹಣ್ಣು ಬೆಳೆಗಾರರ ಸಂಸ್ಥೆಯು 1,79,411ರೂ.ಗಳನ್ನು ಕರ ಪಾವತಿ ಮಾಡಿದ ಹಿನ್ನೆಲೆ ಹಣ್ಣು ಬೆಳೆಗಾರರ ಶಾಲೆಗೆ ಜಿಪಂ ಸಿಇಒ ಶಶಿಧರ ಕುರೇರ ಭೇಟಿ ನೀಡಿ ಕರ ಪಾವತಿ ಮಾಡಿರುವ ರಶೀದಿಯನ್ನು ಶಾಲೆಯ ಅಧ್ಯಕ್ಷ ಕೆ.ಟಿ.ಪಾಟೀಲ ಹಾಗೂ ಸಂಸ್ಥೆಯ ಕಾರ್ಯದರ್ಶಿ ವಿ.ಜಿ.ದೇಶಪಾಂಡೆಯವರಿಗೆ ನೀಡಿದರು. ಈ ಸಂದರ್ಭದಲ್ಲಿ ತಾಪಂ ಇಒ ಸುಬಾಸ ಸಂಪಗಾವಿ, ಹಣ್ಣು ಬೆಳೆಗಾರರ ಶಾಲೆಯ ಮುಖ್ಯೋಪಾದ್ಯಾಯರುಗಳಾದ ಶ್ರೀಕಾಂತ ಕೆರಕಲಮಟ್ಟಿ, ಪಿ.ಪಿ.ಜೋಷಿ, ಕಲಾದಗಿ ಗ್ರಾಪಂ ಪಿಡಿಒ ಕೆ.ಎಚ್.ಮುಲ್ಲಾ, ಸುರೇಶ ನಿಂಬಾಳ್ಕರ ಸೇರಿದಂತೆ ಗ್ರಾಪಂ ಸಿಬ್ಬಂದಿಗಳು ಇದ್ದರು.

> **ಕರ್ನಾಟಕದಾದ್ಯಂತ ಗ್ರಾಪಂಗಳಲ್ಲಿ ಆಸ್ತಿ, ನೀರು ಸೇರಿದಂತೆ ಇತರೆ ತೆರಿಗೆಗಳ ಬಾಕಿ ಉಳಿಸಿಕೊಂಡವರಿಂದ ವಿಶೇಷ ಕರ ಪಾವತಿ ಅಭಿಯಾನದ ಮೂಲಕ ಫೆ.16ರಿಂದ ಮನೆಗಳಿಗೆ ಭೇಟಿ ನೀಡಿ ಡಿಜಿಟಲ್ ಪಾವತಿ ಹಾಗೂ ನೋಟಿಸ್ ಜಾರಿ ಮೂಲಕ ತೆರಿಗೆ ಸಂಗ್ರಹ ಮಾಡುತ್ತಿದ್ದು, ಈ ಅಭಿಯಾನದ ಮೂಲಕ ಗ್ರಾಮಸ್ಥರು ತಮ್ಮ ಬಾಕಿ ತೆರಿಗೆ ಹಣ ಕೂಡಲೇ ಪಾವತಿಸಿ ಈ ಅಭಿಯಾನ ಯಶಸ್ವಿಗೊಳಿಸಬೇಕು.**
> **■ ಶಶಿಧರ ಕುರೇರ. ಜಿಪಂ ಸಿಇಒ ಬಾಗಲಕೋಟೆ**

ಎಲ್ಲ ಮಕ್ಕಳಿಗೂ ಅತ್ಯುತ್ತಮ ಶಿಕ್ಷಣ ದೊರಕಲಿ

ಗುಳೇದಗುಡ್ಡ: ಬಡವರಿರಲಿ, ಶ್ರೀಮಂತರ ಮಕ್ಕಳಿರಲಿ ಎಲ್ಲಾ ಮಕ್ಕಳಿಗೂ ಶಿಕ್ಷಣದಲ್ಲಿ ಅತ್ಯುತ್ತಮ ಸೌಲಭ್ಯ ದೊರಕಬೇಕು ಎಂಬ ಉದ್ದೇಶದಿಂದ ರಾಜ್ಯಸರ್ಕಾರ ಸರಕಾರಿ ಶಾಲೆಗಳಿಗೆ ಸಾಕಷ್ಟು ಅನುದಾನ ನೀಡುತ್ತಿದೆ. ಮುಂದಿನ ದಿನಗಳಲ್ಲಿ ಅಂಗನವಾಡಿ ಶಾಲೆಗಳಿಂದ ಹಿಡಿದು ಪದವಿ ಶಿಕ್ಷಣದ ವರೆಗಿನ ಸರ್ಕಾರಿಶಾಲೆಗಳು ಖಾಸಗಿ ಶಾಲೆಗಳನ್ನು ಮೀರಿಸಲಿವೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಅವರು ಭಾನುವಾರ ಸಂಜೆ ಪಟ್ಟಣದ ವಾರ್ಡ್ ನಂ. 14ರಲ್ಲಿ 2023-24 ಹಾಗೂ 2024-25ನೇ ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಸುಮಾರು 27ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಅಂಗವಾಡಿ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿ,



ಮಕ್ಕಳಿಗೆ ಎಲ್ಲ ಸೌಲಭ್ಯಗಳು ದೊರೆಯುವಂತೆ ಅಂಗನವಾಡಿ ಕಟ್ಟಡ ವಿನ್ಯಾಸಮಾಡಲಾಗಿದ್ದು, ಅಂಗನವಾಡಿ ಕಟ್ಟಡಕ್ಕೆ 27 ಲಕ್ಷ ರೂ. ಬಿಡುಗಡೆ ಮಾಡಿದ್ದು ಇದೇ ಮೊದಲಬಾರಿ ಎಂದರು. ಕ್ಷೇತ್ರದಲ್ಲಿ ಮುಂದೆ ನಿರ್ಮಿಸಲಿರುವ ಎಲ್ಲಾ ಅಂಗನವಾಡಿಗಳು ಈ ಅಂಗನವಾಡಿಯಂತೆ ಹೈಟೆಕ್ ಅಂಗನವಾಡಿಗಳನ್ನಾಗಿ ನಿರ್ಮಿಸಲಾಗುವುದು. ಅಲ್ಲದೇ ಪಟ್ಟಣಕ್ಕೆ ಕೆಪಿಎಸ್ ಶಾಲೆ ಮಂಜೂರಾಗಿದ್ದು ಇಲ್ಲಿ ಮಕ್ಕಳು ಎಲ್.ಕೆ.ಜಿ.ಯಿಂದ ಹಿಡಿದು ಪಿಯುಸಿವರೆಗೆ ಓದಬಹುದು. ಸರ್ಕಾರ ಶಿಕ್ಷಣಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡಿದೆ ಎಂದರು.

ಮೌಲಾನಾ ಮಹ್ಮದ್ ನಸೀನ್ ಅಕ್ತರ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಜಯ ಬರಗುಂಡಿ, ಜಮೀರ ಮೌಲ್ವಿ, ವೈ.ಆರ್. ಹೆಬ್ಬಳ್ಳಿ, ಕೆ.ಆರ್. ರಾಯಚೂರ, ಫಕೀರಪ್ಪ ತಳವಾರ, ಚಿದಾನಂದಸಾ ಕಾಟವಾ, ಅಂಜುಮನ್ ಅಧ್ಯಕ್ಷ ರಜಕ ಕುದರಿ, ಎಂ.ಎಂ. ಜಮಖಾನಿ, ರಫೀಕ ಕಲ್ಬುರ್ಗಿ, ಸಲೀಮ ಮೊಮಿನ, ಶಿವಾನಂದ ಮಳಿಮಠ, ಪುರಸಭೆ ಮುಖ್ಯಾಧಿಕಾರಿ ಅಸ್ಲಂ ಮಜಾವರ, ಮ್ಯಾನೇಜರ್ ಎ.ಎಚ್. ಮುದ್ದೇಬಿಹಾಳ, ಸಲೀಮ ಡಾಲಾಯತ್ ವೇದಿಕೆಯ ಮೇಲಿದ್ದರು.

ಕಿರುಸುದ್ದಿ



ಸಿಂದಗಿ: ನಗರದ ರಮಾನಂದ ತೀರ್ಥ ರಸ್ತೆಯ ಅಗ್ನಿಶಾಮಕ ಠಾಣೆಯ ಬಳಿ ಅಲ್ಲಾಪೂರ ಲೇವೌಟ್ ನಲ್ಲಿ ಶಿವನ ಮೂರ್ತಿಯನ್ನು ಸಾರಂಗಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು, ರಟಕಲ್ ಶ್ರೀಮಠದ ರೇವಣಸಿದ್ದ ಶಿವಾಚಾರ್ಯರರು ಲೋಕಾರ್ಪಣೆಗೊಂಡಿತು. ಮಾಜಿ ವಿಪ ಸದಸ್ಯ ಅರುಣ ಶಹಾಪುರ, ಮಾಜಿ ನಿಂಬೆ ಅಭಿವೃದ್ಧಿ ನಿಗಮ ಮಂಡಳಿ ಅಧ್ಯಕ್ಷ ಅಶೋಕ ಅಲ್ಲಾಪುರ, ಪ್ರಥಮದರ್ಜೆ ಗುತ್ತಿಗೆದಾರ ಮುತ್ತು ಮುಂಡೇವಾಡಗಿ, ಭೀಮಾಶಂಕರ ತಾರಾಪೂರ, ಮಲ್ಲಿಕಾರ್ಜುನ ಅಲ್ಲಾಪೂರ, ಕುಮಾರ ಬಮ್ಮಣ್ಣಿ, ಶಣ್ಮುಖಪ್ಪ ಅಲ್ಲಾಪೂರ, ಮಲ್ಲು ಅಗಸರ, ಡಾ.ಸುನೀಲ ಪಾಟೀಲ, ಮುತ್ತು ಪಟ್ಟಣಶೆಟ್ಟಿ, ಸುಬಾಸ ಅರಳಗುಂಡಗಿ, ನಿಂಗರಾಜ ಅತನೂರ, ಪಂಡಿತ ಯಂಪುರೆ, ರವಿ ಅಲ್ಲಾಪುರ, ಮಹಾಂತೇಶ ಅಲ್ಲಾಪುರ, ವನಿತಾ ತಾರಾಪುರ, ಅಶ್ವಿನಿ ಅಲ್ಲಾಪೂರ ಇದ್ದರು.



ನಿಡಗುಂದಿ: ಪಟ್ಟಣದ ವಿರಕ್ತಮಠ ಮಠದ ಮಲ್ಲಿಕಾರ್ಜುನ ಶ್ರೀಗಳ 116ನೇ ಜಯಂತ್ಯುತ್ಸವ ಸೋಮವಾರ ಜರುಗಿತು. ಮಠದ ಉಸ್ತುವಾರಿ ಕಾರ್ಯದರ್ಶಿ ಮಲ್ಲಿಕಾರ್ಜುನಯ್ಯ ತೋರಗಲ್ಲಮಠ ದಂಪತಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಮಂಜುನಾಥ ಹಿರೇಮಠ, ಬಸಬರಾಜ ಸಾಲಿಮಠ, ರಾಜು ಮುಚ್ಚಂಡಿ, ಬಸಲಿಂಗಯ್ಯ ಗಣಾಚಾರಿ, ಬಸಯ್ಯ ಗಣಾಚಾರಿ, ರುದ್ರಯ್ಯ ಗಣಾಚಾರಿ, ರುದ್ರಮುನಿ ಗಚ್ಚಿನಮಠ, ಭದ್ರಯ್ಯ ಗಣಾಚಾರಿ,ಶರಣು ಕಾಜಗಾರ, ಬಸವರಾಜ ಸಜ್ಜನ, ಗಂಗಾಧರಯ್ಯ ಹಿರೇಮಠ ಮತ್ತಿತರರು ಇದ್ದರು.

ದೇವಸ್ಥಾನಕ್ಕೆ ಸಚಿವ ಎಂ.ಬಿ. ಪಾಟೀಲ ಭೇಟಿ

ವಿಜಯಪುರ: ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ನಗರದ ಐತಿಹಾಸಿಕ 770 ಅಮರಗಣಾಧೀಶ ಲಿಂಗ ದೇವಸ್ಥಾನಕ್ಕೆ ಭಾನುವಾರ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿ, ನಾಡಿನ ಸಮಸ್ತ ಜನತೆಯ ಒಳಿತು ಬಯಸಿ ಪ್ರಾರ್ಥನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ 770 ಅಮರಗಣಂಗಳು (ಶರಣರು) ಕಾಯಕಯೋಗಿ ಬಸವೇಶ್ವರ ಜೊತೆಗೂಡಿ, ಸಮಾನತೆಗಾಗಿ ಶ್ರಮಿಸಿದ್ದರು. ಸಾಧಕ ಶರಣರು ನೀಡಿದ ಕೊಡುಗೆಯ ಸ್ಮರಣಾರ್ಥ ಅವರ ಹೆಸರಿನಲ್ಲಿಯೇ ಬಂಥನಾಳ ಸಂಗನಬಸವ ಮಹಾಶಿವಯೋಗಿಗಳ ದಿವ್ಯ ಸಂಕಲ್ಪದಂತೆ 1954 ರಲ್ಲಿ ವಿಜಯಪುರ ನಗರದ 770 ಅಮರ ಗಣಾಧೀಶ್ವರರ (ಅಮರಗಣಂಗಳ) ಸ್ಮಾರಕ ಲಿಂಗಗಳ ಪ್ರತಿಷ್ಠಾಪನೆಯಾಗಿ 1960ರಲ್ಲಿ ದೇವಸ್ಥಾನ ಲೋಕಾರ್ಪಣೆಯಾಗಿತ್ತು. ಸುಮಾರು ಏಳು ದಶಕಗಳ ನಂತರ 2024 ರಲ್ಲಿ 1.51 ಕೋಟಿ ರೂ. ವೆಚ್ಚದಲ್ಲಿ ಸಂಪೂರ್ಣವಾಗಿ ನವೀಕರಿಸಿ ಶಿವರಾತ್ರಿಯ ದಿನದಂದು ಮರು ಲೋಕಾರ್ಪಣೆಗೊಳಿಸುವ ಸದವಕಾಶ ತಮಗೆ ಲಭ್ಯವಾಗಿತ್ತು. ದೇವರ ದೇವ ಮಹದೇವನ, ಬಸವಣ್ಣನವರ ಹಾಗೂ ಎಲ್ಲ ಶರಣರ ಅನುಗ್ರಹ ಮತ್ತು ಆಶೀರ್ವಾದ ಸದಾಕಾಲ ನಮ್ಮೆಲ್ಲರ ಮೇಲೆ ಇರಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಾಗಠಾಣಾ ಶಾಸಕ ವಿಠ್ಠಲ ಕಟಕಧೋಂಡ ಇತರರು ಇದ್ದರು.



ವಿಜಯಪುರ: ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ನಗರದ ಐತಿಹಾಸಿಕ 770 ಅಮರಗಣಾಧೀಶ ಲಿಂಗ ದೇವಸ್ಥಾನಕ್ಕೆ ಭಾನುವಾರ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿ, ನಾಡಿನ ಸಮಸ್ತ ಜನತೆಯ ಒಳಿತು ಬಯಸಿ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ನಾಗಠಾಣಾ ಶಾಸಕ ವಿಠ್ಠಲ ಕಟಕಧೋಂಡ ಇತರರು ಇದ್ದರು.

ಪೊಲೀಸರ ಕಾರ್ಯಕ್ಷಮತೆಗೆ ಅಭಿನಂದನೆ: ಕಾಪಸೆ

ಝಳಕಿ: ಚಡಚಣ ಸಿಪಿಐ ಪರುಶುರಾಮ ಮನಗೂಳಿಯವರ ತಂಡವು ಖದೀಮರನ್ನು ಹಿಡಿಯುವಲ್ಲಿ ಮೇಲುಗೈ ಸಾಧಿಸಿದೆ ಎಂದು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ ಸಾಹುಕಾರ ಕಾಪಸೆ ಹೇಳಿದರು. ಸ್ಥಳೀಯ ಪ್ರವಾಸ ಮಂದಿರ ಆವರಣದಲ್ಲಿ ಸುದ್ದಿಗೊಷ್ಠಿಯಲ್ಲಿ



ಮಾತನಾಡಿ, ಚಡಚಣ ತಾಲೂಕಿನ ಹಲಸಂಗಿ ಗ್ರಾಮದಲ್ಲಿ ನಡೆದ ಹಗಲು ದರೋಡೆಯಲ್ಲಿ ಜ್ಯುವೆಲ್ಲರಿ ಶಾಪ್ (ಬಂಗಾರದ ಅಂಗಡಿ) ದರೋಡೆ ಪ್ರಕರಣ ಅತ್ಯಂತ ಕಡಿಮೆ ಸಮಯದಲ್ಲಿ ಭೇದಿಸಿ, ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಪರಾಧಿಗಳನ್ನು ಬಂಧಿಸಿರುವ ಚಡಚಣ ತಾಲೂಕಿನ ದಕ್ಷ ಪೊಲೀಸ್ ಅಧಿಕಾರಿ ಸಿಪಿಐ ಪರಶುರಾಮ ಮನಗೂಳಿ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ತಂಡದಲ್ಲಿದ್ದ ಚಡಚಣ (ಪಿಎಸ್ಐ) ಸೋಮೇಶ್ ಗೆಜ್ಜಿ ಮತ್ತು ಝಳಕಿ ಠಾಣೆ ಪಿಎಸ್ಐ ಮಂಜುನಾಥ ತಿರಕನ್ನವರ ಅವರಿಗೆ ತಾಲೂಕಿನ ಎಲ್ಲ ಜನರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತೇವೆ. ಸಾಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಬಹಳ ಮಹತ್ವದ್ದಾಗಿದೆ. ಈ ಪ್ರಕರಣ ಬಹಳ ಗಂಭೀರವಾಗಿ ಪರಿಗಣಿಸಿ ಹಗಲಿರುಳು ಶ್ರಮಿಸಿರುವ ಪೊಲೀಸ್ ಇಲಾಖೆಯ ಕಾರ್ಯ ಕ್ಷಮತೆ ನಿಜವಾಗ್ಲೂ ಶ್ಲಾಘನೀಯ ಎಂದರು. ಈ ರೀತಿಯ ಘಟನೆಗಳು ಆದಾಗ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಸಹಕರಿಸಿ, ಕೂಡಲೇ ಪೊಲೀಸ್ ಇಲಾಖೆಯ ತುರ್ತು ದೂರವಾಣಿ ಸಂಖ್ಯೆ – 112,100 ತಿಳಿಸಬೇಕು. ಇಂತಹ ಪ್ರಕರಣಗಳು ತ್ವರಿತಗತಿಯಲ್ಲಿ ತನಿಖೆ ಮಾಡಿ ನ್ಯಾಯ ಒದಗಿಸುವ್ರದರಿಂದ ಪೊಲೀಸ್ ಇಲಾಖೆಯ ಬಗ್ಗೆ ಜನಸಾಮಾನ್ಯರಲ್ಲಿ ನಂಬಿಕೆ ಮೂಡುತ್ತದೆ ಎಂದರು.

ಪುಸ್ತಕ ಜೋಳಿಗೆ ವಿಶೇಷ ಅಭಿಯಾನ



ವಿಜಯಪುರ: ಇಲ್ಲಿನ ಸಾಯಿ ಪಾರ್ಕ್ ಬಡಾವಣೆ ಸಮರ್ಥ ನಗರದಲ್ಲಿ ಮಹಾ ಶಿವರಾತ್ರಿಯ ಪವಿತ್ರ ದಿನದಂದು ಭಾನುವಾರ ಕನ್ನಡ ಪುಸ್ತಕ ಪ್ರಾಧಿಕಾರದ ಜಿಲ್ಲಾ ಮನೆಗೊಂದು ಗ್ರಂಥಾಲಯ ಜಾಗೃತಿ ಸಮಿತಿ ವತಿಯಿಂದ ಪುಸ್ತಕ ಭಂಡಾರ ಜ್ಞಾನ ದಾನ ಧ್ಯೇಯದೊಂದಿಗೆ ಪುಸ್ತಕ ಜೋಳಿಗೆ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಯಿತು. ಕನ್ನಡ ಪುಸ್ತಕ ಪ್ರಾಧಿಕಾರ ಸದಸ್ಯ ಡಾ. ಕುಶಾಲ್ ಬರಗೂರ, ಜಿಲ್ಲಾ ಸಂಚಾಲಕ ಶಂಕರ ಬೈಚಬಾಳ ನೇತೃತ್ವದಲ್ಲಿ ಹಮ್ಮಿಕೊಂಡ ಪುಸ್ತಕ ಜೋಳಿಗೆ ಅಭಿಯಾನದಲ್ಲಿ ಬಡಾವಣೆಯ ನಿಂಗನಗೌಡ ಪಾಟೀಲ, ಸುಜ್ಞಾನಿ ಪಾಟೀಲ ದಂಪತಿ, ಶರಣಮ್ಮ ಗುಜುಗೊಂಡ ಅವರ ಮನೆಯಿಂದ ಬಹುಷ್ಯತ್ತಿನ ಬುತ್ತಿಗಾಗಿ ಜ್ಞಾನದ ಹೊತ್ತಿಗೆಯನ್ನು ಜೋಳಿಗೆಗೆ ದಾನ ಮಾಡುವುದರ ಮೂಲಕ ಅಭೂತ ಪೂರ್ವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಡಾ. ಕುಶಾಲ್ ಬರಗೂರ ಮಾತನಾಡಿ, ಇಂದಿನ ಮೊಬೈಲ್, ಅಂತರ್ ಜಾಲದ ಬಳಕೆಯ ಭರಾಟೆಯಲ್ಲಿ ಪುಸ್ತಕ ಓದುವವರ ಸಂಖ್ಯೆ ಕ್ಷೀಣಿಸುತ್ತಿದೆ. ಹೀಗಾಗಿ ಮತ್ತೆ ಪುಸ್ತಕ ಓದುವವರ ಸಂಖ್ಯೆ ಹೆಚ್ಚಳಮಾಡುವುದು ಸೇರಿ ಪುಸ್ತಕ ಪ್ರೇಮ ಜಾಗೃತಿಗೊಳಿಸುವ ಕಾರ್ಯಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರ ಮುಂದಾಗಿದೆ ಎಂದರು. ಪುಸ್ತಕ ಪ್ರಾಧಿಕಾರದ ಜಿಲ್ಲಾ ಸಮಿತಿ ಸದಸ್ಯ ಪ್ರೊ. ಎ.ಎಚ್. ಕೊಳಮಲಿ, ರಾಹಸಾಹೇಬ ಬಿರಾದಾರ ಇದ್ದರು.

ಶಾಸಕ ಸಿ.ಎಸ್. ನಾಡಗೌಡ ಅಭಿಮತ

ಗ್ಯಾರಂಟಿಗಳಿಂದ ಪಕ್ಷದ ಬಲವರ್ಧನೆ

ಮುದ್ದೇಬಿಹಾಳ: ಕಾಂಗ್ರೆಸ್ ಪಕ್ಷಕ್ಕೆ ಮತದಾರರೇ ಇಲ್ಲ, ಅಭಿವೃದ್ಧಿ ಯೋಜನೆಗಳು ಆಗುತ್ತಿಲ್ಲ ಎಂಬುದನ್ನು ವಿರೋಧ ಪಕ್ಷದ ಕೆಲವರು ಹೇಳುತ್ತಾರೆ ಆದರೆ ಕಳೆದ ಚುನಾವಣೆಯಲ್ಲಿ 41% ಮತದಾನ ಪಕ್ಷಕ್ಕೆ ಮಾಡಿದ್ದಾರೆ. 70% ಗ್ಯಾರಂಟಿ ಯೋಜನೆಗಳಿಂದ ಪ್ರಯೋಜನ ಪಡೆಯುವ ಕುಟುಂಬಗಳು ಇಂದು ಪಕ್ಷದ ನಿಶಬ್ದ ಮತದಾರರಾಗಿದ್ದಾರೆ. ಅಭಿವೃದ್ಧಿ ಯೋಜನೆಗಳು ನಿರಂತರವಾಗಿ ನಡೆಯುತ್ತಿವೆ ಹೀಗಾಗಿ ಕಾರ್ಯಕರ್ತರು ಉತ್ಸಾಹ ಕಳೆದುಕೊಳ್ಳದೆ ಮತದಾರರಿಗೆ ಒದಗಿಸಿರುವ ಸೌಲಭ್ಯಗಳನ್ನು ಕುರಿತು ಪ್ರಚಾರ ಮಾಡಬೇಕು ಎಂದು ಶಾಸಕ, ಕೆಎಸ್ ಡಿಎಲ್ ಅಧ್ಯಕ್ಷ ಸಿ.ಎಸ್. ನಾಡಗೌಡ ಹೇಳಿದರು.

ಸೋಮವಾರ ತಮ್ಮ ಸ್ವಗೃಹ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಪಕ್ಷ ಸಾವಿರ ದಿನಗಳ ಅಧಿಕಾರವನ್ನು ಪೂರೈಸಿದೆ. ಅಧ್ಯಕ್ಷರು ಜನರಿಗೆ ಪಕ್ಷ ನೀಡಿದ ಸೌಲಭ್ಯ ತಿಳಿಸಲು ಆದೇಶಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಮತದಾರರು ಪಕ್ಷಕ್ಕೆ ಮತ ಹಾಕಿದ್ದಾರೆ. ಈ ಬಾರಿ ಯೋಜನೆಗಳ ಲಾಭವನ್ನು ಪಡೆದು ಇನ್ನು ಹೆಚ್ಚು ಜನ ಪಕ್ಷಕ್ಕೆ ಚುನಾವಣೆಯಲ್ಲಿ ಮತ ಹಾಕುತ್ತಾರೆ. ಹೀಗಾಗಿ ಪಕ್ಷದಲ್ಲಿ ಕಾರ್ಯಕ್ರಮಗಳೇ ಇಲ್ಲ, ಜನ ಬೆಂಬಲವೇ ಇಲ್ಲ ಎಂಬ ನಿರುತ್ಸಾಹವನ್ನು ಬಿಟ್ಟು ಪಕ್ಷದ ಕೆಲಸ ಮಾಡಬೇಕು ಎಂದು ಹೇಳಿದರು.



ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕ ಪದಾಧಿಕಾರಿಗಳ ಸಭೆ

ಜನಪರ ಕೆಲಸಗಳಿಂದ ಪಕ್ಷದ ವೋಟ್ ಬ್ಯಾಂಕ್ 70 ಪ್ರತಿಶತ ಏರಿದೆ ಎಂಬುದನ್ನು ಕಾರ್ಯಕರ್ತರು ಗಮನಿಸಬೇಕು. ಶಕ್ತಿ ಯೋಜನೆ ಹಿಂದುಳಿದವರು ಅಲ್ಪಸಂಖ್ಯಾತರ ಜೊತೆ ಮೇಲ್ವರ್ಗದ ಮಹಿಳೆಯರು ಪ್ರಯಾಣಿಸುತ್ತಾರೆ, ತಾಲೂಕಿನ 39 ಸಾವಿರ ಕುಟುಂಬಗಳು ಗೃಹ ಜ್ಯೋತಿ ಯೋಜನೆ ಒಂದು ರೂಪಾಯಿ ಪಾವತಿಸದೆ ಯೋಜನೆಯ ಲಾಭ ಪಡೆಯುತ್ತಿವೆ. ಬಡವರಿಗೆ ನೇರ ಯೋಜನೆಯ ಲಾಭಗಳು ತಲುಪುತ್ತವೆ ಹೀಗಾಗಿ ವಿರೋಧ ಪಕ್ಷದವರು ನಮ್ಮ ಯೋಜನೆಗಳನ್ನು ಜಾರಿ ಮಾಡುತ್ತಿದ್ದಾರೆ. ಶ್ರೀಮಂತರಿಗೆ ಸರಿ ಸಮಾನವಾಗಿ ಬಡವರನ್ನು ಪ್ರೋತ್ಸಾಹಿಸಲು ಗ್ಯಾರಂಟಿ ಯೋಜನೆಗಳನ್ನು ತರಲಾಗಿದ್ದು ಸ್ಥಳೀಯ ಮುಖಂಡರಿಗೆ ಟೀಕಿಸುವುದನ್ನು ಬಿಟ್ಟರೆ ಬೇರೆ ಕೆಲಸ ಇಲ್ಲ ಎಂದು ಹೇಳಿದರು.

ಪಕ್ಷದ ಮುಖಂಡರಾದ ಬಿ.ಕೆ ಬಿರಾದಾರ್, ಮಹಾಂತಪ್ಪ ನಾವದಗಿ, ಗಫೂರಸಾಬ್ ಮಕಾನ್ದಾರ್, ಗುರು ದೇಶಮುಖ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುನಾಥ್ ತಾರನಾಳ, ಪ್ರಭುರಾಜ್ ಕಲ್ಬುರ್ಗಿ, ಸಿ.ಪಿ. ಸಜ್ಜನ, ಸತೀಶ್ ಓಸ್ವಾಲ್, ಚನ್ನಪ್ಪ ವಿಜಯಕರ್, ಗೋಪಿ ಮಡಿವಾಳರ, ಎಲ್ಲಪ್ಪ ನಾಯಕಮಕ್ಕಳ, ಸರಸ್ವತಿ ಪೀರಾಪುರ, ಶ್ರೀಕಾಂತ್ ಚಲವಾದಿ, ಸದ್ದಾಂ ಕುಂಟೋಜಿ, ಸಂಗಮೇಶ ನಾಲತವಾಡ, ರಫೀಕ್ ಶಿರೋಳ, ನಾಗರಾಜ್ ತಂಗಡಗಿ ಸೇರಿದಂತೆ ತಾಳಿಕೋಟಿ ವಲಯದ ಪಕ್ಷದ ವಿವಿಧ ಘಟಕಗಳ ಮುಖಂಡರು ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ಸಣ್ಣ ಸಮಾಜಗಳಿಗೆ ಶಕ್ತಿ ತುಂಬುವ ಕೆಲಸವಾಗಲಿ

ತಾಳಿಕೋಟೆ: ಸಮಾಜದಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕವಾಗಿ ಹಿಂದುಳಿದಿರುವ ಸಣ್ಣ ಸಮಾಜಗಳನ್ನು ಮುಖ್ಯವಾಹಿನಿಗೆ ತರುವ ಕಾರ್ಯವಾಗಬೇಕು ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಅಪ್ಪಾಜಿ ನಾಡಗೌಡ ಹೇಳಿದರು.

ಭಾನುವಾರ ಪಟ್ಟಣದ ವಿದ್ಯಾಭಾರತಿ ಪ್ರೌಢಶಾಲೆ ಆವರಣದಲ್ಲಿ ನಿಜ ಶರಣ ಅಂಬಿಗರ ಚೌಡಯ್ಯ ತಾಲೂಕ ಘಟಕದ ವತಿಯಿಂದ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆ ಅನಾವರಣ, ನೂತನ ಸಭಾಭವನ ಉದ್ಘಾಟನೆ ಹಾಗೂ ಅಂಬಿಗರ ಚೌಡಯ್ಯ ಅನುಭವ ಮಂಟಪ ಶಂಕು ಸ್ಥಾಪನೆ ಅಂಗವಾಗಿ ಹಮ್ಮಿಕೊಂಡ ಧರ್ಮಸಭೆಯಲ್ಲಿ ಮಾತನಾಡಿ, ಇಲ್ಲಿ ಕೊಟ್ಟಂತೆಯೇ ಮುದ್ದೇಬಿಹಾಳ ಪಟ್ಟಣದಲ್ಲಿ ಈ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಸ್ಥಳ ಹಾಗೂ ಅನುದಾನ ಕೊಡಲಿದ್ದೇನೆ. ಅವರ ಬೇಡಿಕೆಯಂತೆ ಸಮಾಜವನ್ನು ಎಸ್‌ಟಿ ವರ್ಗಕ್ಕೆ ಸೇರಿಸಲು ಕೇಂದ್ರಕ್ಕೆ ಒತ್ತಾಯಿಸಲು ಬಜೆಟ್ ಅಧಿವೇಶನದಲ್ಲಿ ಮಾತನಾಡುತ್ತೇನೆ. ಸದಾ ನಾನು ನಿಮ್ಮ ಜೊತೆಯಲ್ಲೇ ಇದ್ದು ನಿಮ್ಮ ಸಮಾಜದ ಏಳಿಗೆಗಾಗಿ ಶಕ್ತಿಮೀರಿ ಕೆಲಸ ಮಾಡುತ್ತೇನೆ ಎಂದರು.

ಶಾಸಕ ರಾಜುಗೌಡ ಪಾಟೀಲ ಮಾತನಾಡಿ, ಅಂಬಿಗರ ಚೌಡಯ್ಯನವರು ಮಹಾನ್ ಶರಣರಾಗಿದ್ದಾರೆ ಅವರು ಬಸವಣ್ಣನವರ ಸಾಮಾಜಿಕ ಕ್ರಾಂತಿಯಲ್ಲಿ ಅಪಾರ ಕೊಡುಗೆಯನ್ನು ನೀಡಿದ್ದಾರೆ ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ ಅವುಗಳನ್ನು ನಮ್ಮ ಯುವಕರಿಗೆ ತಿಳಿಸಿಕೊಡುವ ಅಗತ್ಯವಿದೆ ಎಂದರು.

ರಾಜ್ಯ ಕೋಲಿ ಗಂಗಾಮತ ಸಮಾಜದ ಮಾಜಿ ಅಧ್ಯಕ್ಷ ಬಿ.ಕೆ.ಮೋಹನ ಕುಮಾರ, ನಿಜಶರಣ ಅಂಬಿಗರ ಚೌಡಯ್ಯನವರ ಪೀಠಾಧ್ಯಕ್ಷ ಶಾಂತಭೀಷ್ಮ ಚೌಡಯ್ಯ ಶ್ರೀಗಳು, ಸಿದ್ದಲಿಂಗ ದೇವರು ಮಾತನಾಡಿದರು. ನಿಜಶರಣ ಅಂಬಿಗರ ಚೌಡಯ್ಯ ಸಮಾಜದ ತಾಲೂಕ ಅಧ್ಯಕ್ಷ ಪರಶುರಾಮ ಬಿ.ತಂಗಡಗಿ, ಮಾಜಿ ಶಾಸಕ ಶರಣಪ್ಪ ಸುಣಗಾರ, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ ನಾಟೀಕಾರ, ಸಾಮಾಜಿಕ ಹೋರಾಟಗಾರ ಶಿವಾಜಿ ಮೆಟಗಾರ, ರಾಜ್ಯ ಬುಡಕಟ್ಟು ಜನಾಂಗ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಅಮರೇಶಣ್ಣ ಕಾಮನಕೇರಿ, ಎಚ್‌ಎಸ್ ಪಾಟೀಲ, ಪ್ರಭುಗೌಡ ಮದರಕಲ್, ಶಶಿಕಾಂತ ಮೂಕಿಹಾಳ, ರಮೇಶ ಮೂಕಿಹಾಳ, ಸಮಾಜದ ಗಣ್ಯರು ಇದ್ದರು.



ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಿಕೆ ಅಗತ್ಯ

ಇಂಡಿ: ಮಕ್ಕಳಿಗೆ ರಚನಾತ್ಮಕ ಮತ್ತು ಗುಣಾತ್ಮಕ ಶಿಕ್ಷಣ ದೊರೆಯಬೇಕಾದರೆ ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು ಅಗತ್ಯ. ಆ ನಿಟ್ಟಿನಲ್ಲಿ ಇಂದು ವಿಜ್ಞಾನ ವಸ್ತು ಪ್ರದರ್ಶನ ಹಮ್ಮಿಕೊಂಡಿರುವ ಕಾರ್ಯ ಶ್ಲಾಘನಿಯ. ಪಠ್ಯ ಪುಸ್ತಕಗಳನ್ನು ಓದಿ ಪರೀಕ್ಷೆ ಬರೆಯುವುದಕ್ಕೆ ಸೀಮಿತಗೊಳಿಸದೇ ಮಕ್ಕಳಲ್ಲಿನ ಪ್ರತಿಭೆಯನ್ನು ಪ್ರದರ್ಶಿಸಲು ವಿಜ್ಞಾನ ವಸ್ತು ಪ್ರದರ್ಶನದಂತಹ ವೇದಿಕೆ ಕಲ್ಪಿಸುವುದು ಮುಖ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸೈಯಿದಾ ಅನ್ನಿಸ್ ಮುಜಾವರ ಹೇಳಿದರು.

ಸೋಮವಾರ ನಗರದ ಸರಕಾರಿ ಉರ್ದು ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿ, ಇಂದಿನ ದಿನಮಾನಗಳಲ್ಲಿ ಮಕ್ಕಳಲ್ಲಿ ಕ್ರಿಯಾತ್ಮಕ ಚಟುವಟಿಕೆ ಜೊತೆಗೆ ವಿಜ್ಞಾನ ಮನೋಭಾವನೆ ಬೆಳೆಸುವುದು ಅತೀ ಅವಶ್ಯವಾಗಿದೆ. ಆ ನಿಟ್ಟಿನಲ್ಲಿ ಪ್ರತಿಯೊಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಿದ್ದಲ್ಲಿ ಜ್ಞಾನ ವೃದ್ಧಿಯಾಗಲು ಸಹಕಾರಿಯಾಗುತ್ತದೆ ಎಂದರು.

ವಿಶ್ರಾಂತ ಪ್ರಾಚಾರ್ಯ ಬಾಬುಸಾಬ್ ಸೌದಾಗರ ಮಾತನಾಡಿ, ವಿದ್ಯಾರ್ಥಿಗಳಿಗೆ ಕಲಿಕೆಯ ಜತೆಗೆ ತಮ್ಮ ವಿಜ್ಞಾನ ಪಠ್ಯಕ್ಕೆ ಸಂಬಂಧಿಸಿದ ಮಾದರಿಗಳ ತಯಾರಿಕೆಗೆ ಪ್ರೋತ್ಸಾಹ ನೀಡುವುದರಿಂದ ಅವರಲ್ಲಿ ಜ್ಞಾನಾಭಿವೃದ್ಧಿಗೆ ಹೆಚ್ಚು ಪ್ರೇರಣೆ ಸಿಗಲಿದೆ ಎಂದರು.

ಶಿಕ್ಷಕ ಸಂತೋಷ ಬಂಡೆ ಮಾತನಾಡಿ, ವಿಜ್ಞಾನ ವಸ್ತು ಪ್ರದರ್ಶನದಿಂದ ಮಕ್ಕಳಲ್ಲಿನ ನೈಜತೆ, ಕ್ರಿಯಾತ್ಮಕ ಚಟುವಟಿಕೆ ಹಾಗೂ ಮಕ್ಕಳ ಸುಪ್ತ ಪ್ರತಿಭೆ ಅರಳುತ್ತದೆ. ಇಂದಿನ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕಿದೆ ಎಂದರು.

ಜೆಸಿಸಿ ಬ್ಯಾಂಕ್ ನಿರ್ದೇಶಕ ಅಲ್ಲಾಭಕ್ಷ ವಾಲೀಕಾರ, ಯುವ ಮುಖಂಡ ಜಾವೀದ ಮೊಮಿನ್ ಮಾತನಾಡಿದರು. ಹುಮಾಯೂನ್ ಬೀಳವಾರ, ಮುಜೀಬ್ ಬಾಗವಾನ, ಪತ್ರಕರ್ತರಾದ ಸದ್ದಾಂಹುಸೇನ್ ಜಮಾದಾರ, ರಾಜಕುಮಾರ ಚಾಬುಕಸವಾರ, ಉರ್ದು ಪ್ರೌಢಶಾಲೆಯ ಮುಖ್ಯ ಶಿಕ್ಷಕ ಪಾಂಡು ರಾಠೋಡ, ಇಂಡಿ ಉರ್ದು ಕ್ಲಸ್ಟರ್ ಸಿಆರ್‌ಪಿ ಪರ್ವೇಜ್ ಪಟೇಲ್, ಸಮಾಜ ಸೇವಕ ಹಸನ ಮುಜಾವರ, ಮುಖ್ಯ ಶಿಕ್ಷಕ ಯಾಸೀನ್ ತುರ್ಕಿ, ಶಾಕೀರ್ ನಾಗೂರ, ಎಸ್. ಎಸ್. ಅರಬ, ಎ.ಎ. ಇಂಡೀಕರ, ಎನ್. ಎಸ್. ದೇವರ, ಗೌರಮ್ಮ ನಿಡಗುಂದಿ, ಅತಿಥಿ ಶಿಕ್ಷಕರಾದ ಯಾಸ್ಮಿನ್ ಅರಬ, ಅಫ್ತಾಬ್ ತುರ್ಕಿ, ಮಿಶ್ಬಾ ನಾಗಠಾಣ, ರುಬಿನಾ ಮಕಾನದಾರ, ಮಿಶ್ಬಾ ಇಂಡಿ ಸೇರಿದಂತೆ ಮಕ್ಕಳು ಭಾಗವಹಿಸಿದ್ದರು.



ಸಚಿವರಿಂದ ಅಂಗಾಂಗ ದಾನದ ವಾಗ್ದಾನ

ವಿಜಯಪುರ: ಸಾವಿನಲ್ಲಿಯೂ ಸಾರ್ಥಕತೆ ಮೆರೆದ ದಿ.ಬಲರಾಮ ಬಾಗಲಕೋಟ ಅವರಿಂದ ಪ್ರೇರಣೆ ಪಡೆದು, ಈ ವಿಷಯದ ಬಗ್ಗೆ ಅತ್ಯಂತ ಭಾವುಕರಾದ ಸಚಿವ ಎಂ.ಬಿ.ಪಾಟೀಲರು ಸ್ವತಃ ಅಂಗಾಂಗ ದಾನ ಮಾಡುವ ಘೋಷಣೆ ಮೂಲಕ ಬಸವನಾಡಿನಲ್ಲಿ ಅಂಗಾಂಗ ದಾನದ ಅಭಿಯಾನ ಆರಂಭಕ್ಕೆ ಹೊಸ ಸ್ವರೂಪ ನೀಡಿದರು.

ನಗರದ ಬಿಎಲ್‌ಡಿಇ ಸಂಸ್ಥೆಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬಲರಾಮ ಬಾಗಲಕೋಟ ಅವರ ಕುಟುಂಬಕ್ಕೆ ಗೌರವ ಸಮರ್ಪಣೆ ನೆರವೇರಿಸಿದ ನಂತರ ಈ ಕುರಿತು ಸ್ಥಳದಲ್ಲಿಯೇ ಅವರು ಘೋಷಣೆ ಮಾಡಿದರು.

ದಿ.ಬಲರಾಮ ಅವರ ತ್ಯಾಗ ಅನುಪಮ, ಅವರಿಂದಲೇ ಬಸವನಾಡಿನಲ್ಲಿ ಅಂಗಾಂಗ ದಾನದ ಅಭಿಯಾನ ಆರಂಭವಾಗಿದೆ. ಇದಕ್ಕೆ ವಿಜಯಪುರ ಜಿಲ್ಲೆಯಿಂದ ನಾವೇ ನೇತೃತ್ವ ವಹಿಸಿಕೊಳ್ಳಲಿದ್ದು, ನಾನೇ ಸ್ವತಃ ಪ್ರಥಮ ಹೆಜ್ಜೆಯಾಗಿ ಮಿಷನ್ ಬಲರಾಮ್ ಎನ್ನುವ ಅಭಿಯಾನವನ್ನೇ ನಡೆಸಿ ಇದಕ್ಕೆ ನಾನೇ ಪ್ರಥಮವಾಗಿ ಅಂಗಾಂಗ ದಾನದ ವಾಗ್ದಾನ ಮಾಡುವೆ ಎಂದರು.

ಅಂಗಾಂಗ ದಾನ ಒಂದು ಪವಿತ್ರ ಕಾರ್ಯ. ಅಭಿಯಾನ ಆಗಿ ಇನ್ನೂ ಕಾರ್ಯಗತವಾಗಿಲ್ಲ. ಈ ಬಾಗಲಕೋಟ ಕುಟುಂಬದ ಸೇವಾ ಹೆಜ್ಜೆಯಿಂದ ತ್ಯಾಗದಿಂದ ಈ ಅಭಿಯಾನ ಬಸವನಾಡಿನಿಂದ ಆರಂಭವಾಗಲಿ. ಆಸ್ಟ್ರಿಯಾ,



ರಷ್ಯಾ, ಸ್ಪೇನ್, ಬೆಲ್ಜಿಯಂ, ಸಿಂಗಾಪೂರ, ಫ್ರಾನ್ಸ್, ಸಿಪ್ರಸ್, ಫಿನ್‌ಲ್ಯಾಂಡ್, ಪೋಲೆಂಡ್, ಪೋರ್ಚುಗಲ್, ಸ್ವೀಡನ್‌ನಲ್ಲಿ ಅಂಗಾಂಗ ದಾನ ಮಹತ್ವ ಪಡೆದಿದ್ದು, ನಮ್ಮ ದೇಶದಲ್ಲಿಯೂ ಜಾರಿಯಾಗುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ನಿರಂತರ ಎಂದರು. ಅಂಗಾಂಗ ದಾನಕ್ಕೆ ಸಂಬಂಧಿಸಿದಂತೆ ಸ್ಪಷ್ಟವಾದ ನೀತಿ ಅಗತ್ಯವಾಗಿದ್ದು, ಎರಡು ಸರ್ಕಾರಗಳು ಸಮನ್ವಯ ಸಾಧಿಸಿ ಅದರಲ್ಲೂ ಪ್ರಧಾನಮಂತ್ರಿಗಳು ಈ ವಿಷಯದಲ್ಲಿ ವಿಶೇಷ ಪ್ರಾತಿನಿಧ್ಯ ನೀಡಿದರೆ ಕೋಟ್ಯಂತರ ಜೀವಗಳಿಗೆ ಆಸರೆಯಾಗಬಹುದಾಗಿದೆ, ಈ ನಿಟ್ಟಿನಲ್ಲಿ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದ್ದು, ಕೇಂದ್ರ ಕಾನೂನು, ಕೇಂದ್ರ ಆರೋಗ್ಯ ಸಚಿವರಿಗೆ, ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗುವುದು ಎಂದರು. ಬಿಎಲ್‌ಡಿಇ ವಿವಿ ಸಮ ಕುಲಪತಿ ಡಾ.ಅರುಣ ಇನಾಮದಾರ ಮಾತನಾಡಿದರು. ಬಾಗಲಕೋಟ ಕುಟುಂಬಕ್ಕೆ ಹೆಲ್ತ್ ಕಾರ್ಡ್ ವಿತರಿಸಲಾಯಿತು.

ಕೋವಿಡ್ ಸಂದರ್ಭದಲ್ಲಿ ಕೇಂದ್ರ ಅವ್ಯವಹಾರ: ಡಾ.ಶರಣಪ್ಪ ಆರೋಪ

ಬಸವನಬಾಗೇವಾಡಿ: ಕೋವಿಡ್ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಸಾವಿರಾರು ಕೋಟಿ ರೂ.ಗಳಷ್ಟು ಅವ್ಯವಹಾರ ಮಾಡಿದೆ ಆದರ ಲೆಕ್ಕ ಕೊಡುತ್ತಿಲ್ಲ, ಕೋವಿಡ್ ಸಂದರ್ಭದಲ್ಲಿನ ಲೆಕ್ಕವನ್ನು ಕೊಡಲಿಕ್ಕೆ ಬರಲ್ಲವೆಂದು ಹೇಳುತ್ತಿದ್ದಾರೆ. ಇದಕ್ಕೆ ನಾವೆಲ್ಲ ಹಣ ನೀಡಿದ್ದೇವೆ ಎಂದು ಕರ್ನಾಟಕ ರಾಜ್ಯ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ರಾಜ್ಯ ಮುಖ್ಯಸಂಯೋಜಕ ಡಾ.ಶರಣಪ್ಪ ಕೊಟಗಿ ಆರೋಪಿಸಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಸ್.ಐ.ಆರ್ ಮೂಲಕ ಜನರ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ, ಇದ್ದರಿಂದ ಮತದಾರರ ಪಟ್ಟಿಯಿಂದ ಮತದಾರರ ಹೆಸರುಗಳನ್ನು ತಗೆದು ಹಾಕುವ ಕುತಂತ್ರವಾಗಿದೆ ಎಂದು ಆರೋಪಿಸಿದ



ಅವರು, ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತಂದಿರುವ ಪಂಚಗ್ಯಾರೆಂಟಿ ಯೋಜನೆ ಸಾಮಾನ್ಯ ಜನರಿಗೆ ತಲುಪುತ್ತಿಲ್ಲ ಈ ನಿಟ್ಟಿನಲ್ಲಿ ಕಾಂಗ್ರೆಸ್ ಪದಾಧಿಕಾರಿಗಳಿಗೆ ಕಾರ್ಯಕರ್ತರಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ, ಇದರ ಮೂಲಕ ಜನರಿಗೆ ತಲುಪಿಸುವ ಕೆಲಸ ಕಾರ್ಯಕರ್ತರು ಮಾಡಲಿದ್ದಾರೆ ಎಂದು ಹೇಳಿದರು.

ಕೆಪಿಸಿಸಿ ಕೋ–ಆಡಿನೇಟರ್ ಜಿ.ಎಸ್. ಮಹಾಬಳೇಶ್ವರ, ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಶಂಕರಗೌಡ ಬಿರಾದಾರ ಮಾತನಾಡಿದರು. ಜಿಲ್ಲಾಧ್ಯಕ್ಷ ಎಸ್.ಎಂ.ಮಿರ್ದೆ, ಗದಗ ಜಿಲ್ಲಾಧ್ಯಕ್ಷ ಬೆನ್ನಿಕಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ನಗರ ಘಟಕ ಅಧ್ಯಕ್ಷ ಸುರೇಶಗೌಡ ಪಾಟೀಲ, ಪರಶುರಾಮ ಜಮಖಂಡಿ, ಮೈಬೂಬ ನಾಯ್ಕೋಡಿ, ಕಮಲಸಾಬ ಕೊರಬು, ಭಾಗ್ಯರಾಜ ಸೊನ್ನದ, ಸಂತೋಷ ಗಣಾಚಾರಿ, ತಮ್ಮಣ್ಣ ಕಾನಾಗಡ್ಡಿ, ಜಗದೇವಿ ಗುಂಡಳ್ಳಿ ಸೇರಿದಂತೆ ಇತರರು ಇದ್ದರು.

ನಿಯಮ ಉಲ್ಲಂಘಿಸಿದ ಸಂಸ್ಥೆ ವಿರುದ್ಧ ಕ್ರಮಕ್ಕೆ ಆಗ್ರಹ

ಮುದ್ದೇಬಿಹಾಳ: ತಾಲೂಕಿನಲ್ಲಿ ನಡೆಯುತ್ತಿರುವ ಅನಧಿಕೃತ ಶಾಲೆಯ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಹಾಗೂ ಅಂಬೇಡ್ಕರ್ ಸೇನೆಯ ಕಾರ್ಯಕರ್ತರು ನಡೆಸುತ್ತಿರುವ ಧರಣಿ ಹೋರಾಟ ಸತ್ಯಾಗ್ರಹ ವೇದಿಕೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಆವರಣದಲ್ಲಿ ಮುತ್ತಿಗೆ ಹಾಕಿ ಪ್ರತಿಭಟಿಸುವುದನ್ನು ನಾಳೆ ಮಂಗಳವಾರಕ್ಕೆ ಮುಂದೂಡಿದ್ದಾರೆ.

ಶಾಲೆ ಶಿಕ್ಷಣ ಕಾಯ್ದೆ ನಿಯಮ ಉಲ್ಲಂಘಿಸಿ, ಕೃಷಿ ಭೂಮಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ತಂದರು ಕ್ರಮ ಕೈಗೊಂಡಿಲ್ಲ ಎಂದು ವಿರೋಧಿಸಿರುವ ಹೋರಾಟಗಾರರು, ಕೆಲವು ದಿನಗಳಿಂದ ಧರಣಿ ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ. ಸ್ಥಳೀಯವಾಗಿ ಪುರಸಭೆಯವರಿಗೂ ಮಾನ್ಯತೆ ರದ್ದು ಮಾಡುವಂತೆ ಮನವಿಪತ್ರ ನೀಡಿದ್ದೇವೆ ಆದರೂ ಕ್ರಮ ಕೈಗೊಂಡಿಲ್ಲ ಎಂದು ಸೋಮವಾರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆಗೆ ಮುಂದಾಗಿದ್ದರು.

ಸೋಮವಾರ ಬೆಳಗ್ಗೆ ಪಿಎಸ್ಐ ಸಂಜೀವ್ ತಿಪ್ಪಾರೆಡ್ಡಿ ತಹಶೀಲ್ದಾರ್ ಕೀರ್ತಿ ಚಾಲಕ ಅವರ ನಿರ್ದೇಶನದ ಮೇರೆಗೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮಧ್ಯಾನ ಜಿಲ್ಲಾ ಶಿಕ್ಷಣ ಉಪ ನಿರ್ದೇಶಕರು ಪ್ರತಿಭಟನಾ ಸ್ಥಳಕ್ಕೆ ಬರುತ್ತಾರೆ ಎಂದು ಮಾಹಿತಿ ನೀಡಿದ್ದು, ನಂತರ ಕ್ಷೇತ್ರ ಶಿಕ್ಷಣಾಧಿಕಾರಿ ಬಿ. ಎಸ್. ಸಾವಳಗಿ ಅವರು ಜಿಲ್ಲಾ ಉಪ ನಿರ್ದೇಶಕರ ಪ್ರವಾಸ ನಾಳೆಗೆ ಮುಂದೂಡಲಾಗಿದೆ ಎಂದು ನಾಳೆ ಈ ಕುರಿತು ತೀರ್ಮಾನ ತಿಳಿಸುತ್ತಾರೆ, ಮುತ್ತಿಗೆ ಕೈಬಿಡಬೇಕು ಎಂದು



> **ನಮ್ಮ ಸಂಸ್ಥೆ ಶಾಲೆಗೆ ಕಾನೂನು ಪ್ರಕಾರ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮತಿ ಪಡೆದಿದ್ದೇವೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ನಮ್ಮ ಸಂಸ್ಥೆ ಹೆಸರುವಾಸಿಯಾಗಿದ್ದು ನೂರಾರು ವಿದ್ಯಾರ್ಥಿಗಳು ಅದರ ಲಾಭ ಪಡೆದಿದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳ ಹಿತಾಸಕ್ತಿಗಾಗಿ, ಪಾಲಕರ ಒತ್ತಾಯದ ಮೇರೆಗೆ ಹಲವು ಶಾಲೆಗಳಲ್ಲಿ ವಸತಿ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಹಿತಾಸಕ್ತಿಯೇ ನಮಗೆ ಮುಖ್ಯ.**
>
> ■ ಮಹಾಂತೇಶ್ ಸಿದ್ದರಡ್ಡಿ, ಕಾರ್ಯದರ್ಶಿ, ವಿದ್ಯಾಸ್ಫೂರ್ತಿ ಶಿಕ್ಷಣ ಸಂಸ್ಥೆ

ಮನವಿ ಮಾಡಿದರು. ಡಿಎಸ್‌ಎಸ್ ಜಿಲ್ಲಾಧ್ಯಕ್ಷ ಬಾಲಚಂದ್ರ ಹುಲ್ಲೂರು, ಪಿ.ಆರ್. ಹೊಸಮನಿ, ಮಹಿಳಾ ಘಟಕದ ಅಧ್ಯಕ್ಷ ಗೀತಾ ಮಾದರ, ಡಿಎಂ ದೊಡಮನಿ, ಅಶೋಕ ಪಾದಗಟ್ಟಿ, ಚಂದ್ರಶೇಖರ್ ಮಾದರ, ಮಾರುತಿ ಸಿದ್ದಾಪುರ, ಪರಶುರಾಮ್ ಕುಂಟೋಜಿ, ಯಮನಪ್ಪ ಕಾಳಗಿ, ಶೇಕು ಕುಂಟೋಜಿ, ಶ್ರೀಶೈಲ್ ಇಣಚಿಗಲ್, ಬಸು ಕಟ್ಟಿಮನಿ ಉಪಸ್ಥಿತರಿದ್ದರು.

ಪಾಲಕರನ್ನು ಗೌರವಿಸಿ: ಶೆಡಶ್ಯಾಳ

ವಿಜಯಪುರ: ಬದುಕಿನ ಸಂಧ್ಯಾಕಾಲದಲ್ಲಿ ಪಾಲಕರನ್ನು ಗೌರವ, ಶ್ರದ್ಧೆಯಿಂದ ನೋಡಿಕೊಳ್ಳುವುದು ಪ್ರತಿಯೊಬ್ಬ ಮಗುವಿನ ಬದ್ಧತೆ ಜೊತೆಗೆ ಕರ್ತವ್ಯವೂ ಆಗಿದೆ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸುರೇಶ ಶೆಡಶ್ಯಾಳ ಹೇಳಿದರು.

ಇಲ್ಲಿನ ಮದೀನಾ ನಗರದ ಮಾಣಿಕೇಶ್ವರಿ ಶಾಲೆಯಲ್ಲಿ ಹಮ್ಮಿಕೊಂಡ ಶೈಕ್ಷಣಿಕ ಚಿಂತನಗೋಷ್ಠಿ ಹಾಗೂ ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿ, ಮಕ್ಕಳಿಗೆ ಶಾಲಾ ಶಿಕ್ಷಣದೊಂದಿಗೆ ಮಾನವೀಯ ಮೌಲ್ಯಗಳನ್ನು ಕಲಿಸಬೇಕು. ಮಕ್ಕಳಿಗೆ ನೈತಿಕ ಮೌಲ್ಯ ಸಿಗಬೇಕು ಅಂದಾಗ ಮಾತ್ರ ಮಕ್ಕಳು ತಮ್ಮ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಂಡು ಉಜ್ವಲ ಭವಿಷ್ಯ ನಿರ್ಮಾಣ ಮಾಡಿಕೊಳ್ಳುತ್ತಾರೆ ಎಂದರು.

ಪಿಎಸ್ಐ ರೇಣುಕಾ ದಿನ್ನಿ ಮಾತನಾಡಿ, ಮಕ್ಕಳಿಗೆ ಶೈಕ್ಷಣಿಕ ಹಿತದೃಷ್ಟಿಯಿಂದ ಮೊಬೈಲ್ ಕೊಡಬೇಕು. ಶೈಕ್ಷಣಿಕ ಉದ್ದೇಶ ಹೊರತುಪಡಿಸಿ ಮಕ್ಕಳು ಮೊಬೈಲ್‌ನಲ್ಲಿ ಇತರೆ ಕಾರ್ಯ ಚಟುವಟಿಕೆ ಮಾಡುತ್ತಿರುವ ಕುರಿತು ಪಾಲಕರು ಮಕ್ಕಳ ಮೇಲೆ ನಿಗಾ ವಹಿಸಬೇಕು ಎಂದರು. ಉಪನ್ಯಾಸಕ ಪಿ.ಎಸ್. ಗೌರಿ ಮಾತನಾಡಿದರು. ಬಾಬು ಜಾಧವ, ಶಿವಾನಂದ ಮಲ್ಲೇಶಪ್ಪ ರವಿ, ಚಂದ್ರಶೇಖರ ಮೊಗೇರ, ನಗರ ಘಟಕದ ಶಿಕ್ಷಕ ಸಂಘದ ಅಧ್ಯಕ್ಷ ವೀರಭದ್ರಪ್ಪ, ಮೌಲಾಲಿ ರಬಕವಿ, ನಿತೀಶ ಪುಕಾಳೆ, ವೈದ್ಯ ಪ್ರಸನ್ನಕುಮಾರ, ಹೀನಾಕೌಸರ, ಬಿ.ಜಿ. ಬೋಸಲೆ ಇದ್ದರು.



ನಿರಾಶ್ರಿತ ಬಡ ಕುಟುಂಬಗಳಿಗೆ ಆಶ್ರಯ ಒದಗಿಸಲು ಒತ್ತಾಯ

ಆಲಮಟ್ಟಿ: ಕೊಲ್ಹಾರ ಪುನರ್ವಸತಿ ಕೇಂದ್ರದಲ್ಲಿನ ನಿರಾಶ್ರಿತ ಬಡ ಕುಟುಂಬಗಳಿಗೆ ಆಶ್ರಯ ಒದಗಿಸಬೇಕು ಎಂದು ಆಗ್ರಹಿಸಿ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ನೇತೃತ್ವದಲ್ಲಿ ಕೊಲ್ಹಾರ ಪುಕೇ ನಿವಾಸಿಗಳು ಇಲ್ಲಿನ ಪುನರ್ವಸತಿ ಅಧಿಕಾರಿಗಳಿಗೆ ಸೋಮವಾರ ಮನವಿ ಸಲ್ಲಿಸಿದರು.

ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಮಾತನಾಡಿ, ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಕೊಲ್ಹಾರ ಹಳೆಯ ಗ್ರಾಮ ಮುಳಗಡೆಯಾಗಿ ಹೊಸದಾಗಿ ನಿರ್ಮಿಸಿರುವ ಪುನರ್ವಸತಿ ಕೇಂದ್ರದಲ್ಲಿ ಈಗಾಗಲೇ ಸಂತ್ರಸ್ತರಿಗೆ ಪುನರ್ವಸತಿ ಇಲಾಖೆಯಿಂದ ನಿವೇಶನಗಳು ಮಂಜೂರಾಗಿ ದೊರಕಿವೆ. ಆದರೆ ಕೆಲ ಬಡಕುಟುಂಬಗಳಿಗೆ ಕುಟುಂಬ ವ್ಯವಸ್ಥೆಯಲ್ಲಿ ಸಹೋದರರು ಹಾಗೂ ಮಕ್ಕಳು ಸಾಮಾಜಿಕ ಆರ್ಥಿಕ ವ್ಯವಸ್ಥೆಯ ಸಮೀಕ್ಷೆಯ ವರದಿಯ ಅನುಸಾರವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಇರುವವರಿಗೆ ಇದುವರೆಗೂ ನಿವೇಶನಗಳು ದೊರಕದೇ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಅನೇಕ ಬಡ ಕುಟುಂಬಗಳು ಕಳೆದ 20–25 ವರ್ಷಗಳಿಂದ ಪಟ್ಟಣದಲ್ಲಿಯೇ ವಾಸವಾಗಿ ಕೊಲ್ಹಾರ ಗ್ರಾಮದವರಾಗಿದ್ದರೂ ಸರ್ಕಾರದ ನಿಯಮದ ತೊಂದರೆಯಿಂದ ಪುನರ್ವಸತಿ ಇಲಾಖೆಯಿಂದ ಯಾವುದೇ ರೀತಿಯ ನಿವೇಶನಗಳಾಗಲಿ, ಮೂಲ ಸೌಲಭ್ಯಗಳಾಗಲಿ ದೊರಕಲು ಸಾಧ್ಯವಾಗಿಲ್ಲ. ಕೆಲವರು ಸರಕಾರಿ ಜಾಗೆ, ರಸ್ತೆ ಬದಿ, ಹಳೇ ಗ್ರಾಮ, ಯುಕೆಪಿ ಕಾರ್ಯಾಲಯದ ಹತ್ತಿರ, ಪ್ರವಾಸಿ ಮಂದಿರದ ಬಳಿ, ಬನ್ನಿ



ಹಳ್ಳದ ಸುತ್ತಮುತ್ತ, ಮಹದೇವಪ್ಪ ದಿಬ್ಬದ ಹತ್ತಿರ ಹೀಗೆ ಕೆಲವೆಡೆ ಪತ್ರಾಸ್ ಶೆಡ್ಡಗಳನ್ನು ಹಾಕಿಕೊಂಡು ಜನವಸತಿ ಪ್ರದೇಶವನ್ನಾಗಿ ನಿರ್ಮಾಣ ಮಾಡಿಕೊಂಡು ತಮ್ಮ ಬದುಕು ಸಾಗಿಸುತ್ತಿದ್ದಾರೆ. ಕೊಲ್ಹಾರ ರಹವಾಸಿಗಳಾಗಿ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಯಾದಿ, ವಿದ್ಯುತ್ ಸಂಪರ್ಕದ ಆರ್‌ಆರ್ ನಂಬರನ್ನೂ ಹೊಂದಿದವರಾಗಿದ್ದು ಇಲ್ಲಿನ ಮೂಲ ನಿವಾಸಿಗಳು ಆಗಿರುವದರಿಂದ ಈ ಎಲ್ಲ ಕುಟುಂಬಗಳ ನಿರಾಶ್ರಿತರ ಬದುಕು ಕಲ್ಪಿಸಲು ಅವರಿಗೆ ಪುನರ್ವಸತಿ ಕೇಂದ್ರದಲ್ಲಿ ಒಂದು ಕಡೆ ಸ್ಥಳಾವಕಾಶ ಮಾಡಿ ನಿವೇಶನ ಕಲ್ಪಿಸಲು ತಮ್ಮ ಇಲಾಖೆಯಿಂದ ಅವರಿಗೆ ಜಮೀನನ್ನು ಗುರುತಿಸಿ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದರು ಡಾ.ಸಂಗಮೇಶ ಗೂಗಿಹಾಳ, ಪ್ರಶಾಂತ ಪವಾರ್, ವಿಜಯ ಪೂಜಾರ್ಮುಸ್ತಾಫ ಮುಲ್ಲಾ, ಬಸಲಿಂಗಪ್ಪ ಕಾಜಗಾರ, ಅಮೀರ ಹಾದಿಮನಿ, ಸಿಕಂದರ ಬಡೆಘರ, ಮೌಲಾಸಾಬ ಶೇಖ್, ಹಸನಸಾಬ ಮಂಗಳವಾಡೆ, ಹಸನಸಾಬ ಕೊರ್ತಿ, ಮೈಬೂಬ ಮುಲ್ಲಾ, ಮೌಲಾಲಿ ಮಂಗಳವಾಡೆ, ಹುಸೇನಸಾಬ ಯಂಡಿಗೇರಿ, ಆದಮ್ ಮುಜಾವರ, ಅಲ್ಲಾಭಕ್ಷ ಹೊನ್ಯಾಳ, ಸಾಧಿಕ್ ಯಾದವಾಡ, ಎಚ್.ಎಂ.ಅವಟಿ ಇತರರಿದ್ದರು.

ಕಿರುಸುದ್ದಿ

ಸಾಮೂಹಿಕ ವಿವಾಹ ಕಾರ್ಯಕ್ರಮ

ಗಂಗಾವತಿ: ದಾಸನಾಳ ಗ್ರಾಮದಲ್ಲಿ ಶ್ರೀಕಾಟಮೇಶ್ವರ ದೇವಸ್ಥಾನದ 17ನೇ ವರ್ಷದ ವಾರ್ಷಿಕೋತ್ಸವ ಹಾಗೂ ಎರಡು ಜೋಡಿ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿತು. ಈ ವೇಳೆಯಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಮಾತನಾಡಿ, ಸಮಾಜವು ಆರ್ಥಿಕವಾಗಿ ಮುಂದೆ ಬರಲು ಸರ್ಕಾರ ಮುತುವರ್ಜಿ ವಹಿಸಬೇಕಾಗಿದೆ. ಅಲ್ಲದೆ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದರು. ಬಳಿಕ ಮಾಜಿ ಎಮ್ಮೆಲ್ಸಿ ಎಚ್.ಆರ್.ಶ್ರೀನಾಥ ಮಾತನಾಡಿ, ಸಮಾಜದಲ್ಲಿ ದುರ್ಬಲ ಕುಟುಂಬಗಳಿಗೆ ಸಾಮೂಹಿಕ ವಿವಾಹಗಳು ಅನುಕೂಲವಾಗಲಿದೆ. ಅನಾವಶ್ಯಕ ದುಂದು ವೆಚ್ಚ ಮಾಡದೇ ಸಾಮೂಹಿಕ ವಿವಾದಗಳಿಗೆ ಒತ್ತು ನೀಡಬೇಕು. ಅದಕ್ಕೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದರು. ರೇಣುಕಾನಂದ ಸ್ವಾಮೀಜಿ, ವೇದಮೂರ್ತಿ ಬಸವಣ್ಣಪ್ಪ ಸ್ವಾಮಿ, ವೀರೇಶ್ ಶಾಸ್ತ್ರಿ, ಆರ್ಯ ಈಡಿಗ ಸಮಾಜದ ಜಿಲ್ಲಾಧ್ಯಕ್ಷ ಕಾಶಿ ವಿಶ್ವನಾಥ್, ನಾಗಪ್ಪ ಎರಡೋಣಿ, ಶ್ರೀಹರಿ ಕಾರಟಗಿ, ಶರಣಪ್ಪ ಕಾರಟಗಿ ಶ್ರೀಕಾಂತ್ ಸಾಲೋಚಿಮರ, ಆರ್.ದೇವಾನಂದ್, ನಾಗರಾಜ್ ಗುತ್ತೇದಾರ್, ಸಂಗಮೇಶ್ ಸುಗ್ರೀವ, ವೀರಭದ್ರ ಗೌಡ್ರು ಮಾಲಿಪಾಟೀಲ, ದುರ್ಗಪ್ಪ ಪೂಜಾರ, ಮಾರ್ಕಂಡಯ್ಯ ಕುಣಿಕೇರಿ ಹಾಗೂ ಆರ್ಯ ಈಡಿಗ ಸಮಾಜ ಬಾಂಧವರು ಭಾಗವಹಿಸಿದ್ದರು.

ಹಿಂದೂ ಸಮ್ಮೇಳನದಲ್ಲಿ ಪಿರಾಮಿಡ್ ಪ್ರದರ್ಶನ


ಗಂಗಾವತಿ: ಜಯನಗರದ ಶಾರದಾಂಬ ಕಲ್ಯಾಣ ಮಂಟಪದಲ್ಲಿ ಫೆ.21ಕ್ಕೆ ಸಂಜೆ ಆಯೋಜಿಸಲು ನಿರ್ಧರಿಸಲಾಗಿರುವ ನಗರದ ಪಶ್ಚಿಮ ಭಾಗದ ಹಿಂದು ಸಮ್ಮೇಳನದಲ್ಲಿ ಶಾಲಾ ಮಕ್ಕಳ ಪಿರಾಮಿಡ್ ಪ್ರದರ್ಶನ ವಿಶೇಷ ಆಕರ್ಷಣೆಯಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಹಿಂದೂ ಸಮ್ಮೇಳನದ ಭಾಗವಾಗಿ ಫೆ.21ಕ್ಕೆ ಸಂಜೆ 3.30ಕ್ಕೆ ಕಲ್ಮಠದಿಂದ ಹೊರಡುವ ಶೋಭಾಯಾತ್ರೆಗೆ ಕಲ್ಮಠದ ಡಾ. ಕೊಟ್ಟೂರು ಸ್ವಾಮೀಜಿ ಚಾಲನೆ ನೀಡುವರು. ಮಕ್ಕಳು ವೇಷಭೂಷಣದಲ್ಲಿ ಭಾಗಿಯಾಲಿಗುತ್ತಾರೆ. ಮಹಿಳಾ ಭಜನಾ ಮಂಡಳಿಗಳು, ವಿವಿಧ ಕಲಾತಂಡಗಳು ಪಾಲ್ಗೊಳ್ಳಲಿವೆ.

ಸಮ್ಮೇಳನದ ವೇದಿಕೆ ಕಾರ್ಯಕ್ರಮದ ಉದ್ಘಾಟನೆಗೂ ಮುನ್ನ ಗಂಗಾವತಿ ವಿಧಾನಸಭಾ ಕ್ಷೇತ್ರದ ಇರಕಲ್ಗಡಾ ವಿದ್ಯಾವಿನಾಯಕ್ ಶಾಲೆಯ ವೀರ ಸಾವರ್ಕರ್ ಎಕ್ರೊಬಿಟಿಕ್ಸ್ ತಂಡದ ಮಕ್ಕಳಿಂದ ಆಕರ್ಷಕ ಪಿರಾಮಿಡ್ ರಚನೆ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಕಾರಟಗಿ ತಾಲ್ಲೂಕಿನ ಸೋಮನಾಳದ ಚಿಕ್ಕಬೊಮ್ಮನಾಳ ಹಿರೇಮಠದ ಮಲ್ಲಿಕಾರ್ಜುನ ಆಶ್ರಮದ ರುದ್ರಮುನಿಸ್ವಾಮಿ ಆಶೀರ್ವಚನ ನೀಡುವರು. ವಿಶ್ವ ಹಿಂದು ಪರಿಷತ್ತಿನ ಉತ್ತರ ಕರ್ನಾಟಕ ಪ್ರಾಂತದ ಸಹ ಕಾರ್ಯದರ್ಶಿ ವಿನಾಯಕ ತಳಗೇರಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ಹಾಸ್ಯ ಕಲಾವಿದ ಬೇವಿನಾಳ ಪ್ರಾಣೇಶ ವಿಶೇಷ ಆಹ್ವಾನಿತರಾಗಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ವೇದಿಕೆ ಕಾರ್ಯಕ್ರಮದ ಬಳಿಕ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಉರುಸ್ ಆಚರಣೆ



ಯಲಬುರ್ಗಾ: ಪಟ್ಟಣದ ಭಾವೈಕ್ಯತೆಯ ಹಜರತ್ ಸೈಯದಷಾ ಅಷರಪ್ ಅಲಿವಲಿ ದರ್ಗಾದಲ್ಲಿ ಉರುಸು ನಿಮಿತ್ತ ಭಾನುವಾರ ಸಡಗರ ಸಂಭ್ರಮದಿಂದ ಬೆಳಿಗ್ಗೆ ದರ್ಗಾದಲ್ಲಿ ಮುಸ್ಲಿಂ ಸಮಾಜ ಭಾಂಧವರು ವಿಶೇಷ ಪ್ರಾರ್ಥನೆ ಸಲ್ಲಿಸಿ ಸಂಭ್ರಮಿಸಿದರು. ಸಿಎಂ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರೆಡ್ಡಿ ಅವರು ಹಾಗೂ ಅನೇಕ ಗಣ್ಯರು ಹಜರತ್ ಸೈಯದಷಾ ಅಷರಪ್ ಅಲಿವಲಿ ದರ್ಗಾಕ್ಕೆ ಭೇಟಿ ನೀಡಿ ಮಾಲಾರ್ಪಣೆ ಸಮರ್ಪಿಸಿದರು. ಹಿಂದೂಗಳು ಸಹ ದರ್ಗಾಕ್ಕೆ ಆಗಮಿಸಿ ಭಕ್ತಿಭಾವದಿಂದ ಪೂಜೆ ಸಲ್ಲಿಸುವ ಮೂಲಕ ಸಕ್ಕರೆ ಸೇವೆ ಗೈದರು. ಇಲ್ಲಿನ ಭಾವೈಕ್ಯತೆಯ ಹಜರತ್ ಸೈಯದಷಾ ಅಷರಪ್ ಅಲಿವಲಿ ದರ್ಗಾದಲ್ಲಿ ಹಿಂದೂ, ಮುಸ್ಲಿಮರು ಭೇಧ, ಭಾವವಿಲ್ಲದೆ ಎಲ್ಲರೂ ಸಹೋದರತ್ವದಿಂದ ದರ್ಗಾಕ್ಕೆ ಪೂಜೆ ಸಲ್ಲಿಸುವುದು ವಿಶೇಷವಾಗಿದೆ. ಈ ವೇಳೆಯಲ್ಲಿ ಡಾ.ಶಿವನಗೌಡ ದಾನರಡ್ಡಿ, ಮುಸ್ಲಿಂ ಸಮಾಜದ ಮುಖಂಡರಾದ ಸೈಯದ್ ಮೊಹಮ್ಮದ ಅಬ್ದುಲ್ ಖಾದ್ರಿ, ಮಹೆಬೂಬಸಾಬ ಮಕಾಂದಾರ, ಅಬ್ದುಲ್ ಮುನಾಫ್, ಬಬುಸಾಬ ಮಂಡಲಗೇರಿ, ಎಂ.ಎಫ್.ನದಾಫ್, ಗೌಸುಸಾಬ ಕನಕಗಿರಿ, ರೆಹಮಾನಸಾಬ ನಾಯಕ, ರಿಯಾಜ್ ಖಾಜಿ, ಶರೀಫ್ ಕೊತ್ವಾಲ್, ಮಲ್ಲು ಜಕ್ಕಲಿ ಮತ್ತಿತರರಿದ್ದರು.



ಗಂಗಾವತಿ: ದಾಸನಾಳ ಗ್ರಾಮದಲ್ಲಿ ಶ್ರೀಕಾಟಮೇಶ್ವರ ದೇವಸ್ಥಾನದ 17ನೇ ವರ್ಷದ ವಾರ್ಷಿಕೋತ್ಸವ ಹಾಗೂ ಎರಡು ಜೋಡಿ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿತು.ರೇಣುಕಾನಂದ ಸ್ವಾಮೀಜಿ, ವೇದಮೂರ್ತಿ ಬಸವಣ್ಣಪ್ಪ ಸ್ವಾಮಿ, ವೀರೇಶ್ ಶಾಸ್ತ್ರಿ, ಆರ್ಯ ಈಡಿಗ ಸಮಾಜದ ಜಿಲ್ಲಾಧ್ಯಕ್ಷ ಕಾಶಿ ವಿಶ್ವನಾಥ್, ನಾಗಪ್ಪ ಎರಡೋಣಿ, ಶ್ರೀಹರಿ ಕಾರಟಗಿ, ಶರಣಪ್ಪ ಕಾರಟಗಿ ಶ್ರೀಕಾಂತ್ ಸಾಲೋಚಿಮರ ಇದ್ದರು.

ಬೇಡರ ಕಣ್ಣಪ್ಪನ ಜಯಂತಿ ಆಚರಣೆ

ಗಂಗಾವತಿ: ಬೇಟೆಗಾರನಾದ ಕಣ್ಣಪ್ಪ ಶಿವನಿಗೆ ತನ್ನ ಕಣ್ಣನ್ನು ನೀಡುವ ಮುಖಾಂತರ ಶಿವಮೆಚ್ಚಿದ ಬೇಡರ ಕಣ್ಣಪ್ಪ ಎಂದು ಖ್ಯಾತಿಯನ್ನು ಪಡೆದಿದ್ದು, ಶಿವನೊಲಿದ ದಿನವೇ ಶಿವರಾತ್ರಿಯಾಗಿದೆ ಎಂದು ಅಖಿಲ ಪಿರಾಮಿಡ್ ಧ್ಯಾನ ಕೇಂದ್ರದ ಲಲಿತಾ ವಗ್ಗ ಹೇಳಿದರು. ಅವರು ಸಿದ್ದಿಕೇರೆಯಲ್ಲಿ ಭಾನುವಾರ ಬೇಡರ ಕಣ್ಣಪ್ಪ ಸಂಘ ಹಾಗೂ ತಾಲೂಕು ಶ್ರೀಗುರು ಆದಿಕವಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಕಲಾವಿದರ ಸಂಘದಿಂದ ಆಚರಿಸಿದ ಬೇಡರ ಕಣ್ಣಪ್ಪ ಜಯಂತಿಯಲ್ಲಿ ಬೇಡರ ಕಣ್ಣಪ್ಪ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ಕಾಮಧೇನು ನ್ಯೂಟ್ರಿಷನ್ ಸೆಂಟರ್‌ನ ಶಿವದೀಪಕ್ ಹಾದಿಮನಿ ಮಾತನಾಡಿ, ಭಕ್ತಿಗೆ ಯಾವುದೇ ನಿಯಮಗಳಿಲ್ಲ, ದೇವರು ಒಲಿಯಲು ಸತ್ಯ, ಶುದ್ಧ ಕಾಯಕದ ಜೊತೆಗೆ ನಿರ್ಮಲವಾದ ಮನಸ್ಸು ಇರಬೇಕೆಂದು ಅಭಿಪ್ರಾಯಪಟ್ಟರು.

ಸಿಂಗಾಪುರ ಭೀಮರಾಯ ನಾಯಕ, ಬಸಪ್ಪ ನಾಯಕ ಸೋಮಲಾಪುರ, ಭೀಮಣ್ಣ ನಾಯಕ ಗುಡ್ಡೇಕಲ್, ಹನುಮಂತಪ್ಪ ನಾಯಕ ಕೋಲ್ಕಾರ್, ಗಿರಿಶ್ ನಾಯಕ ಬಸವನದುರ್ಗ, ಜಾನ್ ನಾಯಕ ಜೋಗದ, ಪ್ರಭಾಕರ ಅರ್ಚಕರು, ರಾಮಣ್ಣ ನಾಯಕ ತೊಂಡೇಕಟದ, ನಾರಾಯಣ ವಗ್ಗಾ, ಪರಸಪ್ಪ ನಾಯಕ ಕ್ಯಾಡೇವು, ಸಿಂಗಾಪುರ ಶ್ರೀನಿವಾಸ ನಾಯಕ, ಹೇಮಂತ ತಳಕಲ್, ವಿನುತಾ ಶಿವದೀಪಕ್ ಹಾದಿಮನಿ, ಕುಮಾರಿ ರಿಷಿಕಾ, ಕುಮಾರಿ ಹರ್ಷಿಕಾ ಸೇರಿದಂತೆ ಮತ್ತಿತರು ಇದ್ದರು.



ಮಾನ್ವಿ: ಪಟ್ಟಣದ ಧ್ಯಾನ ಮಂದಿರದಲ್ಲಿ ಶಿವರಾತ್ರಿ ಅಂಗವಾಗಿ ಬೃಹತ್ ಶಿವಲಿಂಗದಲ್ಲಿನ ಕೋಟಿಲಿಂಗಗಳಿಗೆ ಕಲ್ಮಠ ಶ್ರೀವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಅಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರತಿ, ನಡೆಯಿತು. ಬೃಹನ್ಮಠ ನೀಲಗಲ್ ಶ್ರೀಡಾ.ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ 21ಕ್ಕೂ ಹೆಚ್ಚು ಜೊಡಿಗಳ ಸಾಮೂಹಿಕ ವಿವಾಹಗಳು ನಡೆದವು.

ಕೆಡಿಪಿ ಪ್ರಗತಿ ಪರಿಶೀಲನಾ ಸಭೆ | ಸಚಿವ ತಂಗಡಗಿ ಸೂಚನೆ

ಪ್ರತಿ ತಿಂಗಳು ಹಾಸ್ಟೆಲ್‌ಗೆ ಭೇಟಿ ನೀಡಿ

ಕೊಪ್ಪಳ: ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು ಕಡ್ಡಾಯವಾಗಿ ಹಾಸ್ಟೆಲ್‌ಗಳಿಗೆ ಪ್ರತಿ ತಿಂಗಳು ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಆವರಣದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ಎಸ್.ತಂಗಡಗಿ ಅವರ ನೇತೃತ್ವದಲ್ಲಿ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಹಾಸ್ಟೆಲ್ ಗೆ ಅಧಿಕಾರಿಗಳ ಭೇಟಿ ವೇಳೆ ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಬೇಕು. ಖುದ್ದು ಹಾಸ್ಟೆಲ್ ವಿದ್ಯಾರ್ಥಿಗಳ ಜೊತೆ ಅಲ್ಲಿಯೇ ಊಟ ಸೇವಿಸುವ ಮೂಲಕ ಆಹಾರದ ಗುಣಮಟ್ಟ ಪರಿಶೀಲಿಸುವಂತೆ ತಾಕೀತು ಮಾಡಿದರು.

ಹಾಸ್ಟೆಲ್ ವಾರ್ಡನ್ ಗಳು ಸರಿಯಾಗಿ ಹಾಸ್ಟೆಲ್ ನಿರ್ವಹಣೆ ಮಾಡುತ್ತಿಲ್ಲ ಎಂದು ಹೇಮಲತಾ ನಾಯಕ್ ಅವರ ಮಾತಿಗೆ ಪ್ರತಿಕ್ರಿಯಿಸಿದ ಸಚಿವರು, ಅಂತಹ ವಾರ್ಡನ್ ಗಳ ವಿರುದ್ಧ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಿದರು.

ಜಿಲ್ಲೆಯ ಏಳು ತಾಲ್ಲೂಕಿನಲ್ಲಿ ಎಸ್ಸಿ-ಎಸ್ಟಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆಯಡಿ ಅಗತ್ಯವಿರುವ ಹಾಸ್ಟೆಲ್ ಗಳ ಹೆಚ್ಚಳ ಮಾಡುವ ಸಂಬಂಧ ಪ್ರಸ್ತಾವನೆ ಸಿದ್ಧಪಡಿಸಿ, ಇದಕ್ಕೆ ಬೇಕಾದ ಹಾಸ್ಟೆಲ್ ಗಳನ್ನು ಬಜೆಟ್ ನಲ್ಲಿ ಘೋಷಿಸುವಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಜಿಲ್ಲೆಯಲ್ಲಿ ಕ್ಯಾನ್ಸರ್ ಆಸ್ಪತ್ರೆ, ಹೃದ್ರೋಗ ಮತ್ತು ನೆಫ್ರೋಲಾಜಿ ಆಸ್ಪತ್ರೆ ತರುವ ಸಂಬಂಧ ಮುಖ್ಯಮಂತ್ರಿಗಳ ಬಳಿ ಚರ್ಚೆ ನಡೆಸಿದ್ದು, ಈ ಸಂಬಂಧ ಪ್ರಸ್ತಾವನೆ ಸಿದ್ಧಪಡಿಸಿ ಕಳುಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಿಮ್ಸ್ ಆಸ್ಪತ್ರೆಯಲ್ಲಿ ಶುಚಿತ್ವ ಮೊದಲು ಕಾಪಾಡಿ. ನಿಮ್ಮಲ್ಲಿನ ಶೌಚಾಲಯದ ಪರಿಸ್ಥಿತಿ ಹೇಗಿದೆ ಎಂಬುದನ್ನು ನೋಡಿದ್ದೀರ. ಹಿಂದೆಯೂ ಕೂಡ ನಿಮಗೆ ಎಚ್ಚರಿಕೆ ನೀಡಲಾಗಿದ್ದರೂ ಅದನ್ನೇ ಮುಂದುವರೆಸಿದ್ದೀರ. ನಿಮ್ಮಲ್ಲಿ ಬದಲಾವಣೆ ಆಗದಿದ್ದರೆ ನಿಮ್ಮ ಮೇಲೆ ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಶಿಕ್ಷಣದಲ್ಲಿ ಹಿಂದುಳಿದಿದ್ದು ಏಕೆ?: ಪರೀಕ್ಷೆಗೆ ಇನ್ನು ಒಂದು ತಿಂಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು. ಯಾವ ವಿಷಯದಲ್ಲಿ ಮಕ್ಕಳು ಹಿಂದೆ ಇದ್ದಾರೆ, ಅಂತಹ ವಿಷಯಗಳ ಬಗ್ಗೆ ಹೆಚ್ಚು ಗಮನ ಹರಿಸಿ. ವಿಶೇಷ ತರಗತಿಗಳನ್ನು ತೆಗೆದುಕೊಳ್ಳಬೇಕು. ಶಿಕ್ಷಣ ಕ್ಷೇತ್ರಕ್ಕೆ ಕಲ್ಯಾಣ ಕರ್ನಾಟಕ ಜಿಲ್ಲೆಗಳಿಗೆ ಅತೀ ಹೆಚ್ಚು ಅನುದಾನ ನೀಡುತ್ತಿದ್ದೇವೆ. ಆದರೂ ನಾವು ಹಿಂದುಳಿಯಲು ಕಾರಣ ಏನು ಎಂದು ಸಚಿವರು ಪ್ರಶ್ನಿಸಿದರು. ಶಾಲೆಗಳಲ್ಲಿ ಶಿಕ್ಷಕರ ಹಾಜರಾತಿ ಹಿನ್ನೆಲೆಯಲ್ಲಿ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ತರಲು ಶಾಸಕ ರಾಘವೇಂದ್ರ ಹಿಟ್ನಾಳ್ ಸಲಹೆ ನೀಡಿದರು.

ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್, ಶಾಸಕ ಜನಾರ್ದನ್ ರೆಡ್ಡಿ, ರಾಘವೇಂದ್ರ ಹಿಟ್ನಾಳ್, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್, ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ, ಸಿಇಓ ವರ್ಣಿತ್ ನೇಗಿ ಇದ್ದರು.



ವಿನೂತನ ಕಲಿಕೆಗೆ ಒತ್ತು ನೀಡಿ

ಜಿಲ್ಲೆಯಲ್ಲಿ ಎಸೆಸ್ಸೆಲ್ಸಿ ಫಲಿತಾಂಶ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಶಿಕ್ಷಣ ಅಧಿಕಾರಿಗಳ ವಿರುದ್ಧ ಸಿಡಿಮಿಡಿಗೊಂಡ ಸಚಿವರು, ಫಲಿತಾಂಶ ಹೆಚ್ಚಿಸುವ ನಿಟ್ಟಿನಲ್ಲಿ ವಿನೂತನ ಕಲಿಕೆಗೆ ಒತ್ತು ನೀಡಬೇಕು. ನಿರಂತರ ಗೈರು ಹಾಜರಾಗುತ್ತಿರುವ ವಿದ್ಯಾರ್ಥಿಗಳ ಮನೆಗೆ ಶಿಕ್ಷಕರು ಭೇಟಿ ನೀಡಿ ಶಾಲೆಗೆ ಬರುವಂತೆ ಕ್ರಮವಹಿಸಬೇಕು. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಏಳು ತಾಲ್ಲೂಕಿನಲ್ಲಿ ಎಲ್ಲಾ ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರ ನಾಳೆ ಸಭೆ ಆಯೋಜನೆಗೆ ಸೂಚನೆ ನೀಡಿದರು.

ಶಿವನನ್ನು ಪೂಜಿಸಿದರೆ ಪುಣ್ಯ ಪ್ರಾಪ್ತಿ: ಗೀತಕ್ಕ

ಯಲಬುರ್ಗಾ: ಶಿವ ಹಾಗೂ ಶಕ್ತಿಯ ಸಮ್ಮಿಲನವೇ ಶಿವರಾತ್ರಿಯಾಗಿದೆ ಶಿವರಾತ್ರಿಯೆಂದು ಉಪವಾಸ ಮಾಡಿ ಶಿವನನ್ನು ಪೂಜಿಸಿದರೆ ಪಾಪಗಳು ಕಳೆದು ಪುಣ್ಯಪ್ರಾಪ್ತಿಯಾಗುತ್ತದೆ ಎಂದು ಬ್ರ.ಕು. ಗೀತಕ್ಕನವರು ಹೇಳಿದರು.

ಪಟ್ಟಣದ ಈಶ್ವರಿ ವಿಶ್ವವಿದ್ಯಾಲಯದಲ್ಲಿ ಶಿವರಾತ್ರಿ ನಿಮಿತ್ತ ಆಯೋಜಿಸಿದ ವಿಶೇಷ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಜ್ಞಾನವನ್ನು ಕಳೆದು ಜ್ಞಾನ ಪ್ರಕಾಶವನ್ನು ಬೆಳುಗವ ಅತ್ಯಂತ ಪವಿತ್ರ ಹಬ್ಬ ಇದಾಗಿದೆ ಎಂದರು.

ವಿಷಕಂಠನಾಗಿ ಎಲ್ಲವನ್ನು ನುಂಗಿ ಜಗವನ್ನು ರಕ್ಷಿಸಿದ ಶಿವನ ಜನ್ಮದಿನವಾದ ಇಂದು ಶಿವನನ್ನು ಆರಾಧಿಸುವ ಮೂಲಕ ಆತನ ಕೃಪೆಗೆ ಪಾತ್ರರಾಗಬೇಕಾಗಿದೆ. ಹಿಂದೂಗಳಿಗೆ ಈ ಹಬ್ಬ ಶ್ರೇಷ್ಠವಾಗಿದೆ. ಪರಿಶುದ್ಧ ಮಾನವನಾಗಲು ಸಪ್ತ ಸೂತ್ರಗಳನ್ನು ಅಳವಡಿಸಿಕೊಳ್ಳಲು ಹೇಳುತ್ತಾ ಮೋಕ್ಷ ಹಾಗೂ ಆಧ್ಯಾತ್ಮಿಕ ಜಾಗ್ರತೆಗಾಗಿ ಪ್ರಾರ್ಥಿಸುತ್ತಾ ಜೀವನವನ್ನು ಪ್ರತಿಯೊಬ್ಬರು ಪಾವನ ಮಾಡಿಕೊಳ್ಳಬೇಕು ಎಂದು ಹೇಳಿದರು.

ಮೂಲತಃ ಸುಮಾರು 64 ಜ್ಯೋತಿರ್ಲಿಂಗಗಳು ಇದ್ದರೂ ಅತ್ಯಂತ ಶಕ್ತಿಶಾಲಿ ಹಾಗೂ ದಿವ್ಯತೆಯನ್ನು ಪಡೆದಂತಹ 12 ಜ್ಯೋತಿರ್ಲಿಂಗಗಳಾದ ಸೋಮನಾಥ, ಮಲ್ಲಿಕಾರ್ಜುನ, ಮಹಾಕಾಳೇಶ್ವರ, ಓಂಕಾರೇಶ್ವರ, ಕೇದಾರನಾಥ, ಭೀಮಶಂಕರ, ಕಾಶಿ ವಿಶ್ವನಾಥ, ತ್ರ್ಯಂಬಕೇಶ್ವರ, ಬೈದ್ಯನಾಥ, ನಾಗೇಶ್ವರ, ರಾಮೇಶ್ವರ ಹಾಗೂ ಘೃಷ್ಣೇಶ್ವರ ಎಂಬ 12 ಜ್ಯೋತಿರ್ಲಿಂಗಗಳನ್ನು ಜೀವನದಲ್ಲಿ ದರ್ಶನ ಮಾಡಿದರೆ ಪಾಪ ಕಳೆದು ಮೋಕ್ಷಪ್ರಾಪ್ತಿ ಆಗುತ್ತದೆ ಎನ್ನುವ ಭಕ್ತರ ನಂಬಿಕೆ ಬಹುತೇಕ ಹುಸಿಯಾಗಿಲ್ಲ. ಬೆಳಿಗ್ಗೆ ಶಿವಧ್ವಜಾರೋಹಣವನ್ನು ಶಿವಕುಮಾರ ಭೂತೆ ಹಾಗೂ ಪ.ಪಂ. ಮಾಜಿ ಅಧ್ಯಕ್ಷ ಸುರೇಶಗೌಡ ಶಿವನಗೌಡರ ಸೇರಿದಂತೆ ಅನೇಕ ಗಣ್ಯರು ಜ್ಯೋತಿರ್ಲಿಂಗ ಮೆರವಣಿಗೆಗೆ ಗಣ್ಯರು ಚಾಲನೆ ನೀಡಿದರು.

ಸಿದ್ದಯ್ಯ ಕೊಣ್ಣೂರು, ಸಂಗಣ್ಣ ಟೆಂಗಿನಕಾಯಿ, ಸಂಗಣ್ಣ ಕರಂಡಿ, ಮಲ್ಲಿಕಾರ್ಜುನ ತೊಂಡಿಹಾಳ, ಫಕೀರಪ್ಪ ಗಾಣಗೇರ, ವೀರಯ್ಯ ಹಿರೇಮಠ, ನಿಂಗಪ್ಪ ಯರಾಶಿ, ಕನಕಪ್ಪ ಕಂಬಳಿ, ಜಗದೀಶ ಅಂಗಡಿ, ರುದ್ರಗೌಡ ಗೋಣಿ, ವೀರನಗೌಡ ಪಾಟೀಲ, ಆದೇಶ ಹುಬ್ಬಳ್ಳಿ, ಬಸನಗೌಡ ಪಾಟೀಲ, ಶರಣಪ್ಪ ದಾನಕೈ, ಎಚ್.ಶಿವು, ಮಂಜು ಕೊಣ್ಣೂರು ಹಾಗೂ ನೂರಾರು ಅಕ್ಕಂದಿರು ಜ್ಯೋತಿರ್ಲಿಂಗಗಳ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.




ಅಕಾಲಿಕ ನಿಧನ: ಅವಲಂಬಿತ ಕುಟುಂಬಕ್ಕೆ ಆರ್ಥಿಕ ನೆರವು

ಕಲಬುರಗಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆಸಂಸ್ಥೆಯಲ್ಲಿಸೇವೆಸಲ್ಲಿಸುತ್ತಿರುವಾಗಲೇ ಅಕಾಲಿಕ ನಿಧನ ಹೊಂದಿದ ನೌಕರರ ಅವಲಂಬಿತ ಕುಟುಂಬಗಳಿಗೆ ಆರ್ಥಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಸೋಮವಾರ ನಗರದ ಕೆಕೆಆರ್‌ಟಿಸಿ ಪ್ರಧಾನ ಕಚೇರಿಯಲ್ಲಿ ಆಂತರಿಕ ಗುಂಪು ವಿಮೆ ಯೋಜನೆಯಡಿ ಸಹಾಯಧನ ಪರಿಹಾರದ ಚೆಕ್ ವಿತರಿಸಲಾಯಿತು.

ನಿಗಮದ ಅಧ್ಯಕ್ಷ ಅರುಣಕುಮಾರ ಪಾಟೀಲ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಡಾ.ಬಿ.ಸುಶೀಲ್ ಅವರು ಮೃತ ನೌಕರರ 23 ವಾರಸುದಾರರಿಗೆ 10 ಲಕ್ಷ ರು.ಗಳ 2.30 ಕೋಟಿ ರೂ.ಗಳ ಪರಿಹಾರದ ಮೊತ್ತದ ಚೆಕ್ ಗಳನ್ನು ಹಸ್ತಾಂತರಿಸಿದರು.

ಸಾರಿಗೆ ನಿಗಮದ ವ್ಯಾಪ್ತಿಯ ಕಲಬುರಗಿ ವಿಭಾಗ-1 ಹಾಗೂ ವಿಭಾಗ-2ರಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರ ಪೈಕಿ ಇತ್ತೀಚೆಗೆ ನಿಧನರಾದ ಚೆನ್ನಮಲ್ಲಪ್ಪ ಅವರ ಪತ್ನಿ ಶೋಭಾ, ಬಾಬು ಅವರ ಪತ್ನಿ ಶಾಂತಾಬಾಯಿ, ವೀರಭದ್ರಯ್ಯ ಅವರ ಪತ್ನಿ ತನುಜಾ, ಪ್ರದೀಪಕುಮಾರ್ ಪತ್ನಿ ಜ್ಯೋತಿ, ಶರಣು ಅವರ ಪತ್ನಿ ಶಾಂತಾಬಾಯಿ, ತಾಯಿ ಸಾವಿತ್ರಿ ಹಾಗೂ ಮಗಳು ಭಾಗ್ಯಲಕ್ಷ್ಮಿ, ಸಿದ್ದೇಶ್ವರ ಅವರ ಅಣ್ಣಂದಿರಾದ ಹಣಮಂತ, ಅಶೋಕ್ ಹಾಗೂ ತಂಗಿ ಭಾರತಿ, ಜಗನ್ನಾಥ ಅವರ ಪತ್ನಿ, ದಯಾನಂದ ಅವರ ಪತ್ನಿ ಮಹಾನಂದ, ಚಂದ್ರಕಾಂತ್ ಅವರ ಪತ್ನಿ ರಾಜೇಶ್ವರಿ, ಮಲ್ಲಪ್ಪ ಅವರ ಪತ್ನಿ ಗುರುಬಾಯಿ, ಮಹಾದೇವಪ್ಪ ಅವರ ಪತ್ನಿ ಲಲಿತಾ ಕುಮಾರಿ, ಮಾಹಾರುದ್ರಾ ಅವರ ಪತ್ನಿ ಪವಿತ್ರಭಾಯಿ, ಗೋಪಾಲ್ ಅವರ ಪತ್ನಿ ಲಕ್ಕಿ ಅವರು ಸೇರಿ ವಿಜಯಪುರ, ಕೊಪ್ಪಳ, ರಾಯಚೂರು, ಬಳ್ಳಾರಿ, ಬೀದರ್ ಹಾಗೂ ಯಾದಗಿರಿ ವಿಭಾಗಗಳ ಒಟ್ಟು 23 ನೌಕರರ ಕುಟುಂಬಸ್ಥರಿಗೆ ಪರಿಹಾರ ನೀಡಲಾಯಿತು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಾ.ಬಿ.ಸುಶೀಲ, ಕೆಕೆಆರ್‌ಟಿಸಿ ಹಿರಿಯ ಅಧಿಕಾರಿಗಳಾದ ಸುನೀಲಕುಮಾರ್ ಚಂದ್ರಕಿ, ಗಂಗಾಧರ್, ಸಂತೋಷ್ ಗೊಗೇರಿ, ಚಂದ್ರಕಾಂತ್ ಪುಲಾರೆ, ಬಸವರಾಜ್ ಬೆಳಗಾವಿ, ಜಗದೀಶ್, ಬೋರಯ್ಯ, ಮಹಿಪಾಲ್ ಬೇಗಾರ್ ಇತರರಿದ್ದರು.



ಪತ್ರಕರ್ತರಿಗೆ ವಿಪತ್ತು ನಿಧಿ ಸ್ಥಾಪಿಸಲು ಚರ್ಚೆ: ಸಲೀಂ ಅಹ್ಮದ

ರಾಯಚೂರು: ಪತ್ರಕರ್ತರು ಅಸಂಘಟಿತರಾಗಿರುವುದರಿಂದ ಇವರ ಹಾಗೂ ಅವರ ಕುಟುಂಬಗಳಿಗೆ ಆಪತ್ತಿನಲ್ಲಿ ಸರ್ಕಾರ ನೆರವಾಗುವ ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆಗೆ ಒಂದು ವಿಪತ್ತು ನಿಧಿ ಸ್ಥಾಪನೆ ಕುರಿತು ಮುಖ್ಯಮಂತ್ರಿಗಳೊಂದಿಗೆ ಸದ್ಯದಲ್ಲಿನೇ ಚರ್ಚಿಸಲಾಗುವುದು ಎಂದು ವಿಪ ಮುಖ್ಯ ಸಚೇತಕ ಸಲೀಂ ಅಹ್ಮದ ಹೇಳಿದರು.

ರಿಪೋರ್ಟ್‌ರ್ಸ್ ಗಿಲ್ಡ್‌ನಲ್ಲಿ ಸೋಮವಾರ ಆಯೋಜಿಸಿದ್ದ ಇತ್ತೀಚೆಗೆ ನಿಧನರಾಗಿದ್ದ ವರದಿಗಾರ ಸಯ್ಯದ್ ಆಶ್ರಫ್ ಅವರ ಕುಟುಂಬಕ್ಕೆ ನಗರದ ರಾಯಚೂರು ರಿಪೋರ್ಟ್‌ರ್ಸ್ ಗಿಲ್ಡ್ ವತಿಯಿಂದ ಒಂದು ಲಕ್ಷ ಪರಿಹಾರದ ಚೆಕ್ ವಿತರಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಒಂದೆರಡು ದಿನಗಳಲ್ಲಿ ಮುಖ್ಯಮಂತ್ರಿಗಳನ್ನು ಭೇಟಿಯಾಗಲಿದ್ದು ರಾಯಚೂರು ರಿಪೋರ್ಟ್‌ರ್ಸ್ ಗಿಲ್ಡ್ ಸಲ್ಲಿಸಿರುವ ಮನವಿ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವೆ. ಈ ವಿಚಾರ ರಾಯಚೂರು ಜಿಲ್ಲೆಗಷ್ಟೇ ಅಲ್ಲ ರಾಜ್ಯವ್ಯಾಪ್ತಿ ಜಾರಿಗೆ ಆದರೆ ಬಹಳ ಒಳ್ಳೆಯದು ಎನ್ನುವುದನ್ನು ಸಿಎಂ ಹಾಗೂ ಮಾಧ್ಯಮ ಸಲಹೆಗಾರರ ಗಮನಕ್ಕೆ ತರುತ್ತೇನೆ ಎಂದರು.

ರಾಯಚೂರು ರಿಪೋರ್ಟ್‌ರ್ಸ್ ಗಿಲ್ಡ್‌ನ ಅಧ್ಯಕ್ಷ ವಿಜಯಕುಮರ ಜಾಗಟಗಲ್, ಕಾನಿಪದ ಜಿಲ್ಲಾಧ್ಯಕ್ಷ ಆರ್.ಗುರುನಾಥ್, ರಾಜ್ಯಘಟಕದ ಸದಸ್ಯ ಬಸವರಾಜ ನಾಗಡದಿನ್ನಿ, ಮುಖಂಡರಾದ ರುದ್ರಪ್ಪ ಅಂಗಡಿ, ಅಸ್ಲಂ ಪಾಷಾ, ರಜಾಕ್ ಉಸ್ತಾದ್, ಬಷೀರುದ್ದೀನ್, ಮಹ್ಮದ್ ಶಾಲಂ, ಬಶೀರ ಅಹ್ಮದ್ ಸೇರಿದಂತೆ ಅನೇಕರಿದ್ದರು.



ಭೀಮಾಂಬಿಕಾ ದೇವಿ ಜಾತ್ರೆ: ಮೆರವಣಿಗೆ

ಕುಷ್ಟಗಿ: ಪಟ್ಟಣದಲ್ಲಿ ಶ್ರೀಭೀಮಾಂಬಿಕ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಭೀಮಾಂಬಿಕಾ ದೇವಿ ಭಾವಚಿತ್ರದ ಮೆರವಣಿಗೆ ಕುಂಭ, ಕಳಶ ಹಾಗೂ ಸಕಲ ಮಂಗಳ ವಾದ್ಯಗಳೊಂದಿಗೆ ಜರುಗಿತು. ಅಂದು ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಎಂಟು ನವ ಜೋಡಿಗಳು ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಸುಂಗಲಿಯರು ಮತ್ತು ಮಕ್ಕಳು ಕುಂಭ, ಕಳಶ ಹೊತ್ತು ಪಾಲ್ಗೊಂಡಿದ್ದರು. ದ್ಯಾಮಣ್ಣ ಕಟ್ಟಿಹೂಲ, ರಾಮಣ್ಣ ಮಂಡಲಮರಿ, ರೆಡ್ಡಿಪ್ಪ ನೇನಕ್ಕಿ, ಹನುಮಂತಪ್ಪ ಕತ್ತಿ, ಚೆನ್ನಪ್ಪ ನಾಲಗಾರ, ಜಂಬಣ್ಣ, ಬೂದ ಹುಲ್ಲಪ್ಪ ಕಟ್ಟಿಹೂಲ, ನಿಂಗಪ್ಪ ಮರಳಿ, ಪರಸಪ್ಪ ಆಚಾರಿ ಸೇರಿದಂತೆ ಗಣ್ಯರಿದ್ದರು.



ತತ್ವಪದ ಗಾಯನ ಕಾರ್ಯಕ್ರಮ ಯಶಸ್ವಿ



ಕುಷ್ಟಗಿ: ವಿಜಯನಗರ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರವಾಸೋದ್ಯಮ ಹಮ್ಮಿಕೊಂಡಿದ್ದ ಹಂಪಿ ಉತ್ಸವ-2026 ಹಂಪಿ ಕಾರ್ಯಕ್ರಮದಲ್ಲಿ ಪುಣ್ಯಕೋಟಿ ಸಂಸ್ಥೆಯ ಜಾನಪದ ಕಲಾವಿದ ವಾಲ್ಮೀಕಪ್ಪ ಯಕ್ಕರನಾಳ ತಂಡದವ ರಿಂದ ಸಾಸಿವೆ ಕಾಳು ಗಣಪ ವೇದಿಕೆಯಲ್ಲಿ ತತ್ವಪದ ಗಾಯನ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಹಂಪಿಯ ಗತ ವೈಭವ ಸಾರುವ ತತ್ವಪದ ಗಾಯನ ಹಾಡಿ ಜನಮನ ರಂಜಿಸಿದರು. ನಂತರ ಅಧಿಕಾರಿಗಳು ಪ್ರಮಾಣ ಪತ್ರ ಮತ್ತು ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದರು. ಹೊಳೆಯಪ್ಪ ಗುರಿಕಾರ ಶುಖಮನಿ ಗುಮಗೇರಾ ರತ್ನಾ ಆರ್. ಇದ್ದರು.

ಸೋಲು, ಗೆಲುವು ಜೀವನದ ಭಾಗವಷ್ಟೆ: ಕಮಿಷನರ್

ಕಲಬುರಗಿ: ಬದುಕು ಒಂದು ನದಿಯಿದ್ದಂತೆ. ಅದು ಯಾವಾಗ ಯಾವ ದಿಕ್ಕಿಗೆ ತಿರುಗುತ್ತದೆ ಎಂಬುದು ಯಾರಿಗೂ ಮುಂಚಿತವಾಗಿ ತಿಳಿಯದು. ಆದರೆ, ನದಿ ಯಾವ ದಿಕ್ಕಿಗೆ ಹರಿದರೂ ಸಮುದ್ರವನ್ನು ಸೇರುವುದೇ ಅದರ ಗುರಿ. ಹಾಗೆಯೇ ನಿಮ್ಮ ಬದುಕಿನಲ್ಲೂ ಪರಿಸ್ಥಿತಿಗಳು ಬದಲಾಗಬಹುದು, ಆದರೆ, ನಿಮ್ಮ ಗುರಿ ಮತ್ತು ದೃಢಸಂಕಲ್ಪ ಮಾತ್ರ ಸ್ಥಿರವಾಗಿರಬೇಕು ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಢಗೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸೋಮವಾರ ನಗರದ ಸ್ವಾಮಿ ವಿವೇಕಾನಂದರ ನಗರದ ಸಂತೋಷ ಕಾಲೋನಿಯ ಶ್ರೀಸಿದ್ದಗಂಗಾ ಶಿಕ್ಷಣ ಮತ್ತು ಕಲ್ಯಾಣ ಟ್ರಸ್ಟ್‌ನ ಶ್ರೀಭೋಗೇಶ್ವರ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ, 10ನೇ ತರಗತಿ ವಿದ್ಯಾರ್ಥಿಗಳ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದರು.

ಗುರಿ ಸ್ಪಷ್ಟವಾಗಿರಲಿ ಜೀವನದಲ್ಲಿ ಏನು ಬೇಕು ಎಂಬುದು ನಿಮಗೆ ಗೊತ್ತಿರಬೇಕು. ಗುರಿಯಿಲ್ಲದ ಪ್ರಯಾಣ ದಿಕ್ಕಿಲ್ಲದ ಹಡುಗಿಗೆ ಹೋಲುತ್ತದೆ. ಸಮಯದ ಮೌಲ್ಯ ಅರಿತುಕೊಳ್ಳಿ ಸಮಯ ಒಂದು ಬಾರಿ ಕೈತಪ್ಪಿದರೆ ಮರಳಿ ಸಿಗುವುದಿಲ್ಲ.ಪ್ರತಿದಿನದ ಪ್ರತಿಕ್ಷಣವೂ ನಿಮ್ಮ ಭವಿಷ್ಯವನ್ನು ರೂಪಿಸುತ್ತದೆ ಎಂದರು. ಚೆನ್ನಯಗಿರಿ ಮಹಾಂತೇಶ್ವರ ಮಠದ ಷ.ಬ್ರ.ವೀರ ಮಹಾಂತೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿ,ಬದುಕಿಗೆ ಬಣ್ಣ ಕೊಡುವ ಗುರುಗಳು,ತಂದೆ ತಾಯಿಗಳನ್ನು ನಾವು ಸದಾ ಪೂಜ್ಯ ಭಾವದಿಂದ ಕಾಣುವಂತ ಶಿಕ್ಷಣ ಸಂಪಾದನೆ ಮಾಡಬೇಕು. ಶಿಕ್ಷಣದ ಜೊತೆ ಜೊತೆಗೆ ಸಂಸ್ಕಾರ ಕಲಿಸಿಕೊಡುವ ಕಲಬುರಗಿಯ ಏಕೈಕ ಶಾಲೆ ಭೋಗೇಶ್ವರ ಶಾಲೆ.ಮೂಲಸೌಕರ್ಯ ಇಲ್ಲದಿದ್ದರೂ ಶಿಕ್ಷಣದ ಗುಣಮಟ್ಟತೆಯಿಂದ ಕಲಬುರಗಿಯ ಖಾಸಗಿ ಶಾಲೆಗಳಿಗೂ ಮೀರಿಸುವಷ್ಟು ಈ ಶಾಲೆ ಬೆಳೆದಿದೆ ಎಂದರು.



ಸಿದ್ದಗಂಗಾ ಶಿಕ್ಷಣ ಮತ್ತು ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಲಕ್ಷ್ಮೀಪುತ್ರ ಡಿರಾಂಪುರೆ, ಕಾರ್ಯದರ್ಶಿ ಅಂಬಿಕಾ ರಾಂಪುರೆ, ಮುಖ್ಯಗುರುಗಳಾದ ಮಹಾಂತೇಶ ಬಿರಾದಾರ್ ಅತಿಥಿಗಳ ಪರಿಚಯಿಸಿದರು. ಶಿಕ್ಷಕರಾದ ಸೋಮಶೇಖರ್ ಪಾಟೀಲ, ವಾಹಿದ್ ಪಟೇಲ, ಕವಿತಾ ಪಾಟೀಲ, ಪ್ರತಿಭಾ ಯಳಸಂಗಿ, ವಿಜಯಲಕ್ಷ್ಮೀ ಮಠಪತಿ, ಸವಿತಾ ಇಂಡಿ, ವಿಜಯಲಕ್ಷ್ಮೀ ಕಾವಲೆ, ಅಣ್ಣಾರಾಯ ಚಿಂಚೋಳಿ, ಭವಾನಿ ಆಂದೋಲಾ, ಶಶಿಕಲಾ, ಶ್ರೀದೇವಿ, ಗುರುಬಾಯಿ ಬನಶೆಟ್ಟಿ, ಅನಸುಯಾ, ನಾಗಯ್ಯ ಹಿರೇಮಠ, ರಾಜೇಶ್ವರಿ ಕಟ್ಟಿಮನಿ, ಅನಸುಯಾ ಹಿರೇಮಠ, ವನಿತಾ, ಕಾಶಿಬಾಯಿ ಹಾಗೂ ಮುದ್ದು ಮಕ್ಕಳು ಉಪಸ್ಥಿತರಿದ್ದರು. ಸೃಷ್ಟಿ ತಂಡ ಪ್ರಾರ್ಥನೆ ಗೀತೆ ಹಾಡಿದರು. ಕರುಣೇಶ ಸ್ವಾಗತಿಸಿದರು. ಸಿಂಚನಾ ಚಂದ್ರಂ ಶಾಲೆಯ ಕುರಿತು ಮಾತನಾಡಿದರು.

> ಪತ್ರಾ ಶೆಡ್ಡಿನಲ್ಲಿ ಆರಂಭವಾದ ಈ ಶಾಲೆ ಕಲಬುರಗಿಯ ಎಲ್ಲಾ ಶಾಲೆಗಳನ್ನು ನಡುಗಿಸುವ ರೀತಿ ಬೆಳೆದಿದೆ.ಕಲಿಸುವ ಗುರುಗಳ ಮಾನವೀಯತೆಯಿಂದ ಶಾಲೆ ಇಷ್ಟು ದೊಡ್ಡದಾಗಿ ಬೆಳೆದಿದೆ.ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂಬಾಸೆ.
>
> ■ ವೀರ ಮಹಾಂತೇಶ್ವರ ಶಿವಾಚಾರ್ಯರು, ಚೆನ್ನಯಗಿರಿ ಮಠ

ನೂತನ ದಂಪತಿ ಸಾಮರಸ್ಯದಿಂದ ಜೀವನ ನಡೆಸಲಿ

ಕುಕನೂರ: ನೂತನ ದಂಪತಿಗಳು ಗುರುಹಿರಿಯರೊಂದಿಗೆ ಸಾಮರಸ್ಯದಿಂದ ಜೀವನ ನಡೆಸಬೇಕು ಎಂದು ಕುದರಿಮೋತಿ ಸಂಸ್ಥಾನ ಮೈಸೂರು ಮಠದ ಜಗದ್ಗುರು ಶ್ರೀವಿಜಯ ಮಹಾಂತ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಕುದರಿಮೋತಿ ಗ್ರಾಮದ ಶ್ರೀಜಗದ್ಗುರು ಸಂಸ್ಥಾನ ಮೈಸೂರಮಠದಲ್ಲಿ ಬುಧವಾರ ಹಮ್ಮಿಕೊಂಡ ಜಾತ್ರಾ ಮಹೋತ್ಸವ ಹಾಗೂ ಶರಣಬಸವೇಶ್ವರ ಪುರಾಣ ಮಹಾ ಮಂಗಲೋತ್ಸವ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಈ ಮಠವು ಸುಮಾರು 11ನೂರು ವರ್ಷಗಳ ಇತಿಹಾಸ ಹೊಂದಿದ ಮಠವಾಗಿದ್ದು, ಇದು ಭಕ್ತರ ಶಕ್ತಿಯ ಪೀಠವಾಗಿದೆ. ಇಲ್ಲಿ ಎಲ್ಲ ಸಮುದಾಯದವರು ಸೇರಿ ಪ್ರತಿ ವರ್ಷ ಜಾತ್ರೆ, ಉತ್ಸವ, ಧಾರ್ಮಿಕ ಕಾರ್ಯಕ್ರಮ ಹಾಗೂ ಸಾಮೂಹಿಕ ವಿವಾಹ ನಡೆಸುತ್ತಿರುವುದು ಐತಿಹಾಸಿಕವಾಗಿದೆ ಹಾಗೂ ಅದರ ಕೀರ್ತಿ ಸಕಲ ಸದ್ಭಕ್ತರಿಗೆ ಸೇರುತ್ತದೆ ಎಂದರು.

ನಂತರದಲ್ಲಿ ಮಾಜಿ ಜಿಪಂ ಸದಸ್ಯ ಅಶೋಕ ತೋಟದ ಹಾಗೂ ಮಲ್ಲನಗೌಡ ಕೋನನಗೌಡ ನೂತನ ದಂಪತಿಗಳಿಗೆ ಕಿವಿ ಮಾತನ್ನು ಹೇಳಿದರು.



ನಂತರ ಮಾಜಿ ತಾಪಂ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಮಾತನಾಡಿ, ನೂತನ ದಂಪತಿಗಳು ಅನ್ಯೂನ್ಯತೆಯಿಂದ ಪರಸ್ಪರ ಸಾಮರಸ್ಯದಿಂದ ಜೀವನ ನಡೆಸಬೇಕು, ಜೊತೆಗೆ ಅತ್ತೆ, ಮಾವಂದಿರನ್ನು ಗೌರವದಿಂದ ತಮ್ಮ ತಂದೆ, ತಾಯಿಯಂತೆ ನೋಡಿಕೊಂಡು ಉತ್ತಮ ಜೀವನ ನಡೆಸುವದರ ಜೊತೆಗೆ ಮಾದರಿ ಕುಟುಂಬ ನಿಮ್ಮದಾಗಬೇಕು ಎಂದು ಕಿವಿ ಮಾತನ್ನು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ಬೆಳಗ್ಗೆ ಜಂಗಮ ವಟುಗಳಿಗೆ ಅಯ್ಯಾಚಾರ ಕಾರ್ಯಕ್ರಮ ಜರುಗಿತು.

ಗ್ರಾಪಂ ಅಧ್ಯಕ್ಷೆ ಫರೀದಾ ಬೇಗಂ, ಅಭಿವೃದ್ಧಿ ಅಧಿಕಾರಿ ಪರುಶುರಾಮ ನಾಯಕ, ಕುದರಿಮೋತಿ ದಳಪತಿ ಹನಮಗೌಡ ಪೊ.ಪಾಟೀಲ್, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಈರಪ್ಪ ಕುಡುಗುಂಟಿ, ಕಾಂಗ್ರೆಸ್‌ಯುವ ಮುಖಂಡ ಮಂಜುನಾಥ ಗಟ್ಟೆಪ್ಪನವರ್, ಅಮರೇಶತಲ್ಲೂರು, ಅಶೋಕ್ ಗಟ್ಟೆಪ್ಪನವರ್, ಬಸಪ್ಪ ದೊಡ್ಡನಿ, ಶಿವಶಂಕರ್ ದೇಸಾಯಿ, ಬಸಪ್ಪ ದೊಡ್ಮನಿ, ಈರಪ್ಪ ರಾವಣಕಿ, ಸುಭಾಸಪ್ಪ ಈಳಿಗೇರ್, ಮರಿಯಪ್ಪ ಕುರಿಗಾರ, ದುರ್ಗಪ್ಪ ಕಾಳೆ, ಡಾ.ಹುಸೇನ್ ಬಾಷಾ ಮಕಾಂದಾರ, ಮಾಬು ಸಾಬ್ ಮಕಾಂದಾರ್, ರಾಮ್‌ರಾವ್ ಕುಲಕರ್ಣಿ, ಮದಕಯ್ಯ ಜಂಗಮರ್, ವಿಜಯಕುಮಾರ್ ದಾಸರ, ಬಾಳಪ್ಪ ಬಜಂತ್ರಿ, ಬಸಯ್ಯ ಒಣಗೇರಿ, ಶರಣಪ್ಪ ಹುಚ್ಚಲ ಕುಂಟಾ, ದುರ್ಗಪ್ಪ ದೂಪಂ ಇತರರರಿದ್ದರು.

ಕಿರುಸುದ್ದಿ

ಬಳ್ಳಾರಿ ಜಿಲ್ಲಾ ಬಿಜೆಪಿಗೆ ಪದಾಧಿಕಾರಿಗಳ ನೇಮಕ

ಬಳ್ಳಾರಿ: ಬಿಜೆಪಿ ಜಿಲ್ಲಾ ಸಮಿತಿ ಹಾಗೂ ವಿವಿಧ ಮೋರ್ಚಾಗಳಿಗೆ ನೂತನ ಅಧ್ಯಕ್ಷ ಹಾಗೂ ಪದಾಧಿಕಾರಿಗಳನ್ನು ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೋಕ ಅವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಐಟಿ ಪಂಪಾಪತಿ, ಕೆ.ಬಿ.ವೆಂಕಟೇಶ್, ಹಾಲಕುಂದಿ ಮಲ್ಲಿಕಾರ್ಜುನ ಗೌಡ, ಅಳ್ಳಳ್ಳಿ ವೀರೇಶ್ ಗೌಡ, ಪುಷ್ಪಾವತಿ, ದೊಡ್ಡ ಹುಲಗಪ್ಪ, ಉಡೆಡ್ ಸುರೇಶ್, ಶ್ರೀನಿವಾಸ್ (ಜಿಲ್ಲಾ ಉಪಾಧ್ಯಕ್ಷರು), ಆರ್. ಸೋಮನ ಗೌಡ, ಆಡವಿ ಸ್ವಾಮಿ, ಸುನಿಲ್ ರೆಡ್ಡಿ (ಜಿಲ್ಲಾ ಪ್ರಧಾನ ಕಾರ್ಯದರ್ಶಿ), ರಾಮಾಂಜನಿ, ಡಾ.ರೇಣುಕಾ, ಮಲ್ಲಿಕಾರ್ಜುನ ಗೌಡ ನ್ಯಾಯವಾದಿ, ರಾಘವೇಂದ್ರ ಛಲವಾದಿ, ನಾನಾ ಸಾಹೇಬ್ ನಿಕ್ಕಂ, ಜ್ಯೋತಿ ಪ್ರಕಾಶ್, ಎಸ್.ಆರ್.ಶರಣ್ ಕುಮಾರ್, ಹುಂಡೇಕರ್ ರಾಜೇಶ್ (ಜಿಲ್ಲಾ ಕಾರ್ಯದರ್ಶಿಗಳು), ಬುಡಾ ಮಾಜಿ ಅಧ್ಯಕ್ಷ ಮಾರುತಿ ಪ್ರಸಾದ್ ಸರ್ವಶೆಟ್ಟಿ (ಖಜಾಂಚಿ), ಕೆ.ರವಿಕುಮಾರ್ ಜಿಲ್ಲಾ ಕಾರ್ಯಾಲಯದ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಿದ್ದಾರೆ. ವಿವಿಧ ಮೋರ್ಚಾಗಳಿಗೆ ಅಧ್ಯಕ್ಷರ ನೇಮಕ: ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಹಂಪಿ ರಮಣ, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಧರಪ್ಪ ನಾಯಕ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಹನುಮಂತಪ್ಪ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಇಬ್ರಾಹಿಂಪುರ ವೀರನಗೌಡ, ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷ ಅಲ್ಲಾ ಬಕಾಶ್, ಒಬಿಸಿ ಮೋರ್ಚಾದ ಜಿಲ್ಲಾಧ್ಯಕ್ಷರಾಗಿ ತಿರುಮಲ ಅವರನ್ನು ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಅವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಅನೀಮಿಯಾ ತಡೆಗಟ್ಟುವ ಕಾರ್ಯಕ್ರಮ

ಬಳ್ಳಾರಿ: ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಜ್ಯೋತಿ ಮೆಡಿಕಲ್ಸ್ ಬಳಿ ಅನೀಮಿಯಾ ತಡೆಗಟ್ಟುವ ಕಾರ್ಯಕ್ರಮ ಹಿನ್ನೆಲೆ ಉಚಿತ ತಪಾಸಣಾ ಶಿಬಿರವನ್ನು ಭಾನುವಾರ ಹಮ್ಮಿಕೊಳ್ಳಲಾಗಿತ್ತು. ಗುಜರಾತ್‌ನ ಶ್ರೀಮದ್ ರಾಮಚಂದ್ರ ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರ, ಜಿಪಂ ಬಳ್ಳಾರಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಳ್ಳಾರಿ, ಶಾಲಾ ಶಿಕ್ಷಣ ಇಲಾಖೆ, ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಹಾಗೂ ಸ್ಪಂದನ ಸ್ವಯಂ ಸೇವಾ ಸಂಸ್ಥೆ ವಿಜಯಪುರ ಹಾಗೂ ಮಾತೃ ಮಹಿಳಾ ಮಂಡಳಿ ಆಶ್ರಯದಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿವರಾತ್ರಿ ಹಬ್ಬ ಹಿನ್ನೆಲೆ ದೇಗುಲಕ್ಕೆ ಆಗಮಿಸಿದ ನೂರಾರು ಭಕ್ತರು ತಪಾಸಣಾ ಶಿಬಿರದಲ್ಲಿ ಭಾಗವಹಿಸಿದ್ದರು. ತಪಾಸಣೆ ವೇಳೆ ಆರೋಗ್ಯದಲ್ಲಿ ವ್ಯತ್ಯಾಸ ಕಂಡು ಬಂದ ರೋಗಿಗಳಿಗೆ ಸಿಬ್ಬಂದಿಗಳು ಉಚಿತ ಮಾತ್ರೆ, ಔಷಧಿಗಳನ್ನು ನೀಡಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ನಾಳೆ ವಿದ್ಯುತ್ ವ್ಯತ್ಯಯ

ಬಳ್ಳಾರಿ: ಸಂಡೂರು ದೋಣಿಮಲೈ 110/33/112 ವಿತರಣಾ ಕೇಂದ್ರದಲ್ಲಿ 10 ವಿದ್ಯುತ್ ಟ್ರಾನ್ಸ್‌ಫಾರ್ಮರ್(ಪರಿವರ್ತಕದ) ತುರ್ತು ನಿರ್ವಹಣ ಕಾಮಗಾರಿ ಹಮ್ಮಿಕೊಂಡಿದ್ದು ಫೆ.18 ರಂದು ಬೆ.9ರಿಂದ ಸಂಜೆ 6ರ ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಸಂಡೂರು ಪಟ್ಟಣದ ಸೀನ್ ಬಸಪ್ಪ ಕ್ಯಾಂಪ್, ನಂದಿಹಳ್ಳಿ, ಕಮತೂರು, ನಾರಾಯಣಪುರ ರಣಜಿತ್‌ರ, ಭುಜಂಗನಗರ, ದೇವಗಿರಿ ಮತ್ತು ನರಸಿಂಗಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳಲ್ಲಿ ಎನ್‌ಜೆವೈ ಮತ್ತು ಐ.ಪಿ.ಸೆಟ್ ಗ್ರಾಹಕರಿಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಜೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಫೆ.20ಕ್ಕೆ ಸಾರಿಗೆ ಅದಾಲತ್

ವಿಜಯನಗರ: ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿ ವತಿಯಿಂದ ಫೆ.20ರಂದು ಸಂಜೆ 4ಕ್ಕೆ ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿಯಲ್ಲಿ ಸಾರಿಗೆ ಅದಾಲತ್ ಏರ್ಪಡಿಸಲಾಗಿದೆ. ಈ ಸಂಬಂಧ ಸಾರ್ವಜನಿಕರು ಅದಾಲತ್‌ನಲ್ಲಿ ಭಾಗವಹಿಸಿ ಯಾವುದೇ ರೀತಿಯ ಅಹವಾಲು, ಸಮಸ್ಯೆಗಳಿದ್ದಲ್ಲಿ ಸಾರಿಗೆ ಇಲಾಖೆಗೆ ಅವಾಗಹನೆಗೆ ತರಬಹುದು ಎಂದು ಪ್ರಾದೇಶೀಕ ಸಾರಿಗೆ ಅಧಿಕಾರಿ ದಾಮೋದರ್ ತಿಳಿಸಿದ್ದಾರೆ.

ಫೆ.18 ವಿದ್ಯುತ್ ವ್ಯತ್ಯಯ

ವಿಜಯನಗರ: 66/11 ಕೆವಿ ಚಿಲಕನಹಟ್ಟಿ ವಿದ್ಯುತ್ ಕೇಂದ್ರದಲ್ಲಿ ಫೆ.18ರಂದು ತುರ್ತು ನಿವಾರಣಾ ಕಾಮಗಾರಿ ಕೈಗೊಂಡಿದ್ದರಿಂದ ಉಪಕೇಂದ್ರ ವ್ಯಾಪ್ತಿಯ ಹಳ್ಳಿಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಮರಿಯಮ್ಮನಹಳ್ಳಿ ಶಾಖಾ ವ್ಯಾಪ್ತಿಗೆ ಬರುವ ತಾಳೆಬಸಾಪುರತಾಂಡ, ಹಾರುವನಹಳ್ಳಿ, ಪೊತಲಕಟ್ಟೆ, ತೆಲಗುಬಾಳು, ತಿಮ್ಲಾಪುರ ಗ್ರಾಮಗಳಲ್ಲಿ ಮತ್ತು ಸುತ್ತಮುತ್ತಲಿನ ಕೈಗಾರಿಕಾ ಪ್ರದೇಶಗಳಲ್ಲಿ ಅಂದು ಬೆಳಿಗ್ಗೆ 9.30 ರಿಂದ ಸಂಜೆ 5.30ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ನೀರಾವರಿ ಪಂಪ್‌ಸೆಟ್ ಲೈನ್‌ಗೆ ಬೆಳಗ್ಗೆ 4 ಗಂಟೆಗೆ ವಿದ್ಯುತ್ ಸರಬರಾಜು ಮಾಡಲಾಗುವುದು. ಎಲ್ಲಾ ರೈತ ಭಾಂದವರು ಹಾಗೂ ಗ್ರಾಹಕರು ಸಹಕರಿಸಬೇಕು ಎಂದು ಜೆಸ್ಕಾಂ ಸಹಾಯಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕುರುಗೋಡು: ಉತ್ಸವದ ಹಿನ್ನೆಲೆ ಭಾನುವಾರ ಪಟ್ಟಣದಲ್ಲಿ ಸಾಂಸ್ಕೃತಿಕ ಸೊಬಗಿನ ಜಾನಪದ ಮೆರವಣಿಗೆಯು ಅದ್ದೂರಿಯಾಗಿ ನಡೆಯಿತು.

ಕುರುಗೋಡು ಉತ್ಸವ: ಅದ್ದೂರಿ ಮೆರವಣಿಗೆ

ಕುರುಗೋಡು: ಉತ್ಸವದ ಹಿನ್ನೆಲೆ ಭಾನುವಾರ ಪಟ್ಟಣದಲ್ಲಿ ಸಾಂಸ್ಕೃತಿಕ ಸೊಬಗಿನ ಜಾನಪದ ಮೆರವಣಿಗೆಯು ಅದ್ದೂರಿಯಾಗಿ ನಡೆಯಿತು. ಪಟ್ಟಣದ ಸಿಂಧಿಗೇರಿ ರಸ್ತೆಯಲ್ಲಿನ ಶ್ರೀಗಾದಿಲಿಂಗೇಶ್ವರ ದೇವಸ್ಥಾನ ಬಳಿ ಉತ್ಸವದ ಮೂರ್ತಿ ಪಾರ್ವತಿ-ಪರಮೇಶ್ವರನಿಗೆ ಕಂಪ್ಲಿ ಶಾಸಕ ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್)ದ ಅಧ್ಯಕ್ಷರೂ ಆಗಿರುವ ಜೆ.ಎನ್.ಗಣೇಶ್ ಅವರು ಪುಷ್ಪಾರ್ಚನೆ ಮಾಡಿ ಜಾನಪದ ಮೆರವಣಿಗೆಗೆ ಚಾಲನೆ ನೀಡಿದರು. ಚೊಚ್ಚಲ ಉತ್ಸವ ಹಿನ್ನೆಲೆ ಕಲಾ ತಂಡಗಳ ಮೂಲಕ ಗ್ರಾಮೀಣ ಭಾಗದ ಸಾಂಸ್ಕೃತಿಕ ವೈವಿಧ್ಯತೆಗೆ ಜಾನಪದ ಮೆರವಣಿಗೆಯು ಸಾಕ್ಷಿಯಾಯಿತು. ಪಟ್ಟಣದ ಇಕ್ಕೆಲಗಳಲ್ಲಿ ನೆರೆದಿದ್ದ ನೋಡುಗ ಜನರ ಜನಮನ ಸೆಳೆಯಿತು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ತಾಸಿ ರಾಂಡೋಲ್, ಹಲಗೆವಾದನ, ವೀರಗಾಸೆ, ಹಗಲುವೇಷ, ಗೊರವರ ನೃತ್ಯ ಕುಣಿತ, ನಂದಿಧ್ವಜ, ಕಹಳೆ ವಾದನ, ಹಕ್ಕಿಪಿಕ್ಕಿ ನೃತ್ಯ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಕಳಸ-ಕುಂಭ ಹೊತ್ತ 100 ಕ್ಕೂ ಹೆಚ್ಚು ಮಹಿಳೆಯರು ಗಮನಸೆಳೆದರು. ಜಾನಪದ ಮೆರವಣಿಗೆಯು ಗಾದಿಲಿಂಗೇಶ್ವರ ದೇವಸ್ಥಾನದಿಂದ ಆರಂಭಗೊಂಡು ಪಟ್ಟಣದ ಮುಖ್ಯ ವೃತ್ತದ ಮಾರ್ಗವಾಗಿ ದೊಡ್ಡಬಸವೇಶ್ವರ ದೇವಸ್ಥಾನದ ಆವರಣಕ್ಕೆ ತಲುಪಿ ಸಂಪನ್ನಗೊಂಡಿತು. ಈ ವೇಳೆ ಕುರುಗೋಡು ಪುರಸಭೆ ಅಧ್ಯಕ್ಷ ಟಿ.ಶೇಖಣ್ಣ, ಕುರುಗೋಡು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಸವನಗೌಡ, ತಹಶೀಲ್ದಾರ್ ನರಸಪ್ಪ, ತಾಪಂ ಇಒ ನಿರ್ಮಲಾ, ಸೇರಿದಂತೆ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.



ಬಳ್ಳಾರಿ: ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಜ್ಯೋತಿ ಮೆಡಿಕಲ್ಸ್ ಬಳಿ ಅನೀಮಿಯಾ ತಡೆಗಟ್ಟುವ ಕಾರ್ಯಕ್ರಮ ಹಿನ್ನೆಲೆ ಉಚಿತ ತಪಾಸಣಾ ಶಿಬಿರವನ್ನು ಭಾನುವಾರ ಹಮ್ಮಿಕೊಳ್ಳಲಾಗಿತ್ತು.

ಕುರುಗೋಡು ಉತ್ಸವ | ಶಾಸಕ ಜೆ.ಎನ್.ಗಣೇಶ್ ಚಾಲನೆ
ಗಮನ ಸೆಳೆದ ವಸ್ತು ಪ್ರದರ್ಶನ ಮಳಿಗೆ

ಕುರುಗೋಡು: ಕುರುಗೋಡು ಉತ್ಸವ ನಿಮಿತ್ತ ಪಟ್ಟಣದ ಕಂಪ್ಲಿ ರಸ್ತೆಯ ಶ್ರೀಖಾದರ್‌ಲಿಂಗ ದರ್ಗಾ ಹತ್ತಿರದ ಶ್ರೀದೊಡ್ಡ ಬಸವೇಶ್ವರ ಮುಖ್ಯ ವೇದಿಕೆಯ ಮುಂಭಾಗದಲ್ಲಿ ಸೋಮವಾರ ಆಯೋಜಿಸಲಾಗಿದ್ದ ವಿವಿಧ ಇಲಾಖೆಗಳ ವಸ್ತು ಪ್ರದರ್ಶನ ಮಳಿಗೆಗಳು ಜನರನ್ನು ಆಕರ್ಷಿಸುತ್ತಿದ್ದು, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್)ದ ಅಧ್ಯಕ್ಷ, ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಅವರು ಚಾಲನೆ ನೀಡಿದರು. ಹಲವು ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ವೀಕ್ಷಣೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಫಲಪುಷ್ಪದಲ್ಲಿ ಅರಳಿದ ನಂದಿ ವಿಗ್ರಹ, ದೊಡ್ಡಬಸವೇಶ್ವರ ಗೋಪುರ: ತೋಟಗಾರಿಕೆ ಇಲಾಖೆ ವತಿಯಿಂದ ಏರ್ಪಡಿಸಿದ್ದ ಫಲಪುಷ್ಪ ಪ್ರದರ್ಶನದಲ್ಲಿ ಹೂಗಳಿಂದ ಅರಳಿದ ನಂದಿ ವಿಗ್ರಹ, ಐತಿಹಾಸಿಕ ದೊಡ್ಡಬಸವೇಶ್ವರ ಗೋಪುರ, ಕುರುಗೋಡು ಉತ್ಸವ-2026 ಕ್ಕೆ ಆಹ್ವಾನ ಸೇರಿದಂತೆ ಇತರೆ ಪುಷ್ಪ ಕಲಾಕೃತಿಗಳು ಜನರನ್ನು ಕೈಬೀಸಿ ಕರೆಯುತ್ತಿತ್ತು. ಕಲ್ಲಂಗಡಿ ಹಣ್ಣಿನ ಹೊರಭಾಗ ಸೇರಿದಂತೆ ತರಕಾರಿ ಕೆತ್ತನೆಗಳಲ್ಲಿ ವಿವಿಧ ಮಹನೀಯರ ಆಕೃತಿಗಳು ಕಲಾವಿದರ ಕೈಗಳಿಂದ ಅರಳಿದ್ದವು.

ಪುಸ್ತಕ ಪ್ರದರ್ಶನ: ಕುರುಗೋಡು ಉತ್ಸವದಲ್ಲಿ ಪುಸ್ತಕ ಪ್ರದರ್ಶನ ಮಳಿಗೆಯು ಆಕರ್ಷಣೀಯವಾಗಿತ್ತು. ಸಾರ್ವಜನಿಕರು ಭೇಟಿ ನೀಡಿ ಮಾಹಿತಿ ಪಡೆಯುತ್ತಿರುವುದು ಕಂಡುಬಂತು. ಅದೇರೀತಿಯಾಗಿ ಮೀನುಗಾರಿಕೆ ಇಲಾಖೆ ವತಿಯಿಂದ ಇಲಾಖೆಯ ಸೌಲಭ್ಯಗಳ ಮಾಹಿತಿ ಸಾರುವ ಮಳಿಗೆಯಲ್ಲಿ ವಿವಿಧ ತಳಿಗಳ ಮೀನುಮರಿಗಳು ನೋಡುಗರ ಆಕರ್ಷಣೀಯವಾಗಿದ್ದವು. ರಂಗೋಲಿಯಿಂದ ಹಲಗೆಯ ಮೇಲೆ ಚಿತ್ತಾರ ಮೂಡಿದ ವಿವಿಧ ಮಹನೀಯರ ಭಾವಚಿತ್ರಗಳು ಕಂಡುಬಂದವು.



ಕುರುಗೋಡು ಜಾಯ್ ರೈಡ್ ಬೈಸ್ಕೈಗೆ ಚಾಲನೆ

ಕುರುಗೋಡು ಉತ್ಸವದಲ್ಲಿ ಪ್ರಮುಖ ಆಕರ್ಷಣೀಯವಾದ 'ಕುರುಗೋಡು ಜಾಯ್ ರೈಡ್ ಬೈಸ್ಕೈ' ಹೆಲಿಕಾಪ್ಟರ್ ಮೂಲಕ ಆಗಸದಿಂದ ಕುರುಗೋಡು ಪರಿಸರ ಕಣ್ತುಂಬಿಕೊಳ್ಳಲು ಅವಕಾಶ ಮಾಡಲಾಗಿತ್ತು. ಶಾಸಕ ಜೆ.ಎನ್.ಗಣೇಶ್ ಅವರು ಚಾಲನೆ ನೀಡಿದರು. 'ನಮ್ಮ ಕುರುಗೋಡಿನ ದೇವಸ್ಥಾನ, ಬೆಟ್ಟಗುಡ್ಡಗಳು ಮತ್ತು ಹಸಿರು ಸಿರಿಯನ್ನು ಕಣ್ತುಂಬಿಕೊಳ್ಳಲು ಸುವರ್ಣಾವಕಾಶವಾಗಿದ್ದು, ತಪ್ಪದೇ ಎಲ್ಲರೂ ಬೈಸ್ಕೈ ಅನ್ನು ಸದುಪಯೋಗ ಪಡೆದುಕೊಳ್ಳಬೇಕು' ಎಂದು ಹೇಳಿದರು.

ಕೃಷಿ ಪರಿಕರಗಳ ಪ್ರದರ್ಶನ: ಕುರುಗೋಡು ತಾಲ್ಲೂಕು ವಿವಿಧ ಹಳ್ಳಿಗಳಿಂದ ಕೂಡಿದ್ದು, ಕೃಷಿಯೇ ಜೀವಾಳವಾಗಿರುವುದು ಕಾಣಬಹುದು. ಉತ್ಸವದ ವಿವಿಧ ಮಳಿಗೆಗಳಲ್ಲಿ ಕೃಷಿ ಇಲಾಖೆಯ ಸೌಲಭ್ಯ, ಸಾವಯವ ಕೃಷಿ ಪದ್ಧತಿ ಸೇರಿದಂತೆ ವಿವಿಧ ಆಧುನಿಕ ಕೃಷಿ ಪರಿಕರಗಳ ಪ್ರದರ್ಶನವು ಒಳಗೊಂಡಿತ್ತು. ರೈತರು ಭೇಟಿ ನೀಡಿ ಕಣ್ಣು ಹುಬ್ಬಿಸಿ ನೋಡುವುದರ ಮೂಲಕ ಅವುಗಳ ಮಾಹಿತಿ ಪಡೆದುಕೊಂಡರು.

ಕೇವಲ ಶ್ರೀಮಂತರು ಮಾತ್ರವಲ್ಲ; ಮಧ್ಯಮ ವರ್ಗದವರು ಭಾಗವಹಿಸಿ ಹೆಲಿಕಾಪ್ಟರ್ ನಲ್ಲಿ ಸಂಚರಿಸಬೇಕು ಎಂಬ ಸದುದ್ದೇಶದಿಂದ ಉತ್ಸವದಲ್ಲಿ ಆಯೋಜನೆ ಮಾಡಲಾಗಿದೆ. 3500 ಕೈಗೆಟಕುವ ದರದಲ್ಲಿದೆ ಎಂದರು.

ಕುರುಗೋಡು ತಹಶೀಲ್ದಾರ್ ನರಸಪ್ಪ ಸೇರಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು, ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ಇದ್ದರು.

ನಕಲಿ ದಾಖಲೆ ಸೃಷ್ಟಿಸಿ 11 ಎಕರೆ ಜಮೀನು ಪರಭಾರೆ: ಕ್ರಮಕ್ಕೆ ಆಗ್ರಹ

ಬಳ್ಳಾರಿ: ನಗರದ 3ನೇ ವಾರ್ಡ್ ವ್ಯಾಪ್ತಿಯ ಬೆಂಗಳೂರು ರಸ್ತೆಯ ಈದ್ಗಾ ಮೈದಾನಕ್ಕೆ ಸೇರಿದ ಸುಮಾರು 11 ಎಕರೆ ಜಮೀನನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿದವರಿಗೆ ಮಹಾನಗರ ಪಾಲಿಕೆ ಅಧಿಕಾರಿಗಳು ಬೇರೊಬ್ಬರಿಗೆ ಪರಭಾರೆ ಮಾಡಿದ್ದಾರೆ. ಇದು ಖಂಡನೀಯ ಹಾಗೂ ಅಕ್ಷಮ್ಯ ಅಪರಾಧ, ಕೂಡಲೇ ಸಂಬಂಧಿಸಿದ ಇಲಾಖೆ ಮೇಲಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಮಹಾನಗರ ಪಾಲಿಕೆ ಪ್ರತಿಪಕ್ಷದ ನಾಯಕ ಶ್ರೀನಿವಾಸ್ ಮೊತ್ಕರ್ ಆಗ್ರಹಿಸಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದ ಟಿಎಸ್ ನಂ.650ಕ್ಕೆ ಸೇರಿದ ಸುಮಾರು 11 ಎಕರೆಗೆ ಪಾಲಿಕೆ ಅಧಿಕಾರಿಗಳು ಅಕ್ರಮವಾಗಿ ಪರಭಾರೆ ಮಾಡಿ, ಫಾರ್ಮ್ 2 ನೀಡಿದ್ದು, ಅತ್ಯಂತ ಖಂಡನೀಯ. ವಾಸ್ತವ್ಯದಲ್ಲಿ ಈ ಭೂಮಿ ಈದ್ಗಾ ಮೈದಾನಕ್ಕೆ ಸೇರಿದ್ದಾಗಿದೆ. ವಾಸ್ತವವಾಗಿ ಪಟೇಲ್ ನಗರದ ಎ.ಪ್ರಭಾವತಿ ಎನ್ನುವವರ ಹೆಸರಿಲ್ಲಿ ಫಾರಂ 2 ಪಡೆಯಲಾಗಿದೆ. ಇದನ್ನು ಪಡೆಯುವಾಗ ಎ.ಪ್ರಭಾವತಿ ಅವರು ನಿಗದಿತ ಶುಲ್ಕವನ್ನು ಪಾವತಿಸದಿರುವುದು ಕಂಡು ಬಂದಿದೆ. ಇದರ ಜೊತೆಗೆ ಕೊಲಗಲ್‌ನ ಪದ್ಮಾವತಿ ಎನ್ನುವವರ ದಾಖಲೆ ಪತ್ರ ನೀಡಿ ಫಾರಂ 2 ಪಡೆದಿರುವುದು ಕಂಡುಬಂದಿದೆ. ಇದರ ಜೊತೆಗೆ ಪಾಲಿಕೆ ವಲಯ 2ರ ವ್ಯಾಪ್ತಿಯಲ್ಲಿ ಬರುವ ಈ ಆಸ್ತಿಗೆ ವಲಯ 3ರಲ್ಲಿ ಅನುಮೋದನೆ ಪಡೆಯಲಾಗಿದೆ. ಇದರಲ್ಲಿ ಮಹಾನಗರ ಪಾಲಿಕೆ ಕಂದಾಯ ಇಲಾಖೆ ಅಧಿಕಾರಿಗಳು ಶ್ಯಾಮೀಲಾಗಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ನಗರ ಘಟಕದ ಅಧ್ಯಕ್ಷ ಜಿ.ವೆಂಕಟರಮಣ ಮಾತನಾಡಿ, ಈದ್ಗಾ ಮೈದಾನಕ್ಕೆ ಸೇರಿದ್ದು ಎನ್ನುವ ಜಮೀನನ್ನು ಅಕ್ರಮವಾಗಿ ಕಬಳಿಸುವ ಕುತಂತ್ರ ನಡೆದಿದೆ. ಈಗಾಗಲೇ ಪಾಲಿಕೆ ಅಧಿಕಾರಿಗಳು ಈ ಆಸ್ತಿಗೆ ಸಂಬಂಧಿಸಿ ಫಾರಂ 2ನ್ನೂ ಅಕ್ರಮವಾಗಿ ನೀಡಿದ್ದು, ಖಂಡನೀಯ ಎಂದರು.

ಮಹಾನಗರ ಪಾಲಿಕೆ ಸದಸ್ಯ ಕೆ.ಹನುಮಂತಪ್ಪ ಮಾತನಾಡಿದರು.

ಮಹಾನಗರ ಪಾಲಿಕೆ ಸದಸ್ಯರಾದ ಕೆ.ಎಸ್.ಅಶೋಕ್, ಸುರೇಖಾ ಮಲ್ಲನಗೌಡ, ಗೋವಿಂದ ರಾಜಲು, ಹನುಮಂತಪ್ಪ, ಚೇತನ ವೇಮಣ್ಣ ಸೇರಿದಂತೆ ಇತರರಿದ್ದರು.



ಹಾಸ್ಯದ ಆಂತರ್ಯದಲ್ಲಿ ಚಿಂತನೆ ಅಡಕ

ಹೂವಿನಹಡಗಲಿ: ಒತ್ತಡದ ಬದುಕಿನಲ್ಲಿ ಹಾಸ್ಯ ಅತ್ಯುತ್ತಮ ರಸ. ಸಾಹಿತ್ಯದೊಳಗಿನ ಹಾಸ್ಯ ಮೇಲ್ನೋಟಕ್ಕೆ ಲಘುವಾಗಿ ಕಂಡರೂ ಆಂತರ್ಯದಲ್ಲಿ ಚಿಂತನೆಗೆ ಹಚ್ಚುವುದು ಎಂದು ಶಿಕ್ಷಕ, ಕಲಾವಿದ ಎನ್ ಮಂಜುನಾಥ ಅಭಿಪ್ರಾಯಪಟ್ಟರು.

ಅವರು ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ, ಹಿರೇಹಡಗಲಿ ಹೋಬಳಿ ಘಟಕ ತಾಲೂಕಿನ ಬ್ಯಾಲಹುಣಸಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಕಂಪ್ಲಿ ತೋಟದ್ದೇವರ ಹಿರೇಮಠದ ಕೊಟ್ರಯ್ಯ ಸ್ಮಾರಕ ದತ್ತಿ, ಷಾ ಪೋಜಾಜಿ ವನೇಚಂದ್ ಸ್ಮಾರಕ ದತ್ತಿ, ಕೆ.ಎಂ.ಕೃಷ್ಣಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಹಾಗೂ 'ಅಹಿಂಸೋ ಪರಮೋಧರ್ಮ' ವಿಷಯ ಕುರಿತು ಮಾತನಾಡಿದರು.

ಹಳೆಗನ್ನಡ ಸಾಹಿತ್ಯದಲ್ಲಿ ಹಾಸ್ಯವನ್ನು ಪ್ರಧಾನವಾಗಿಟ್ಟುಕೊಂಡು ಕೃತಿ ರಚನೆಯಾಗಿಲ್ಲವಾದರೂ ಕನ್ನಡ ಸಾಹಿತ್ಯದ ಪ್ರಾಚೀನ ಗ್ರಂಥಗಳಲ್ಲಿ, ಶಾಸನಗಳಲ್ಲಿ ಹಾಸ್ಯ ಪ್ರಸಂಗಗಳ ಉಲ್ಲೇಖಗಳಿವೆ. ವಡ್ಡಾರಾಧನೆ, ಆದಿಪುರಾಣ, ವಿಕ್ರಮಾರ್ಜುನ ವಿಜಯ, ಧರ್ಮಾಮೃತ, ರಾಮಶ್ವಮೇಧ ಮುಂತಾದ ಕೃತಿಗಳಲ್ಲಿ ಸಂದರ್ಭೋಚಿತವಾಗಿ ಕೃತಿಕಾರರು ಹಾಸ್ಯ ಪ್ರೌಢಿಮೆ ಮೆರೆದಿದ್ದಾರೆ ಎಂದರು. ಪ್ರಾರಂಭದಲ್ಲಿ ಶಾಲೆಯ ಮುಖ್ಯಗುರುಗಳಾದ ಎಲ್.ಧರ್ಮನಾಯ್ಕ್ ಕಾರ್ಯಕ್ರಮ ಉದ್ಘಾಟಿಸಿ ಹಾಸ್ಯ ಸಾಹಿತ್ಯದ ಔಚಿತ್ಯದ ಬಗ್ಗೆ ತಿಳಿಸಿದರು.

ಶಿಕ್ಷಕ ಎಂ.ಎಚ್.ಲಕ್ಷ್ಮಣ ಜನಪದ ಗೀತೆಗಳನ್ನು ಹಾಡಿ ಸಭಿಕರನ್ನು ರಂಜಿಸಿದರು.

ಶಿಕ್ಷಕರಾದ ಟಿ.ಎನ್.ಮಂಜುನಾಥ, ನಗಿನಾ ಬೇಗಂ ಉಪಸ್ಥಿತರಿದ್ದರು. ಕಸಾಪ ಹಿರೇಹಡಗಲಿ ಹೋಬಳಿ ಘಟಕದ ಅಧ್ಯಕ್ಷ ಜಿ.ಎಸ್.ಸತೀಶ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿಗಳಾದ ಕಾವೇರಿ ಜಂಬಿಗಿ, ಚೈತ್ರಾ ಗಳಗನಾಥ ಕವನ ವಾಚಿಸಿದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಿಕ್ಷಕ ಟಿ.ರವೀಂದ್ರ ಸ್ವಾಗತಿಸಿದರು. ಕಸಾಪ ತಾಲೂಕು ಘಟಕದ ಅಧ್ಯಕ್ಷ ಟಿ.ವೀರೇಂದ್ರ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಪ್ರಭು ಹಾವಕ್ಕನವರ ವಂದಿಸಿದರು. ಶಿಕ್ಷಕ ಪವಿತ್ರ ಅಣ್ಣಿಗೇರಿ ನಿರ್ವಹಿಸಿದರು.



ಬಂಜಾರ ಸಮುದಾಯಕ್ಕೆ ಸಂತ ಸೇವಾಲಾಲ್ ದಾರಿದೀಪ

ಕೊಟ್ಟೂರು: ದಾರಿ ತಪ್ಪುತ್ತಿದ್ದ ಯುವಕರಿಗೆ 'ಮದ್ಯ, ಗಾಂಜಾ ವ್ಯವಸಗಳಿಂದ ದೂರವಿರಿ' 'ಹಸಿದವರಿಗೆ ರೊಟ್ಟಿಕೊಡಿ' 'ಬಾಯಾರಿದವರಿಗೆ ನೀರುಣಿಸಿ'ಎಂದು ಮಾರ್ಗದರ್ಶನ ನೀಡಿ ಮಾನವೀಯತೆಯನ್ನು ಮೆರೆದ ಸಂತರು. ಸಂಕಷ್ಟದಲ್ಲಿದ್ದ ಬಂಜಾರ ಸಮುದಾಯಕ್ಕೆ ದಾರಿ ದೀಪವಾಗಿದ್ದರು. ವಿವಿಧ ಜನಾಂಗದ ಸಂತರಂತೆ ಇವರು ಸಹಾ ಒಬ್ಬ ಮಹಾನ್ ಸಂತರಾಗಿದ್ದಾರೆ ಎಂದು ತಹಶೀಲ್ದಾರ್ ಅಮರೇಶ್ ಜಿ.ಕೆ. ಹೇಳಿದರು.

ತಾಲೂಕು ಕಚೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಶ್ರೀಸಂತ ಸೇವಾಲಾಲ್ ಜಯಂತಿಯಲ್ಲಿ ಅವರು ಮಾತನಾಡಿದರು.

ಚಿಕ್ಕಜೋಗಿಹಳ್ಳಿಯ ಉಪನ್ಯಾಸಕ ಜ್ಯೋತಿನಾಯ್ಕ, ಜಗದಂಬೆಪ ಪರಮ ಭಕ್ತರಾಗಿದ್ದ ಸೇವಾಲಾಲರು 1739ರಲ್ಲಿ ಭೀಮನಾಯ್ಕ ಧರಮಣೀ ಭಾಯಿಯವರ ಮಗನಾಗಿ ದಾವಣಗೆರೆ ಜಿಲ್ಲೆಯ ಸೂರಗೊಂಡನಕೊಪ್ಪ ಗ್ರಾಮದಲ್ಲಿ ಜನಿಸಿದರು. ನಾಡಿನಿಂದ ದೂರವಿದ್ದು ಕಾಡಿನಲ್ಲಿ ಬದುಕಿದ್ದ ಸಮುದಾಯವರು ಅನಕ್ಷರತೆ ಹಾಗೂ ಮೂಢ ನಂಬಿಕೆಗಳಿಂದ ಜೀವನ ನಡೆಸುತ್ತಿದ್ದ ಇವರಿಗೆ ಜ್ಞಾನ ನೀಡಿದ ಮಾರ್ಗದರ್ಶಕರು. ಶಾಂತಿ ಧೂತರಾಗಿ ಬರೀ ಭೋದಕರಾಗಿರದೇ ಸಂಕಷ್ಟ ಬಂದಾಗ ಕತ್ತಿ ಹಿಡಿದು ಹೋರಾಡಿ ಜನಾಂಗವನ್ನು ರಕ್ಷಿಸಿದ್ದಾರೆ ಎಂದು ಹೇಳಿದರು.



ತಾಲೂಕು ಬಂಜಾರ ಸಮಾಜದ ಅಧ್ಯಕ್ಷ ಭೀಮಾನಾಯ್ಕ, ರೈತ ಮುಖಂಡ ಜಯಪ್ರಕಾಶ್ ನಾಯ್ಕ ಕೆ.ಎಸ್. ಮಾತನಾಡಿದರು. ದೂಪದಹಳ್ಳಿ ಹಟ್ಟಿನಾಯ್ಕ ಸೋಮ್ಲನಾಯ್ಕ, ಕೊಟ್ಟೂರಿನ ದೇವೇಂದ್ರನಾಯ್ಕ, ತಿಮ್ಮಲಾಪುರ ತಾಂಡದ ಶೇಖರನಾಯ್ಕ, ಕೃಷ್ಣನಾಯ್ಕ, ಬಾಲಾನಾಯ್ಕ, ರಮೇಶನಾಯ್ಕ, ಶಿರಸ್ತೇದಾರ್ ಚಂದ್ರನಾಯ್ಕ, ಉಪತಹಶೀಲ್ದಾರ್ ಅನ್ನದಾನೇಶ ಬಿ.ಪತ್ತಾರ್, ಕಂದಾಯ ನಿರೀಕ್ಷಕ ಡಿ ಶಿವಕುಮಾರ್, ಗ್ರಾಮ ಆಡಳಿತ ಅಧಿಕಾರಿ ಹರೀಶ್, ಭೂಮಾಪನ ಸಿಬ್ಬಂದಿ ಬಸವರಾಜ, ನಾಗರಾಜ, ಗೌರಮ್ಮ ಪ್ರದಸ ಹಾಗೂ ಇತರರು ಇದ್ದರು. ಸಿ.ಮ.ಗುರುಬಸವರಾಜ ಸ್ವಾಗತಿಸಿ, ನಿರೂಪಿಸಿದರು. ಸಮುದಾಯದ ವಿವಿಧ ಮುಖಂಡರನ್ನು ಸನ್ಮಾನಿಸಲಾಯಿತು.

ಶಿವರಾತ್ರಿ ಸರ್ವರಿಗೂ ಸನ್ಮಂಗಳ ಉಂಟು ಮಾಡಲಿ

ಯಾದಗಿರಿ: ಮಹಾಶಿವರಾತ್ರಿ ಪುಣ್ಯದಿನವಾಗಿದ್ದು, ಈ ಪರ್ವ ಕಾಲದಲ್ಲಿ ಶಿವನನ್ನು ಭಜಿಸುವ ಸರ್ವರಿಗೂ ಸನ್ಮಂಗಳ ಉಂಟಾಗಲಿ ಎಂದು ಅಬ್ಬೆತುಮಕೂರು ಮಠದ ಪೀಠಾಧಿಪತಿ ಡಾ.ಗಂಗಾಧರ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಭಾನುವಾರ ರಾತ್ರಿ ಶ್ರೀಮಠದಲ್ಲಿ ಮಹಾಶಿವರಾತ್ರಿ ನಿಮಿತ್ತ ಹಮ್ಮಿಕೊಂಡಿದ್ದ ಶಿವನ ವಿಶೇಷ ರುದ್ರಾಭಿಷೇಕ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಮಹಾಶಿವರಾತ್ರಿ ಅತ್ಯಂತ ಶುಭ ಪ್ರದಾಯಕವಾಗಿದ್ದು, ಭಕ್ತಿಯಿಂದ ಆಚರಿಸುವ ಎಲ್ಲ ಆಚರಣೆಗಳು ಶಿವನಿಗೆ ಸಂಪ್ರೀತಿಯನ್ನು ಉಂಟು ಮಾಡಿ ಆತ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುತ್ತಾನೆ. ಆದಕ್ಕಾಗಿ ಎಲ್ಲರೂ ಶಿವನನ್ನು ಶ್ರದ್ದೆ, ನಿಷ್ಠೆಯಿಂದ ಪೂಜಿಸಬೇಕೆಂದು ಹೇಳಿದರು.

ಫೆ.22ರಂದು ಸದ್ಗುರು ಶ್ರೀವಿಶ್ವಾರಾಧ್ಯರ ರಥೋತ್ಸವ ಜರುಗಲಿದೆ. ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಶ್ರೀಮಠದಲ್ಲಿ ಪೂರ್ವ ಸಿದ್ಧತೆ ಕಾರ್ಯಗಳು ಭರದಿಂದ ಸಾಗಿದ್ದು, ಅನೇಕ ಭಕ್ತರು ಸೇವಾಧಾರಿಗಳಾಗಿ ಪೂರ್ವ ಸಿದ್ದತೆಯ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಒಂದೆರಡು ದಿನದಲ್ಲಿ ಸಂಪೂರ್ಣ ಸಿದ್ದತೆಗಳು ಮುಗಿಯಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ರಥೋತ್ಸವದಲ್ಲಿ ಪಾಲ್ಗೊಳ್ಳುವುದರ ಮೂಲಕ ವಿಶ್ವಾರಾಧ್ಯರ ಕೃಪೆಗೆ ಪಾತ್ರರಾಗಬೇಕೆಂದು ಕರೆ ನೀಡಿದರು. ಅತ್ಯಂತ ವೈಭವದಿಂದ ನಡೆಯುವ ಜಾತ್ರೆಗೆ ರಾಜ್ಯ ಮತ್ತು ನೆರೆ ರಾಜ್ಯದಿಂದ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ಅವರೆಲ್ಲರಿಗೂ ಜಾತ್ರೆಯಲ್ಲಿ ಸುಸಜ್ಜಿತವಾದ ವ್ಯವಸ್ಥೆ ಮಾಡಲು ಸ್ವಯಂ ಸೇವಕರು ತಯಾರಿ ಮಾಡಿದ್ದಾರೆ. ಭಕ್ತರಿಗೆ ನಿರಂತರ ಅನ್ನದಾಸೋಹ, ಜ್ಞಾನ ದಾಸೋಹ ಕಾರ್ಯದ ಜೊತೆಗೆ 5 ದಿನಗಳ ಕಾಲ ಜಾತ್ರೆಯಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಕೂಡ ನಡೆಯಲಿವೆ ಎಂದು ತಿಳಿಸಿದರು.



ವಿಜೃಂಭಣೆಯ ಅಡ್ಡಪಲ್ಲಕ್ಕಿ ಉತ್ಸವ



ಕೊಟ್ಟೂರು: ಶಿವಭಕ್ತ ಶ್ರೀಮಾರ್ಕಂಡೇಶ್ವರ ಸ್ವಾಮಿಯ ಪ್ರತಿಷ್ಠಾಪನೆಯ ಶತಮಾನೋತ್ಸವದ ಕಾರ್ಯಕ್ರಮದ ಅಂಗವಾಗಿ ಸೋಮವಾರ ಉಜ್ಜಯಿನಿ ಜಗದ್ಗುರು ಶ್ರೀಸಿದ್ಧಲಿಂಗ ಶಿವಾಚಾರ್ಯ ರಾಜದೇಶಿ ಕೇಂದ್ರ, ಶಿವಾಚಾರ್ಯ ಸ್ವಾಮೀಜಿ ಪುಷ್ಪಾಲಂಕಾರಿತ ಅಡ್ಡಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಜನಾಂಗದ ಮಹಿಳೆಯರು 108 ಕಳಸಗಳನ್ನು ಹೊತ್ತು ಒಂದೇ ತೆರನಾದ ಪಿಂಕ್ ಬಣ್ಣದ ಸೀರೆಗಳನ್ನು ಧರಿಸಿ ಮೆರವಣಿಗೆ ಮುಂಚೂಣಿಯಲ್ಲಿ ಭಾಗವಹಿಸಿದ್ದರು. ಅಡ್ಡಪಲ್ಲಕ್ಕಿ ಮಹೋತ್ಸವ ಇಲ್ಲಿನ ಶ್ರೀಗುರುಕೊಟ್ಟೂರೇಶ್ವರ ಸ್ವಾಮಿಯ ಹಿರೇಮಠದಿಂದ ಪ್ರಾರಂಭಗೊಂಡಿತು. ಶಾಸಕ ಕೆ.ನೇಮರಾಜ್ ನಾಯ್ಕ, ಜಿ.ಪಂ. ಉಪಾಧ್ಯಕ್ಷ ಎಂ.ಎಂ.ಜೆ.ಹರ್ಷವರ್ಧನ ರೊಡಗೂಡಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಹೊತ್ತು ಸಾಗುವ ಮೂಲಕ ಚಾಲನೆ ನೀಡಿದರು.

ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಐ.ದಾರುಕೇಶ, ಎಪಿಎಂಸಿ ಮಾಜಿ ಅಧ್ಯಕ್ಷ ಬೂದಿ ಶಿವಕುಮಾರ, ಜಗದ್ಗುರುಗಳಿಗೆ ಹಾರ ಹಾಕಿ ಭಕ್ತಿ ಸಲ್ಲಿಸಿ ನಮಿಸಿದರು.

ಮೆರವಣಿಗೆಯಲ್ಲಿ ಶಿಭಕ್ತ ಶ್ರೀಮಾರ್ಕಂಡೇಶ್ವರ ಸಮುದಾಯ ಶ್ರೀಪದ್ಮಸಾಲಿ ಬಹೂತ್ತಮ ಸಮಾಜದ ಅಧ್ಯಕ್ಷ ಗೋರಂಟ್ಲಿ ಕೊಟ್ರೇಶ, ಖಜಾಂಚಿ ದೇವರೆಡ್ಡಿ ಪ್ರಕಾಶ, ಕಾರ್ಯದರ್ಶಿ ದೇವರೆಡ್ಡಿ ಪರಮೇಶ್ವರಪ್ಪ, ಮೇಡಂ ನಾಗರಾಜ, ಭಾವಿಕಟ್ಟೆ ಶಿವಾನಂದ ಮತ್ತಿತರ ಅನೇಕರು ಭಾಗವಹಿಸಿದ್ದರು.

ಶಿವನನ್ನು ಭಕ್ತಿಯಿಂದ ಪೂಜಿಸಿದರೆ ಮೋಕ್ಷ ಪ್ರಾಪ್ತಿ

ಸಿರುಗುಪ್ಪ: ಮಾಘ ಮಾಸ ಕೃಷ್ಣ ಪಕ್ಷದ ಚತುರ್ದಶಿಯಂದು ಆಚರಿಸಲಾಗುವ ಶಿವರಾತ್ರಿ, ಶಿವ ಭಕ್ತರ ಪಾಲಿಗೆ ಮಂಗಳಕರ ರಾತ್ರಿ. ಹಗಲು ಉಪವಾಸವಿದ್ದು, ರಾತ್ರಿ ವೇಳೆ ಜಾಗರಣೆ ಮಾಡಿ, ಶಿವಧ್ಯಾನ ಮಾಡಿ ಶಿವನ ಕೃಪೆಗೆ ಪಾತ್ರವಾಗುವ ಶುಭ ದಿನ. ಈ ದಿನ ಶಿವನನ್ನು ಭಕ್ತಿಯಿಂದ ಪೂಜಿಸಿದರೆ, ತಾವು ಮಾಡಿದ ಪಾಪಗಳೆಲ್ಲವೂ ಪರಿಹಾರವಾಗಿ, ಮೋಕ್ಷ ಪ್ರಾಪ್ತವಾಗಲಿದೆ ಎಂದು 64ಹಳೇಕೋಟೆ ಮರಿಶಿವಯೋಗಿ ಮಠದ ಸಿದ್ದಬಸವ ಸ್ವಾಮೀಜಿ ಹೇಳಿದರು.

ನಗರದ ಶ್ರೀಅಮೃತೇಶ್ವರ ದೇವಸ್ಥಾನದಲ್ಲಿ ನೇಹ ರಂಗ, ಅಮೃತೇಶ್ವರ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಭಾನುವಾರ ಮಹಾ ಶಿವರಾತ್ರಿ ಹಬ್ಬದ ನಿಮಿತ್ತ ಬಯಲು ರಂಗಮಂದಿರದಲ್ಲಿ 21ನೇ ವರ್ಷದ ಸಂಗೀತಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಂಗೀತಮನೆ ಯೂಟ್ಯೂಬ್ ಖ್ಯಾತಿ ಸೌಮ್ಯ ಮಂಜುನಾಥ, ಮಂಜುನಾಥ ಹೊಸವಾಳ್ ಅವರು ಹಾಡಿದ ಜನಪ್ರೀಯ ಹಾಡುಗಳ ಮೂಲಕ ಕೇಳುಗರನ್ನು ಮನರಂಜಿಸಿದರು.

ಕನ್ನಡ ಕೋಗಿಲೆ ಖ್ಯಾತಿ ಶ್ರವಣಕುಮಾರ್ ಹಾಗೂ ರಾಚಯ್ಯಸ್ವಾಮಿ ಮತ್ತು ಸಂಗಡಿಗರಿಂದ ಭಜನೆ ನಡೆಸಿ ಕೊಟ್ಟರು.



ನೇಹ ನಾದ ಶಿಕ್ಷಕರ ತಂಡದಿಂದ ಡೊಳ್ಳು ಕುಣಿತಿ ಯುವಕರನ್ನು ಗಮನ ಸೇಳೆಯಿತು.ಸರ್ಕಾರಿ ಶಾಲಾ ಕಾಲೇಜ್ ವಿದ್ಯಾರ್ಥಿಗಳಿಂದ ಹಾಗೂ ನೇಹರಂಗ ತಂಡದಿಂದ ಡೊಳ್ಳು ಕುಣಿತಾಳ, ನಟರಾಜ ನಾಟ್ಯ ಕಲಾ ಸಂಘದಿಂದ ನೃತ್ಯದ ಮೂಲಕ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದರು.

ಗುರು ಬಸವ ಮಠದ ಬಸವ ಭೂಷಣಸ್ವಾಮಿ, ಮಾಜಿ ಶಾಸಕ ಟಿ.ಎಂ.ಚಂದ್ರಶೇಖರಯ್ಯ ಸ್ವಾಮಿ, ವಾಲ್ಮೀಕಿ ವಿದ್ಯಾ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಬಿ.ಎಂ. ಸತೀಶ್, ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಕೆ.ಬಸವಲಿಂಗಪ್ಪ ನೇಹ ರಂಗದ ಅಧ್ಯಕ್ಷ ಕೌತಳ ಆರ್.ಸದಾಶಿವ, ಮುಖಂಡರಾದ ಅಮರೇಶಪ್ಪ, ತಿಮ್ಮಪ್ಪನಾಯಕ ವೆಂಕಟೇಶ, ಚೆನ್ನಬಸವ, ಕೆ.ವಿ.ವೆಂಕಟೇಶ. ಬಿ.ಚೆನ್ನಪ್ಪ, ಅಂಗಡಿ ಶಿವಕುಮಾರ್ ಭಾಗವಹಿಸಿದ್ದರು. ನೇಹ ನಾದ ಶಿಕ್ಷಕರ ತಂಡದಿಂದ ಡೊಳ್ಳು ಕುಣಿತ ನೃತ್ಯ ನೆರೆದ ಸಾವಿರಾರು ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು.

ಜೀವನದಲ್ಲಿ ದಾರ್ಶನಿಕರ ಚಿಂತನೆ ಅಳವಡಿಸಿಕೊಳ್ಳಿ

ಯಾದಗಿರಿ: ಸಂತಸೇವಾಲಾಲ್ ಅವರು ಇಡೀ ಸಮಾಜಕ್ಕೆ ಒಳಿತನ್ನು ಬಯಸಿ ಶಾಂತಿಯ ಸಂದೇಶ ಸಾರಿದವರು. ಅಂತಹ ಮಹಾನ್ ಪುರುಷರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಎಡಿಸಿ ರಮೇಶ ಕೋಲಾರ್ ಹೇಳಿದರು.

ನಗರದ ಪದವಿ ಕಾಲೇಜು ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ, ಬಂಜಾರ ಸಮಾಜ ಕಲಗುರು ಶ್ರೀಸಂತ ಸೇವಾಲ್ ಮಹಾರಾಜರ 287ನೇ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಂತ ಸೇವಾಲಾಲರಂತಹ ದಾರ್ಶನಿಕರು ಒಂದು ಜಾತಿಗೆ ಸೀಮಿತರಲ್ಲ. ಅವರು ಬಂಜಾರ ಸಮಾಜ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಬಹಳಷ್ಟು ಉತ್ತಮ ಸಂದೇಶ ನೀಡಿದ್ದಾರೆ. ಇವರ ವಚನ, ಸಂದೇಶಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಡಿಗ್ರಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಸುಭಾಶ್ಚಂದ್ರ ಕೌಲಗಿ ಮಾತನಾಡಿ, ನಮ್ಮ ದೇಶದಲ್ಲಿ ಗುರು ಪರಂಪರೆಗೆ ವಿಶೇಷ ಸ್ಥಾನವಿದ್ದು, ಬಂಜಾರ ಸಮಾಜದ ಗುರುಗಳಾದ ಸಂತ ಸೇವಾಲಾಲರು ಸತ್ಯ, ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಹೆಸರಾದವರು. ಬಂಜಾರ ಸಮಾಜದವರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಹಾಗೂ ಆರೋಗ್ಯದ ಕಡೆ ಗಮನ ಕೊಡಬೇಕು ಎಂದು ಕಿವಿ ಮಾತು ಹೇಳಿದರು.



> ಪ್ರತಿಯೊಬ್ಬರೂ ಶಿಕ್ಷಣವಂತರಾದಾಗ ಮಾತ್ರ ಸಮಾಜ ಏಳ್ಗೆ ಹೊಂದಲು ಸಾಧ್ಯ. ಆದ್ದರಿಂದ ಸಮಾಜದ ಜನತೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು.
> ■ ರಮೇಶ ಕೋಲಾರ, ಎಡಿಸಿ

ಯುಡಾ ಅಧ್ಯಕ್ಷ ಬಾಬುರಾವ ಕಾಡ್ಲೂರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ಸಮಾಜದ ಜಿಲ್ಲಾಧ್ಯಕ್ಷ ಪರುಶುರಾಮ ಚೌಹಾಣ್ ಇತರರಿದ್ದರು. ಸೇವಾಲಾಲ್ ಭಾವಚಿತ್ರದ ಮೆರವಣಿಗೆ: ರೈಲ್ವೆ ನಿಲ್ದಾಣ ಬಳಿ ಸೇವಾಲಾಲ್ ಮಹಾರಾಜರ ಭಾವಚಿತ್ರಕ್ಕೆ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರ್ ಪೂಜೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು.